ಭಾನುವಾರ, ಜೂನ್ 21, 2026 ₹ 7.00
www.prajavani.net
prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

‘ಅಕ್ರಮ ಕೊನೆಯಾಗಲಿ’

ಪರೀಕ್ಷಾ ಅಕ್ರಮಗಳನ್ನು ಖಂಡಿಸಿ ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು ದೆಹಲಿಯ ಜಂತರ್‌ಮಂತರ್‌ನಲ್ಲಿ ತಟ್ಟೆಗೆ ಚಮಚದಿಂದ ಬಡಿಯುವ ಮೂಲಕ ಪ್ರತಿಭಟನೆ ನಡೆಸಿದರು





ಪ್ರತಿಭಟನೆ

ಬೆಳೆ ವಿಮೆ ಬಾಕಿ ಬಿಡುಗಡೆಗೆ ಒತ್ತಾಯಿಸಿ ಹಾಗೂ ವಿದ್ಯುತ್ ಖಾಸಗೀಕರಣ ವಿರೋಧಿಸಿ ನವ ಕರ್ನಾಟಕ ರೈತ ಸಂಘಟನೆಯಿಂದ ಕಲಬುರಗಿಯಲ್ಲಿ ಶನಿವಾರ ಪ್ರತಿಭಟನೆ ನಡೆಯಿತು


ಗ್ರೇಟರ್ ಬೆಂಗಳೂರು ಪ್ರಾಧಿಕಾರ ಜನತಾದಳ (ಜಾತ್ಯತೀತ)
ಪುಲಿಕೇಶಿ ನಗರ ವಿಧಾನಸಭಾ ಕ್ಷೇತ್ರ
ಜೆಡಿಎಸ್ ಸೇರ್ಪಡೆ
ಸಮಾವೇಶ ಕಾರ್ಯಕ್ರಮ
ದಿನಾಂಕ: 21-6-2026 ಭಾನುವಾರ ಸಮಯ: ಬೆಳಗ್ಗೆ 9:30 ಕ್ಕೆ
ಸ್ಥಳ: ಬೆಂಗಳೂರು ನಗರ ಪುಲಿಕೇಶಿ ವಿಧಾನಸಭಾ ಕ್ಷೇತ್ರ, ಸಗಾಯಪುರಂ,
ಪಿಳ್ಳಣ್ಣ ಗಾರ್ಡ್, ಫುಟ್‌ಬಾಲ್ ಮೈದಾನ, ಬೆಂಗಳೂರು
ಮಾಜಿ ಪ್ರಧಾನಿಗಳಾದ
ಶ್ರೀ ಹೆಚ್.ಡಿ. ದೇವೇಗೌಡರು ಮತ್ತು
ಜೆಡಿಎಸ್ ರಾಜ್ಯಾಧ್ಯಕ್ಷರು ಹಾಗೂ ಕೇಂದ್ರ ಸಚಿವರಾದ
ಶ್ರೀ ಹೆಚ್.ಡಿ. ಕುಮಾರಸ್ವಾಮಿ ರವರ ನೇತೃತ್ವದಲ್ಲಿ
ಮಾಜಿ ಶಾಸಕರಾದ
ಶ್ರೀ ಆರ್. ಅಖಂಡ ಶ್ರೀನಿವಾಸ ಮೂರ್ತಿ ರವರು
ತಮ್ಮ ನೂರಾರು ಬೆಂಬಲಿಗರೊಂದಿಗೆ ಬಿಜೆಪಿ ತೊರೆದು
ಜೆಡಿಎಸ್‌ಗೆ ಸೇರ್ಪಡೆಯಾಗಲಿದ್ದಾರೆ.
ಶುಭಕೋರುವವರು:
ಆರ್.ಅಖಂಡ ಶ್ರೀನಿವಾಸಮೂರ್ತಿ ಅಭಿಮಾನಿಗಳ ಬಳಗ ಹಾಗೂ ಕಾರ್ಯಕರ್ತ ಬಂಧುಗಳು

ಭಾನುವಾರ, ಜೂನ್ 21, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 171 | ಪುಟ 22

www.prajavani.net | prajavani.net | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರಸಿದ್ಧಗೆ ಪಂಚ ಗೊಂಚಲು

ಭಾರತ ತಂಡದ ವೇಗಿ ಪ್ರಸಿದ್ಧ ಕೃಷ್ಣ ಅವರು ಶನಿವಾರ ಅಫ್ಗಾನಿಸ್ತಾನ ವಿರುದ್ಧದ ಏಕದಿನ ಸರಣಿಯ ಮೂರನೇ ಪಂದ್ಯದಲ್ಲಿ ಐದು ವಿಕೆಟ್ ಗೊಂಚಲು ಗಳಿಸಿದರು



'ಇಂಧನ ಬೆಲೆ ಇಳಿಕೆ ಸಾಧ್ಯತೆ' 8

ಪದವಿ ಆಯ್ಕೆ: ಬದಲಾದ 'ಟ್ರೆಂಡ್'

ಕೃತಕ ಬುದ್ಧಿಮತ್ತೆ, ಕೈಗಾರಿಕೆ, ಉದ್ಯೋಗ ಆಧಾರಿತ ಕೋರ್ಸ್‌ಗಳಿಗೆ ಹೆಚ್ಚಿದ ಬೇಡಿಕೆ

86	9	4,566	28.23 ಲಕ್ಷ
ಕರ್ನಾಟಕದಲ್ಲಿರುವ ವಿಶ್ವವಿದ್ಯಾಲಯಗಳು	ಕೇಂದ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳು	ಕಾಲೇಜುಗಳು	ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು

• ಎಸ್.ಸಂಪತ್

ಬೆಂಗಳೂರು: ರಾಜ್ಯದಲ್ಲಿ ಉನ್ನತ ಶಿಕ್ಷಣದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವ ಪ್ರವೃತ್ತಿ ಬದಲಾಗಿದೆ. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಕೌಶಲ ಮತ್ತು ಕೈಗಾರಿಕೆ ಆಧಾರಿತ ಕೋರ್ಸ್‌ಗಳ ಕಡೆಗೆ ಚಲಿಸುತ್ತಿದೆ. ಶಿಕ್ಷಣ, ಉದ್ಯೋಗ, ಆರ್ಥಿಕತೆ ಒಂದಕ್ಕೊಂದು ಬೆಸೆದುಕೊಂಡಿರುವ ಕಾರಣ ಶಿಕ್ಷಣ ಸಂಸ್ಥೆಗಳು ಅದಕ್ಕೆ ಪೂರಕವಾದ ಹತ್ತಾರು ವೈವಿಧ್ಯಮಯ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ಪರಿಚಯಿಸಿವೆ. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ವಿದ್ಯಾರ್ಥಿಗಳ ಆಸಕ್ತಿಯೂ ಬದಲಾಗುತ್ತಿವೆ.

ದಶಕದಿಂದೀಚೆಗೆ ಶಿಕ್ಷಣ ಸಂಸ್ಥೆಗಳ ರಚನೆ ಮತ್ತು ಪದವಿ ಕೋರ್ಸ್‌ಗಳ ಸಂಯೋಜನಾ ಸ್ವರೂಪ ಬದಲಾಗಿವೆ. ಕೃತಕ ಬುದ್ಧಿಮತ್ತೆ (ಎ.ಐ) ಬೆಳವಣಿಗೆಯಿಂದ ಉನ್ನತ ಶಿಕ್ಷಣದಲ್ಲಿ ಅನೇಕ ಹೊಸ, ಅಸಾಂಪ್ರದಾಯಿಕ ಕೋರ್ಸ್‌ಗಳು ಆರಂಭವಾಗಿವೆ.

ಒಳನೋಟ

ಕೆಲವು ಹಳೆಯ ಪದವಿ ಕೋರ್ಸ್‌ಗಳಿಗೆ ಕೈಗಾರಿಕಾ ತರಬೇತಿ, ಅಂತರ್ ಮತ್ತು ಬಹು ವಿಷಯಕ ವಿಧಾನ ಸೇರ್ಪಡೆಯಾಗಿದ್ದು ಜಾಗತಿಕ 'ಟ್ರೆಂಡ್'ಗೆ ತಕ್ಕಂತೆ ಮರು ವಿನ್ಯಾಸ ಪಡೆದಿವೆ. ಕೆಲವು ಹಳೆ ಕೋರ್ಸ್‌ಗಳು 'ಇಂಟಿಗ್ರೇಟೆಡ್' ಮಾದರಿಯಲ್ಲಿ ಹೊಸ ರೂಪ ಪಡೆದುಕೊಂಡಿವೆ. ಎ.ಐ, ಐ.ಟಿ, ವಾಹನೋದ್ಯಮ ಬೆಳವಣಿಗೆ, ಸೆಮಿಕಂಡಕ್ಟರ್ ಮಾರುಕಟ್ಟೆ, ದತ್ತಾಂಶ ಕೇಂದ್ರಗಳ ವಿಸ್ತರಣೆಯು 'ಟ್ರೆಂಡ್' ಬದಲಾವಣೆಗೆ ಪ್ರಮುಖ ಕಾರಣಗಳು.





ದುಬಾರಿ ಶುಲ್ಕ ವಾಣಿಜ್ಯ ಕೋರ್ಸ್‌ಗಳಿಗಿಲ್ಲ. ಸತತ ಹತ್ತಾರು ವರ್ಷಗಳು ಓದಬೇಕಾದ ಅಗತ್ಯವೂ ಇಲ್ಲ. ಬೇಗ ಕೆಲಸ ಸಿಗುತ್ತದೆ. ಒತ್ತಡವೂ ಕಡಿಮೆ. ಹೀಗಾಗಿ ವಾಣಿಜ್ಯ ಕೋರ್ಸ್‌ಗಳು ವಿದ್ಯಾರ್ಥಿಗಳ ಮೆಚ್ಚಿನ ಕೋರ್ಸ್‌ಗಳಾಗಿ ಬದಲಾಗಿವೆ

ಪ್ರೊ. ಎಸ್.ಎನ್. ಶ್ರೀಧರ್, ಕುಲಪತಿ, ಆದಿಚುಂಚನಗಿರಿ ವಿಶ್ವವಿದ್ಯಾಲಯ



ನಿರ್ದಿಷ್ಟ ವಿಷಯದಲ್ಲಿ ಆಳವಾದ ಜ್ಞಾನ ಮತ್ತು ಇತರ ವಿಷಯಗಳ ಬಗ್ಗೆಯೂ ತಿಳಿವಳಿಕೆ ಮೂಡಿಸುವಂತಹ ಪದವಿ ಕೋರ್ಸ್‌ಗಳಿಗೆ ಬೇಡಿಕೆಯಿದೆ. ಡಿಜಿಟಲ್ ಯುಗದ ಕಲಿಕೆಯಲ್ಲಿ ಮಾನವೀಯ ಮೌಲ್ಯಗಳಿಗೂ ಒತ್ತು ನೀಡಬೇಕಿದೆ

ಪ್ರೊ. ಫಾದರ್ ಜೋಸ್ ಸಿ.ಸಿ., ಕುಲಪತಿ, ಕ್ರೈಸ್ಟ್ ವಿಶ್ವವಿದ್ಯಾಲಯ

ಉದ್ಯೋಗಾರ್ಹತೆ ಮತ್ತು ಕೈಗಾರಿಕಾ ಪ್ರಸ್ತುತತೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ಸ್ವಾಯತ್ತ ಕಾಲೇಜುಗಳು, ಖಾಸಗಿ, ಡೀಮ್ಡ್ ಮತ್ತು ಸರ್ಕಾರಿ ವಿಶ್ವವಿದ್ಯಾಲಯಗಳು ಪಠ್ಯಕ್ರಮಗಳನ್ನು ಮರು ರೂಪಿಸಿವೆ. ಹಲವು ಶಿಕ್ಷಣ ಸಂಸ್ಥೆಗಳು ವಿದೇಶಿ ವಿಶ್ವ ವಿದ್ಯಾಲಯಗಳ ಜತೆ ಕೈಜೋಡಿಸಿ, ಒಮ್ಮೆಗೆ ಎರಡು ಪದವಿ (ಡ್ಯುಯಲ್ ಡಿಗ್ರಿ) ಪಡೆಯುವ ಅವಕಾಶ ಕಲ್ಪಿಸಿವೆ. ಅಲ್ಲದೆ ಆನ್‌ಲೈನ್ ಪದವಿ ಕೋರ್ಸ್‌ಗಳು ಮತ್ತು ರಾಷ್ಟ್ರೀಯ ಡಿಜಿಟಲ್ ವಿಶ್ವವಿದ್ಯಾಲಯವು ಹೆಚ್ಚುವರಿ ಪದವಿ ಕೋರ್ಸ್‌ಗಳನ್ನು ಓದಲು ವಿದ್ಯಾರ್ಥಿಗಳಿಗೆ ಅವಕಾಶದ ಬಾಗಿಲನ್ನು ತೆರೆದಿವೆ.

ಎಂಜಿನಿಯರಿಂಗ್ ಕ್ಷೇತ್ರವಷ್ಟೇ ಅಲ್ಲದೆ, ವಾಣಿಜ್ಯ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿಯೂ ಸಾಕಷ್ಟು ಬದಲಾವಣೆಗಳಾಗಿದ್ದು, ಅಲ್ಲಿನ ಹೊಸ ಕೋರ್ಸ್‌ಗಳ ಸಂಯೋಜನೆಗಳು ವಿದ್ಯಾರ್ಥಿಗಳಿಗೆ ಉತ್ತಮ ವೃತ್ತಿ ಅವಕಾಶಗಳನ್ನು ಸೃಷ್ಟಿಸುತ್ತಿವೆ. ಆರೋಗ್ಯ ಕ್ಷೇತ್ರದಲ್ಲಿ ನರ್ಸಿಂಗ್, ಫಿಸಿಯೋಥೆರಪಿ, ಕಾರ್ಡಿಯಾಕ್ ಟೆಕ್ನಾಲಜಿ ಸೇರಿದಂತೆ 'ಅಲೈಡ್ ಹೆಲ್ತ್ ಸೈನ್ಸ್' ಕೋರ್ಸ್ ವಿದ್ಯಾರ್ಥಿಗಳನ್ನು ಸೆಳೆಯುತ್ತಿವೆ.

ವಾಣಿಜ್ಯ ಕೋರ್ಸ್‌ಗಳಿಗೆ ಭಾರಿ ಬೇಡಿಕೆ: ಎರಡು ಮೂರು ದಶಕದ ಹಿಂದೆ ವಾಣಿಜ್ಯ ಪದವಿ ಎಂದರೆ ಬಿ.ಕಾಂ ಎಂದಾಗಿತ್ತು.

▶4

ಸಚಿವರೊಬ್ಬರಿಗೆ ಪ್ರತ್ಯೇಕ ಹೊಣೆ: ಮುಖ್ಯಮಂತ್ರಿ ಘೋಷಣೆ

ಪ್ರಜಾಸೇವೆಗೆ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ಜನಸ್ಪಂದನ, ಸಾರ್ವಜನಿಕರ ಕುಂದುಕೊರತೆ ಹಾಗೂ ಹೋರಾಟಗಳ ಮೂಲಕ ಸಲ್ಲಿಕೆಯಾಗುವ ಅಹವಾಲುಗಳನ್ನು ಆಲಿಸಿ, ಪರಿಹಾರ ಒದಗಿಸಲು ಹೊಸದಾಗಿ 'ಪ್ರಜಾಸೇವಾ ಇಲಾಖೆ' ಅಸ್ತಿತ್ವಕ್ಕೆ ಬರಲಿದೆ.

ಶನಿವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಹೊಸ ಇಲಾಖೆಯ ಜವಾಬ್ದಾರಿಯನ್ನು ಸಚಿವರೊಬ್ಬರಿಗೆ ಪ್ರತ್ಯೇಕವಾಗಿ ನೀಡಲಾಗುವುದು. ಹಿರಿಯ ಐಎಎಸ್ ಅಧಿಕಾರಿಯೊಬ್ಬರನ್ನು ಈ ಕೆಲಸಕ್ಕೆ ನಿಯೋಜಿಸಲಾಗುವುದು' ಎಂದರು.

'ಜನರ ಕಷ್ಟಗಳು, ಭಾವನೆಗಳನ್ನು ಅರಿತು, ಕಾನೂನು ಚೌಕಟ್ಟಿನಲ್ಲಿ ಸ್ಪಂದಿಸುವುದು ನಮ್ಮ ಸರ್ಕಾರದ ಗುರಿ. ನನಗೆ ಹಾಗೂ ಇತರೆ ಸಚಿವರಿಗೆ ನೀಡಿದ ಮನವಿಗಳನ್ನೂ ಈ ಇಲಾಖೆಯ ಅಡಿಯಲ್ಲಿ ತರುವ ಯೋಚನೆಯಿದೆ' ಎಂದರು.

'ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜವಾಬ್ದಾರಿಯ ಜಿಲ್ಲೆಯ ಪ್ರತಿ ಕ್ಷೇತ್ರಕ್ಕೆ ಸ್ಥಳೀಯ ಶಾಸಕರೊಂದಿಗೆ ವಾರಕ್ಕೊಮ್ಮೆ ತೆರಳಿ ಈ ಇಲಾಖೆಯ ಮೂಲಕ ಜನಸ್ಪಂದನ ಸಭೆ ನಡೆಸಬೇಕು. ಸಕಾಲ, ಇ- ಆಡಳಿತ ಸೇರಿದಂತೆ ಎಲ್ಲವನ್ನು ಬಳಸಿಕೊಂಡು ಜನರ ಸಮಸ್ಯೆಗಳನ್ನು ನಿವಾರಿಸಲಾಗುವುದು. ಮಾಧ್ಯಮಗಳಲ್ಲಿ ಬಂದ ವರದಿಗಳ ಮೇಲೆಯೂ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ವಿವರಿಸಿದರು.

ವಿದ್ಯಾರ್ಥಿಗಳಿಗೆ 'ಕರ್ನಾಟಕ ಭವನ': ಯುಪಿಎಸ್‌ಸಿ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹಾಗೂ ಒಂದೇ ಸೂರಿನಡಿ ಎಲ್ಲ ಸೌಲಭ್ಯ ದೊರೆಯಬೇಕೆಂಬ ಉದ್ದೇಶದಿಂದ ದೆಹಲಿಯಲ್ಲಿ ₹80 ಕೋಟಿ ವೆಚ್ಚದಲ್ಲಿ 'ಕರ್ನಾಟಕ ಭವನ- 4' ನಿರ್ಮಿಸಲಾಗುವುದು. ಈ ಭವನದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿದ್ಯಾರ್ಥಿಗಳಿಗೆ ಶೇ 50, ಇತರೆ ಸಮುದಾಯದ ವಿದ್ಯಾರ್ಥಿಗಳಿಗೆ ಶೇ 50ರಷ್ಟು ಮೀಸಲಾತಿ ನೀಡಲಾಗುವುದು' ಎಂದೂ ಮುಖ್ಯಮಂತ್ರಿ ಹೇಳಿದರು.

'ಸುಪ್ರೀಂ ಕೋರ್ಟ್‌ನಲ್ಲಿರುವ ವ್ಯಾಜ್ಯಗಳ ಇತ್ಯರ್ಥಕ್ಕೆ ದೆಹಲಿಯ ಕಾನೂನು ಘಟಕವನ್ನು ಮತ್ತಷ್ಟು ಸದೃಢಗೊಳಿಸಲು ಪ್ರತ್ಯೇಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ದೆಹಲಿ ನಿವಾಸಿ ಆಯುಕ್ತರ ಕಚೇರಿ ಕಾರ್ಯವೈಖರಿ ನನಗೆ ಸಮಾಧಾನ ತಂದಿಲ್ಲ. ಅದನ್ನೂ ಪುನರ್‌ರಚಿಸಲು ಉದ್ದೇಶಿಸಲಾಗಿದೆ' ಎಂದರು.

▶7



ಜನರ ಸಮಸ್ಯೆಗಳನ್ನು ಪರಿಶೀಲಿಸಿ, ನ್ಯಾಯ ಒದಗಿಸುವುದು ಇಲಾಖೆ ರಚನೆಯ ಉದ್ದೇಶ. ಪರಿಹಾರ ಕಲ್ಪಿಸಿದ ಬಳಿಕ ಜನರಿಗೆ ಮಾಹಿತಿ ನೀಡಲಾಗುವುದು

ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

'ಬಸ್ ಟಿಕೆಟ್ ದರ: ಜನರ ಹಿತದ ತೀರ್ಮಾನ'

'ಜನರ ಹಿತ ಗಮನದಲ್ಲಿ ಇಟ್ಟುಕೊಂಡು ಬಸ್ ಟಿಕೆಟ್ ದರ ಹೆಚ್ಚಿಸುವ ಕುರಿತು ತೀರ್ಮಾನಿಸಲಾಗುವುದು' ಎಂದು ಮುಖ್ಯಮಂತ್ರಿ ಹೇಳಿದರು.

'ಖಾಸಗಿ ಮತ್ತು ಸಾರಿಗೆ ನಿಗಮಗಳ ಡಿಪೊಗಳಲ್ಲಿ ಡೀಸೆಲ್ ಬೆಲೆಯಲ್ಲಿ ಸುಮಾರು ₹40ರಷ್ಟು ವ್ಯತ್ಯಾಸವಿದೆ. ಹೀಗಾಗಿ, ಖಾಸಗಿ ಡಿಪೊಗಳಿಂದ ಡೀಸೆಲ್ ಖರೀದಿಸುತ್ತಿದ್ದಾರೆ. ಇದು ಗಾಬರಿಗೊಳ್ಳುವ ವಿಷಯ. ಈ ಬಗ್ಗೆ ವರದಿ ಕೇಳಿದ್ದೇನೆ. ಡೀಸೆಲ್ ಬೆಲೆ ಹೆಚ್ಚಾದರೆ ಬಸ್ ಟಿಕೆಟ್ ಬೆಲೆ ಹೆಚ್ಚಿಸಬೇಕೆಂದು ಈ ಹಿಂದೆ ತೀರ್ಮಾನಿಸಲಾಗಿತ್ತು' ಎಂದರು.

'ಟಿಕೆಟ್ ದರದ ಬಗ್ಗೆ ಮತ್ತೊಮ್ಮೆ ಪರಿಶೀಲಿಸುತ್ತೇವೆ. ಸಾರಿಗೆ ನಿಗಮವೂ ಉಳಿಯಬೇಕು. ಜನರಿಗೂ ಅನುಕೂಲ ಆಗಬೇಕು. ಸಾರ್ವಜನಿಕ ಸಾರಿಗೆಗಳನ್ನು ಬಳಸಿ ಇಂಧನ ಉಳಿಸಿ ಎಂದು ಪ್ರಧಾನ ಮಂತ್ರಿಯವರೇ ಸಲಹೆ ನೀಡಿದ್ದಾರೆ' ಎಂದರು.



ಒ.ಸಿ ಇಲ್ಲದೆ ವಿದ್ಯುತ್ ಸಂಪರ್ಕ

'ಇದೇ ವರ್ಷ ಮೇ 31ರ ಒಳಗೆ ಪೂರ್ಣಗೊಂಡಿರುವ ಎಲ್ಲ ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ಪ್ರಮಾಣಪತ್ರದಿಂದ (ಒ.ಸಿ) ವಿನಾಯಿತಿ ನೀಡಲಾಗಿದ್ದು, ಅರ್ಜಿ ಸಲ್ಲಿಸಲು ಸರ್ಕಾರ ಆದೇಶ ಹೊರಡಿಸಿದ ದಿನದಿಂದ 15 ದಿನಗಳ ಅವಕಾಶ ನೀಡಲಾಗುವುದು' ಎಂದು ಶಿವಕುಮಾರ್ ತಿಳಿಸಿದರು.

ನಗರಾಭಿವೃದ್ಧಿ ಇಲಾಖೆ ಇದೇ 6ರಂದು ಹೊರಡಿಸಿರುವ ಆದೇಶದಲ್ಲಿ ಮೇ 31ರ ಒಳಗೆ ಅರ್ಜಿ ಸಲ್ಲಿಸಿದವರಿಗೆ ಮಾತ್ರ ವಿದ್ಯುತ್ ಸಂಪರ್ಕ ನೀಡಬಹುದು ಎಂಬ ಷರತ್ತು ವಿಧಿಸಿತ್ತು.

2,400 ಚದರ ಅಡಿವರೆಗಿನ (ಶೇ 20ರಷ್ಟು ಹೆಚ್ಚುವರಿ ವ್ಯತ್ಯಾಸದ ಮಿತಿಯೊಂದಿಗೆ) ನಿವೇಶನಗಳಲ್ಲಿ ನಿರ್ಮಿಸಿರುವ ಜಿ + 3 ಅಥವಾ ಸ್ಟಿಲ್ಟ್ ಪಾರ್ಕಿಂಗ್ + 4 ಮಹಡಿಗಳನ್ನು ಹೊಂದಿರುವ ವಸತಿ ಕಟ್ಟಡಗಳ ಮಾಲೀಕರು ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಬಹುದು.

'ಕಟ್ಟಡ ಮಾಲೀಕರು ಕಟ್ಟಡದ ಜೊತೆಗಿನ ಭಾವಚಿತ್ರ ಮತ್ತು ಜಿಪಿಎಸ್ ದಾಖಲೆಯನ್ನು ಅರ್ಜಿಯ ಜೊತೆ ಕಡ್ಡಾಯವಾಗಿ ಸಲ್ಲಿಸಬೇಕು. ಗ್ರಾಮೀಣ ಭಾಗದ, ರೇಷ್ಮೆ ಸಾಕಾಣಿಕೆ ಮನೆ, ಕೊಟ್ಟಿಗೆಗಳಿಗೂ ವಿನಾಯಿತಿ ನೀಡಲಾಗಿದೆ. ಆದರೆ, ಹೊಸದಾಗಿ ನಿರ್ಮಾಣ ಮಾಡಿದರೆ ಅವಕಾಶವಿಲ್ಲ' ಎಂದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ನೀಟ್-ಯುಜಿ ಮರುಪರೀಕ್ಷೆ ಇಂದು

ನವದೆಹಲಿ (ಪಿಟಿಐ): ದೇಶದಾದ್ಯಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ನೀಟ್-ಯುಜಿ ಮರುಪರೀಕ್ಷೆಯು ಭಾನುವಾರ ನಡೆಯಲಿದೆ.

ದೇಶದ 551 ನಗರಗಳು ಮತ್ತು ವಿದೇಶದ 14 ನಗರಗಳಲ್ಲಿ ಮಧ್ಯಾಹ್ನ 2ರಿಂದ 5 ಗಂಟೆ 15 ನಿಮಿಷದವರೆಗೆ ಮರುಪರೀಕ್ಷೆ ನಡೆಯಲಿದೆ. ಅಂಗವಿಕಲ ಅಭ್ಯರ್ಥಿಗಳಿಗೆ (ಪಿಡಬ್ಲ್ಯುಡಿ/ಪಿಡಬ್ಲ್ಯುಬಿಡಿ) ಸಂಜೆ 6.20ರವರೆಗೆ ಪರೀಕ್ಷೆ ಬರೆಯಲು ಅವಕಾಶವಿದೆ. ಇಂಗ್ಲಿಷ್ ಸೇರಿದಂತೆ 12 ಭಾರತೀಯ ಭಾಷೆಗಳಲ್ಲಿ ಪರೀಕ್ಷೆ ನಡೆಯಲಿದೆ.


ಅಭ್ಯರ್ಥಿಗಳು ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರ ಒಳಗೆ ಪರೀಕ್ಷಾ ಕೇಂದ್ರಗಳಲ್ಲಿ ಹಾಜರಿರಬೇಕು. ಮಧ್ಯಾಹ್ನ 1.30ಕ್ಕೆ ಪ್ರವೇಶ ದ್ವಾರಗಳನ್ನು ಮುಚ್ಚಲಾಗುವುದು. ನಂತರ ಬರುವ ಅಭ್ಯರ್ಥಿಗಳ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

▶9

ಯಾವುದಕ್ಕೆ ಅನುಮತಿ?

ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದೊಳಗೆ ಪಾರದರ್ಶಕವಾಗಿರುವ ನೀರಿನ ಬಾಟಲಿಯನ್ನು ಕೊಂಡೊಯ್ಯಬಹುದು. ಮಧುಮೇಹ ಸಮಸ್ಯೆ ಇರುವ ಅಭ್ಯರ್ಥಿಗಳು ಮಧುಮೇಹ ಮಾತ್ರೆಗಳು, ಬಾಳೆಹಣ್ಣು, ಸೇಬು ಮತ್ತು ಕಿತ್ತಳೆ ಮುಂತಾದ ಹಣ್ಣುಗಳನ್ನು ಕೊಂಡೊಯ್ಯಬಹುದು.

ಸಾಂಪ್ರದಾಯಿಕ ಅಥವಾ ಧಾರ್ಮಿಕ ಉಡುಪುಗಳನ್ನು ಧರಿಸಿದ ಅಭ್ಯರ್ಥಿಗಳು, ಪೂರ್ಣ ತೋಳಿನ ಬಟ್ಟೆ ಅಥವಾ ಉಣ್ಣೆಯ ಬಟ್ಟೆಗಳನ್ನು ಧರಿಸಲು ಬಯಸುವ ಅಭ್ಯರ್ಥಿಗಳು ತಪಾಸಣೆ ಮಾಡಿಸಿಕೊಳ್ಳಲು ಮುಂಚಿತವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಾಗಬೇಕು ಎಂದು ಎನ್‌ಟಿಎ ಸೂಚಿಸಿದೆ.



ಟಿಕೆಟ್ ರಹಿತ ಪ್ರಯಾಣ ದಂಡ ₹500ಕ್ಕೆ ಏರಿಕೆ

ನವದೆಹಲಿ: ರೈಲಿನಲ್ಲಿ ಟಿಕೆಟ್ ಅಥವಾ ಪಾಸ್ ಇಲ್ಲದೆ ಪ್ರಯಾಣಿಸಿದರೆ ಇನ್ನು ಮುಂದೆ ಕನಿಷ್ಠ ₹500 ದಂಡ ಪಾವತಿಸಬೇಕಾಗುತ್ತದೆ. ಭಾರತೀಯ ರೈಲ್ವೆ, ಟಿಕೆಟ್ ರಹಿತ ಪ್ರಯಾಣಕ್ಕಾಗಿ ಕನಿಷ್ಠ ದಂಡವನ್ನು ₹250ರಿಂದ ₹500ಕ್ಕೆ ಹೆಚ್ಚಿಸಿದೆ. ಜುಲೈ 1ರಿಂದಲೇ ಪರಿಷ್ಕೃತ ದಂಡ ಜಾರಿಗೆ ಬರಲಿದೆ.

ಜನ್ ವಿಶ್ವಾಸ್ ಕಾಯ್ದೆಯಡಿ (ತಿದ್ದುಪಡಿ ನಿಬಂಧನೆಗಳು) ದಂಡದ ಮೊತ್ತ ಪರಿಷ್ಕರಿಸಲಾಗಿದೆ. ಟಿಕೆಟ್ ಇಲ್ಲದೆ ಪ್ರಯಾಣಿಸುವ, ಹಳೆಯ ಟಿಕೆಟ್ ಮರು ಬಳಕೆ ಮಾಡುವ ಅಥವಾ ಟಿಕೆಟ್‌ನಲ್ಲಿನ ಗಮ್ಯಸ್ಥಾನವನ್ನು ಮೀರಿ ಪ್ರಯಾಣಿಸುವವರಿಗೂ ದಂಡದ ಬಿಸಿ ತಟ್ಟಲಿದೆ.

▶8





ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ ಹಮ್ಮಿಕೊಂಡಿದ್ದ ಬೈಕಥಾನ್‌ನಲ್ಲಿ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲಾಯಿತು

ಎಚ್‌ಸಿಜಿ: ಸ್ತನ ಕ್ಯಾನ್ಸರ್ ಜಾಗೃತಿ

ಬೆಂಗಳೂರು: ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬೈಕಥಾನ್‌ನಲ್ಲಿ ಸುಮಾರು 250 ಮಹಿಳೆಯರು ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು.

ಕೆ.ಆರ್. ರಸ್ತೆಯಲ್ಲಿರುವ ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯಿಂದ, ಬನಶಂಕರಿಯ ಎಚ್‌ಸಿಜಿ ಆಸ್ಪತ್ರೆವರೆಗೆ ಬೈಕಥಾನ್ ನಡೆಯಿತು. ಬೈಕ್‌ನಲ್ಲಿ ಸಂಚರಿಸಿದ ಮಹಿಳೆಯರು, ಆರಂಭಿಕ ಹಂತದಲ್ಲಿಯೇ ಸ್ತನ ಕ್ಯಾನ್ಸರ್ ಪತ್ತೆ ಹಾಗೂ ಸ್ವಯಂ ಸ್ತನ ಪರೀಕ್ಷೆಯ ಬಗ್ಗೆ ಜಾಗೃತಿ ಮೂಡಿಸಿದರು.

ಸ್ತನ ಕ್ಯಾನ್ಸರ್ ತಪಾಸಣೆ, ರೋಗ ನಿರ್ಣಯ ಮತ್ತು ಚಿಕಿತ್ಸೆಗೆ ಬನಶಂಕರಿಯಲ್ಲಿ ನಿರ್ಮಾಣವಾಗಿರುವ ಎಚ್‌ಸಿಜಿಯ ನೂತನ ಸ್ತನ ಕ್ಯಾನ್ಸರ್ ಚಿಕಿತ್ಸಾಲಯವನ್ನು ಇದೇ ವೇಳೆ ಉದ್ಘಾಟಿಸಲಾಯಿತು. ಈ ಕಾರ್ಯಕ್ರಮದ ಭಾಗವಾಗಿ ಹೊರ ರೋಗಿಗಳಿಗೆ ಉಚಿತವಾಗಿ ಸ್ತನ ಕ್ಯಾನ್ಸರ್ ಪರೀಕ್ಷೆಯನ್ನು ನಡೆಸಲಾಯಿತು.

ಕ್ಯಾನ್ಸರ್ ತಜ್ಞರಾದ ಡಾ. ಜ್ಯೋತಿ ಘುಮ್ಮಿ ಮತ್ತು ಡಾ. ಸ್ಮಿತಾ ಕರೋಲ್ ಸಲ್ಡಾನ್ಹ ಅವರು ಸ್ತನ ಕ್ಯಾನ್ಸರ್ ಬಗ್ಗೆ ಮಾತನಾಡಿದರು. ನಿವೃತ್ತ ಐಪಿಎಸ್ ಅಧಿಕಾರಿ ನೀಲಮಣಿ ಎನ್. ರಾಜು, ನಟಿ ಪ್ರಮೀಳಾ ಜೋಶಾಯ್, ಎಚ್‌ಸಿಜಿ ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ಮನೀಶ್ ಕುಮಾರ್ ಉಪಸ್ಥಿತರಿದ್ದರು.

ನಿಧನ ವಾರ್ತೆ

ಅನ್ನಪೂರ್ಣಮ್ಮ ಹರಗಿನಡೋಣಿ



ಬೆಂಗಳೂರು: ಐಎಎಸ್ ಅಧಿಕಾರಿ ಸುಷ್ಮಾ ಗೋಡಬೋಲೆ ಅವರ ಅತ್ತೆ ಅನ್ನಪೂರ್ಣಮ್ಮ ಹರಗಿನಡೋಣಿ (94) ಬಳ್ಳಾರಿಯಲ್ಲಿ ಇತ್ತೀಚೆಗೆ ನಿಧನರಾದರು. ನಿವೃತ್ತ ಅಧೀಕ್ಷಕ ಭೂವಿಜ್ಞಾನಿ ಎಚ್. ಚನ್ನಬಸನಗೌಡ ಸೇರಿದಂತೆ ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಬಳ್ಳಾರಿಯಲ್ಲಿ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಸುಧಾ, ಮಯೂರ ಓದಿರಿ







ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗಲಿದೆ

40 ಅಡಿಯ ಕಂದಕಕ್ಕೆ ಬಿದ್ದ ದಂಪತಿ ರಕ್ಷಣೆ

ಸವದತ್ತಿ(ಬೆಳಗಾವಿ): ಯಲ್ಲಮ್ಮನ ಗುಡ್ಡ ಮಾರ್ಗದಲ್ಲಿ ನಾಲಿನ ಗಿರಣಿ ಬಳಿ ಶನಿವಾರ, ಬೈಕ್ ಮಗುಚಿ 40 ಅಡಿ ಆಳಕ್ಕೆ ಬಿದ್ದ ದಂಪತಿಯನ್ನು ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆ ಸಿಬ್ಬಂದಿ ರಕ್ಷಿಸಿದ್ದಾರೆ. ಹುಬ್ಬಳ್ಳಿಯ ಉಣಕಲ್ ನಿವಾಸಿಗಳಾದ ಪವನಕುಮಾರ ನಾಯಕ (30) ಮತ್ತು ಅವರ ಪತ್ನಿ ಅರ್ಪಿತಾ (23) ಗಾಯಗೊಂಡವರು. ದೇವಿ ದರ್ಶನ ಪಡೆದು ಮರಳುವಾಗ ದಂಪತಿ ಪ್ರಯಾಣಿಸುತ್ತಿದ್ದ ಬೈಕ್ ನಿಯಂತ್ರಣ ತಪ್ಪಿ ಕಂದಕಕ್ಕೆ ಬಿತ್ತು. ಕೆಳಭಾಗದಲ್ಲಿ ಗಿಡ–ಗಂಟಿಗಳು ಬೆಳೆದಿದ್ದ ಕಾರಣ ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಹರಿತಮತಿಯ ಹರಿಕಾರ



ದೇಶದಲ್ಲಿ ರಾಜಕೀಯ ಸ್ಥಿತ್ಯಂತರಗಳು, ಕೇಂದ್ರದಲ್ಲಿ ಆಡಳಿತರೂಢ ಬಿಜೆಪಿ ದೇಶವ್ಯಾಪಿ ನಡೆಸುತ್ತಿರುವ ಅಸಾಂವಿಧಾನಿಕ ದುಡಾಡಳಿತಗಳ ಮಧ್ಯೆಯೂ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಭದ್ರ ತಳಹದಿಯನ್ನು ಹೊಂದಿದೆ. ಕಾಂಗ್ರೆಸ್ ಪಕ್ಷದ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸುವ 'ಸಂಕಲ್ಪ'ದೊಂದಿಗೆ ಬಿ.ಕೆ. ಹರಿಪ್ರಸಾದ್ ಅವರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಅಧ್ಯಕ್ಷರಾಗಿ ಪದಗ್ರಹಣ ಮಾಡುತ್ತಿದ್ದಾರೆ.

ಕಟ್ಟಾ ಕಾಂಗ್ರೆಸಿಗರಾದ, ಹಿಂದುಳಿದ ಸಮುದಾಯದ ನೇತಾರರಾದ, ಪಕ್ಷ ನಿಷ್ಠೆಯಲ್ಲಿ ಸಾಟಿಯಿಲ್ಲದ ವಿಚಾರವಂತರಾದ ಬಿ.ಕೆ. ಹರಿಪ್ರಸಾದ್ ಅವರು ಕೆಪಿಸಿಸಿಯ ಸಾರಥ್ಯ ವಹಿಸಿಕೊಂಡಿದ್ದಾರೆ. ಅನವರತ ಪಕ್ಷ ನಿಷ್ಠೆ, ಇಂದಿರಾ ಗಾಂಧಿಯವರ ಕುಟುಂಬದೊಂದಿಗಿನ ನಿಕಟ ನಂಟು, ಕಾಂಗ್ರೆಸ್ ಪಕ್ಷದ ಸಿದ್ಧಾಂತದಲ್ಲಿ ಒಂದಿನಿತೂ ರಾಜೀ ಮಾಡಿಕೊಳ್ಳದ ಹರಿಪ್ರಸಾದ್ ಅವರಿಗೆ ಪಕ್ಷದ ಹೈಕಮಾಂಡ್ ಇಂತಹ ಪ್ರಮುಖ ಜವಾಬ್ದಾರಿಯನ್ನು ವಹಿಸಿದೆ. ವಿದ್ಯಾರ್ಥಿ ನಾಯಕರಾಗಿದ್ದ ದಿನದಲ್ಲೇ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಇಂದಿರಾ ಗಾಂಧಿ ಅವರ ಗೆಲುವಿಗೆ ಹರಿಪ್ರಸಾದ್ ಹಾಕಿದ್ದ ಶ್ರಮವನ್ನು ಕಂಡ ನೆಹರೂ–ಗಾಂಧಿ ಕುಟುಂಬವು ಆಗಲೇ ಅವರಲ್ಲಿನ ನಾಯಕತ್ವ ಗುಣವನ್ನು ಗುರುತಿಸಿತ್ತು. ಇಂದಿರಾ ಗಾಂಧಿ ಮತ್ತು ಸಂಜಯ್ ಗಾಂಧಿಯವರ ನೀಲಿಕಣ್ಣಿನ ಹುಡುಗನಾಗಿ ಸಕ್ರಿಯ ರಾಜಕಾರಣ ಪ್ರವೇಶಿಸಿದ್ದ ಹರಿಪ್ರಸಾದ್ ಅವರು ಐದು ದಶಕಗಳಿಗೂ ಹೆಚ್ಚು ಕಾಲ ಕ್ರಮಿಸಿದರೂ ಪಕ್ಷ ಮತ್ತು ನಾಯಕತ್ವದ ಮೇಲೆ ಅದೇ ನಿಷ್ಠೆ ಇರಿಸಿಕೊಂಡಿದ್ದಾರೆ.

ಕರ್ನಾಟಕ ಕಾಂಗ್ರೆಸ್‌ನಲ್ಲಿ ಹರಿಪ್ರಸಾದ್ ಅವರು ಈ ರೀತಿಯ ಮಹತ್ವದ ಹೊಣೆ ಹೊತ್ತಿರುವುದು ಇದೇ ಮೊದಲೇನಲ್ಲ. ದೇಶದ ಬಹುತೇಕ ರಾಜ್ಯಗಳ ಉಸ್ತುವಾರಿಯಾಗಿ ಕಾರ್ಯನಿರ್ವಹಿಸಿದ ಅಪಾರ ಅನುಭವ ಅವರಿಗೆ ಇದೆ. ಎಷ್ಟೋ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದ, ಅಂತಹ ರಾಜ್ಯಗಳಲ್ಲಿ ಪಕ್ಷದ ನಾಯಕತ್ವ ಇಕ್ಕಟ್ಟಿಗೆ ಸಿಲುಕಿದಾಗ ಅದನ್ನು ಸಮರ್ಥವಾಗಿ ನಿಭಾಯಿಸಿದವರು ಹರಿಪ್ರಸಾದ್. ಹೀಗಾಗಿಯೇ, ಕಾಂಗ್ರೆಸ್ ವರಿಷ್ಠರಾದ ಸೋನಿಯಾಗಾಂಧಿಯವರ ಅತ್ಯಂತ ನಿಕಟವರ್ತಿ, ವಿಶ್ವಾಸಾರ್ಹ ಸೇನಾನಿಗಳಲ್ಲಿ ಒಬ್ಬರಾಗಿದ್ದಾರೆ.

ರಾಹುಲ್ ಕಾಂಗ್ರೆಸ್‌ನ ನೈಜಧ್ವನಿ: ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷ ಹೊಂದಿರುವ ಸಂವಿಧಾನದ ಬಗೆಗಿನ ಕಳಕಳಿ, ಸಂವಿಧಾನದ ಆಶಯಗಳ ಅನುಷ್ಠಾನ ಹಾಗೂ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ, ಆ ಪಕ್ಷದ ಹಿಂದಿರುವ ಆರ್‌ಎಸ್‌ಎಸ್ ಎಸಗುತ್ತಿರುವ ಅಪಚಾರಗಳ ಬಗ್ಗೆ ಪ್ರಬಲ ಧ್ವನಿ ಎತ್ತಿರುವುದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ. ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸಿದ ಭವ್ಯ ಪರಂಪರೆ ಇರುವ, ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರೂ, ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯಗಳನ್ನು ಅನುಷ್ಠಾನಕ್ಕೆ ತಂದ ಕಾಂಗ್ರೆಸ್ ಪಕ್ಷಕ್ಕೆ ಅದರ ಗತ ವೈಭವವನ್ನು ಮರಳಿ ತರಲು ರಾಹುಲ್ ಗಾಂಧಿಯವರು ಅಹರ್ನಿಶಿ ದುಡಿಯುತ್ತಿದ್ದಾರೆ.

ನರೇಂದ್ರ ಮೋದಿಯವರ ಪ್ರಜಾಪ್ರಭುತ್ವ ವಿರೋಧಿ ಧೋರಣೆ, ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಅವರ ಯತ್ನ, ಶ್ರೇಣೀಕರಣ ವ್ಯವಸ್ಥೆಯನ್ನು ಮತ್ತೆ ಜಾರಿಗೊಳಿಸಲು ಯತ್ನಿಸುತ್ತಿರುವ ಆರ್‌ಎಸ್‌ಎಸ್‌ನ ಮನುವಾದಿ ಚಿಂತನೆಯನ್ನು ಕಟು ಮಾತುಗಳಲ್ಲಿ ತಮ್ಮದೇ ಶೈಲಿಯಲ್ಲಿ ಟೀಕಿಸುವ ಧೈರ್ಯ ತೋರುವ ರಾಜ್ಯ ಕಾಂಗ್ರೆಸ್‌ನ ಬೆರಳೆಣಿಕೆಯ ನಾಯಕರಲ್ಲಿ ಹರಿಪ್ರಸಾದ್ ಪ್ರಮುಖರು. ಸ್ಪಷ್ಟ–ನಿಖರ ಶೈಲಿಯೊಳಗೆ ಮನುವಾದಿ ಸಿದ್ಧಾಂತದ ಅಪಾಯವನ್ನು ವಿಶ್ಲೇಷಿಸುವ, ನರೇಂದ್ರ ಮೋದಿಯವರ ಆಡಳಿತದ ವೈಖರಿಯನ್ನು ಸೈದ್ಧಾಂತಿಕ ನೆಲೆಯಲ್ಲಿ ಟೀಕಿಸಿ, ಜನರಿಗೆ ಮನವರಿಕೆ ಮಾಡಿಕೊಡುವ ಕಲೆ ಹರಿಪ್ರಸಾದ್ ಅವರಿಗೆ ಕರಗತವಾಗಿದೆ.

ದೇಶದ ಎಲ್ಲ ಪಕ್ಷಗಳಲ್ಲೂ ಈ ಹೊತ್ತು ಧನ ಹಾಗೂ ಮನ ರಾಜಕಾರಣ ಇದೆ. ಹರಿಪ್ರಸಾದ್ ಅವರು ಮನ ರಾಜಕಾರಣಕ್ಕೆ ಹೆಸರಾದವರು. ಕಾಂಗ್ರೆಸ್ ಪಕ್ಷದ ಸೈದ್ಧಾಂತಿಕ, ವೈಚಾರಿಕ ಹಾಗೂ ವೈಜ್ಞಾನಿಕ ಆಲೋಚನೆಯನ್ನು ತಮ್ಮ ರಕ್ತದ ಕಣ ಕಣಗಳಲ್ಲೂ ತುಂಬಿಕೊಂಡವರು. ಅದನ್ನು ಎಲ್ಲೆಡೆ ಪಸರಿಸಿ, ಪಕ್ಷವನ್ನು ಬಲಗೊಳಿಸುವ ಇಚ್ಛಾಶಕ್ತಿ ಪ್ರದರ್ಶಿಸುತ್ತಲೇ ಬಂದವರು. ಕಾಂಗ್ರೆಸ್ ಪಕ್ಷದಲ್ಲಿ ಅಹಿಂದ ನಾಯಕತ್ವನ್ನು ಮುನ್ನಡೆಸುವ ಛಾತಿಯುಳ್ಳ ಹರಿಪ್ರಸಾದ್, ಅಧ್ಯಯನದಿಂದ ಸಂಪಾದಿಸಿದ ಜ್ಞಾನವನ್ನು ಕಾರ್ಯಕರ್ತರ ಪಡೆಗೆ ವರ್ಗಾಯಿಸುವ ಶಕ್ತಿಯುಳ್ಳವರು. ಹರಿಪ್ರಸಾದ್ ಅವರು ಕೆಪಿಸಿಸಿ ಅಧ್ಯಕ್ಷರಾಗುವ ಮುಖೇನ, ಕಾಂಗ್ರೆಸ್‌ಗೆ ಮತ್ತೊಮ್ಮೆ ಸೈದ್ಧಾಂತಿಕ ಆಸರೆ ಬಂದೊದಗಿದೆ.

ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಎದುರಾಗಬೇಕಿದೆ. ಕಾಂಗ್ರೆಸ್ ಜತೆಗೆ ರಾಜ್ಯದಾದ್ಯಂತ ಇರುವ ಬಲಿಷ್ಠ ಕಾರ್ಯಕರ್ತರ ಪಡೆಯನ್ನು ಹುರಿಗೊಳಿಸಿ, ಪ್ರಜಾಪ್ರಭುತ್ವವನ್ನು ಉಳಿಸುವ ರಾಹುಲ್ ಗಾಂಧಿಯವರ ಹೋರಾಟವನ್ನು ಬಲಗೊಳಿಸಬೇಕಿದೆ. ರಾಹುಲ್ ಅವರ ಆಲೋಚನಾ ಕ್ರಮ, ದೇಶಕ್ಕೆ ಮಾರಕವಾಗಿರುವ ಮನುವಾದಿ ಸಿದ್ಧಾಂತದ ಬಗೆಗಿನ ಅವರ ಸ್ಪಷ್ಟ ಗ್ರಹಿಕೆಯನ್ನು ಆಳವಾಗಿ ಅರಿತಿರುವ ಹರಿಪ್ರಸಾದ್ ಈ ವಿಷಯದಲ್ಲಿ ಹರಿತ ಮತಿ. ಅವರ ನೇತೃತ್ವದಲ್ಲಿ ಕಾಂಗ್ರೆಸ್‌ಗೆ ಮತ್ತಷ್ಟು ಬಲಬರಲಿದೆ ಎಂಬುದು ನಿಸ್ಸಂಶಯ. ಅವರು ಅಧಿಕಾರ ಸ್ವೀಕರಿಸುವ ಈ ಹೊತ್ತಿನೊಳಗೆ ಶುಭವಾಗಲಿ.

ನೆಲಮಟ್ಟದಿಂದ ಬೆಳೆದ ನಾಯಕ

ಕುಟುಂಬ ರಾಜಕಾರಣದ ಹಿನ್ನೆಲೆ, ಗಾಡ್ ಫಾದರ್‌ಗಳ ನೆರವಿಲ್ಲದೇ ತಳಸ್ತರದಿಂದ ಕಾರ್ಯಕರ್ತರಾಗಿ ಬೆಳೆದವರು ಹರಿಪ್ರಸಾದ್. ವಿದ್ಯಾರ್ಥಿ ದೆಸೆಯಿಂದಲೇ ಕಾಂಗ್ರೆಸ್ ಪದಾತಿದಳ ಸೇರಿಕೊಂಡ ಹರಿಪ್ರಸಾದ್, ಹಂತಹಂತವಾಗಿ ಯುವ ಕಾಂಗ್ರೆಸ್, ರಾಜ್ಯ ಮಟ್ಟದ ಪದಾಧಿಕಾರಿ ಹಾಗೂ ರಾಷ್ಟ್ರೀಯ ಮಟ್ಟಕ್ಕೆ ಏರಿದವರು. ತಮ್ಮ ನಡೆ–ನುಡಿ, ಕಾಯಕ ನಿಷ್ಠೆ, ಪಕ್ಷದ ಸಿದ್ಧಾಂತದ ಬಗೆಗೆ ಅಚಲ ನಂಬಿಕೆಯಿಂದಾಗಿಯೇ ಇಂದಿರಾಗಾಂಧಿಯವರ ಕಾಲದಿಂದಲೂ ಕಾಂಗ್ರೆಸ್‌ನಲ್ಲಿ ಸಕ್ರಿಯರಾದವರು. ಹೀಗಾಗಿಯೇ, ರಾಜ್ಯಸಭೆ ಸದಸ್ಯರಾಗಿ ದಶಕಗಳ ಕಾಲ ಸದನದಲ್ಲಿ ಕಾಂಗ್ರೆಸ್‌ನ ಧ್ವನಿಯಾದವರು. ಕರ್ನಾಟಕದಲ್ಲಿ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ, ಹಿಂದೆ ಆಡಳಿತ ನಡೆಸಿದ್ದ ಬಿಜೆಪಿ ಸರ್ಕಾರಕ್ಕೆ ದುಸ್ವಪ್ನವಾಗಿ ಕಾಡಿದವರು. ಈ ಕಾರಣಕ್ಕಾಗಿಯೇ ಅವರಿಗೆ ಮತ್ತೊಮ್ಮೆ ಪರಿಷತ್ತಿನ ಸದಸ್ಯರಾಗುವ ಅವಕಾಶವೂ ದೊರೆತಿದೆ. ದಶಕಗಳ ಕಾಲ ಕಾಂಗ್ರೆಸ್‌ಗೆ ದುಡಿದರೂ ಯಾವತ್ತೂ ಅಧಿಕಾರ ಕೇಂದ್ರದ ಹತ್ತಿರ ಸುಳಿಯದೇ, ಆಸ್ತಿ–ಹಣ ತರುವ ಕುರ್ಚಿಗೆ ಆಸೆ ತೋರದೇ, ಪಕ್ಷಕ್ಕಾಗಿ ದುಡಿದವರು ಹರಿಪ್ರಸಾದ್.

ಪ್ರಸ್ತುತಿ: ಪಿ.ಪಿ. ಬ್ರ್ಯಾಂಡ್ ಸ್ಪಾಟ್

ಕಾರ್ಯಕರ್ತರ ನೇತಾರ

ರಾಜಕೀಯ ಪಕ್ಷಗಳಲ್ಲಿ 'ನಾಯಕ'ರಿಗೆ 'ನಾಯಕ'ರಾಗಿ ಅಧಿಕಾರದ ಗದ್ದುಗೆ ಏರಲು ತವಕಿಸುವವರೇ ಹೆಚ್ಚು. ಅಂತಹವರ ಮಧ್ಯೆ ಕಾರ್ಯಕರ್ತರ ನಾಯಕನಾಗಿ, ಅವರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಪಕ್ಷದ ಸಂಘಟನೆಯನ್ನು ವಿಸ್ತರಿಸಲು ಬಯಸುವ ವಿರಳ ವ್ಯಕ್ತಿತ್ವದ ನಾಯಕ ಬಿ.ಕೆ. ಹರಿಪ್ರಸಾದ್. ಕಾರ್ಯಕರ್ತರ ಮಾತು, ನೋವು–ನಲಿವುಗಳಿಗೆ ಕಿವಿಯಾಗುವ ನಾಯಕ ಇವರು. ಜೀವನ ಶೈಲಿಯೂ ಅಷ್ಟೇ ಸರಳ.

ತಮ್ಮ ಅಧಿಕಾರದ ವ್ಯಾಪ್ತಿಯೊಳಗೆ ಕೆಲಸ ಮಾಡುವಾಗಲೆಲ್ಲ ತಮ್ಮದೇ ಜಾತಿ ಅಥವಾ ರಾಜಕೀಯವಾಗಿ ಬಲಾಢ್ಯವಾಗಿರುವ ಸಮುದಾಯಗಳಿಗೆ ಮಣೆ ಹಾಕುವ ನಾಯಕರೇ ಹೆಚ್ಚು. ಆದರೆ, ಬಿ.ಕೆ. ಹರಿಪ್ರಸಾದ್ ಅವರು ಈ ವಿಷಯದಲ್ಲಿ ಸಂಪೂರ್ಣ ಭಿನ್ನ. ಧ್ವನಿಯೇ ಇಲ್ಲದ, ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಕುರಿತು ತಾಯಿ ಮಮತೆಯನ್ನು ಇರಿಸಿಕೊಂಡು, ಅವಕಾಶ ಸಿಕ್ಕಾಗಲೆಲ್ಲ ಅವರ ಕೈಹಿಡಿದು ಮೇಲಕ್ಕೆತ್ತಲು ಯತ್ನಿಸುವ ನೇತಾರ.



ಬಿ.ಎನ್. ರಮೇಶ್



ಬೆಂಗಳೂರಿನ ಚರ್ಚ್ ಸ್ಟ್ರೀಟ್ ನಲ್ಲಿ ಶನಿವಾರ ಸಂಜೆ ಜಿಟಿ ಜಿಟಿ ಮಳೆಯಲ್ಲಿ ಯುವ ಜನರು ಕೊಡೆಯ ಮೊರೆ ಹೋದರು– ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್.ಜಿ.

ಹಲವೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೂರ್ವಭಾಗದ ಹಲವು ಕಡೆ ಶನಿವಾರ ಸಂಜೆ ಭಾರಿ ಮಳೆಯಾಗಿದ್ದು, ಮುಖ್ಯರಸ್ತೆಗಳಲ್ಲಿ ನೀರು ನಿಂತು ವಾಹನ ಸವಾರರು ಪರದಾಡಿದರು.

ಹೊರಮಾವು ಹಾಗೂ ಹಗದೂರು ಸುತ್ತಮುತ್ತ ಪ್ರದೇಶಗಳಲ್ಲಿ ಅತಿಹೆಚ್ಚು (ತಲಾ 6 ಸೆಂ.ಮೀ) ಮಳೆಯಾಯಿತು. ಜಕ್ಕೂರು, ಬಾಗಲಗುಂಟೆ, ಶೆಟ್ಟಿಹಳ್ಳಿ, ಯಲಹಂಕ ಸುತ್ತಮುತ್ತ ಪ್ರದೇಶಗಳಲ್ಲಿ ತಲಾ 3.8 ಸೆಂ.ಮೀ, ಕೊಡಿಗೆಹಳ್ಳಿ, ಮನೋರಾಯನಪಾಳ್ಯ, ಎಚ್‌ಎಎಲ್ ವಿಮಾನ ನಿಲ್ದಾಣ, ವಿ. ನಾಗೇನಹಳ್ಳಿ, ಕೋರಮಂಗಲದಲ್ಲಿ ತಲಾ 2.5 ಸೆಂ.ಮೀ ಮಳೆಯಾಯಿತು. ಯಲಹಂಕ ರೈತರ ಸಂತೆಯಿಂದ ಸಂತೆ ವೃತ್ತ, ವಿದ್ಯಾಶಿಲ್ಪ ಅಂಡರ್‌ಪಾಸ್, ಪಣತ್ತೂರು ರೈಲ್ವೆ ಸೇತುವೆಯಿಂದ ಬಳಗೆರೆ, ಟಿನ್ ಫ್ಯಾಕ್ಟರಿಯಿಂದ ಹೊಸಕೋಟೆ ರಸ್ತೆಗಳಲ್ಲೂ ನೀರು ಅತಿಹೆಚ್ಚು ನಿಂತಿತ್ತು.

'ಭಾವನೆ ಅರ್ಥ ಮಾಡಿಕೊಳ್ಳುತ್ತಿರಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಂಡಾಗಿ ಜನಿಸಿದ ನನಗೆ ಬಾಲ್ಯದಲ್ಲಿಯೇ ಹೆಣ್ಣಿನ ಭಾವನೆಗಳು ಆವರಿಸಿದ್ದವು. ಹತ್ತನೆ ತರಗತಿಯಲ್ಲಿರುವಾಗಲೇ ಸೀರೆ ಉಟ್ಟುಕೊಳ್ಳಬೇಕೆಂಬ ಹಂಬಲ ದಟ್ಟವಾಗಿ ಆವರಿಸಿತ್ತು. ನನ್ನ ಮನಸ್ಸಿನ ಭಾವನೆಯನ್ನು ಯಾರೂ ಅರ್ಥ ಮಾಡಿಕೊಳ್ಳುತ್ತಿರಲಿಲ್ಲ....'

ಹೀಗೆ ತಮ್ಮ ನೋವು ಹಾಗೂ ಮನದಾಳದ ಮಾತನ್ನು ಹಂಚಿಕೊಂಡವರು ಲಿಂಗತ್ವ ಅಲ್ಪಸಂಖ್ಯಾತರ ಪರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಹಮ್ಮಿಕೊಂಡಿದ್ದ ಮನೆಯಂಗಳದಲ್ಲಿ ಮಾತುಕತೆಯಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿದ್ದ ಅವರು, 'ನಾನು ಹುಟ್ಟಿ ಬೆಳೆದದ್ದು ಮೈಸೂರು ರಸ್ತೆಯ ಟೋಲ್ ಗೇಟ್ ಬಳಿಯ ಕೊಳೆಗೇರಿಯಲ್ಲಿ. ಆ ಪ್ರದೇಶ ಈಗ ಚಾಮರಾಜಪೇಟೆಗೆ ಸೇರುತ್ತದೆ. ನೀನು ಗಂಡಾಗಿಯೇ ಇರು ಎಂದು ಅಪ್ಪ ಹೇಳುತ್ತಿದ್ದರು. ಆದರೆ, ನನ್ನ ದೇಹದಲ್ಲಿನ ಬದಲಾವಣೆಯನ್ನು ಯಾರಿಗೆ ಅರ್ಥ ಮಾಡಿಸಬೇಕು ಎನ್ನುವುದೇ ಗೊತ್ತಾಗುತ್ತಿರಲಿಲ್ಲ. ಬಾಲ್ಯದಲ್ಲಿಯೇ ಹಲವು ಅಪಮಾನಗಳನ್ನು ಅನುಭವಿಸಿದೆ' ಎಂದು ಸ್ಮರಿಸಿಕೊಂಡರು.

ಮನೆಯಂಗಳದಲ್ಲಿ ಮಾತುಕತೆ

'ಮನಸ್ಸಿನ ಬದಲಾವಣೆಯ ಕಾರಣ ಸೀರೆ ಉಟ್ಟುಕೊಳ್ಳಬೇಕೆಂಬ ಹಂಬಲ ಅತೀವವಾಗಿತ್ತು. ನಾನು ಹೆಣ್ಣಾಗಿ ಬದುಕಬೇಕೆಂಬ ತುಮುಲ ನನ್ನಲ್ಲಿ ಆವರಿಸಿತ್ತು. ಹತ್ತನೆ ತರಗತಿಯಲ್ಲಿರುವಾಗ ಓದು ನಿಲ್ಲಿಸಿದೆ. ದೇಹದಲ್ಲಿನ ಬದಲಾವಣೆ ಪ್ರಕ್ರಿಯೆಯಿಂದಾಗಿ 16ನೇ ವರ್ಷಕ್ಕೆ ಮನೆಬಿಟ್ಟು ಹೊರನಡೆದೆ. ಆಗ ದಿಕ್ಕು ತೋಚದಂತಾಗಿ ಕಬ್ಬನ್ ಉದ್ಯಾನದಲ್ಲಿರುವ ನನ್ನ ಸಮುದಾಯ ಸೇರಿದೆ. ಅಲ್ಲಿಂದ ನಾನು ಹೊಸ ಬದುಕು ಕಂಡುಕೊಂಡೆ' ಎಂದು ಹೇಳಿದರು.

'ಆ ದಿನಗಳಲ್ಲಿ ನಾಲ್ಕಾಣೆಗೂ ಕಷ್ಟಪಡುತ್ತಿದೆ. ಸವಾಲುಗಳ ನಡುವೆ ಸಾಗಿ, ಸಮುದಾಯದ ಸಮಸ್ಯೆಗಳಿಗೆ ಕಿವಿಯಾಗಲು ರಾಜ್ಯದಾದ್ಯಂತ ಪ್ರವಾಸ ಮಾಡಿದೆ. ಶಸ್ತ್ರಚಿಕಿತ್ಸೆ ಮೂಲಕ ಲಿಂಗಪರಿವರ್ತನೆ ಮಾಡಿಸಿಕೊಂಡ ಬಳಿಕ, ಭಿಕ್ಷಾಟನೆ ವೃತ್ತಿ ಬಿಟ್ಟು ಹೋರಾಟದ ಭಾಗವಾಗಿ ನನ್ನನ್ನು ತೊಡಗಿಸಿಕೊಂಡೆ. ನಾನು ಈ ಎತ್ತರಕ್ಕೆ ಏರಲು ನನ್ನ ಸಮುದಾಯ ಕಾರಣ. ನಮ್ಮ ಹಕ್ಕುಗಳಿಗಾಗಿ ನ್ಯಾಯಾಲದಲ್ಲಿ ಹೋರಾಡಿ ಗೆದ್ದಿದ್ದೇವೆ. ಇದರಿಂದ ನಾವೀಗ ಅಲ್ಪ ಮಟ್ಟಿಗೆ ಉಸಿರಾಡಲು ಸಾಧ್ಯವಾಗಿದೆ' ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಬಿ.ಎಸ್. ಮಂಜುನಾಥ ಸ್ವಾಮಿ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಅಕ್ಕೈ ಪದ್ಮಶಾಲಿ ಅವರನ್ನು ಬಿ.ಎಸ್. ಮಂಜುನಾಥ ಸ್ವಾಮಿ ಸನ್ಮಾನಿಸಿದರು

ಇಲ್ಲಿದೆ ನೋಡಿ ಕಸ...

DH DECCAN HERALD | ಪ್ರಜಾವಾಣಿ ಸಿಟಿಜನ್ ಕನೆಕ್ಟ್ | ಉತ್ತಮ ಬೆಂಗಳೂರಿಗಾಗಿ ಸಹಯೋಗ

96060 38256

dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಅದನ್ನು ಪ್ರಕಟಿಸಲಾಗುತ್ತದೆ.



ಸುಲ್ತಾನ್ ಪೇಟೆ ರಸ್ತೆಯಲ್ಲಿ ತುಂಬಿಕೊಂಡ ತ್ಯಾಜ್ಯಗಳು



ಸೌರಾಷ್ಟ್ರ ಪೇಟೆಯ ಮುಖ್ಯ ರಸ್ತೆಯಲ್ಲಿ ಹರಡಿಕೊಂಡ ಕಸ



ಜಯನಗರದ 3ನೇ ಬ್ಲಾಕ್, 13ನೇ ಮುಖ್ಯ ರಸ್ತೆಯಲ್ಲಿ ಉಳಿದಿರುವ ಕಸ



ಮೆಜೆಸ್ಟಿಕ್ ಬಳಿಯ ಅಣ್ಣಮ್ಮ ದೇವಸ್ಥಾನದ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ


ಬಸವನಗುಡಿ ವಿಧಾನಸಭಾ ಕ್ಷೇತ್ರ
ನಾಡಿಗೆ ಶಿವ – ಕಾಂಗ್ರೆಸ್‌ಗೆ ಹರಿ
ಸರ್ವ ಜನರ ಅಭಿವೃದ್ಧಿಗೆ ಹೆದ್ದಾರಿ
ಸಾಮರಸ್ಯದ ಸೂತ್ರಧಾರ
ಶ್ರೀ ಬಿ.ಕೆ.ಹರಿಪ್ರಸಾದ್ ರವರು
ಕೆ.ಪಿ.ಸಿ.ಸಿ. ನೂತನ ಅಧ್ಯಕ್ಷರು
ದಿಟ್ಟತನದ ಧೀಮಂತ
ಶ್ರೀ ಡಿ.ಕೆ.ಶಿವಕುಮಾರ್ ರವರು
ರಾಜ್ಯದ ನೂತನ ಮುಖ್ಯಮಂತ್ರಿಗಳು
ಶುಭ ಕೋರುವವರು :
ಬಸವನಗುಡಿ ಕಾಂಗ್ರೆಸ್ ಮುಖಂಡರು
ಹಾಗೂ ಕಾರ್ಯಕರ್ತರು
ಕೆ. ಚಂದ್ರಶೇಖರ್
ಮಾಜಿ ಮಹಾಪೌರರು, ಮಾಜಿ ಶಾಸಕರು,
ಬಸವನಗುಡಿ ವಿಧಾನಸಭಾ ಕ್ಷೇತ್ರ
ಸ್ಥಳ: ಅರಮನೆ ಮೈದಾನ, ತ್ರಿಪುರವಾಸಿನಿ, ಬೆಂಗಳೂರು, ದಿನಾಂಕ: 21-06-2026 ಸಮಯ: ಬೆಳಗ್ಗೆ : 10:30

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

BDA SITE For Sale In BANASHANKARI 6th Stage 1st Block #100/L 1937-Sqft North Facing 16,000/- Per Sqft Near NPS School. CONTACT: 9535575774/ 9343668888

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

"**BUYING AND** Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

"**BANASHANKARI 2ND-STAGE** 30x50, 35x55, 40x60, Banashankari 3rd Stage 40x60, Kanakapura Road 30x40. Call: 9845286505"

BDA AUCTION CORNER SITE 50x80 S/W Corner 40ft Road BANASHANKARI 6th Stage 4th B`Block. Contact`Owner: 9980041072

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

Electronic City

KHB Sites
Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner
Sites Call: 70260 13388

Bannerghatta Road

SALE 40X60 North Facing Manjunath Nagar Near Vijaya Bank Layout BTM 4th Stage Broker Excuse 8147734144

Hosur Road

"**ATTIBELE NRI LAYOUT** 40x60 South facing Site for sale near TVS Factory Excellent location. 9845500019/ 7019314962"

Koramangala

KORAMANGALA 8TH Block 3350 Sqft Revenue Site For Sale Clear Title. Brokers Excuse. Contact: 9481801053

Kanakapura Road

SITE FOR Sale 30x40 west facing, BCCHS Layout, Vajarahalli. Brokers Excuse. Genuine buyers Contact: 9880252008.

K R Puram

RESIDENTIAL SITE, 2470sq.ft, Vinayaka Layout, adjacent 80ft road, Medahalli 13000/- perSqft, Negotiable. ContactOwner: 9844086846

Kempegowda Layout

PLATINUM PROPERTIES Nadaprabhu Kempegowda Layout BDA SITE'S AVAILABLE/ WANTED 20x30, 30x40, 40x60, 50x80 Contact: 8884709409/ 7899570235

COMMERCIAL SITE Sale 50x80 East Facing BDA 300ft Road Rs. 15000/- Negotiable Nadaprabhu Kempegowda Layout: 9916826976

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

Nelamangala

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

VCNR VISTA NEAR NELAMANGALA & HESARGHATTA 30X40 & 30X50 BOOK A SITE VISIT CONTACT:9986896859

Rajarajeshwari Nagar

40X60 SITE FOR SALE: Rajarajeshwari Nagar,BEML Layout Global Tech Park Back Gate.Ideal for`PG.&.Rental Income`Building Prime`Location. Serious Buyers`only. Call-8147618891

Sadashiva Nagar

LOWER PALACE arcade Sadashivnagar old-house 20X25, NTI LAYOUT 40X60 BDA CBI-Road 50X88 SALE 9448473358 9740183922

South

SITE FOR SALE: TUDA Approved A Khata 40x196 in Tumakuru. Call: 9900393000

Vishweshwariah Layout

WANTED / AVAILABLE 20x30, 30x40, 40x60, 50x80 STIES @
FOR SALE
Visveshwaraiah Layout BSK 6th Stg, Kempegowda Lyt, Nagarabhavi, ITI Lyt, Vidhanasouda Layout. Immediate Registration
CALL: 9845 488 488

"**VISVESHWARAIAH LAYOUT** 8th Block 30x40 West, 5th Block 30x40 North 100% Vastu Builder location. 9448432633"

VISHWESHWARIAH LAYOUT 7th Block BDA 30x40 For Immediate Sale Good Location. More Details Contact: 7975986504

VISHVESHWARIYYA LAYOUT BDA SITE 40X60 Nr Oxford School 6th Stage Sale, Contact: 9740183922 9448473358 Thomas

BDA SITE FOR SALE. 40*60 South face, 40 feet road Near 100 feet road VISHVESHWARAIAH LAYOUT, PRICE Rs13500/sqft. Contact :9743322555

BDA SITES For Sale 50x80 North Face 60ft Road Sir M Vishveshwaraiya Layout 5th Block Good Location Ct: 8217392686

Yelahanka

SALE 40X60 West South Corner Judicial Layout Near Mall of Asia Rs. 23,000/- Psqft Negotiable: 9916826976

Srirampura

30X100 SITE, 1st Cross, Srirampuram, N-Face, Near Metro - Mantri Mall - Suburban Railway Station, 17,000/sqft, PH : 9739732433

House

Banashankari

SALE: RESIDENTIAL SITE, HOUSE, FLATS/ Commercial Buildings BANASHANKARI 2nd/ 3rd Stage Jayanagar, J.P.Nagar,BTM, Basavanagudi, Hanumanthanagar 7760019494.

BTM Layout

BTM LAYOUT BDA, 30x50 Building`South, 1 BHK 15`Nos. Rent getting 3,80,000/-, Sale 7,90,00000/- Genuine Buyers only 9945908799/ 9845094369

Jayanagar

SALE 40X60 Jayanagar 4th 'T' Block With old House on 50feet Road Excellent Location Ct:9844134068

SALE 30X40 Jayanagar 9th Block 4 BHK Duplex House at Good Location Ct: 9844134068

JAYANAGARA 4TH T' Block 30x40, Old House Near SSMRV College Price 4.60CR Contact; 9845704509

Rajarajeshwari Nagar

SALE BUILDING 40X60 Duplex House. Ideal Homes sites 40X60, 50×80, BDA, Direct Owner Meeting: 9164409377

Flat

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT. 80507-27159/ 96065-03064

Indiranagar

DEFENCE COLONY 3BHK Flat (1900sqft) with 1500sqft Garden Ground Floor with Serventroom, 2 Carpark for Sale Call. 9845004248

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

R T Nagar

2 BHK Semi Furnished Flat (Ground floor) with Balcony in Atmananda Colony, Behind Canara Bank, in excellent Location for Sale. Price 55 Lakhs. (Negotiable). Contact:- 9845575731.

Vidyaranyapura

3 BHK Flat for Sale Near SBI, Vidyaranyapura. 1560 Sq.Ft. SBA, 3 Bath, First Occupancy, Premium Interiors, Ready to Move, 1 Car Parking. 1.77 Cr Neg. Contact: 8123417398

Vajrahalli

PRIME CENTREO, Acacia Tower 1454 sft Ready Flat for Sale Near Vajarahalli Metro. Contact: 9962372203.

Agricultural Land Converted

Devanahalli

5 TO 100 Acres Agriculture Conversion Lands Devanahalli Doddaballpura Nandi Hills Chikkaballapur For Immediate Sale Call 9164565566

Agricultural Land

Multiple Locations

DISTRESS SALE Inner Ring Road Facing 2 Acres, Kumbalagudu 4 Acres, Banashankari 45000 Sft. Contact: 9844314606.

Industrial & Factory

Peenya

SALE ALL kinds of Lands/ Machinery at Peenya/ Dabaspet/ Yeshwanthpur/ Rajajinagar. Please Contact RAJU- 9148740486

Tumkur Road

SALE, 10/ 28/ 50/ 105 Acres Industrial Warehouse, Commercial, Agriculture, Villa, Residencial Land. NAIK: 9972636255

Residential/ Commercial

Old Madras Road

FOR SALE A KHATA OMR MAIN ROAD FACING SHOWROOM/ COMMERCIAL PROPERTY. SUITABLE FOR OFFICE/INSTITUTE/BPO/CLINIC CONTACT 9948661379

Commercial Land

General

UDUPI KOTA BEACH Front 15 To 92 Cents Villa Plots Converted For Sale. Contact: 9481801053

RENTAL PROPERTIES

Accommodation Available

Flats

MALLESWARAM 2BHK Flat 2nd Floor, Lift, Carparking Rent 30000/- Plus Maintenance Mail: durga824@gmail.com

TO-LET 3 BHK Sterling Solitaire Syndicate Bank Colony, Bannerghatta Road. Contact: 98440 40351/ 94482 73218

REAL ESTATE BUYING

Sites

Vishweshwariah Layout

BUYING/ SELLING 20x30,30x40,40x60 50x80 BDA sites VISHVESHWARAIAH LAYOUT,BSK 6th-stage KEMPEGOWDA-LAYOUT.Contact: 9844533371/ 9341733480

Joint Development

South

WANTED PROPERTIES For JV 2400Sqft and Above, Purchase 4 Acres and Above. Suitable: For Apartment & Layout: 9844732229

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

MATRIMONIAL

Grooms Wanted

Brahmin

GROOMS REQUIRED
For Kannada Pure Vegetarian Brahmin, 25 yrs, Fair, B.Tech Computer Science, Girl from Hyderabad Doing M.Tech.
Contact : 9989441882 9740265449

ಪಿಎಫ್‌ಎಆರ್ ಸಿಂಧುತ್ವ ಎತ್ತಿ ಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆ ಅನುಮೋದನೆಯ ಪ್ರೀಮಿಯಂ ಫ್ಲೋರ್ ಏರಿಯಾ ರೇಷಿಯೊ (ಎಫ್‌ಎಆರ್) ಯೋಜನೆಯ ಸಾಂವಿಧಾನಿಕ ಸಿಂಧುತ್ವವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

'ಈ ಯೋಜನೆ ಆಸ್ತಿ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಮತ್ತು ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳ (ಟಿಡಿಆರ್) ಮೌಲ್ಯವನ್ನು ಕುಂಠಿತಗೊಳಿಸುತ್ತದೆ' ಎಂದು ಆಕ್ಷೇಪಿಸಿ ಸಿಟಿಜನ್ಸ್ ಆ್ಯಕ್ಷನ್ ಫೋರಂ, ಎನ್.ಕೃಷ್ಣಮೂರ್ತಿ, ವಿಜಯ್ ಮೆನನ್ ಹಾಗೂ ಇತರರು ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

'ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ಕೆಟಿಸಿಪಿ) ಕಾಯ್ದೆ–1961ರ ಕಲಂ 18-ಬಿ ಅಡಿಯಲ್ಲಿ ಪರಿಚಯಿಸಲಾಗಿರುವ 'ಪ್ರೀಮಿಯಂ ಎಫ್‌ಎಆರ್' ಯೋಜನೆಯು ಸಂವಿಧಾನದ 14, 21 ಅಥವಾ 300ಎ ವಿಧಿಗಳನ್ನು ಉಲ್ಲಂಘಿಸುವುದಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಬೆಂಗಳೂರಿನಲ್ಲಿ ಹೆಚ್ಚುವರಿ ಎಫ್‌ಎಆರ್ ಅನ್ನು ನಿಯಂತ್ರಿಸುವ ವಲಯ ಚೌಕಟ್ಟನ್ನು ವಿಶ್ಲೇಷಿಸುವಾಗ, ಎಲ್ಲ ಆಸ್ತಿಗಳಿಗೆ ಪ್ರೀಮಿಯಂ ಎಫ್‌ಎಆರ್ ಸಾರ್ವತ್ರಿಕವಾಗಿ ಲಭ್ಯವಿಲ್ಲ. 9 ಮೀಟರ್ ಅಥವಾ ಅದಕ್ಕಿಂತ ಹೆಚ್ಚಿನ ಆದರೆ 12 ಮೀಟರ್‌ಗಿಂತ ಕಡಿಮೆ ಅಗಲವಿರುವ ರಸ್ತೆಗಳಿಗೆ ಹೊಂದಿಕೊಂಡಿರುವ ಫ್ಲ್ಯಾಟ್‌ಗಳಲ್ಲಿ ಟಿಡಿಆರ್ ಹೊಂದಿರುವವರಿಗೆ ಈ ಯೋಜನೆಯು ಸಂರಕ್ಷಿತ ವಲಯವನ್ನು ಸೃಷ್ಟಿಸುತ್ತದೆ' ಎಂದು ನ್ಯಾಯಪೀಠ ಹೇಳಿದೆ.

'ಪ್ರೀಮಿಯಂ ಎಫ್‌ಎಆರ್ ಯೋಜನೆಯು ಆಸ್ತಿ ಮಾಲೀಕರು ಲಂಬ ಅಭಿವೃದ್ಧಿಯನ್ನು ಸುಗಮಗೊಳಿಸಲು ಅನುವು ಮಾಡಿಕೊಡುತ್ತದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಆದಾಯವನ್ನು ಗಳಿಸುವ ಪ್ರಯತ್ನದಲ್ಲಿ ಸಹಕಾರಿ. ನಿಗದಿತ ಪ್ರೀಮಿಯಂ ಶುಲ್ಕಗಳನ್ನು ಪಾವತಿಸುವ ಮೂಲಕ ಸಾಮಾನ್ಯವಾಗಿ ಅನುಮತಿಸಲಾದ ಎಫ್‌ಎಆರ್‌ಗಿಂತ ಹೆಚ್ಚಿನ ನಿರ್ಮಾಣ ಹಕ್ಕುಗಳನ್ನು ಖರೀದಿಸಲು ಇದು ಅವಕಾಶ ಕಲ್ಪಿಸುತ್ತದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

₹20 ಲಕ್ಷ ದರೋಡೆ: ಇನ್‌ಸ್ಪೆಕ್ಟರ್ ಭಾಗಿ

ಮಹೇಶ್ ಕನಕಗಿರಿ ವಿರುದ್ಧ ಹಿಂದೆಯೂ ಇತ್ತು ಸುಲಿಗೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲಾಖೆಯ ಜೀಪಿನಲ್ಲೇ ತೆರಳಿ ಸಹಚರರ ಜತೆಗೆ ₹20 ಲಕ್ಷ ದರೋಡೆ ಮಾಡಿಸಿದ್ದ ಆರೋಪಿ, ಸಿಐಡಿ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಅವರನ್ನು ಮಡಿವಾಳ ಉಪ ವಿಭಾಗದ ಎಸಿಪಿ ವಿ.ಕೆ.ವಾಸುದೇವ್ ನೇತೃತ್ವದ ತಂಡ ವಿಚಾರಣೆ ನಡೆಸುತ್ತಿದೆ. ದರೋಡೆ ಪ್ರಕರಣದ ಸೂತ್ರಧಾರ ಇನ್‌ಸ್ಪೆಕ್ಟರ್ ಎಂಬುದು ತನಿಖೆ ವೇಳೆ ಪತ್ತೆಯಾಗಿದೆ.



ಮಹೇಶ್ ಕನಕಗಿರಿ

ಅಪರಾಧ ಸುದ್ದಿ

ಸಿಲ್ಕ್ ಬೋರ್ಡ್ ಸಮೀಪದ ಲಾಡ್ಜ್‌ನಲ್ಲಿ ಕೇರಳದ ಜನೀಶ್ ಬಾಬು ಹಾಗೂ ಅವರ ಸ್ನೇಹಿತ ನವೀನ್ ಅವರು ವಾಸ್ತವ್ಯ ಮಾಡಿದ್ದರು. ಆಗ ಅವರನ್ನು ಬೆದರಿಸಿ ಹಣ ದರೋಡೆ ಮಾಡಿದ್ದ ಪ್ರಕರಣದಲ್ಲಿ ಮಹೇಶ್ ಕನಕಗಿರಿ ಹಾಗೂ ಅವರ ಸಹಚರರಾದ ಕುಪೇಂದ್ರ ರೆಡ್ಡಿ, ವಸಂತ್‌ಕುಮಾರ್ ಅವರನ್ನು ಆಗ್ನೇಯ ವಿಭಾಗದ ಡಿಸಿಪಿ ಮೊಹಮ್ಮದ್ ಸುಜಿತಾ ನೇತೃತ್ವದ ಪೊಲೀಸ್ ತಂಡವು ಕಾರ್ಯಾಚರಣೆ ನಡೆಸಿ ಬಂಧಿಸಿತ್ತು.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಇನ್‌ಸ್ಪೆಕ್ಟರ್ ವಿಚಾರಣೆಗೆ ಎಸಿಪಿ ನೇಮಿಸಿ ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಅವರು ಆದೇಶಿಸಿದ್ದಾರೆ.

ಕುಪೇಂದ್ರ ರೆಡ್ಡಿ ಹಾಗೂ ವಸಂತಕುಮಾರ್ ಪೊಲೀಸ್ ಬಾತ್ಮೀದಾರರಾಗಿ ಕೆಲಸ ಮಾಡುತ್ತಿದ್ದರು. ಹೀಗಾಗಿ, ಮಹೇಶ್‌ಗೆ ಕೆಲವು ತಿಂಗಳಿಂದ ಆತ್ಮೀಯರಾಗಿದ್ದರು. ಜನೀಶ್ ಬಾಬು ಹಣದೊಂದಿಗೆ ಬಂದು ಮಡಿವಾಳದ 'ವೈಟ್ ಸ್ಟೋನ್ ಲಾಡ್ಜ್'ನಲ್ಲಿ ತಂಗಿರುವ ಮಾಹಿತಿಯನ್ನು ಸಹಚರರೇ ಇನ್‌ಸ್ಪೆಕ್ಟರ್‌ಗೆ ನೀಡಿದ್ದರು. ಬಳಿಕ ಇನ್‌ಸ್ಪೆಕ್ಟರ್ ದರೋಡೆಗೆ ಸಂಚು ರೂಪಿಸಿದ್ದರು ಎಂಬುದು ಗೊತ್ತಾಗಿದೆ.

ಆರೋಪಿಗಳ ಕೃತ್ಯವು ಲಾಡ್ಜ್‌ನ ಆವರಣದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ ಎಂದು ಮೂಲಗಳು ಹೇಳಿವೆ.

ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದೆಂದು ಜನೀಶ್ ಬಾಬುಗೆ ಅವರ ಸ್ನೇಹಿತ ನವೀನ್ ತಿಳಿಸಿದ್ದರು. ಟ್ರೇಡಿಂಗ್ ವ್ಯವಹಾರದ ಮಾತುಕತೆಗೆಂದು ಜೂನ್ 15ರಂದು ಜನೀಶ್ ಬಾಬು ನಗರಕ್ಕೆ ಬಂದಿದ್ದರು. ಇಬ್ಬರೂ ಲಾಡ್ಜ್‌ನಲ್ಲಿ ಮಾತುಕತೆ ನಡೆಸುತ್ತಿದ್ದರು ಎಂದು ಮೂಲಗಳು ಹೇಳಿವೆ.

ಇಲಾಖೆಯ ಜೀಪಿನಲ್ಲಿ ಲಾಡ್ಜ್ ಮೇಲೆ ದಾಳಿ ನಡೆಸಿದ ಇನ್‌ಸ್ಪೆಕ್ಟರ್ ಮಹೇಶ್ ಹಾಗೂ ಆರೋಪಿಗಳ ತಂಡವು, 'ನೀವು ಅಕ್ರಮ ಚಟುವಟಿಕೆಯಲ್ಲಿ ತೊಡಗಿರುವ ಬಗ್ಗೆ ಮಾಹಿತಿ ಇದೆ, ತಕ್ಷಣ ನಿಮ್ಮನ್ನು ಬಂಧಿಸುತ್ತೇವೆ' ಎಂದು ಬೆದರಿಸಿದ್ದರು. ಬಳಿಕ ಹಣವನ್ನು ದರೋಡೆ ಮಾಡಿಕೊಂಡು ಅದೇ ಪೊಲೀಸ್ ಜೀಪಿನಲ್ಲಿ ಪರಾರಿ ಆಗಿದ್ದರು ಎಂದು ತನಿಖಾ ಮೂಲಗಳು ಹೇಳಿವೆ.

ನಾಲ್ಕು ತಿಂಗಳ ಹಿಂದೆ ಮಹೇಶ್ ಕನಕಗಿರಿ ಅವರು ಬಂಡೇಪಾಳ್ಯ ಠಾಣೆಯಲ್ಲಿ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಆಗಲೂ ಅವರ ಮೇಲೆ ಸುಲಿಗೆ ಆರೋಪವಿತ್ತು. ಯಲಹಂಕದ ಇಬ್ಬರು ಉದ್ಯಮಿಗಳನ್ನು ಠಾಣೆಯಲ್ಲಿ ಅಕ್ರಮವಾಗಿ ಕೂಡಿಹಾಕಿ ಹಣ ವಸೂಲಿಗೆ ಯತ್ನಿಸಿದ್ದರ ಕುರಿತು ನಗರ ಪೊಲೀಸ್ ಕಮಿಷನರ್‌ಗೆ ದೂರು ನೀಡಲಾಗಿತ್ತು. ಇಲಾಖಾ ವಿಚಾರಣೆಗೆ ಕಮಿಷನರ್ ಆದೇಶಿಸಿದ್ದರು. ಬಳಿಕ ಮಹೇಶ್ ಅವರನ್ನು ಬಂಡೇಪಾಳ್ಯ ಠಾಣೆಯಿಂದ ನಿಯಂತ್ರಣ ಕೊಠಡಿಗೆ ವರ್ಗಾವಣೆ ಮಾಡಲಾಗಿತ್ತು. ಆದರೆ, ಶಿಸ್ತುಕ್ರಮದ ಭೀತಿಯಲ್ಲಿದ್ದ ಮಹೇಶ್ ಅವರು ತನ್ನ ಪ್ರಭಾವ ಬಳಸಿ ಸಿಐಡಿ ವಿಭಾಗಕ್ಕೆ ನಿಯೋಜನೆ ಮೇಲೆ ವರ್ಗಾವಣೆ ಮಾಡಿಸಿಕೊಂಡು ಬಂದಿದ್ದರು. ಇದೀಗ ದರೋಡೆ ಪ್ರಕರಣದಲ್ಲಿ ಸಿಕ್ಕಿ ಬಿದ್ದಿದ್ದಾರೆ ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಪ್ರಭಾವ ಬಳಸಿ ಸಿಐಡಿಗೆ ವರ್ಗ
- ಹಿಂದಿನ ಸುಲಿಗೆ ಪ್ರಕರಣದಲ್ಲೂ ತನಿಖೆಗೆ ಆದೇಶಿಸಿದ್ದ ಕಮಿಷನರ್
- ಟ್ರೇಡಿಂಗ್ ಮಾತುಕತೆ ವೇಳೆ ಆರೋಪಿಗಳ ದಿಢೀರ್ ದಾಳಿ

ಇನ್‌ಸ್ಪೆಕ್ಟರ್ ಅಮಾನತು

ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಕೃತ್ಯ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಸೇವೆಯಿಂದ ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ.

ಮೂವರು ಆರೋಪಿಗಳು ಸೇರಿಕೊಂಡು ₹20 ಲಕ್ಷ ದರೋಡೆ ನಡೆಸಿದ್ದರು. ಆ ಪೈಕಿ ₹17 ಲಕ್ಷವನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಡ್ತಿ ನಿರೀಕ್ಷೆಯಲ್ಲಿದ್ದ ಅಧಿಕಾರಿ

ಹಲಸೂರು, ರಾಮಮೂರ್ತಿ ನಗರ ಹಾಗೂ ಕೆ.ಆರ್.ಪುರ ಠಾಣೆಗಳಲ್ಲಿ ಪಿಎಸ್‌ಐ ಆಗಿ ಮಹೇಶ್ ಅವರು ಈ ಹಿಂದೆ ಕೆಲಸ ಮಾಡಿದ್ದರು. ನಂತರ ಬಡ್ತಿ ಪಡೆದು ಬಂಡೇಪಾಳ್ಯ ಠಾಣೆಗೆ ವರ್ಗಾವಣೆ ಆಗಿದ್ದರು. ಡಿವೈಎಸ್ಪಿ ಹುದ್ದೆಗೆ ಮುಂಬಡ್ತಿ ಪಡೆಯುವ ನಿರೀಕ್ಷೆಯಲ್ಲಿದ್ದರು ಎಂದು ಮೂಲಗಳು ಹೇಳಿವೆ.

ಕೇರಳಂ: ರಾಜ್ಯದ ಇಬ್ಬರ ರಕ್ಷಣೆ

ಕಣ್ಣೂರು (ಕೇರಳಂ): ಇಲ್ಲಿನ ಪಯ್ಯಂಬಲಂ ಬೀಚ್‌ನಲ್ಲಿ ಈಜಲು ಹೋಗಿ ಕೊಚ್ಚಿ ಹೋಗುತ್ತಿದ್ದ ಕರ್ನಾಟಕದ ಇಬ್ಬರು ಪ್ರವಾಸಿಗರನ್ನು ಶನಿವಾರ ರಕ್ಷಿಸಲಾಗಿದೆ. ಮತ್ತೊಬ್ಬ ಪ್ರವಾಸಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮೈಸೂರಿನಿಂದ ಪ್ರವಾಸಕ್ಕೆ ತೆರಳಿದ್ದ ಗುಂಪಿನ ವ್ಯಕ್ತಿ ಚಿರಂತ್ ಶರ್ಮಾ (24) ಬೆಳಿಗ್ಗೆ 9.15ರ ಸುಮಾರಿಗೆ ಕೊಚ್ಚಿ ಹೋಗಿದ್ದರು. ರಕ್ಷಣಾ ಸಿಬ್ಬಂದಿ ಅವರನ್ನು ರಕ್ಷಿಸಿದ್ದರು.

ಬೆಂಗಳೂರು ಗ್ರಾಮಾಂತರ ಭಾಗದಿಂದ ಪ್ರವಾಸಕ್ಕೆ ಬಂದಿದ್ದ ಮತ್ತೊಂದು ಗುಂಪಿನ ಇಬ್ಬರು ಕೊಚ್ಚಿ ಹೋಗಿದ್ದು, ಈ ಪೈಕಿ ಮನೋಜ್ ಎಂಬಾತನನ್ನು ರಕ್ಷಿಸಲಾಗಿದೆ ಎಂದರು.

ರುಕ್ಮಿಣಿ ವಸಂತ್ ಡೀಪ್‌ಫೇಕ್ ವಿಡಿಯೊ: ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಿ ನಟಿ ರುಕ್ಮಿಣಿ ವಸಂತ್ ಅವರ ಫೋಟೊ ಹಾಗೂ ವಿಡಿಯೊವನ್ನು ಅಶ್ಲೀಲವಾಗಿ ಮಾರ್ಪಡಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದ ಮೂವರನ್ನು ಬಂಧಿಸಿರುವ ಸೈಬರ್ ಅಪರಾಧ ಠಾಣೆಯ ಪೊಲೀಸರು ವಿಚಾರಣೆಗಾಗಿ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಚಿಲಕಮುಖಿ ಗ್ರಾಮದ ರವಿಕುಮಾರ್ (24), ಶಿವಮೊಗ್ಗದ ತೀರ್ಥಹಳ್ಳಿಯ ಚಂದ್ರಕಾಂತ್ (33), ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನ ರಂಜಿತ್ (25) ಅವರನ್ನು ವಿವಿಧೆಡೆ ಕಾರ್ಯಾಚರಣೆ ನಡೆಸಿ ಬಂಧಿಸಲಾಗಿತ್ತು. ಬಂಧಿತರು ಟೆಕಿ, ಯುಟ್ಯೂಬರ್ ಹಾಗೂ ಲೆಕ್ಕ ಪರಿಶೋಧಕರಾಗಿ ಕೆಲಸ ಮಾಡುತ್ತಿದ್ದರು ಎಂಬುದು ಗೊತ್ತಾಗಿದೆ ಎಂದು ಸೈಬರ್ ಠಾಣೆಯ ಪೊಲೀಸರು ಹೇಳಿದರು.

ಬಂಧಿತರಿಂದ ಕೃತ್ಯಕ್ಕೆ ಬಳಸಲಾಗಿದ್ದ ಮೂರು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಆರೋಪಿಗಳು ಎ.ಐ ಆ್ಯಪ್ ಮತ್ತು ತಂತ್ರಾಂಶಗಳನ್ನು ಬಳಸಿ ನಟಿಯರ ಮುಖವನ್ನು ಅಶ್ಲೀಲ ವಿಡಿಯೊಗಳಿಗೆ ಎಡಿಟ್ ಮಾಡುತ್ತಿದ್ದರು.



ಚಂದ್ರಕಾಂತ್



ರಂಜಿತ್



ರವಿ ಕುಮಾರ್

ಸದ್ಯ ಮೂವರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಂಧಿತರ ಪೈಕಿ ರಂಜಿತ್ ಕುಮಾರ್ ಸಾಫ್ಟ್‌ವೇರ್ ಕಂಪನಿಯಲ್ಲಿ ಟೆಕಿಯಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ವಾರ್ಷಿಕವಾಗಿ ₹20 ಲಕ್ಷದ ಪ್ಯಾಕೇಜ್ ಇತ್ತು. ತಾಂತ್ರಿಕವಾಗಿ ರವಿಕುಮಾರ್ ಪರಿಣತಿ ಹೊಂದಿದ್ದಾರೆ ಎಂದು ಮೂಲಗಳು ಹೇಳಿವೆ.

ನಟಿಯರ ಡೀಪ್‌ಫೇಕ್ ವಿಡಿಯೊಗಳನ್ನು ವಿನೋದಕ್ಕಾಗಿ ತಯಾರಿಸುತ್ತಿದ್ದೆ ಎಂಬುದಾಗಿ ವಿಚಾರಣೆ ವೇಳೆ ರಂಜಿತ್ ಒಪ್ಪಿಕೊಂಡಿದ್ದಾರೆ ಎಂದು ಮೂಲಗಳ ಹೇಳಿವೆ.

ರವಿಕುಮಾರ್ ಅವರು ಬಿ.ಎಸ್‌ಸಿ ನರ್ಸಿಂಗ್ ಮುಗಿಸಿ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದರು. ಇತ್ತೀಚೆಗಷ್ಟೇ ಯೂಟ್ಯೂಬ್‌ನಿಂದ ಮೊದಲ ಗಳಿಕೆ ಪಡೆದಿದ್ದ ಅವರು ವೀಕ್ಷಣೆ ಹೆಚ್ಚಿಸಿಕೊಳ್ಳಲು ನಟಿಯರ ಡೀಪ್‌ಫೇಕ್ ವಿಡಿಯೊಗಳನ್ನು ಅಪ್‌ಲೋಡ್ ಮಾಡಲು ಆರಂಭಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಚಂದ್ರಕಾಂತ್ ಅವರು ನಗರದಲ್ಲಿ ಲೆಕ್ಕ ಪರಿಶೋಧಕರಾಗಿ ಕೆಲಸ ಮಾಡುತ್ತಿದ್ದರು. ಉತ್ತಮ ಸಂಪಾದನೆಯೂ ಇತ್ತು. ವಿಕೃತ ಸಂತೋಷಕ್ಕಾಗಿ ಡೀಪ್‌ಫೇಕ್ ವಿಡಿಯೊಗಳನ್ನು ಮಾಡುತ್ತಿದ್ದರು ಎಂದು ಸೈಬರ್ ಪೊಲೀಸರು ಹೇಳಿದರು.

ಅಕ್ರಮ ಕಾಮಗಾರಿ: ಎಂಜಿನಿಯರ್ ಅಮಾನತು

ರಸ್ತೆ ಡಾಂಬರೀಕರಣ ಕಾಮಗಾರಿಯಲ್ಲಿ ಅಕ್ರಮ ಎಸಗಿರುವ ವಸಂತ ನಗರ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಉಪ ವಿಭಾಗದ ಸಹಾಯಕ ಎಂಜಿನಿಯರ್ ಪೂಜಾರಪ್ಪ ಅವರನ್ನು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡರ ಸೂಚನೆಯಂತೆ ಕೇಂದ್ರ ನಗರ ಪಾಲಿಕೆ ಆಯುಕ್ತರು ಅಮಾನತು ಮಾಡಿದ್ದಾರೆ.

ಆಯುಕ್ತರು ಜೂನ್ 6ರಂದು ಶಿವಾಜಿನಗರ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ತಪಾಸಣೆ ನಡೆಸಿದ ಸಂದರ್ಭದಲ್ಲಿ, ಮೂಲಸೌಕರ್ಯ ಕಾರ್ಯಕ್ರಮದಡಿ ಮುಖ್ಯ ಮತ್ತು ಉಪ ಮುಖ್ಯ ರಸ್ತೆಯಲ್ಲಿ ಕೈಗೊಂಡಿರುವ ಡಾಂಬರೀಕರಣದಲ್ಲಿ ಕ್ರಿಯಾಯೋಜನೆ ಅನುಸಾರ ಸರಿಯಾದ ಪ್ರಮಾಣ ಹಾಗೂ ದಪ್ಪದಲ್ಲಿ ಡಾಂಬರು ಮಾಡಿರಲಿಲ್ಲ.

'ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿ ತಾವು ಕಾಮಗಾರಿ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಂದ ಗುಣಮಟ್ಟದ ಕಾಮಗಾರಿ ನಿರ್ವಹಣೆ ಮಾಡದೆ, ಅವರೊಂದಿಗೆ ಶಾಮೀಲಾಗಿ ಬೇಜವಾಬ್ದಾರಿಯಿಂದ ವರ್ತಿಸಿ ಪಾಲಿಕೆಗೆ ಆರ್ಥಿಕ ನಷ್ಟ ಉಂಟು ಮಾಡಿದ್ದೀರಿ. ಹೀಗಾಗಿ ನಿಮ್ಮನ್ನು ಆಯುಕ್ತರ ಆದೇಶದ ಅನುಸಾರ ಅಮಾನತು ಮಾಡಲಾಗಿದೆ' ಎಂದು ಕೇಂದ್ರ ನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರು ಜೂನ್ 20ರಂದು ಆದೇಶ ಹೊರಡಿಸಿದ್ದಾರೆ.

ಕಠಿಣ ಕ್ರಮ: 'ನಾನು ಡಾಂಬರೀಕರಣದ ಕೆಲಸವನ್ನು ಶನಿವಾರ ಗಮನಿಸಿದೆ. ಗುಣಮಟ್ಟದ ಬಗ್ಗೆ ಸಂದೇಹವಿತ್ತು. ಪರಿಶೀಲಿಸಲು ಆಯುಕ್ತರಿಗೆ ಸೂಚಿಸಿದೆ. ವಾಸ್ತವವಾಗಿ ಕೆಲಸವು ಕಳಪೆಯಾಗಿರುವುದು ಕಂಡು ಬಂದಿದೆ. ಆದ್ದರಿಂದ ಎಂಜಿನಿಯರ್ ಅನ್ನು ಅಮಾನತುಗೊಳಿಸಲಾಗಿದೆ ಮತ್ತು ಗುತ್ತಿಗೆದಾರರಿಗೆ ದಂಡ ವಿಧಿಸಲಾಗಿದೆ' ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

'ನಾನು ಆಗಾಗ್ಗೆ ಹೀಗೆಯೇ ಮಾಡಬೇಕಾಗಿಲ್ಲ ಎಂದು ನಾನು ಭಾವಿಸಿದ್ದೇನೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸದಿದ್ದಾಗ ಮಾತ್ರ ನಾನು ಇಂತಹ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರು ತಮ್ಮ ಕೆಲಸವನ್ನು ಸರಿಯಾಗಿ ಮಾಡುವಂತೆ ಮನವಿ ಮಾಡುತ್ತೇನೆ' ಎಂದು ಸಚಿವರು ಹೇಳಿದ್ದಾರೆ.

ಅಶ್ಲೀಲ ಸಂದೇಶ: ವ್ಯಕ್ತಿ ವಿರುದ್ಧ ಎಫ್‌ಐಆರ್

ಟೆಲಿಗ್ರಾಂ ಆ್ಯಪ್ ಮೂಲಕ ಮಹಿಳೆಗೆ ಅಶ್ಲೀಲ ಸಂದೇಶ ರವಾನಿಸಿದ್ದ ವ್ಯಕ್ತಿ ವಿರುದ್ಧ ಹೈಗ್ರೌಂಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

29 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಖಾನ್ ಎಂಬಾತನ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 78 (2) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ದೂರುದಾರ ಯುವತಿಯನ್ನು ಟೆಲಿಗ್ರಾಂ ಆ್ಯಪ್ ಮೂಲಕ ಸಂಪರ್ಕ ಸಾಧಿಸಿದ್ದ. ಮನೆಗೆ ಬಂದು ಸಂಪೂರ್ಣ ದೇಹ, ಖಾಸಗಿ ಅಂಗಕ್ಕೂ ಮಸಾಜ್ ಮಾಡುವುದಾಗಿ ಅಶ್ಲೀಲ ಸಂದೇಶ ರವಾನಿಸಿದ್ದ. ಇದನ್ನು ನಿರಾಕರಿಸಿದರೂ ನಿರಂತರವಾಗಿ ಸಂದೇಶ ರವಾನಿಸಿದ್ದ ಎಂದು ಯುವತಿ ಆರೋಪಿಸಿದ್ದಾರೆ.

ಇಂದು ನಿಖಿಲ್ ಪಾದಯಾತ್ರೆ

ಬಿಡದಿ: ಟೌನ್‌ಶಿಪ್ ಯೋಜನೆ ವಿರೋಧಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಭಾನುವಾರ ಬೆಳಿಗ್ಗೆ 9 ಗಂಟೆಗೆ ಯೋಜನಾ ಪ್ರದೇಶದ ಅಂಚಿಪುರದಿಂದ ಹೊಸೂರುವರೆಗೆ 8 ಗ್ರಾಮಗಳಲ್ಲಿ ಪಾದಯಾತ್ರೆ ನಡೆಯಲಿದೆ.



ಕೇಂದ್ರ ಸರ್ಕಾರದ ಸಂಖ್ಯಾಶಾಸ್ತ್ರ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಹಾಗೂ ಶಿಕ್ಷಣ ಸಚಿವಾಲಯದ ನಾವೀನ್ಯತೆ ಕೋಶವು ಜಂಟಿಯಾಗಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಹ್ಯಾಕಥಾನ್ ಆದ 'ಸ್ಟಾಟಥಾನ್'ನ ಫೈನಲ್‌ನಲ್ಲಿ ಭುವನೇಶ್ವರದ ಶಿಕ್ಷಾ 'ಒ' ಅನುಸಂಧಾನ್ ಡೀಮ್ಡ್ ವಿಶ್ವವಿದ್ಯಾಲಯದ ತಾಂತ್ರಿಕ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ (ಐಟಿಇಆರ್) ವಿದ್ಯಾರ್ಥಿಗಳ ತಂಡವು ವಿಜಯಶಾಲಿಯಾಗಿ ಹೊರಹೊಮ್ಮಿತು

ಕಿರುಕುಳ: ನೊಂದು ವ್ಯಕ್ತಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿರುಕುಳದಿಂದ ಮನನೊಂದು ಪಾಪಣ್ಣ (42) ಎಂಬುವರು ಕಾಡುಗೋಡಿಯಲ್ಲಿ ಶುಕ್ರವಾರ ರಾತ್ರಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಚನ್ನಸಂದ್ರದ ಎಕೆಜಿ ಬಡಾವಣೆ ನಿವಾಸಿಯಾದ ಪಾಪಣ್ಣ, ಹಣ್ಣಿನ ವ್ಯಾಪಾರ ಮಾಡುತ್ತಿದ್ದರು.

2021ರಲ್ಲಿ ಪಾಪಣ್ಣ ವಿರುದ್ಧ ಸ್ಥಳೀಯರೊಬ್ಬರು ಜಾತಿ ನಿಂದನೆ ಪ್ರಕರಣ ದಾಖಲಿಸಿದ್ದರು. ಈ ಮಧ್ಯೆ ನಯನಾ ಎಂಬುವರು ಪಾಪಣ್ಣ ವಿರುದ್ಧ ಜಾತಿನಿಂದನೆ ಸಂಬಂಧ ಮತ್ತೊಂದು ಸುಳ್ಳು ದೂರು ದಾಖಲಿಸಿ, ದೂರು ಹಿಂಪಡೆಯಲು ₹10 ಲಕ್ಷ ಕೊಡುವಂತೆ ಬೆದರಿಕೆ ಹಾಕುತ್ತಿದ್ದರು. ಈ ಎರಡೂ ಪ್ರಕರಣಗಳ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿತ್ತು ಎಂದು ಪೊಲೀಸರು ಹೇಳಿದರು.

ನಯನಾ ಮತ್ತು ಕೆಲ ವ್ಯಕ್ತಿಗಳ ಕಿರುಕುಳದಿಂದ ಮನನೊಂದಿದ್ದ ಪಾಪಣ್ಣ, ಶುಕ್ರವಾರ ರಾತ್ರಿ ತಮ್ಮ ಕಾರಿನಲ್ಲಿ ಕಾಡುಗೋಡಿಯ ನಿರ್ಜನ ಪ್ರದೇಶಕ್ಕೆ ತೆರಳಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೂ ಮುನ್ನ ಅವರು ತಮ್ಮ ಆತ್ಮಹತ್ಯೆಗೆ ನಯನಾ ಹಾಗೂ ಜಾತಿ ನಿಂದನೆಯ ದೂರು ದಾಖಲಿಸಿದ್ದ ವ್ಯಕ್ತಿಗಳ ಕಿರುಕುಳವೇ ಕಾರಣವೆಂದು ಮೊಬೈಲ್‌ನಲ್ಲಿ ವಿಡಿಯೊ ರೆಕಾರ್ಡ್ ಮಾಡಿ ಸಹೋದರಿ ಭಾಗ್ಯಮ್ಮ ಮತ್ತು ಕುಟುಂಬ ಸದಸ್ಯರಿಗೆ ಕಳುಹಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಕಾಡುಗೋಡಿ ಠಾಣೆ ಪೊಲೀಸರು ನಯನಾ ಮತ್ತಿತರರ ವಿರುದ್ಧ ಆತ್ಮಹತ್ಯೆಗೆ ಪ್ರಚೋದನೆ ಆರೋಪದ ಅಡಿ ಪ್ರಕರಣ ದಾಖಲಿಸಿ, ಹೆಚ್ಚಿನ ತನಿಖೆ ನಡೆಸುತ್ತಿದ್ದಾರೆ.

ಬಾಗಲಗುಂಟೆ ಠಾಣೆಯಲ್ಲಿ ಪ್ರಕರಣ ದಾಖಲು

ಎಂಬಿಬಿಎಸ್ ಸೀಟು: ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ನಂಬಿಸಿ, ಹಣ ಹಾಗೂ ಖಾಲಿ ಚೆಕ್ ಪಡೆದು ವಂಚಿಸಿರುವ ಆರೋಪಿಗಳ ವಿರುದ್ಧ ಚಿಕ್ಕಬಾಣಾವರ ಉಪ ವಿಭಾಗದ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಮಿತಾ ಎಂಬುವರು ನೀಡಿದ ದೂರಿನ ಮೇರೆಗೆ ಡಾ.ಶಿಲ್ಪಾ ಅರವಳಿ ಹಾಗೂ ಕಿರಣ್ ಕುಮಾರ್ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ 'ಶೂನ್ಯ ಎಫ್‌ಐಆರ್' ಅನ್ನು ಬಾಗಲಗುಂಟೆ ಠಾಣೆಗೆ ವರ್ಗಾವಣೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಮಿತಾ ಅವರು ವೆಲ್ನೆಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಪತಿ ರಾಜೀವ್ ರಂಜನ್‌ಕುಮಾರ್ ಕೆನರಾ ಬ್ಯಾಂಕ್‌ನಲ್ಲಿ ಸಹಾಯಕ ಮ್ಯಾನೇಜರ್ ಆಗಿದ್ದಾರೆ. ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಹಿರಿಯ ಮಗಳಿಗೆ ಎಂಬಿಬಿಎಸ್ ಸೀಟು ಕೊಡಿಸಲು ದಂಪತಿ ಮುಂದಾಗಿದ್ದಾರೆ. ಆಗ ಆರೋಪಿಗಳು ಹಣ ಪಡೆದು ವಂಚನೆ ನಡೆಸಿದ್ದಾರೆ. ಕೃತ್ಯವು 2023ರ ಫೆಬ್ರುವರಿಯಲ್ಲಿ ನಡೆದಿತ್ತು. ಹಣ ಮರುಪಾವತಿಗೆ ಆರೋಪಿಗಳು ಹೆಚ್ಚುವರಿ ಸಮಯ ಕೋರಿದ್ದರಿಂದ ಸ್ಮಿತಾ ಅವರು ಇದೀಗ ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ತುಮಕೂರು ರಸ್ತೆಯ ಎಂಟನೇ ಮೈಲಿಯಲ್ಲಿ ಇರುವ ಆಸ್ಪತ್ರೆಯೊಂದಕ್ಕೆ ಚಿಕಿತ್ಸೆಗೆಂದು ದೂರುದಾರರು ತೆರಳಿದ್ದರು. ಅದೇ ಆಸ್ಪತ್ರೆಯಲ್ಲಿ ವೈದ್ಯರಾಗಿ ಕೆಲಸ ಮಾಡುತ್ತಿದ್ದ ಸಹೋದರನನ್ನು ಭೇಟಿ ಮಾಡಿದ್ದರು. ಸಹೋದರನ ಮೂಲಕ, ಶಿಲ್ಪಾ ಅರವಳಿ ಪರಿಚಯವಾಗಿತ್ತು. ನೀಟ್ ಅಂಕದ ಆಧಾರದ ಮೇಲೆ ದೂರುದಾರರ ಹಿರಿಯ ಮಗಳಿಗೆ ಎಂಬಿಬಿಎಸ್ ಸೀಟು ಲಭಿಸಲಿರಲಿಲ್ಲ. ಮ್ಯಾನೇಜ್‌ಮೆಂಟ್ ಕೋಟಾದ ಅಡಿಯಲ್ಲಿ ಖಾಸಗಿ ಕಾಲೇಜಿನಲ್ಲಿ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶಕ್ಕೆ ಹುಡುಕಾಟ ನಡೆಸುತ್ತಿದ್ದರು. ಅದೇ ವೇಳೆ ಶಿಲ್ಪಾ ಕರೆ ಮಾಡಿ, ಖಾಸಗಿ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ಭರವಸೆ ನೀಡಿದ್ದರು. ಆರಂಭದಲ್ಲಿ ₹35 ಲಕ್ಷ ಕೊಡುವಂತೆ ಸೂಚಿಸಿದ್ದರು. ಆ ಹಣ ನೀಡಿದ ಮೇಲೆ ಆರೋಪಿ ಪಿ.ಕಿರಣ್ ಕುಮಾರ್ ಕರೆ ಮಾಡಿ, ₹1.5 ಕೋಟಿ ನೀಡುವಂತೆ ಸೂಚಿಸಿದ್ದರು. ಹೀಗೆ ಹಂತ ಹಂತವಾಗಿ ₹1.40 ಕೋಟಿ ವರ್ಗಾವಣೆ ಮಾಡಲಾಗಿತ್ತು ಎಂಬ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

'ಸ್ವಲ್ಪ ದಿನ ಕಳೆದ ಮೇಲೆ ಸೀಟು ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿ ಆರೋಪಿಗಳು ಹೆಚ್ಚುವರಿ ಸಮಯ ಕೇಳಿದ್ದರು. ನಂತರ, 2024ರ ಫೆಬ್ರುವರಿ 23ರಂದು ಶಿಲ್ಪಾ ಕೆಲಸ ಮಾಡುತ್ತಿದ್ದ ಆಸ್ಪತ್ರೆಗೇ ತೆರಳಿ ಹಣ ಮರುಪಾವತಿಸುವಂತೆ ಕೇಳಿದ್ದರೂ ವಾಪಸ್ ನೀಡಿಲ್ಲ' ಎಂದು ದೂರು ನೀಡಲಾಗಿದೆ.

₹39 ಲಕ್ಷ ವಂಚನೆ: ದೂರು

ತುಮಕೂರಿನ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ನಂಬಿಸಿ ವಂಚಿಸಿರುವ ಆರೋಪಿ ರಮೇಶ್ ಬಾಬು ಎಂಬುವರ ವಿರುದ್ಧ ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿರುವ ಕೆ.ಎಂ.ಗೋಪಾಲಪ್ಪ ನೀಡಿದ ದೂರಿನ ಮೇಲೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಗೋಪಾಲಪ್ಪ ಅವರು ತಮ್ಮ ಮೊಮ್ಮಗಳಿಗೆ ಎಂಬಿಬಿಎಸ್‌ಗೆ ಸೇರಿಸಲು ಕಾಲೇಜು ಹುಡುಕಾಟದಲ್ಲಿದ್ದರು. ಶಿವಕುಮಾರ್ ಎಂಬುವವರ ಮೂಲಕ ರಮೇಶ್ ಬಾಬು ಪರಿಚಯ ಆಗಿದ್ದರು. ತುಮಕೂರಿನ ಯಾವುದಾದರೂ ಒಂದು ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ಭರವಸೆ ನೀಡಿದ್ದರು. ಖಾಲಿ ಚೆಕ್ ಸಹ ಪಡೆದುಕೊಂಡಿದ್ದರು. ಚೆಕ್ ಮೇಲೆ ₹ 39 ಲಕ್ಷ ಎಂದು ತಾವೇ ನಮೂದಿಸಿಕೊಂಡು ಬ್ಯಾಂಕ್‌ಗೆ ಹಾಕಿದ್ದರು. ಬ್ಯಾಂಕ್‌ನಿಂದ ಮೊಬೈಲ್‌ಗೆ ಸಂದೇಶ ಬಂದಿತ್ತು. ಬ್ಯಾಂಕ್‌ಗೆ ತೆರಳಿ ಮಾಹಿತಿ ನೀಡಿದ ಮೇರೆಗೆ, ಆ ಹಣವನ್ನು ಬ್ಯಾಂಕ್ ಅಧಿಕಾರಿಗಳು ತಡೆ ಹಿಡಿದಿದ್ದರು ಎಂದು ಮೂಲಗಳು ತಿಳಿಸಿವೆ.

ಮೊಮ್ಮಗಳಿಗೆ ಯಾವುದೇ ವೈದ್ಯಕೀಯ ಕಾಲೇಜಿನಲ್ಲಿ ಸೀಟು ಕೊಡಿಸಿಲ್ಲ. ಅಲ್ಲದೇ ಖಾಲಿ ಚೆಕ್ ಪಡೆದ ಹಣ ವರ್ಗಾವಣೆಗೆ ಪ್ರಯತ್ನಿಸಿರುವ ಆರೋಪಿ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಕೆ.ಎಂ.ಗೋಪಾಲಪ್ಪ ದೂರು ನೀಡಿದ್ದಾರೆ.

ಲಾರಿ ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ಹಳೆ ಮದ್ರಾಸ್ ರಸ್ತೆಯ ಭಟ್ಟರಹಳ್ಳಿ ಬಳಿ ಶುಕ್ರವಾರ ರಾತ್ರಿ ಲಾರಿ ಡಿಕ್ಕಿಯಾಗಿ ಪಾದಚಾರಿ ಗಣೇಶ್ ಸಿಂಗ್ (31) ಮೃತಪಟ್ಟಿದ್ದಾರೆ.

ರಾಜಸ್ಥಾನದ ಗಣೇಶ್‌ಸಿಂಗ್ ಅವರು ಕ್ಯಾಬ್ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಸ್ನೇಹಿತರನ್ನು ಭೇಟಿಯಾಗಲು ಶುಕ್ರವಾರ ಭಟ್ಟರಹಳ್ಳಿಗೆ ಹೋಗಿದ್ದಾಗ ಈ ಘಟನೆ ನಡೆದಿದೆ. ರಸ್ತೆ ದಾಟುತ್ತಿದ್ದ ಗಣೇಶ್ ಸಿಂಗ್‌ಗೆ ಲಾರಿ ಡಿಕ್ಕಿ ಹೊಡೆದಿದ್ದು, ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲಾರಿ ಚಾಲಕನ ಅಜಾಗರೂಕ ಚಾಲನೆಯೇ ಅಪಘಾತಕ್ಕೆ ಕಾರಣ. ಘಟನೆಯ ನಂತರ ಲಾರಿ ಚಾಲಕ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದರು. ಕೆ.ಆರ್.ಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪದವಿ ಆಯ್ಕೆ: ಬದಲಾದ ‘ಟ್ರೆಂಡ್’

ಒಂದನೇ ಪುಟದಿಂದ...

ಅದಕ್ಕೆ ಉದ್ಯೋಗಾವಕಾಶ ಕಡಿಮೆಯಿತ್ತು. ಆದರೆ ಈಗ ಇದರಲ್ಲಿ ವಿಭಿನ್ನ, ಹೊಸ ಸಂಯೋಜನೆಗಳು, ಇಂಟರ್ನ್‌ಶಿಪ್ ಕಾರ್ಯಕ್ರಮಗಳು, ಕೈಗಾರಿಕಾ ಸ್ನೇಹಿ, ಮಾರುಕಟ್ಟೆ ಬೇಡಿಕೆಗೆ ಪೂರಕವಾದ ಪಠ್ಯಗಳನ್ನು ಪರಿಚಯಿಸಲಾಗಿದೆ. ಇದರಿಂದ ಹೆಚ್ಚು ವೃತ್ತಿ ಆಯ್ಕೆಗಳು ಸೃಷ್ಟಿಯಾಗಿದ್ದು, ಭಾರಿ ಬೇಡಿಕೆ ಬಂದಿದೆ.

ಸದ್ಯ ಬಿ.ಕಾಂ, ಬಿಬಿಎ, ಬಿಬಿಎಂ, ಚಾರ್ಟೆಡ್ ಅಕೌಂಟೆಂಟ್ (ಸಿಎ), ಸರ್ಟಿಫೈಡ್ ಫೈನಾನ್ಷಿಯಲ್ ಪ್ಲಾನರ್ (ಸಿಎಫ್‌ಪಿ), ಕಂಪನಿ ಸೆಕ್ರೆಟರಿ (ಸಿಎಸ್), ಅರ್ಥಶಾಸ್ತ್ರ, ಸಂಖ್ಯಾಶಾಸ್ತ್ರ, ಫೈನಾನ್ಷಿಯಲ್ ಮೊಡಲಿಂಗ್ ಕೋರ್ಸ್‌ಗಳು, ಎಂ.ಕಾಂ, ಎಂಬಿಎ ಪದವಿ ಕೋರ್ಸ್‌ಗಳಿಗೆ ಭಾರಿ ಬೇಡಿಕೆಯಿದೆ. ಹೀಗಾಗಿ ರಾಜ್ಯದ ಬಹುತೇಕ ಸರ್ಕಾರಿ, ಖಾಸಗಿ ಪದವಿ ಕಾಲೇಜುಗಳಲ್ಲಿ ಬಿ.ಕಾಂ, ಬಿಬಿಎಂ ಪ್ರವೇಶ ಪಡೆಯುವವರ ಸಂಖ್ಯೆ ಹೆಚ್ಚಿದೆ. ಈ ಕಾಲೇಜುಗಳಲ್ಲಿನ ಒಟ್ಟಾರೆ ವಿದ್ಯಾರ್ಥಿಗಳಲ್ಲಿ ಶೇ 65ರಿಂದ ಶೇ 70ರಷ್ಟು ವಾಣಿಜ್ಯ ವಿಷಯದ ಕೋರ್ಸ್‌ಗಳಲ್ಲಿ ಓದುತ್ತಿರುವವರೇ ಆಗಿದ್ದಾರೆ.

ಉದ್ಯೋಗಾವಕಾಶ ಹೆಚ್ಚು: ವಾಣಿಜ್ಯ ಕೋರ್ಸ್‌ಗಳನ್ನು ಓದಿದವರಿಗೆ ಬ್ಯಾಂಕಿಂಗ್, ಫೈನಾನ್ಸ್, ಮಾರ್ಕೆಟಿಂಗ್, ಅಕೌಂಟ್ಸ್, ವಿಮೆ, ಎಚ್.ಆರ್, ಟ್ರೇಡಿಂಗ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಿವೆ. ಸರ್ಕಾರಿ, ಖಾಸಗಿ ಕಂಪನಿಗಳು, ಶಿಕ್ಷಣ ಸಂಸ್ಥೆಗಳು, ವ್ಯಾಪಾರ ಸಮೂಹಗಳು, ಕಾರ್ಪೊರೇಟ್ ಸಂಸ್ಥೆಗಳು, ಲಾಜಿಸ್ಟಿಕ್ಸ್, ದತ್ತಾಂಶ ಸಂಗ್ರಹಣಾ ಕಂಪನಿಗಳು, ಆಸ್ಪತ್ರೆಗಳು, ಮಾಹಿತಿ ತಂತ್ರಜ್ಞಾನ ಕಂಪನಿಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದೈನಂದಿನ ವ್ಯವಹಾರಗಳ ನಿರ್ವಹಣೆಗೆ ವಾಣಿಜ್ಯ ಕೋರ್ಸ್‌ಗಳನ್ನು ಓದಿದವರು ಬೇಕಿದೆ. ಹೀಗಾಗಿ ಇಲ್ಲಿ ವೃತ್ತಿ ಆಯ್ಕೆಗಳು ಹೆಚ್ಚು ಎಂದು ನೆಲಮಂಗಲದ ಸರ್ಕಾರಿ ಪದವಿ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಪಿ. ನಾಗೇಂದ್ರ ಸ್ವಾಮಿ ವಿವರಿಸುತ್ತಾರೆ.

ಎಇಡಿಪಿ ವರ: ರಾಜ್ಯ ಸರ್ಕಾರ ಬಿ.ಕಾಂ ಕೋರ್ಸ್‌ನಲ್ಲಿ ‘ಅಪ್ರೆಂಟಿಶಿಪ್ ಎಂಬೆಡೆಡ್ ಡಿಗ್ರಿ ಪ್ರೋಗ್ರಾಮ್’ (ಎಇಡಿಪಿ) ಪರಿಚಯಿಸಿದೆ. ಇದರಲ್ಲಿ ವಿದ್ಯಾರ್ಥಿಗಳು ಪದವಿ ಅವಧಿಯಲ್ಲಿ ಒಂದು ವರ್ಷ ಕೈಗಾರಿಕೆ ಗಳಲ್ಲಿ ಅಪ್ರೆಂಟಿಶಿಪ್ ಪಡೆಯುತ್ತಾರೆ. ಈ ಅವಧಿಯಲ್ಲಿ ಶಿಷ್ಯವೇತನವೂ ದೊರೆಯುತ್ತದೆ. ವಾಣಿಜ್ಯ ಕೋರ್ಸ್‌ಗಳ ಬೇಡಿಕೆ ಹೆಚ್ಚಲೂ ಇದು ಸಹ ಕಾರಣ ಎಂದು ಬೆಂಗಳೂರಿನ ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಆರ್. ಮಂಜುಳಾ ಅವರು ಮಾಹಿತಿ ನೀಡುತ್ತಾರೆ.



ಎಐ ಚಿತ್ರ: ಕಣಕಾಲಮಠ

ಕಂಪ್ಯೂಟರ್ ಸೈನ್ಸ್ ಜತೆ ಎ.ಐ ಪೈಪೋಟಿ

ದಶಕಗಳ ಅವಧಿಯಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಆಯ್ಕೆ ಪ್ರವೃತ್ತಿಯಲ್ಲಿ ಗಣನೀಯ ಬದಲಾವಣೆ ಆಗಿದೆ. ಮೂರು ದಶಕದ ಹಿಂದೆ ಸಿವಿಲ್ ಎಂಜಿನಿಯರಿಂಗ್, ಎರಡು ದಶಕದ ಹಿಂದೆ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ಸ್, ಮೆಕಾನಿಕಲ್ ಕೋರ್ಸ್‌ಗಳಿಗೆ ಬೇಡಿಕೆ ಇತ್ತು. ದಶಕದ ಹಿಂದೆ ಕಂಪ್ಯೂಟರ್ ಸೈನ್ಸ್ ಕೋರ್ಸ್ ವಿದ್ಯಾರ್ಥಿಗಳ ನೆಚ್ಚಿನ ಆಯ್ಕೆಯಾಗಿತ್ತು. ಈಗ ಕಂಪ್ಯೂಟರ್ ಸೈನ್ಸ್ ಜತೆಗೆ ಕೃತಕಬುದ್ಧಿಮತ್ತೆ (ಎ.ಐ) ಕೋರ್ಸ್ ಪೈಪೋಟಿಗಿಳಿದಿದೆ. ದತ್ತಾಂಶ ವಿಜ್ಞಾನ, ಸೈಬರ್ ಸೆಕ್ಯುರಿಟಿ ತಂತ್ರಜ್ಞಾನ, ರೊಬೋಟಿಕ್ಸ್, ಕ್ವಾಂಟಂ, ಏರೋಸ್ಪೇಸ್ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಗಿದೆ. ಸಿವಿಲ್ ಎಂಜಿನಿಯರಿಂಗ್ ಬೇಡಿಕೆ ಗಣನೀಯವಾಗಿ ಕುಸಿತವಾಗಿದೆ.

> ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಓದಲು ಬಯಸುವವರು ಹೆಚ್ಚಾಗಿ ಕಂಪ್ಯೂಟರ್ ಸೈನ್ಸ್, ಎ.ಐ ಕಡೆ ಉತ್ಸಾಹಿತರಾಗಿದ್ದಾರೆ. ಬೇರೆ ವಿಭಾಗಗಳಲ್ಲಿ ವಿದ್ಯಾರ್ಥಿಗಳನ್ನು ಸೆಳೆಯುವುದಕ್ಕಾಗಿ ಸರ್ಕಾರವೇ ಶುಲ್ಕ ಕಡಿಮೆ ಮಾಡಿದೆ. ಇದಲ್ಲದೆ ಹಲವು ‘ಆ್ಯಡ್‌ಆನ್’ ಕೋರ್ಸ್‌ಗಳನ್ನು ಪರಿಚಯಿಸಲಾಗಿದ್ದು, ಪ್ರಾಯೋಗಿಕ ಮತ್ತು ಕೌಶಲ ಶಿಕ್ಷಣಕ್ಕೆ ಗಮನ ನೀಡಲಾಗಿದೆ. ಜತೆಗೆ ಉದ್ಯಮ ಸ್ಥಾಪನೆ, ಸಂವಹನಗಳ ಬಲವರ್ಧನೆ, ಡಿಜಿಟಲ್ ರೂಪಾಂತರಕ್ಕೆ ಒತ್ತು ಕೊಟ್ಟು, ಆಧುನಿಕ ಸ್ಪರ್ಶ ನೀಡಿದ್ದೇವೆ
>
> **ಪ್ರೊ.ಎಸ್.ವಿದ್ಯಾಶಂಕರ್,** ಕುಲಪತಿ, ವಿಟಿಯು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಜತೆಗೆ ರಾಜ್ಯದಲ್ಲಿ ಹಲವು ಖಾಸಗಿ, ಡೀಮ್ಡ್ ವಿಶ್ವವಿದ್ಯಾಲಯಗಳು ಎಂಜಿನಿಯರಿಂಗ್‌ನಲ್ಲಿ ಅತ್ಯಾಧುನಿಕ ಕೋರ್ಸ್‌ಗಳನ್ನು ಆರಂಭಿಸಿವೆ. ಕೈಗಾರಿಕಾ ಸ್ನೇಹಿ ಪಠ್ಯವನ್ನೂ ರೂಪಿಸಿವೆ. ಎ.ಐ, ರೊಬೋಟಿಕ್ ಕೋರ್ಸ್‌ಗಳನ್ನು ಪರಿಚಯಿಸಿವೆ. ಅಲ್ಲದೆ ಖಾಸಗಿ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಂಡು, ಕ್ಯಾಂಪಸ್ ಇಂಟರ್‌ವ್ಯೂಗಳನ್ನು ನಡೆಸುತ್ತಿವೆ. ಈ ಮೂಲಕ ತಮ್ಮ ವಿದ್ಯಾರ್ಥಿಗಳಿಗೆ ಅತ್ಯುತ್ತಮ ವೇತನದ ಪ್ಯಾಕೇಜ್‌ನೊಂದಿಗೆ ಉದ್ಯೋಗ ದೊರೆಯುವಂತೆಯೂ ಆಸಕ್ತಿ ವಹಿಸಿವೆ.

‘ಯಾವ ಕಾಲೇಜುಗಳಲ್ಲಿ ಯಾವ ಕೋರ್ಸ್ ಓದಿದರೆ ಉದ್ಯೋಗಾವಕಾಶ ಹೆಚ್ಚು ಮತ್ತು ಒಳ್ಳೆಯ ವೇತನದ ಪ್ಯಾಕೇಜ್ ದೊರೆಯುತ್ತದೆ ಎಂಬುದನ್ನು ವಿದ್ಯಾರ್ಥಿಗಳು ಪ್ರವೇಶಕ್ಕೂ ಮುನ್ನ ಲೆಕ್ಕಾಚಾರ ಮಾಡುತ್ತಾರೆ’ ಎನ್ನುತ್ತಾರೆ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಎಸ್.ಎನ್. ಶ್ರೀಧರ್.

‘ಮೆಕಾನಿಕಲ್ ಮತ್ತು ಸಿವಿಲ್ ಎಂಜಿನಿಯರಿಂಗ್ ಓದಿದವರಿಗೆ ಆರಂಭಿಕ ವೇತನ ಕಡಿಮೆ ಅಷ್ಟೇ. ಆದರೆ ಉದ್ಯೋಗ ಸಿಕ್ಕೇ ಸಿಗುತ್ತದೆ. ಕ್ರಮೇಣ ವೇತನ ಹೆಚ್ಚಳವೂ ಆಗುತ್ತದೆ. ನಮ್ಮ ವಿ.ವಿಯಲ್ಲಿ ಸಿವಿಲ್, ಮೆಕಾನಿಕಲ್, ಎಲೆಕ್ಟ್ರಾನಿಕ್ಸ್ ಕೋರ್ಸ್‌ಗಳಿಗೆ ಆಧುನಿಕ ಸ್ಪರ್ಶ ನೀಡಿ, ಪಠ್ಯವನ್ನು ಕೈಗಾರಿಕಾ ಸ್ನೇಹಿಯಾಗಿ ರೂಪಿಸಿದ್ದೇವೆ. ಈ ಕೋರ್ಸ್‌ಗಳಿಗೆ ಕೃತಕ ಬುದ್ಧಿಮತ್ತೆಯನ್ನು (ಎ.ಐ) ಐಚ್ಛಿಕವಾಗಿ ಪರಿಚಯಿಸಿದ್ದೇವೆ’ ಎಂದು ಅವರು ವಿವರಿಸುತ್ತಾರೆ.

227 ರಾಜ್ಯದಲ್ಲಿರುವ ಎಂಜಿನಿಯರಿಂಗ್ ಕಾಲೇಜುಗಳು

1.12 ಲಕ್ಷ (2025ರಲ್ಲಿ), ಭರ್ತಿಯಾದ ಎಂಜಿನಿಯರಿಂಗ್ ಸೀಟುಗಳು

1.59 ಲಕ್ಷ 2026ರಲ್ಲಿ ಲಭ್ಯವಿರುವ ಸೀಟುಗಳು

1.53 ಲಕ್ಷ (2025ರಲ್ಲಿ), ಲಭ್ಯವಿದ್ದ ಎಂಜಿನಿಯರಿಂಗ್ ಸೀಟುಗಳು

ಅಗ್ರಸ್ಥಾನದಲ್ಲೇ ಎಂಬಿಬಿಎಸ್



ವೈದ್ಯಕೀಯ ಪದವಿ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಬಯಸುವ ವಿದ್ಯಾರ್ಥಿಗಳಲ್ಲಿ ಎಂಬಿಬಿಎಸ್ ಓದಲು ಬಯಸುವವರೇ ಹೆಚ್ಚು. ನಂತರದ ಸ್ಥಾನ ದಂತವೈದ್ಯಕೀಯ (ಬಿಡಿಎಸ್) ಮತ್ತು ಆಯುರ್ವೇದ (ಬಿಎಎಂಎಸ್) ವಿಷಯಗಳಿಗಿತ್ತು. ದಶಕದಿಂದೀಚೆಗೆ ದಂತವೈದ್ಯಕೀಯ ಕ್ಕಿಂತಲೂ ಆಯುರ್ವೇದ ಕೋರ್ಸ್ ಆಯ್ಕೆ ಮಾಡಿಕೊಳ್ಳುವವರು ಹೆಚ್ಚಾಗಿದ್ದಾರೆ.

ವರ್ಷದಿಂದ ವರ್ಷಕ್ಕೆ ರಾಜ್ಯದಲ್ಲಿ ಆಯುರ್ವೇದ, ನ್ಯಾಚುರೋಪಥಿ ಕಾಲೇಜುಗಳು ಹೆಚ್ಚಾಗುತ್ತಿದ್ದು, ಸೀಟುಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ. ಜನರಲ್ಲಿ ಆರೋಗ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಹೆಚ್ಚಿರುವ ಜಾಗೃತಿಯಿಂದಾಗಿ ಆಯುರ್ವೇದ, ನ್ಯಾಚುರೋಪಥಿ, ಯೋಗಕ್ಕೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಗಿದೆ. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡುತ್ತಿರುವುದರಿಂದ ಈ ಕೋರ್ಸ್‌ಗಳು ಮತ್ತು ಚಿಕಿತ್ಸೆ ಜನಪ್ರಿಯವಾಗಿವೆ. ರಾಜ್ಯದಲ್ಲಿ ದಂತ ವೈದ್ಯಕೀಯ ಕಾಲೇಜುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಆಯುಷ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚಿನ ಸೀಟುಗಳೂ ಲಭ್ಯವಿವೆ.

ರಾಜ್ಯದಲ್ಲಿ ಪಶುವೈದ್ಯಕೀಯ ಓದಲು ಬಯಸುವವರು ಹೆಚ್ಚಿದ್ದಾರೆ. ಆದರೆ ರಾಜ್ಯದಲ್ಲಿ ಕೇವಲ 6 ಕಾಲೇಜುಗಳಿದ್ದು, 366 ಸೀಟುಗಳು ಮಾತ್ರ ಲಭ್ಯವಿವೆ.

ವೈದ್ಯಕೀಯ ಸ್ನಾತಕೋತ್ತರಕ್ಕೆ ಹೆಚ್ಚಿದ ಬೇಡಿಕೆ: ನಾಲ್ಕು ದಶಕಗಳ ಹಿಂದೆ ವೈದ್ಯಕೀಯ ಕೋರ್ಸ್ ಮುಗಿಸುತ್ತಿದ್ದ ಶೇ 60ರಿಂದ 70ರಷ್ಟು ಮಂದಿ ವೃತ್ತಿ ಆರಂಭಿಸುತ್ತಿದ್ದರು. ದಶಕದಿಂದೀಚೆಗೆ ವೈದ್ಯಕೀಯ ಪದವಿ ಪಡೆದ ಶೇ 90ಕ್ಕೂ ಹೆಚ್ಚು ಪದವೀಧರರು ಸ್ನಾತಕೋತ್ತರ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಮುಂದಾಗುತ್ತಿದ್ದಾರೆ ಎನ್ನುತ್ತಾರೆ ಆರ್‌ಜಿಯುಎಚ್‌ಎಸ್ ಕುಲಪತಿ ಡಾ. ಬಿ.ಸಿ.ಭಗವಾನ್.

ಇಂದಿನ ಆರೋಗ್ಯ ಕ್ಷೇತ್ರದಲ್ಲಿ ಎಂ.ಡಿ/ ಎಂ.ಎಸ್ ಮಾಡಿದವರಿಗೆ, ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳನ್ನು ಮಾಡಿದವರಿಗೆ ಬೇಡಿಕೆ ಹೆಚ್ಚು. ಜನರಲ್ಲೂ ಆರೋಗ್ಯದ ಬಗ್ಗೆ ಕಾಳಜಿ ಹೆಚ್ಚಾಗಿದ್ದು, ಸ್ನಾತಕೋತ್ತರ ಪದವಿಗಳನ್ನು ಓದಿರುವ ವೈದ್ಯರ ಬಳಿಗೇ ಚಿಕಿತ್ಸೆಗಾಗಿ ಹೋಗಲು ಬಯಸುತ್ತಾರೆ. ಆಸ್ಪತ್ರೆಗಳೂ ಉನ್ನತ ಶಿಕ್ಷಣ ಪಡೆದ, ಪರಿಣತಿ ಹೊಂದಿದ ವೈದ್ಯರಿಗೇ ಉದ್ಯೋಗ ನೀಡುತ್ತಿವೆ. ಹೀಗಾಗಿ ವೃತಿಯಲ್ಲಿ ಉಳಿಯಲು ಪ್ರತಿಯೊಬ್ಬರೂ ಸ್ನಾತಕೋತ್ತರ ಪದವಿ ಮಾಡಲೇಬೇಕಾದ ಅನಿವಾರ್ಯತೆ ಬಂದೊದಗಿದೆ ಎನ್ನುತ್ತಾರೆ ಅವರು.

ಡರ್ಮಟಾಲಜಿ, ರೇಡಿಯೋ ಡೈಯಾಗ್ನಸಿಸ್‌ಗೆ ಹೆಚ್ಚಿನ ಒಲವು: ಪಿ.ಜಿಯಲ್ಲಿ ಮೊದಲಿನಿಂದಲೂ ಜನರಲ್ ಮೆಡಿಸಿನ್, ಜನರಲ್ ಸರ್ಜರಿ, ಪಿಡಿಯಾಟ್ರಿಕ್ಸ್ (ಮಕ್ಕಳ ವೈದ್ಯಕೀಯ ಶಾಸ್ತ್ರ), ಗೈನಕಾಲಜಿ (ಪ್ರಸೂತಿ ಮತ್ತು ಸ್ತ್ರೀರೋಗ ಶಾಸ್ತ್ರ), ಆರ್ಥೋಪೆಡಿಕ್ಸ್ (ಮೂಳೆಚಿಕಿತ್ಸೆ) ಕೋರ್ಸ್‌ಗಳಿಗೆ ಹೆಚ್ಚು ಬೇಡಿಕೆಯಿತ್ತು. ಈಗಲೂ ಇವು ತಕ್ಕ ಮಟ್ಟಿಗೆ ಬೇಡಿಕೆ ಉಳಿಸಿಕೊಂಡಿವೆ. ಆದರೆ ಇವುಗಳಿಗಿಂತ ಹೆಚ್ಚಿನ ಬೇಡಿಕೆ ಡರ್ಮಟಾಲಜಿ (ಚರ್ಮಶಾಸ್ತ್ರ), ರೇಡಿಯೋ ಡೈಯಾಗ್ನಸಿಸ್ (ವೈದ್ಯಕೀಯ ವಿಕಿರಣಶಾಸ್ತ್ರ) ಕೋರ್ಸ್‌ಗಳಿಗೆ ಬಂದಿದೆ. ನಂತರ ಸ್ಥಾನದಲ್ಲಿ ಜನರಲ್ ಮೆಡಿಸಿನ್, ಮಾನಸಿಕ ಆರೋಗ್ಯ, ಕ್ರಿಟಿಕಲ್ ಕೇರ್ ಕೋರ್ಸ್‌ಗಳಿವೆ.

ದುಬಾರಿ ಶುಲ್ಕ: ಎಂ.ಡಿ- ಡರ್ಮಟಾಲಜಿಯ ಕೋರ್ಸ್‌ಗೆ ಮ್ಯಾನೇಜ್‌ಮೆಂಟ್ ಸೀಟಿನ ಶುಲ್ಕ ವರ್ಷಕ್ಕೆ ₹1.25 ಕೋಟಿ. ಅಂದರೆ ಮೂರು ವರ್ಷಗಳಲ್ಲಿ ₹3.75 ಕೋಟಿ ಶುಲ್ಕ ಭರಿಸಬೇಕಾಗುತ್ತದೆ. ರೇಡಿಯೋ ಡೈಯಾಗ್ನಸಿಸ್ ಕೋರ್ಸ್‌ಗೆ ವರ್ಷಕ್ಕೆ ₹ 1.10 ಕೋಟಿಯಷ್ಟಿದೆ. ಜನರಲ್ ಮೆಡಿಸಿನ್‌ಗೂ ₹ 1 ಕೋಟಿ, ಪೀಡಿಯಾಟ್ರಿಕ್ಸ್‌ಗೆ ₹ 80 ಲಕ್ಷದಿಂದ ₹ 90 ಲಕ್ಷ ಹಾಗೂ ಗೈನಕಾಲಜಿಗೆ ₹80 ಲಕ್ಷದಷ್ಟು ವಾರ್ಷಿಕ ಶುಲ್ಕವಿದೆ. ಹೆಚ್ಚಿನ ಬೇಡಿಕೆಯ ಕಾರಣ ಈ ಕೋರ್ಸ್‌ಗಳಿಗೆ ದುಬಾರಿ ಶುಲ್ಕವಿದೆ.

ಜನರಲ್ಲಿ ಚರ್ಮ, ಸೌಂದರ್ಯ ಮತ್ತು ಕೂದಲಿನ ಬಗ್ಗೆ ಅತಿಯಾದ ಆಸಕ್ತಿ ಬೆಳೆದಿದ್ದು, ಸೌಂದರ್ಯ ಪ್ರಜ್ಞೆ ಹೆಚ್ಚಾಗಿರುವುದರಿಂದ ‘ಡರ್ಮಟಾಲಜಿ’ ಓದಿದವರಿಗೆ ಹೆಚ್ಚಿನ ಬೇಡಿಕೆ ಬಂದಿದೆ. ಹೀಗಾಗಿ ದಶಕದಿಂದ ‘ಡರ್ಮಟಾಲಜಿಯ ಕ್ಲಿನಿಕ್‌ಗಳೂ ಹೆಚ್ಚಾಗುತ್ತಿವೆ.

ಅಂಕಿ ಅಂಶಗಳು

72 (10 ವರ್ಷದ ಹಿಂದೆ 50) ರಾಜ್ಯದಲ್ಲಿರುವ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು

14,495 (10 ವರ್ಷದ ಹಿಂದೆ 6,500) ಎಂ.ಬಿ.ಬಿ.ಎಸ್ ಸೀಟುಗಳು

3,300 (10 ವರ್ಷದ ಹಿಂದೆ 2,600) ದಂತ ವೈದ್ಯಕೀಯ ಸೀಟುಗಳು

7,687 ಲಭ್ಯವಿರುವ ಪಿ.ಜಿ ವೈದ್ಯಕೀಯ ಸೀಟುಗಳು

134 (10 ವರ್ಷಗಳ ಹಿಂದೆ 77) ರಾಜ್ಯದಲ್ಲಿರುವ ಆಯುಷ್ ಕಾಲೇಜುಗಳು

9,000 (10 ವರ್ಷದ ಹಿಂದೆ 4500) ಆಯುಷ್ ಕೋರ್ಸ್‌ಗಳಲ್ಲಿ ಲಭ್ಯ ಸೀಟುಗಳು

ಅವಕಾಶ ತರುವ ಎಎಚ್‌ಎಸ್

ಪಿಯುಸಿಯಲ್ಲಿ ವಿಜ್ಞಾನ ವಿಷಯ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಪದವಿ ಆಯ್ಕೆ ವಿಚಾರದಲ್ಲಿ ಹೆಚ್ಚಿನ ಅವಕಾಶಗಳು ಇವೆಯಾದರೂ, ಪ್ರತಿಭಾವಂತರು ಬಿಳಿ ಕೋಟ್ ಧರಿಸಿ ವೈದ್ಯರಾಗುವ ಕನಸು ಕಾಣುವುದೇ ಹೆಚ್ಚು. ಇತ್ತೀಚಿನ ವರ್ಷಗಳಲ್ಲಿ ಆರೋಗ್ಯ ಕ್ಷೇತ್ರ ಗಣನೀಯ ಪ್ರಮಾಣದಲ್ಲಿ ವಿಸ್ತರಣೆಯಾಗಿದ್ದು, ಸಾಂಪ್ರದಾಯಿಕ ಎಂಬಿಬಿಎಸ್ ಹಾದಿಯನ್ನೂ ಮೀರಿ ಬೆಳೆದಿದೆ. ಈ ಮೂಲಕ ವೈದ್ಯಕೀಯ ಕೋರ್ಸ್‌ಗಳ ಆಯ್ಕೆ ವಿಚಾರದಲ್ಲಿ ದೊಡ್ಡ ಮಟ್ಟದಲ್ಲಿ ‘ಟ್ರೆಂಡ್’ ಬದಲಾಗಿದೆ.

ನರ್ಸಿಂಗ್, ಫಿಸಿಯೋಥೆರಪಿ, ರೇಡಿಯಾಲಜಿ, ಮೆಡಿಕಲ್ ಲ್ಯಾಬ್ ಟೆಕ್ನಾಲಜಿ, ಅನಸ್ತೇಷಿಯಾ ಟೆಕ್ನಾಲಜಿ, ಕಾರ್ಡಿಯಾಕ್ ಕೇರ್ ಸೇರಿದಂತೆ ಹಲವು ಬಗೆಯ ‘ಅಲೈಡ್ ಹೆಲ್ತ್ ಸೈನ್ಸ್’ (ಎಎಚ್‌ಎಸ್) ಕೋರ್ಸ್‌ಗಳು, ಆಯುಷ್, ಹೆಲ್ತ್ ಕೇರ್ ಮ್ಯಾನೇಜ್‌ಮೆಂಟ್ ಮೊದಲಾದ ಕೋರ್ಸ್‌ಗಳು ವಿದ್ಯಾರ್ಥಿಗಳನ್ನು ಸೆಳೆಯುತ್ತಿವೆ.

ಕಠಿಣವಾದ ‘ನೀಟ್’, ಅದರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ ವಿವಿಧ ಅಕ್ರಮಗಳು, ಪದೇ ಪದೇ ವಿಳಂಬವಾಗುವ ಕೌನ್ಸೆಲಿಂಗ್ ಪ್ರಕ್ರಿಯೆ, ಪಾಲನೆಯಾಗದ ವೇಳಾಪಟ್ಟಿ, ವೈದ್ಯಕೀಯ ಪದವಿ ಕೋರ್ಸ್‌ನ ದೀರ್ಘಾವಧಿ (ಐದೂವರೆ ವರ್ಷ), ಬಳಿಕ ಎಂ.ಡಿ ಅಥವಾ ಎಂ.ಎಸ್ ಮಾಡಲು ಇನ್ನಷ್ಟು ಸಮಯ (ಮೂರರಿಂದ ನಾಲ್ಕು ವರ್ಷ) ತೆಗೆದುಕೊಳ್ಳುವುದರಿಂದ ಹಲವು ವಿದ್ಯಾರ್ಥಿಗಳಿಗೆ ‘ಅಲೈಡ್ ಹೆಲ್ತ್ ಸೈನ್ಸ್’ ನೆಚ್ಚಿನ ಕೋರ್ಸ್‌ಗಳಾಗಿವೆ.

‘ಇತ್ತೀಚೆಗೆ ಆರೋಗ್ಯ ಕ್ಷೇತ್ರದಲ್ಲಿ ವೈವಿಧ್ಯಮಯ ಕೋರ್ಸ್‌ಗಳು ಆರಂಭವಾಗಿವೆ. ಅವು ಆಧುನಿಕ ಆರೋಗ್ಯ ವ್ಯವಸ್ಥೆಯ ಕಾರ್ಯಕ್ಷಮತೆ ಹೆಚ್ಚಿಸಲೂ ನೆರವಾಗುತ್ತಿವೆ. ಇಂದಿನ ಆರೋಗ್ಯ ಸೇವೆಯು ಬಹುವಿಷಯಕ (ಮಲ್ಟಿಡಿಸಿಪ್ಲಿನರಿ) ಮತ್ತು ತಂಡ ಆಧಾರಿತ ಮಾದರಿಯಾಗಿ ಬದಲಾಗಿರುವುದು ವಿದ್ಯಾರ್ಥಿಗಳಿಗೆ ವರದಾನವಾಗಿದೆ’ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಕುಲಪತಿ ಡಾ. ಬಿ.ಸಿ.ಭಗವಾನ್ ಹೇಳುತ್ತಾರೆ.

ಅಂಕಿ ಅಂಶಗಳು

275 (10 ವರ್ಷಗಳ ಹಿಂದೆ 56) ರಾಜ್ಯದಲ್ಲಿರುವ ಎಎಚ್‌ಎಸ್ ಕಾಲೇಜುಗಳು

9,104 (10 ವರ್ಷಗಳ ಹಿಂದೆ 2,073) ಮೊದಲ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು

ಕಾನೂನು ಪದವಿಗೂ ಬೇಡಿಕೆ

ಕಾನೂನು ಕಾಲೇಜುಗಳೂ ವಿದ್ಯಾರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸೆಳೆಯುತ್ತಿವೆ. ಮೂರು ವರ್ಷದ ಹಾಗೂ ಐದು ವರ್ಷದ ಕಾನೂನು ಪದವಿ ಪ್ರವೇಶ ಬಯಸಿ ಬರುವ ವಿದ್ಯಾರ್ಥಿಗಳ ಸಂಖ್ಯೆ ಹತ್ತು ವರ್ಷಗಳಲ್ಲಿ ಗಣನೀಯವಾಗಿ ಏರಿಕೆಯಾಗಿದೆ. ಬಿಎ- ಎಲ್‌ಎಲ್‌ಬಿ, ಬಿಬಿಎ-ಎಲ್‌ಎಲ್‌ಬಿ, ಬಿಕಾಂ- ಎಲ್‌ಎಲ್‌ಬಿ, ಬಿ.ಎಸ್ಸಿ-ಎಲ್‌ಎಲ್ ಬಿ ಅಂತಹ ಐದು ವರ್ಷದ ಇಂಟಗ್ರೇಟೆಡ್ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ.

ರಾಜ್ಯದಲ್ಲಿ 2018-19ನೇ ಸಾಲಿನಲ್ಲಿ 28,221 ವಿದ್ಯಾರ್ಥಿಗಳು ಕಾನೂನು ಕೋರ್ಸ್‌ಗಳಿಗೆ ದಾಖಲಾಗಿದ್ದರೆ, ಅದು 2025-26ನೇ ಸಾಲಿನಲ್ಲಿ 51,304ಕ್ಕೆ ಏರಿಕೆಯಾಗಿದೆ. ಇದು ರಾಜ್ಯದಲ್ಲಿ ಕಾನೂನು ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದನ್ನು ತೋರಿಸುತ್ತದೆ.

‘ನ್ಯಾಯಾಂಗ ಕ್ಷೇತ್ರ ಸೇರಿದಂತೆ ಕೈಗಾರಿಕೆ, ಬ್ಯಾಂಕಿಂಗ್, ಖಾಸಗಿ, ಕಾರ್ಪೊರೇಟ್ ವಲಯ ಹಾಗೂ ಕಾನೂನು ಸಲಹೆ ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗಾವಕಾಶ ಸೃಷ್ಟಿಯಾಗಿದೆ. ಅಲ್ಲದೆ ಕ್ರಿಮಿನಲ್, ಸಿವಿಲ್, ಕಾರ್ಪೊರೇಟ್ ವಲಯ ಹಾಗೂ ಸೈಬರ್ ಕ್ಷೇತ್ರದಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ. ಪ್ರಕರಣಗಳ ಇತ್ಯರ್ಥಕ್ಕೆ ವಕೀಲರು ಹಾಗೂ ಕಾನೂನು ಸಲಹೆಗಾರರ ಅವಶ್ಯಕತೆ ಹೆಚ್ಚಾಗಿದೆ. ಅಲ್ಲದೇ ಮಹಾನಗರಗಳಲ್ಲಿ ಸಂಘಟಿತ ಕಾನೂನು ಸೇವೆ ನೀಡುವ ಸಂಸ್ಥೆಗಳು ಹೆಚ್ಚಾಗಿರುವ ಕಾರಣ ಕಾನೂನು ಅಧ್ಯಯನ ಮಾಡಲು ಬಯಸುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ’ ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸಿ.ಬಸವರಾಜ ಹೇಳುತ್ತಾರೆ.

ಐಐಎಸ್‌ಸಿ ಕಡೆಯೂ ಒಲವು

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಉನ್ನತ ಅಧ್ಯಯನ ಮತ್ತು ಸಂಶೋಧನೆಗೆ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ದೇಶದಲ್ಲೇ ಅಗ್ರಶ್ರೇಣಿಯ ಸಂಸ್ಥೆ. ಇಲ್ಲಿ ಮೂಲ ವಿಜ್ಞಾನ, ಎಂಜಿನಿಯರಿಂಗ್, ನಿರ್ವಹಣೆ ಮತ್ತು ವಿನ್ಯಾಸಕ್ಕೆ ಸಂಬಂಧಿಸಿದ ಕೋರ್ಸ್‌ಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಸಂಶೋಧನೆಗೆ ವಿವಿಧ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ಮೂಲ ವಿಜ್ಞಾನದತ್ತ ಆಸಕ್ತಿ ಇರುವ ಹೆಚ್ಚಿನ ವಿದ್ಯಾರ್ಥಿಗಳು ಆಯ್ಕೆಯಲ್ಲಿ ಐಐಎಸ್‌ಸಿ ಮುಂಚೂಣಿಯಲ್ಲಿದೆ. ಪ್ರತಿ ವರ್ಷದ ಸಹಸ್ರಾರು ವಿದ್ಯಾರ್ಥಿಗಳು ಐಐಎಸ್‌ಸಿ ಪ್ರವೇಶಿಸಲು ಯತ್ನಿಸುತ್ತಾರೆ.

ಅಂಕಿ ಅಂಶಗಳು

175 ರಾಜ್ಯ ಕಾನೂನು ವಿಶ್ವವಿದ್ಯಾಲಯದ ಅಡಿಯಲ್ಲಿರುವ ಕಾಲೇಜುಗಳು

51,304 2025-26ರಲ್ಲಿ ಕಾನೂನು ವ್ಯಾಸಂಗಕ್ಕೆ ದಾಖಲಾದ ವಿದ್ಯಾರ್ಥಿಗಳು

ಆದರೆ ಅತ್ಯುತ್ತಮ ಅಂಕಗಳನ್ನು ಪಡೆದ ನೂರಾರು ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ದೊರೆಯುತ್ತದೆ.

ಇಲ್ಲಿ ನಾಲ್ಕು ವರ್ಷದ ವಿಜ್ಞಾನ ಪದವಿ (ಬಿ.ಎಸ್ಸಿ ಸಂಶೋಧನೆ), ತಂತ್ರಜ್ಞಾನ ಪದವಿ ಹಾಗೂ ಕಂಪ್ಯೂಟಿಂಗ್ (ಬಿಟೆ), ಎಂ.ಟೆಕ್, ಎಂಡಿಇಎಸ್, ಎಂಎಂಜಿಟಿ, ಎಂ.ಇ, ಎಂ.ಎಸ್ಸಿ ಕೋರ್ಸ್‌ಗಳು ವಿದ್ಯಾರ್ಥಿಗಳನ್ನು ಸೆಳೆಯುತ್ತಿವೆ.

ಕೃಷಿ ಓದಿನತ್ತಲೂ ಸೆಳೆತ

ವರ್ಷದಿಂದ ವರ್ಷಕ್ಕೆ ಕೃಷಿ ವಿಜ್ಞಾನದ ಕೋರ್ಸ್‌ಗಳಲ್ಲಿ ದಾಖಲಾತಿ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿದೆ. ರಾಜ್ಯದಲ್ಲಿ ಬೆಂಗಳೂರು, ಧಾರವಾಡ, ರಾಯಚೂರು ಮತ್ತು ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ.

ಕೃಷಿ, ಕೃಷಿ ಮತ್ತು ವ್ಯವಹಾರ ನಿರ್ವಹಣೆ, ಆಹಾರ ಪೋಷಣೆ ಮತ್ತು ಪಥ್ಯೆ ಪದವಿ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ. ನಂತರ ನೈಸರ್ಗಿಕ ಕೃಷಿ, ಅರಣ್ಯಶಾಸ್ತ್ರ, ಜೈವಿಕ ವಿಜ್ಞಾನ ಕೋರ್ಸ್‌ಗಳಿಗೆ ಬೇಡಿಕೆಯಿದೆ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಹೇಳುತ್ತಾರೆ.

ಸ್ನಾತಕೋತ್ತರ ಪದವಿ ಪೈಕಿ ಎಂಬಿಎ (ಕೃಷಿ ವ್ಯವಹಾರ ನಿರ್ವಹಣೆ), ಎಂ.ಎಸ್ಸಿ ಬೇಸಾಯಶಾಸ್ತ್ರ, ಕೀಟಶಾಸ್ತ್ರ, ಅನುವಂಶೀಯ ಮತ್ತು ಸಸ್ಯ ತಳಿ ಅಭಿವೃದ್ಧಿ, ಅಣ್ವಿಕ ಜೀವಶಾಸ್ತ್ರ ಜೈವಿಕ ತಂತ್ರಜ್ಞಾನ ಕೋರ್ಸ್‌ಗಳಿಗೆ ಹೆಚ್ಚು ಬೇಡಿಕೆ ಇದೆ ಎನ್ನುತ್ತಾರೆ ಅವರು.

ಪರಿಕಲ್ಪನೆ: **ಯತೀಶ್ ಕುಮಾರ್ ಜಿ.ಡಿ**
ಪೂರಕ ಮಾಹಿತಿ: **ಎಸ್. ರವಿಪ್ರಕಾಶ್**
ಚಂದ್ರಹಾಸ ಹಿರೇಮಳಲಿ, ಗಾಣದಾಳು ಶ್ರೀಕಂತ
ಸಂತೋಷ ಈ.ಚಿನಗುಡಿ, ಎಲ್.ಮಂಜುನಾಥ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 21-6-2001

• ಈಶ್ವರ ಖಂಡ್ರೆ ಕೊಲೆಗೆ ಯತ್ನ: ಪರಿಸ್ಥಿತಿ ಉದ್ವಿಗ್ನ

ಬೀದರ್, ಜೂನ್ 20– ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರೂ ಆಗಿರುವ ಜಿಲ್ಲೆಯ ಕಾಂಗ್ರೆಸ್ ನಾಯಕ ಈಶ್ವರ ಖಂಡ್ರೆ ಮೇಲೆ ಭಾಲ್ಕಿ ಶಾಸಕ ಪ್ರಕಾಶ ಖಂಡ್ರೆ ಅವರ ಬೆಂಬಲಿಗರೆನ್ನಲಾದ ಉದ್ರಿಕ್ತ ಗುಂಪೊಂದು ರಿವಾಲ್ವರ್ ಮತ್ತಿತರ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೊಲ್ಲುವ ವಿಫಲಯತ್ನ ನಡೆಸಿರುವ ಘಟನೆ ಇಂದು ಸಂಜೆ ಇಲ್ಲಿಯ ಅಕ್ಕಮಹಾದೇವಿ ಕಾಲೇಜು ಪ್ರಾಂಗಣದಲ್ಲಿ ಜರುಗಿದೆ.

ಸದರಿ ಘಟನೆಯಿಂದಾಗಿ ಇಂದು ಸಂಜೆ ನಗರದ ಅಕ್ಕಮಹಾದೇವಿ ಹಾಗೂ ಸುತ್ತಲಿನ ಪ್ರದೇಶದಲ್ಲಿ ಕೆಲಹೊತ್ತು ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

75 ವರ್ಷಗಳ ಹಿಂದೆ

ಗುರುವಾರ, 21-6-1951

• ಮಧ್ಯಪ್ರಾಚ್ಯದ ಸೇನಾ ನೆಲೆಗಳಿಗೆಲ್ಲ ಸಜ್ಜಿನ ಸೂಚನೆ

ಫೆಯಿದ್, ಸುಯಿಜ್ ಕಾಲುವೆ ಪ್ರದೇಶ ಜೂನ್ 20– ಪರ್ಷಿಯದ ಎಣ್ಣೆ ಗಣಿಗಳನ್ನು ಕುರಿತ ಬ್ರಿಟಿಷ್–ಪರ್ಷಿಯ ಸಂಧಾನ ನೆನ್ನೆ ರಾತ್ರಿ ಮುರಿದು ಬಿದ್ದೊಡನೆ ಮಧ್ಯ ಪ್ರಾಚ್ಯದಲ್ಲಿರುವ ಎಲ್ಲ ಬ್ರಿಟಿಷ್ ರಾಯಲ್ ವಿಮಾನ ನೆಲೆಗಳಿಗೂ ಸನ್ನದ್ಧವಾಗಿರುವಂತೆ ಎಚ್ಚರಿಕೆ ಕೊಡಲಾಯಿತೆಂದು ಅಧಿಕೃತ ಮೂಲಗಳಿಂದ ಗೊತ್ತಾಗಿದೆ.

ಸಂಧಾನ ಭಂಗವಾದ ಕೆಲವು ಗಂಟೆಗಳ ಅನಂತರ ಬ್ರಿಟನ್ನಿನ ವಿದೇಶಾಂಗ ಶಾಖಾ ಸಚಿವ ಹರ್ಬರ್ಟ್ ಮಾರಿಸ್ ರವರು ಬ್ರಿಟನ್ನಿನ ಸಂಧಾನ ಪ್ರತಿನಿಧಿಗಳಿಗೆ ವಾಪಸ್ ಬರುವಂತೆ ಕರೆಕೊಟ್ಟರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

21 ಜೂನ್ 2026 ಭಾನುವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ಸಪ್ತಮಿ ಗಂ. 15-21 **ನಕ್ಷತ್ರ:** ಪೂರ್ವಫಲ್ಗುಣಿ ಗಂ. 9-32 **ಯೋಗ:** ಸಿದ್ಧಿ ಗಂ. 11-22 **ಕರಣ:** ವಣಿಜ ಗಂ. 15-21, ಮಿಥುನ ಮಾಸದ 06 ನೇ ದಿನ. **ಮಳೆ ನಕ್ಷತ್ರ:** ಮೃಗಶಿರ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00 **ಸೂರ್ಯೋದಯ:** 06-09 **ಸೂರ್ಯಾಸ್ತ:** 06-56 **ಮುಸ್ಲಿಂ ದಿನಾಂಕ:** 05 ಮೊಹರಂ **ದಿನ ವಿಶೇಷ:** ವಿಶ್ವ ಯೋಗ ದಿನ **ಅದೃಷ್ಟ ಸಂಖ್ಯೆ:** 12, 2

ಮೇಷ: ಸಣ್ಣ ನೋವಿಗಾಗಿ ವೈದ್ಯರನ್ನು ಭೇಟಿ ಮಾಡಿದ ನಿಮಗೆ ತಪಾಸಣೆಯಿಂದ ಬಂದ ಫಲಿತಾಂಶ ಆತಂಕವನ್ನು ಸೃಷ್ಟಿ ಮಾಡಲಿದೆ. ವೃತ್ತಿ ಹಾಗೂ ವೈಯಕ್ತಿಕ ಜೀವನಗಳು ಎರಡೂ ಸಹ ತೃಪ್ತಿಕರ ಎನಿಸಲಿದೆ.

ವೃಷಭ: ಸಾಂಸಾರಿಕವಾಗಿ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಆರ್ಥಿಕ ಸಹಾಯ ಬೇಕಾಗುವುದು. ಮರೆವು ಇಂದು ನಿಮ್ಮನ್ನು ಬಹಳವಾಗಿ ಬಾಧಿಸುವ ಸಾಧ್ಯತೆ ಇರುವುದು. ಯೋಗಾಭ್ಯಾಸವನ್ನು ದಿನಚರಿಯಲ್ಲಿ ರೂಢಿಸಿಕೊಳ್ಳಿರಿ.

ಮಿಥುನ: ನಿಮ್ಮ ಜೀವನ ಶೈಲಿಯನ್ನು ಸುಸಂಸ್ಕೃತವಾಗಿ ಬದಲಿಸಿಕೊಳ್ಳಲು ಈ ದಿನ ಪ್ರಾರಂಭಿಸಿ. ಈ ದಿನ ಅಧಿಕ ಹಣ ಖರ್ಚು ಮಾಡುವಿರಿ. ನಿಮಗೆ ಸಂಬಂಧ ಪಡದ ವಿಚಾರಗಳಲ್ಲಿ ತಲೆಕೆಡಿಸಿಕೊಳ್ಳಲು ಹೋಗದಿರಿ.

ಕರ್ಕಾಟಕ: ವೃತ್ತಿಯಲ್ಲಿನ ಬದಲಾವಣೆ ಮಾಡುವ ಬಗ್ಗೆ ಹೆಂಡತಿಯೊಡನೆ ಮತ್ತು ಸ್ನೇಹಿತರೊಡನೆ ಚರ್ಚಿಸಿ ತೀರ್ಮಾನಿಸುವುದು ಒಳ್ಳೆಯದು. ನಿಮಗೆ ವೈದ್ಯರು ಆಹಾರದಲ್ಲಿ ಪಥ್ಯ ಮಾಡಲು ಸೂಚಿಸಿದ್ದಲ್ಲಿ ಅದನ್ನು ತಪ್ಪದೇ ಪಾಲಿಸಿ.

ಸಿಂಹ: ನಿಮ್ಮ ಗುರುವಿನಲ್ಲಿ ನಿಷ್ಠೆ ಹಾಗೂ ನಿಮ್ಮ ಗುರಿಯ ಮೇಲಿನ ಏಕಾಗ್ರತೆಯು ಆದಷ್ಟು ಬೇಗ ನಿಮ್ಮನ್ನು ಉತ್ತಮ ವ್ಯಕ್ತಿಯನ್ನಾಗಿಸುತ್ತದೆ. ದೇಹದಲ್ಲಿ ರಕ್ತದ ಒತ್ತಡ ಅಥವಾ ಮೂತ್ರ ಸಂಬಂಧಿತ ದೋಷಗಳ ಬಗ್ಗೆ ಜಾಗ್ರತೆ ವಹಿಸಿ.

ಕನ್ಯಾ: ಈ ದಿನ ಮಾತು ಕಡಿಮೆ ಮಾಡಿ ಕೆಲಸದಲ್ಲಿ ಮಗ್ನರಾಗುವುದರಿಂದ ನಿಮ್ಮ ದಿನಚರ್ಯವು ಸುಖ ಶಾಂತಿಯಿಂದ ತುಂಬಿರುತ್ತದೆ. ನಿಮ್ಮ ಕಠಿಣ ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲ ಉಂಟಾಗುವುದು.

ತುಲಾ: ಸುತ್ತಿ ಬಳಸಿ ನಿಮ್ಮ ಬಳಿ ಬರುತ್ತಿರುವ ವಿಚಾರಗಳನ್ನು ಬಗೆಹರಿಸಿ. ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಅರಿತುಕೊಂಡು ಮುಂದುವರಿಯುವಿರಿ. ನೆಮ್ಮದಿಯ ಪ್ರಾಪ್ತಿಗಾಗಿ ಸ್ತೋತ್ರ ಪಠಣವನ್ನು ಮಾಡಿ.

ವೃಶ್ಚಿಕ: ಉದ್ಯೋಗಿಗಳಿಗೆ ವೃತ್ತಿ ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ. ಇಂದು ನಿಮ್ಮ ಮಾತುಗಳಲ್ಲಿ ಮನುಷ್ಯತ್ವದ ಕೊರತೆ ಉಂಟಾಗುವುದು. ಕಿರಿಯರು ಮಾಡಿದ ತಪ್ಪಿಗೆ ಕ್ಷಮೆಯನ್ನು ನೀಡಿ.

ಧನು: ದಿನದ ಪೂರ್ವಾರ್ಧದಲ್ಲಿ ಶುಭಫಲವನ್ನು ಅನುಭವಿಸುವ ನಿಮಗೆ ಉತ್ತರಾರ್ಧದಲ್ಲಿ ಸಿಹಿ-ಕಹಿಯ ಮಿಶ್ರ ಫಲವನ್ನು ಸವಿಯಬೇಕಾಗುತ್ತದೆ. ಕಠಿಣ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸುವ ಚಾಕಚಕ್ಯತೆ ಬೆಳಸಿಕೊಳ್ಳುವಿರಿ.

ಮಕರ: ನೀವು ಬಾಡಿಗೆಗೆ ಕೊಟ್ಟಿರುವ ಕಟ್ಟಡ ಅಥವಾ ಯಂತ್ರದಲ್ಲಿ ಪದೇ ಪದೇ ಬರುತ್ತಿರುವ ದುರಸ್ತಿ ಕಾರ್ಯವು ನಿಮ್ಮ ನಿದ್ರಾಹೀನತೆಗೆ ಕಾರಣವಾಗುವುದು. ಕುಟುಂಬದವರ ಒಳ ಜಗಳದಿಂದ ಮುಖ್ಯವಾದ ಕಾರ್ಯಕ್ಕೆ ತಡೆಯಾಗುವುದು.

ಕುಂಭ: ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲ್ಯ ಹೊರ ತೆಗೆಯಲು ಹೊಸದನ್ನು ಕಲಿಯಲು ಮುಂದಾಗುವಂತಾಗಲಿದೆ. ವಿಳಂಬವಾಗಿದ್ದ ನಿಮ್ಮ ಕಾರ್ಯಗಳು ಸಮೂಹಕಾರ್ಯದಿಂದ ಚುರುಕುಗೊಳ್ಳುವುದು.

ಮೀನ: ತಂದೆಯೊಡನೆ ಕೂಡಿ ಅಧ್ಯಾತ್ಮಿಕ ಚಟುವಟಿಕೆಗಳಲ್ಲಿ ವಿಶೇಷ ಪಾತ್ರ ವಹಿಸುವ ಅವಕಾಶ ಈ ದಿನ ನಿಮ್ಮದಾಗಲಿದೆ. ಸಾಕು ಪ್ರಾಣಿಗಳ ಆರೋಗ್ಯದಲ್ಲಿ ಏರುಪೇರಾಗುವುದು ಈ ದಿನದ ಅಸಮಾಧಾನಕ್ಕೆ ಕಾರಣವಾಗುವುದು.

ಪದಬಂಧ 6440


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನೀರು ಧುಮುಕುವ ಸ್ಥಳ (4)
3.ಋತುಗಳ ರಾಜ (3)
5.ಪ್ರತ್ಯಯಸಹಿತವಾದ ಶಬ್ದ (2)
7.ಅದೇ ತಾನೆ ಮದುವೆಯಾದ ಗಂಡ ಹೆಂಡಿರು (5)
9.ಪಿನಾಕದ ಹತ್ತಿರವಿರುವ ಕೋಗಿಲೆ (2)
10.ಕತ್ತು ಕೊನೆಗಿಟ್ಟು ತೋರಿದ ಬಲ (3)
11.ಕಶೇರುಕಗಳ ದವಡೆಯಿಂದ ಹೊರಟಿರುವ ದಂತಭಾಗ (2)
12.ಕಳೆಯುವ ಲೆಕ್ಕವಿದು (5)
14.ವರ ತಿರುಗಿದಾಗ ಕೇಳಿದ ಧ್ವನಿ (2)
16.ಗಾಳಿ ಇಲ್ಲಿದೆ (3)
17.ಮಧ್ಯವಯಸ್ಸಿದು (4)

ಮೇಲಿಂದ ಕೆಳಕ್ಕೆ

1.ಜನರ ಸಮೀಪವಿರುವ ರಾಜ (3)
2.ಒಂದೇ ವಿಷಯದಲ್ಲಿ ಮಗ್ನನಾಗಿರುವವನು (3)
4.ಸದ್ಯದ ಪರಿಸ್ಥಿತಿ (3)
6.ಹತ್ತು ವರ್ಷಗಳ ಅವಧಿ (3)
8. ಸೈನ್ಯ ಸಮೇತ ಯುದ್ಧಕ್ಕೆ ಹೋಗು (3)
10.ಉಚ್ಚ ದನಿಯನ್ನು ಹೀಗೂ ಹೇಳುವರು (3)
11.ಭಾರವಲ್ಲದ್ದು ಇದು (3)
12.ಈತ ಕೆಟ್ಟಚಟವುಳ್ಳವನು (3)
13.ಅಕ್ಷಿ ಇಲ್ಲಿ ಕಾಣುತ್ತಿದೆ (3)
15.ಲಯವಿರುವ ಬಳೆ! (3)



6439ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಹಾಪೂರ 3.ಅನುಭವಿ 5.ಸದರ 6.ಜರಾಯು 8.ಪ್ರಸಂಗ 10.ಆಸಕ್ತಿ 11.ವಾಯಸ 13.ಅಳುಕು 15.ಯಥಾಸ್ಥಿತಿ 16.ರಣಭೇರಿ

ಮೇಲಿಂದ ಕೆಳಕ್ಕೆ: 1.ಮಹಾರಾಜ 2.ರಕ್ಕಸ 3.ಅಪರ 4.ವಿನಿಯೋಗ 7.ರಾಜಸ 9.ಸಂದಾಯ 10.ಆಯವ್ಯಯ 12.ಸದಾಚಾರಿ 13.ಅದಿತಿ 14.ಕುಬೇರ

ಸುಡೊಕು 6823

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5	6		8	7			9	
								4
	8		5	2		1	6	
1		5		3			8	9
4			2		5			1
	9						2	
			3		2		4	
7			9		8	5		2
	5			4			3	8

6822 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ತುಂಗಭದ್ರಾ ಎಡದಂಡೆ ವಿಸ್ತರಣೆ: ಒಪ್ಪಿಗೆ ಕೊಡದ ಕೇಂದ್ರ

ಪ್ರಸ್ತಾವ ಸ್ವರೂಪದ ಬಗ್ಗೆ ಆಕ್ಷೇಪ: ಲೋಪ ಸರಿಪಡಿಸುವಂತೆ ನಿರ್ದೇಶನ

• ಮಂಜುನಾಥಹೆಬ್ಬಾರ್

ಮುಖ್ಯಾಂಶಗಳು
- ಅಪಾರ ಪ್ರಮಾಣದ ನೀರು ಪೋಲು
- ಪರಿಹಾರ ಆಗದ 35 ಸಾವಿರ ಹೆಕ್ಟೇರ್ ಪ್ರದೇಶದ ಸಮಸ್ಯೆ

ನವದೆಹಲಿ: ₹1,604 ಕೋಟಿ ವೆಚ್ಚದಲ್ಲಿ ತುಂಗಭದ್ರಾ ಎಡದಂಡೆ ಕಾಲುವೆ ವಿಸ್ತರಣೆ ಹಾಗೂ ಆಧುನೀಕರಣ ನಡೆಸುವ ಕರ್ನಾಟಕ ಜಲಸಂಪನ್ಮೂಲ ಇಲಾಖೆಯ ಪ್ರಸ್ತಾವಕ್ಕೆ ಕೇಂದ್ರ ಜಲಶಕ್ತಿ ಸಚಿವಾಲಯದ ಸಲಹಾ ಸಮಿತಿ ಒಪ್ಪಿಗೆ ನೀಡಿಲ್ಲ.

ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ವಿ.ಎಲ್.ಕಾಂತಾರಾವ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ನಡೆದ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತಾವ ಸ್ವರೂಪದ ಬಗ್ಗೆ ಆಕ್ಷೇಪ ವ್ಯಕ್ತವಾಯಿತು. ಪ್ರಸ್ತಾವದಲ್ಲಿನ ಲೋಪಗಳನ್ನು ಸರಿಪಡಿಸುವಂತೆ ರಾಜ್ಯದ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಸಲಹಾ ಸಮಿತಿಯ ಮುಂದಿನ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸಲು ನಿರ್ಧರಿಸಲಾಯಿತು.

ಈಗಿನ ಕಾಲುವೆ 272 ಕಿ.ಮೀ. ಉದ್ದ ಇದ್ದು, 72 ವರ್ಷಗಳಷ್ಟು ಹಳೆಯದು. ಕಾಲುವೆಗೆ ಹಾನಿ ಆಗಿರುವುದರಿಂದ ಅಂತಿಮವರೆಗೆ ನೀರು ಸರಬರಾಜು ಆಗುತ್ತಿಲ್ಲ. ಇದರಿಂದಾಗಿ, ಅಪಾರ ಪ್ರಮಾಣದ ನೀರು ಪೋಲಾಗುತ್ತಿದೆ. ರಾಜ್ಯ ಸರ್ಕಾರ ಅನುದಾನದಲ್ಲಿ 2008ರಿಂದ 2013ರ ಅವಧಿಯಲ್ಲಿ ಕಾಲುವೆ ಆಧುನೀಕರಣ ಕಾಮಗಾರಿ ನಡೆಸಲಾಗಿತ್ತು. ಆಗ ಕಾಲುವೆಯ ಮಾರ್ಗದ ಕಾಮಗಾರಿಗಳಷ್ಟೇ ಮುಗಿಸಲಾಗಿತ್ತು. ಹಲವು ಕಾಮಗಾರಿಗಳು ಬಾಕಿ ಉಳಿದಿದ್ದವು. ಮುಖ್ಯ ಕಾಲುವೆಯಿಂದ 63,100 ಹೆಕ್ಟೇರ್ ಕೃಷಿ ಪ್ರದೇಶದಲ್ಲಿ ನೀರು ಸರಬರಾಜು ಆಗುತ್ತಿಲ್ಲ. ಈ ಕಾಮಗಾರಿಯ ಬಳಿಕ 28,100 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲು ಸಾಧ್ಯವಾಗಿತ್ತು. ಉಳಿದ 35 ಸಾವಿರ ಹೆಕ್ಟೇರ್ ಪ್ರದೇಶದ ಸಮಸ್ಯೆ ಹಾಗೆಯೇ ಉಳಿದಿತ್ತು.

ಪ್ರಸ್ತುತ ಪ್ರಸ್ತಾವವು ಕಾಲುವೆಯ ಸಮಗ್ರ ಆಧುನೀಕರಣ ಮಾಡುವ ಉದ್ದೇಶ ಹೊಂದಿದೆ. ಹೆಚ್ಚುವರಿಯಾಗಿ 36,824 ಹೆಕ್ಟೇರ್ ಪ್ರದೇಶಕ್ಕೆ ನೀರು ಪೂರೈಸಲು ಯೋಜಿಸಲಾಗಿದೆ. ಕೃಷ್ಣಾ ನ್ಯಾಯಮಂಡಳಿ-1ರ ತೀರ್ಪಿನ ಪ್ರಕಾರವೇ ಈ ಕಾಮಗಾರಿ ನಡೆಸಲಾಗುತ್ತದೆ ಎಂದು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಸ್ಪಷ್ಟಪಡಿಸಿದರು. ನ್ಯಾಯಮಂಡಳಿಯು ತುಂಗಭದ್ರಾ ಎಡದಂಡೆ ಕಾಲುವೆಗೆ 102 ಟಿಎಂಸಿ ಅಡಿ ನೀರು ಹಂಚಿಕೆ ಮಾಡಿದ್ದು, ಈಗಿನ ಪ್ರಸ್ತಾವದ ಮೂಲಕ 90.40 ಟಿಎಂಸಿ ಅಡಿ ನೀರು ಬಳಸಲಾಗುತ್ತದೆ. ಈ ಯೋಜನೆಗೆ ಯಾವುದೇ ಅರಣ್ಯ ಹಾಗೂ ಪರಿಸರ ಅನುಮೋದನೆ ಪಡೆಯುವ ಅಗತ್ಯ ಇಲ್ಲ. ಹೊಸದಾಗಿ ಭೂಸ್ವಾಧೀನ ಹಾಗೂ ಪುನರ್ ವಸತಿಯ ಅವಶ್ಯವೂ ಇಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಯೋಜನೆಯ ವೆಚ್ಚ ಮಾದರಿಯ ಬಗ್ಗೆ ಜಲಶಕ್ತಿ ಸಚಿವಾಲಯದ ಮುಖ್ಯ ವೆಚ್ಚ ಸಲಹೆಗಾರರು ಕೆಲ ಅವಲೋಕನ ಮಾಡಿದರು. ಇದಕ್ಕೆ ರಾಜ್ಯದ ಅಧಿಕಾರಿಗಳು ಸ್ಪಷ್ಟನೆ ನೀಡಿದರು. ನೀರಾವರಿಗೆ ಒಳಪಡುವ ಪ್ರದೇಶದ ಅಂಕಿ-ಅಂಶಗಳಲ್ಲಿ ವ್ಯತ್ಯಾಸ ಇದೆ ಎಂದು ನೀತಿ ಆಯೋಗದ ಉಪ ಸಲಹೆಗಾರರು ಬೊಟ್ಟು ಮಾಡಿದರು. ಈ ಅಂಕಿ ಅಂಶಗಳನ್ನು ಪರಿಶೀಲನೆ ನಡೆಸುವುದಾಗಿ ರಾಜ್ಯದ ಅಧಿಕಾರಿಗಳು ಭರವಸೆ ನೀಡಿದರು. ಪ್ರಸ್ತಾವದ ಅಂಕಿ-ಅಂಶಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಲೋಪಗಳನ್ನು ಸರಿಪಡಿಸಬೇಕು ಎಂದು ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ಅವರು ರಾಜ್ಯದ ಅಧಿಕಾರಿಗಳಿಗೆ ತಾಕೀತು ಮಾಡಿದರು.



ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ –ಪ್ರಜಾವಾಣಿ ಚಿತ್ರ

9, 10ನೇ ತರಗತಿಗೂ ಪಿಯು ಉಪನ್ಯಾಸಕರ ಪಾಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಕಾಲೇಜುಗಳಿಗೆ (ಪಿಯುಸಿ) ನೇರ ಮತ್ತು ಬಡ್ತಿ ಮೂಲಕ ನೇಮಕವಾಗುವ ಉಪನ್ಯಾಸಕರು 9 ಮತ್ತು 10ನೇ ತರಗತಿಗಳಿಗೂ ಪಾಠ ಮಾಡುವುದು ಕಡ್ಡಾಯವಾಗಲಿದೆ.

ಇದರ ಜಾರಿಗಾಗಿ, ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ತಿದ್ದುಪಡಿಯನ್ನು ಶಾಲಾ ಶಿಕ್ಷಣ ಇಲಾಖೆ ಪ್ರಕಟಿಸಿದ್ದು, ಆಕ್ಷೇಪಣೆ ಸಲ್ಲಿಸಲು ಜೂನ್ 24ರವರೆಗೆ ಅವಕಾಶ ನೀಡಿದೆ.

ಪ್ರಸ್ತುತ ಪ್ರೌಢಶಿಕ್ಷಣ ಮತ್ತು ಪದವಿಪೂರ್ವ ಶಿಕ್ಷಣಕ್ಕೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳಿವೆ. ಶಾಲಾ ಶಿಕ್ಷಣ ಇಲಾಖೆಯ ಆಯಾ ಜಿಲ್ಲೆಯ ಉಪ ನಿರ್ದೇಶಕರು ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಪ್ರಾಧಿಕಾರವಾಗಿದ್ದಾರೆ. ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯವು ಪದವಿಪೂರ್ವ ಶಿಕ್ಷಕರ ನೇಮಕಾತಿ ಪ್ರಾಧಿಕಾರವಾಗಿದೆ. ಪ್ರೌಢಶಾಲಾ ಶಿಕ್ಷಕರು 8ರಿಂದ 10ನೇ ತರಗತಿಯವರೆಗೆ, ಉಪನ್ಯಾಸಕರು ಪ್ರಥಮ, ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಾ ಬಂದಿದ್ದಾರೆ. ಈಗ ಪದವಿಪೂರ್ವ ಶಿಕ್ಷಣದ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿದ್ದು, ಉಪನ್ಯಾಸಕರು 9 ಮತ್ತು 10ನೇ ತರಗತಿಗಳಿಗೂ ಪಾಠ ಮಾಡಲು ಅವಕಾಶ ಕಲ್ಪಿಸಲಾಗಿದೆ. ತಿದ್ದುಪಡಿಗೆ ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಆಕ್ಷೇಪಿಸಿದೆ.

'ಪದವಿಪೂರ್ವ ಉಪನ್ಯಾಸಕರಿಗೆ 9 ಮತ್ತು 10ನೇ ತರಗತಿಗಳ ಬೋಧನೆಗೆ ಕಳುಹಿಸಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಪ್ರಸ್ತಾವ ಶೈಕ್ಷಣಿಕ ಶಿಸ್ತು, ಶ್ರೇಣಿಗಳ ವೈಜ್ಞಾನಿಕ ಗಡಿ, ಆಡಳಿತಾತ್ಮಕ ಹಕ್ಕುಗಳು, ಇಲಾಖೆಯ ಸ್ವಾಯತ್ತತೆಗೆ ಧಕ್ಕೆ ತರುತ್ತವೆ' ಎಂದು ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್. ದೂರಿದ್ದಾರೆ.

'ಗ್ರೂಪ್-ಬಿ ವೃಂದದ ಉಪನ್ಯಾಸಕರನ್ನು ಗ್ರೂಪ್-ಸಿ ದರ್ಜೆಗೆ ಇಳಿಸುವುದು ಸರ್ಕಾರದ ಸೇವಾ ನಿಯಮಗಳ ಉಲ್ಲಂಘನೆಯಾಗಿದೆ. ತಿದ್ದುಪಡಿಯ ಪ್ರಸ್ತಾವವು ಹೆಚ್ಚುವರಿ ಬೋಧನಾ ಹೊರೆ, ಉಪನ್ಯಾಸಕರ ಕಾರ್ಯನಿಷ್ಠೆಗೆ ಅಡ್ಡಿಯಾಗುತ್ತದೆ. ಕರಡು ತಿದ್ದುಪಡಿಯನ್ನು ಹಿಂಪಡೆಯಬೇಕು' ಎಂದು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಮನವಿ ಮಾಡಿದ್ದಾರೆ.

ನಿಯಮ ಪಾಲನೆ: ಎನ್‌ಎಂಡಿಸಿ

ಬಳ್ಳಾರಿ: 'ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಇರುವ ಕುಮಾರಸ್ವಾಮಿ ಕಬ್ಬಿಣದ ಅದಿರು ಗಣಿಯಲ್ಲಿ (ಕೆಐಒಎಂ) ಪರಿಸರ ನಿಯಮಾವಳಿಗಳ ಉಲ್ಲಂಘನೆಯಾಗಿಲ್ಲ' ಎಂದು ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ (ಎನ್‌ಎಂಡಿಸಿ) ಸ್ಪಷ್ಟಪಡಿಸಿದೆ.

'ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ (ಎಂಒಇಎಫ್‌ಸಿ) ನೀಡಿದ್ದ ಶೋಕಾಸ್ ನೋಟಿಸ್‌ಗೆ ಈಗಾಗಲೇ ಪೂರಕ ದಾಖಲೆಗಳೊಂದಿಗೆ ಸವಿಸ್ತಾರವಾದ ಉತ್ತರ ನೀಡಲಾಗಿದೆ' ಎಂದು ನಿಗಮ ತಿಳಿಸಿದೆ.

'ಗಣಿ ಗಡಿಯಲ್ಲಿ 7.5 ಮೀಟರ್ ಅಗಲದ ಹಸಿರು ಪಟ್ಟಿ (ಗ್ರೀನ್‌ಬೆಲ್ಟ್) ನಿರ್ಮಿಸಲಾಗಿದ್ದು, ಒಟ್ಟು 94.50 ಹೆಕ್ಟೇರ್ ಪ್ರದೇಶದಲ್ಲಿ 1,41,765 ಸಸಿಗಳನ್ನು ನೆಡಲಾಗಿದೆ. ಪ್ರತಿ ಆರ್ಥಿಕ ವರ್ಷದಲ್ಲೂ 15,150 ಸ್ಥಳೀಯ ತಳಿಗಳ ಸಸಿಗಳನ್ನು ನೆಟ್ಟು ಪರಿಸರ ಮರುಸ್ಥಾಪನೆ ಮಾಡಲಾಗುತ್ತಿದೆ. ವನ್ಯಜೀವಿ ಸಂರಕ್ಷಣಾ ಯೋಜನೆಗೆ ₹2 ಕೋಟಿ ವೆಚ್ಚದ ಯೋಜನೆಯನ್ನು 2020ರಲ್ಲೇ ಅರಣ್ಯ ಇಲಾಖೆಗೆ ಸಲ್ಲಿಸಲಾಗಿದ್ದು, ಇಲಾಖೆಯ ವಿಳಂಬದಿಂದ ಅನುಮೋದನೆ ಬಾಕಿ ಉಳಿದಿದೆ' ಎಂದು ಸ್ಪಷ್ಟಪಡಿಸಿದೆ.

ಪರಿಸರ ನಿಯಮಗಳ ಉಲ್ಲಂಘನೆ ಆಗುತ್ತಿರುವ ಬಗ್ಗೆ ಪ್ರಜಾವಾಣಿಯ ಶನಿವಾರದ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಏಳೂವರೆ ಎಕರೆ ಬೆಳೆ ನಾಶ

ಪ್ರಜಾವಾಣಿ ವಾರ್ತೆ


ಹಾವೇರಿ: ಜಿಲ್ಲೆಯ ಬಹುತೇಕ ಕಡೆ ಮಳೆಯ ಕೊರತೆ ಎದುರಾಗಿದ್ದು, ಬಿತ್ತನೆ ಮಾಡಿದ್ದ ಬೀಜಗಳು ಸಮರ್ಪಕವಾಗಿ ಮೊಳಕೆ ಒಡೆದಿಲ್ಲ. ಇದರಿಂದ ಮನನೊಂದ ರೈತರು ಮೊಳಕೆಯೊಡೆದಿರುವ ಬೆಳೆಯನ್ನು ನಾಶಪಡಿಸುತ್ತಿದ್ದಾರೆ.

ಜಿಲ್ಲೆಯ ಹಾನಗಲ್ ತಾಲ್ಲೂಕಿನ ಗುಡ್ಡದಮತ್ತಿಹಳ್ಳಿ ಗ್ರಾಮದ ರೈತರಾದ ಬಸಯ್ಯ ಹಿರೇಮಠ ಹಾಗೂ ಶಂಕರಗೌಡ ಪಾಟೀಲ ಅವರು ತಮ್ಮ ಏಳೂವರೆ ಎಕರೆ ಜಮೀನಿನಲ್ಲಿದ್ದ ಬೆಳೆಯನ್ನು ಟ್ರ್ಯಾಕ್ಟರ್ ಮೂಲಕ ಶನಿವಾರ ನಾಶಪಡಿಸಿದರು.

'ನಮ್ಮ ಊರಲ್ಲಿ ಈ ವರ್ಷ ಉತ್ತಮ ಮಳೆಯಾಗಿಲ್ಲ. ಮೇ ಅಂತ್ಯದಲ್ಲಿ ಪೂರ್ವ ಮುಂಗಾರು ಉತ್ತಮವಾಗಿತ್ತು. ಅದನ್ನು ನಂಬಿ ಮೆಕ್ಕೆಜೋಳದ ಬೀಜಗಳನ್ನು ಬಿತ್ತನೆ ಮಾಡಿದ್ದೆವು. ಆದರೆ, ಜೂನ್ ಮೊದಲ ವಾರದಿಂದ ಈ ಭಾಗದಲ್ಲಿ ಮಳೆ ಆಗಲಿಲ್ಲ. ಅಲ್ಲಲ್ಲಿ ಮಾತ್ರ ಬೀಜಗಳು ಮೊಳಕೆಯೊಡೆದಿವೆ' ಎಂದು ರೈತ ಶಂಕರಗೌಡ ಪಾಟೀಲ ತಿಳಿಸಿದರು.

'ಮಳೆಯಿಲ್ಲದೇ, ಪರಿಸ್ಥಿತಿ ಹೀಗೆ ಮುಂದುವರಿದರೆ ಬೆಳೆ ನಾಶವಾಗುತ್ತದೆ. ಬೆಳೆ ಉಳಿಸಿಕೊಳ್ಳಲು ಸುಮ್ಮನೆ ಹಣ ಖರ್ಚು ಮಾಡಿದಂತೆ, ಸಾಲಗಾರರಾಗುತ್ತೇವೆ. ಅದಕ್ಕೆ ಸದ್ಯದ ಬೆಳೆಯನ್ನು ನಾಶ ಮಾಡಿದ್ದೇವೆ' ಎಂದು ರೈತರು ತಿಳಿಸಿದರು.

ಜಿಲ್ಲೆಯಲ್ಲಿ ಜೂನ್ 1ರಿಂದ 19ರವರೆಗೆ 7.52 ಸೆಂ.ಮೀ ಮಳೆಯಾಗಬೇಕಿತ್ತು. ಕೇವಲ 3.55 ಸೆಂ.ಮೀ. ಆಗಿದೆ. ಶೇ 52.79ರಷ್ಟು ಕೊರತೆಯಾಗಿದೆ
ವಿಜಯಮಹಾಂತೇಶ ದಾನಮ್ಮನವರ, ಹಾವೇರಿ ಜಿಲ್ಲಾಧಿಕಾರಿ



ಗುಡ್ಡದಮತ್ತಿಹಳ್ಳಿ ಗ್ರಾಮದ ರೈತರು ಟ್ರ್ಯಾಕ್ಟರ್‌ನಿಂದ ಬೆಳೆ ನಾಶಪಡಿಸಿದರು

ಅಡಿಕೆ ತೋಟ ನಾಶಪಡಿಸಿದ ರೈತ

ಶಿರಸಿ: ನೀರಿನ ತೀವ್ರ ಕೊರತೆ ಜೊತೆಗೆ ಬೆಳೆ ಒಣಗುತ್ತಿರುವ ಪರಿಣಾಮ ಬೇಸರಗೊಂಡು ತಾಲ್ಲೂಕಿನ ದನಗನ ಹಳ್ಳಿಯ ರೈತ ರಾಕೇಶ ಅಗಸರ ಎಂಬುವರು ಶನಿವಾರ ಎರಡು ಎಕರೆ ಅಡಿಕೆ ತೋಟವನ್ನು, ಜೆಸಿಬಿ ವಾಹನದ ಮೂಲಕ ನಾಶಪಡಿಸಿದ್ದಾರೆ.

'ತೋಟಕ್ಕೆ ನೀರಿನ ಕೊರತೆ ಆಗದಿರಲಿಯೆಂದು ಆರು ಕೊಳವೆಬಾವಿ ಕೊರೆಸಿದ್ದೆ. ಅದರಲ್ಲಿ ಐದು ಕೊಳವೆಬಾವಿಗಳು ವಿಫಲವಾದವು. ಅಂತರ್ಜಲ ಮಟ್ಟ ಕುಸಿದು, ಇದ್ದ ಒಂದು ಕೊಳವೆಬಾವಿಯೂ ಬತ್ತಿತು. ಮಕ್ಕಳಂತೆ ಬೆಳೆಸಿದ್ದ ಅಡಿಕೆ ಗಿಡಗಳು ಒಣಗ ತೊಡಗಿದವು. ಅವುಗಳನ್ನು ನೋಡಲು ಆಗಲಿಲ್ಲ. ಅದಕ್ಕೆ ನಾನೇ ಜೆಸಿಬಿ ವಾಹನದ ಮೂಲಕ 800 ಅಡಿಕೆ ಗಿಡಗಳನ್ನು ನಾಶಪಡಿಸಿದೆ' ಎಂದು ರೈತ ರಾಕೇಶ ಅಗಸರ ತಿಳಿಸಿದರು.



ಶಿರಸಿಯ ದನಗನಹಳ್ಳಿಯ ರಾಕೇಶ ಅಗಸರ ಅವರು ಜೆಸಿಬಿ ವಾಹನ ಬಳಸಿ ಅಡಿಕೆ ಗಿಡಗಳನ್ನು ನಾಶಪಡಿಸಿದರು

ಶೇ 37ರಷ್ಟು ಮಳೆ ಕೊರತೆ

ಮುಂಗಾರು ಮಂದಗತಿ • ಕರಾವಳಿ, ಮಲೆನಾಡಿನಲ್ಲಿ ತೀವ್ರ ಆತಂಕ

• ಹರಿಶಂಕರ್ ಆರ್.

ಬಳ್ಳಾರಿ: ರಾಜ್ಯದಲ್ಲಿ ಪ್ರಸಕ್ತ ಸಾಲಿನ ಮುಂಗಾರು ಮಳೆ ಆರಂಭದಲ್ಲೇ ಮಂದಗತಿ ಪಡೆದಿದೆ. ಜೂನ್ ತಿಂಗಳ ಮೊದಲಾರ್ಧದಲ್ಲಿ ತೀವ್ರ ಮಳೆ ಕೊರತೆ ಎದುರಾಗಿದೆ. ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಜೂನ್ 19ರವರೆಗಿನ ಅಂಕಿ-ಅಂಶಗಳ ಪ್ರಕಾರ, ರಾಜ್ಯದಲ್ಲಿ ಸರಾಸರಿ ಶೇ 37 ರಷ್ಟು ಮಳೆ ಕೊರತೆ ದಾಖಲಾಗಿದೆ.

ವಾಡಿಕೆಯಂತೆ ಜೂನ್ 1 ರಿಂದ ಜೂನ್ 19 ರ ಅವಧಿಯಲ್ಲಿ ರಾಜ್ಯದಲ್ಲಿ 11.63 ಸೆಂ.ಮೀ ಮಳೆಯಾಗಬೇಕಿತ್ತು. ಆದರೆ, 7.30 ಸೆಂ.ಮೀ ಮಳೆಯಷ್ಟೇ ದಾಖಲಾಗಿದೆ. ಇದು ಕೃಷಿ ಚಟುವಟಿಕೆಗಳ ಮೇಲೆಯೂ ತೀವ್ರ ಪರಿಣಾಮ ಬೀರುವ ಆತಂಕ ಮೂಡಿಸಿದೆ.


ತೀವ್ರ ಮಳೆ ಕೊರತೆ ಜಿಲ್ಲೆಗಳು: ರಾಜ್ಯದ ಒಟ್ಟು 31 ಜಿಲ್ಲೆಗಳ ಪೈಕಿ ದಕ್ಷಿಣ ಒಳನಾಡಿನ ಮೂರು, ಉತ್ತರ ಒಳನಾಡಿನ ಐದು, ಮಲೆನಾಡಿನ ನಾಲ್ಕು, ಕರಾವಳಿಯ ಮೂರು ಜಿಲ್ಲೆಗಳು ಸೇರಿ ಒಟ್ಟು 15 ಜಿಲ್ಲೆಗಳಲ್ಲಿ ತೀವ್ರ ಮಳೆ ಕೊರತೆ ಎದುರಾಗಿದೆ.

ಬರ ಎದುರಿಸುತ್ತಿರುವ ತಾಲ್ಲೂಕು: ಬೀದರ್ ವಲಯದಲ್ಲಿ ಹುಮನಾಬಾದ್ (ಶೇ -93), ಚಿಟಗುಪ್ಪ (ಶೇ -90), ಬೀದರ್ (ಶೇ -79), ಭಾಲ್ಕಿ (ಶೇ -65), ಮಲೆನಾಡು ವಲಯದಲ್ಲಿ ತೀರ್ಥಹಳ್ಳಿ (ಶೇ -73), ಹೊಸನಗರ (ಶೇ -61), ಸೊರಬ (ಶೇ -66), ಕರಾವಳಿ ವಲಯದಲ್ಲಿ ಹೆಬ್ರಿ (ಶೇ -62), ಅಂಕೋಲಾ (ಶೇ -67), ಕಾರವಾರ (ಶೇ -62), ಮೂಡಬಿದಿರೆ (ಶೇ -60) ಬರ ಪರಿಸ್ಥಿತಿ ಇದೆ. ದಾವಣಗೆರೆ (ಶೇ -65), ಚನ್ನಗಿರಿ (ಶೇ -74), ಹಗರಿಬೊಮ್ಮನಹಳ್ಳಿ (ಶೇ -52), ಸಂಡೂರು (ಶೇ -74), ಗಂಗಾವತಿ (ಶೇ -75) ತಾಲ್ಲೂಕುಗಳಲ್ಲಿ ಮುಂಗಾರು ಮಳೆ ಕೊರತೆಯಾಗಿದೆ.

ಮಳೆ ಕೊರತೆ ಜಿಲ್ಲೆಗಳು (ಶೇ)

ಜಿಲ್ಲೆ	ಕೊರತೆ
ಬೀದರ್	67
ಶಿವಮೊಗ್ಗ	62
ಉತ್ತರ ಕನ್ನಡ	62
ದಾವಣಗೆರೆ	56
ದಕ್ಷಿಣ ಕನ್ನಡ	54
ಉಡುಪಿ	53
ಕೊಡಗು	51
ಚಿಕ್ಕಮಗಳೂರು	51
ಕಲಬುರಗಿ	46
ಮೈಸೂರು	42

ದೇಶದಲ್ಲಿ ಈ ಬಾರಿ ಶೇ 40ರಷ್ಟು ಮಳೆ ಕೊರತೆ ಆಗಲಿದೆ ಎಂದು ಹವಾಮಾನ ತಜ್ಞರು ವರದಿ ನೀಡಿದ್ದಾರೆ. ರಾಜ್ಯದಲ್ಲೂ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಆಗಬಹುದು. ರಾಜ್ಯ ಸರ್ಕಾರ 15 ದಿನಗಳಲ್ಲಿ ಕ್ರಮ ಕೈಗೊಳ್ಳಬೇಕು. ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಎಲ್ಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಬೇಕು.
ಪ್ರಹ್ಲಾದ ಜೋಶಿ, ಕೇಂದ್ರ ಸಚಿವ



ಬಳ್ಳಾರಿ ಹೊರ ವಲಯದ ಸಂಗನಕಲ್ಲು ಗ್ರಾಮದಲ್ಲಿ ಭೂಮಿ ಹದಗೊಂಡಿದ್ದರೂ, ಬಿತ್ತನೆ ಇಲ್ಲದೇ ಬಣಗುಡುತ್ತಿದೆ

ಆರಂಭದಲ್ಲಿ ಮಳೆ ಚೆನ್ನಾಗಿ ಬಂತು. ಅದನ್ನು ನಂಬಿ ಜಮೀನು ಹದ ಮಾಡಿದೆವು. ಈಗ ಮಳೆಯೇ ಬಾರದು. ಅತ್ತ ತುಂಗಭದ್ರಾ ಜಲಾಶಯವೂ ಬರಿದಾಗಿದೆ. ಮುಂದಿನ ದಿನಗಳ ಪರಿಸ್ಥಿತಿ ತಿಳಿಯುತ್ತಿಲ್ಲ
ಗಾದಿಲಿಂಗಪ್ಪ, ರೈತ, ಸಂಗನಕಲ್ಲು, ಬಳ್ಳಾರಿ

ಆರಂಭಿಕ ಮಳೆ ನಂಬಿ ಒಂದಷ್ಟು ರೈತರು ಬಿತ್ತನೆ ಮಾಡಿದ್ದಾರೆ. ಆ ಬೆಳೆ ರಕ್ಷಣೆಗೆ ಮಳೆ ಬೇಕು. ಇನ್ನು 10 ದಿನ ಮಳೆ ಆಗದಿದ್ದರೆ ತೊಂದರೆಯಾಗಲಿದೆ. ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಮುನ್ಸೂಚನೆಯಿದೆ
ಸೋಮಸುಂದರ್, ಜಂಟಿ ನಿರ್ದೇಶಕ, ಕೃಷಿ ಇಲಾಖೆ, ಬಳ್ಳಾರಿ

ಪ್ರದೇಶವಾರು ಮಳೆ ಚಿತ್ರಣ

ಪ್ರದೇಶ	ಕೊರತೆ (ಶೇಕಡವಾರು)	ವಾಡಿಕೆ (ಸೆಂ.ಮೀ.)	ಮಳೆ ಪ್ರಮಾಣ
ಕರಾವಳಿ ಕರ್ನಾಟಕ	57	45.40	19.39
ಮಲೆನಾಡು ಪ್ರದೇಶ	52	19.29	9.19
ಉತ್ತರ ಒಳನಾಡು	19	6.52	5.28
ದಕ್ಷಿಣ ಒಳನಾಡು	4	4.90	4.73

ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಉಪ ಲೋಕಾಯುಕ್ತರ ಭೇಟಿ

ಲ್ಯಾಬ್ ಟೆಕ್ನಿಶಿಯನ್ ಬಳಿ ₹9 ಲಕ್ಷ ಪತ್ತೆ

ಪ್ರಜಾವಾಣಿ ವಾರ್ತೆ

ಬೀದರ್: ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರು ನಗರದ ಬೀದರ್ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ಬ್ರಿಮ್ಸ್) ಶನಿವಾರ ಹಠಾತ್ ಭೇಟಿ ನೀಡಿದ ಸಂದರ್ಭದಲ್ಲಿ ಲ್ಯಾಬ್ ಟೆಕ್ನಿಶಿಯನ್ ಸಂಜುಕುಮಾರ್ ಬುಯ್ಯಾ ಅವರ ಬ್ಯಾಗಿನಲ್ಲಿ ₹90 ಸಾವಿರ ನಗದು ಹಾಗೂ ವಿವಿಧ ಮೊತ್ತದ ಚೆಕ್‌ಗಳು ಸೇರಿದಂತೆ ಒಟ್ಟು ₹9 ಲಕ್ಷ ಹಾಗೂ ಹಲವು ಎಟಿಎಂ ಕಾರ್ಡ್‌ಗಳು ಪತ್ತೆಯಾಗಿವೆ.

'ಇಷ್ಟೊಂದು ಹಣ ಇಲ್ಲಿಗೆ ಹೇಗೆ ಬಂತು. ಇದನ್ನು ಯಾರು ಕೊಟ್ಟಿದ್ದಾರೆ' ಎಂದು ಉಪ ಲೋಕಾಯುಕ್ತರು ಪ್ರಶ್ನಿಸಿದಾಗ ಸಂಜುಕುಮಾರ್ ಉತ್ತರಿಸಲು ತಡಬಡಾಯಿಸಿದರು. 'ನಾನು ನಿವೇಶನಗಳನ್ನು ಮಾರಾಟ ಮಾಡಿಸುತ್ತೇನೆ. ಅದರಿಂದ ಬಂದ ಹಣ ಇದಾಗಿದೆ' ಎಂದು ಹೇಳಿದರು. ಇದಕ್ಕೆ ವೀರಪ್ಪ ಅವರು, 'ಸೇಲ್ ಡೀಡ್ ಇದ್ದರೆ ತೋರಿಸಿ' ಎಂದರು. ಅದಕ್ಕೆ ಸಂಜುಕುಮಾರ್ ಪ್ರತಿಕ್ರಿಯಿಸಲಿಲ್ಲ. ಇದರಿಂದ ತೀವ್ರ ಅಸಮಾಧಾನಗೊಂಡ ನ್ಯಾಯಮೂರ್ತಿ, ಬ್ರಿಮ್ಸ್ ನಿರ್ದೇಶಕಿ ಡಾ.ಶಾಂತಲಾ ಕೌಜಲಗಿ, ವೈದ್ಯಕೀಯ ಅಧೀಕ್ಷಕ ಡಾ.ಶಿವಯೋಗಿ ಬಾಳಿ ಅವರನ್ನು ತರಾಟೆಗೆ ತೆಗೆದುಕೊಂಡರು.

ಆಸ್ಪತ್ರೆಯಂಥ ಸಾರ್ವಜನಿಕ ಸ್ಥಳಗಳಲ್ಲಿ ಈ ರೀತಿ ಹಣ ಪತ್ತೆಯಾಗಿರುವುದು ಅನುಮಾನಗಳಿಗೆ ಕಾರಣವಾಗಿದೆ. ಇದರ ಸಂಪೂರ್ಣ ತನಿಖೆ ನಡೆಸಿ ಮಾಹಿತಿ ನೀಡಬೇಕು. ಪತ್ತೆಯಾದ ನಗದು ಹಾಗೂ ಚೆಕ್ ಜಪ್ತಿ ಮಾಡಬೇಕು ಎಂದು ಸೂಚಿಸಿದರು. ಬಳಿಕ ಸ್ವಯಂಪ್ರೇರಿತ ಕ್ರಿಮಿನಲ್ ಪ್ರಕರಣ ದಾಖಲಿಸಿ, ಸಂಜುಕುಮಾರ್ ಅವರನ್ನು ವಶಕ್ಕೆ ಪಡೆಯಲಾಯಿತು.

ವಾರ್ಡ್‌ನಲ್ಲಿ ರೋಗಿಗಳ ಹಾಸಿಗೆಗಳು, ದಿಂಬು ಹರಿದು ಹೋಗಿರುವುದನ್ನು ಕಂಡು ಉಪ ಲೋಕಾಯುಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.



ಬೀದರ್‌ನ ಬ್ರಿಮ್ಸ್‌ಗೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರು ಶನಿವಾರ ಭೇಟಿ ನೀಡಿದ ಸಂದರ್ಭದಲ್ಲಿ ಲ್ಯಾಬ್ ಟೆಕ್ನಿಶಿಯನ್ ಬಳಿ ₹90 ಸಾವಿರ ನಗದು ಪತ್ತೆಯಾಯಿತು

ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಆರೋಪ

ಶಿಕ್ಷಕ, ಮುಖ್ಯ ಶಿಕ್ಷಕ ಬಂಧನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ದೂರು ದಾಖಲಿಸದ ಮುಖ್ಯ ಶಿಕ್ಷಕ
- ಆರೋಪಿಗಳಾದ ಶಿಕ್ಷಕ, ಮುಖ್ಯಶಿಕ್ಷಕ ಅಮಾನತು

ಕಡೂರು: ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿ, ಅವರ ಬಳಿ ಇದ್ದ ಪೋಷಕರ ಮೊಬೈಲ್‌ಗೆ ಅಶ್ಲೀಲ ವಿಡಿಯೊಗಳನ್ನು ಕಳುಹಿಸಿದ್ದ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕನ ವಿರುದ್ಧ ಪೋಕ್ಸೊ (ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಆರೋಪಿ ಶಿಕ್ಷಕ ಹಾಗೂ ಪ್ರಕರಣದ ಬಗ್ಗೆ ಗೊತ್ತಿದ್ದರೂ ದೂರು ದಾಖಲಿಸದ ಮುಖ್ಯಶಿಕ್ಷಕನನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಲೈಂಗಿಕ ಕಿರುಕುಳಕ್ಕೆ ಒಳಗಾದ ವಿದ್ಯಾರ್ಥಿನಿಯರ ಪೋಷಕರಿಂದ ಹೇಳಿಕೆ ಪಡೆದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಮಂಜುನಾಥ್ ಮತ್ತು ಸಿಡಿಪಿಒ ಕಚೇರಿ ಮೇಲ್ವಿಚಾರಕಿ ತಿಮ್ಮಮ್ಮ ಅವರು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ತಿಮ್ಮಯ್ಯನವರಿಗೆ ವರದಿ ನೀಡಿದ್ದರು. ತಿಮ್ಮಯ್ಯ ಶುಕ್ರವಾರ ದೂರು ನೀಡಿದ್ದು, ಶಿಕ್ಷಕನ ವಿರುದ್ಧ ಪೋಕ್ಸೊ, ಜಾತಿ ನಿಂದನೆ, ಮಾಹಿತಿ- ತಂತ್ರಜ್ಞಾನ ದುರ್ಬಳಕೆ ಹಾಗೂ ಮುಖ್ಯಶಿಕ್ಷಕನ ವಿರುದ್ಧ ಪೋಕ್ಸೊ, ಜಾತಿ ನಿಂದನೆ ಆರೋಪಗಳಡಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಶಾಲೆಯ ಶಿಕ್ಷಕ ಮತ್ತು ಮುಖ್ಯ ಶಿಕ್ಷಕನನ್ನು ಅಮಾನತು ಮಾಡಲಾಗಿದೆ.

ಲೈಂಗಿಕ ಕಿರುಕುಳದ ವಿಷಯ ತಿಳಿದ ಪೋಷಕರು ಗುರುವಾರ ಶಾಲೆಗೆ ತೆರಳಿ ಶಿಕ್ಷಕನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಗುರುವಾರದಿಂದ ಗೈರಾಗಿರುವ ಆರೋಪಿ ಶಿಕ್ಷಕನನ್ನು ಶಾಲೆಗೆ ಕರೆಸುವಂತೆ ಒತ್ತಾಯಿಸಿದ್ದರು. ಎಸ್‌ಡಿಎಂಸಿ ಸಭೆಯಲ್ಲಿ ಈ ವಿಚಾರ ಚರ್ಚೆಯಾಗಿದ್ದರೂ, ಶಿಕ್ಷಕನ ವಿರುದ್ಧ ಕ್ರಮವಹಿಸುವ ತೀರ್ಮಾನ ಕೈಗೊಂಡಿರಲಿಲ್ಲ. ಮುಖ್ಯ ಶಿಕ್ಷಕನೂ ಈ ಬಗ್ಗೆ ಪೊಲೀಸರಿಗಾಗಲೀ, ಇಲಾಖೆಯ ಅಧಿಕಾರಿಗಳಿಗಾಗಲೀ ದೂರು ನೀಡಿರಲಿಲ್ಲ. ಮಕ್ಕಳ ಸಹಾಯವಾಣಿಗೆ (1098) ಗ್ರಾಮಸ್ಥರೇ ಮಾಹಿತಿ ನೀಡಿದ್ದರು.

'ಆರೋಪಿ ಶಿಕ್ಷಕ ತರಗತಿಯ ವಿದ್ಯಾರ್ಥಿನಿಯೊಬ್ಬಳಿಗೆ ಮನೆಯಿಂದ ಮೊಬೈಲ್ ತರುವಂತೆ ತಿಳಿಸಿದ್ದ. ಬಾಲಕಿ ತಂದ ಮೊಬೈಲ್‌ಗೆ ಅಶ್ಲೀಲ ವಿಡಿಯೊಗಳನ್ನು ಕಳುಹಿಸಿದ್ದ. 'ಒಳಉಡುಪು ಧರಿಸಿದ್ದೀಯಾ' ಎಂದು ವಿದ್ಯಾರ್ಥಿನಿಯನ್ನು ಪರೀಕ್ಷಿಸಿ ಕಿರುಕುಳ ನೀಡಿದ್ದ. 'ಶಾಲೆಗೆ ಹೋಗುವುದಿಲ್ಲ' ಎಂದು ಬಾಲಕಿಯು ಹಟ ಮಾಡಿದ್ದರಿಂದ ಪ್ರಕರಣ ಬೆಳಕಿಗೆ ಬಂದಿತ್ತು. ಇನ್ನಿಬ್ಬರು ವಿದ್ಯಾರ್ಥಿನಿಯರಿಗೆ ಅಶ್ಲೀಲ ಚಿತ್ರಗಳನ್ನು ತೋರಿಸಿದ್ದ ಶಿಕ್ಷಕ ಯಾರಿಗೂ ವಿಷಯ ತಿಳಿಸದಂತೆ ಆಣೆ ಹಾಕಿಸಿ ಹೆದರಿಸಿದ್ದು ಬಳಿಕ ಗೊತ್ತಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತರೀಕೆರೆ ಡಿವೈಎಸ್ಪಿ ಪರಶುರಾಮಪ್ಪ, ಸ್ಥಳೀಯ ಸಿಪಿಐ ಹಾಲಪ್ಪ, ಪಿಎಸ್‌ಐ ಶಾಹಿದ್ ಅಫ್ರಿದಿ, ಕಡೂರು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ತಿಮ್ಮಯ್ಯ ಸ್ಥಳಕ್ಕೆ ಭೇಟಿ ನೀಡಿ ಪೋಷಕರ ಸಭೆ ನಡೆಸಿದ್ದರು.

ದಸರಾದಲ್ಲಿ ಈ ಬಾರಿ 'ಕಂಬಳ'

ಮೈಸೂರು: ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಕರಾವಳಿ ಕ್ರೀಡೆ ಕಂಬಳ ಆಯೋಜಿಸಲಾಗುತ್ತಿದೆ. ಅದಕ್ಕಾಗಿ ಮೂರು ತಿಂಗಳ ಮುಂಚಿತವಾಗಿ ತಯಾರಿ ಆರಂಭಿಸಲಾಗಿದೆ.

ಕಳೆದ ವರ್ಷವೇ ಕಂಬಳ ಆಯೋಜಿಸಲು ಉದ್ದೇಶಿಸಲಾಗಿತ್ತು. ಸರಿಯಾದ ಸ್ಥಳ ದೊರಕದಿದ್ದರಿಂದ ಸಾಧ್ಯವಾಗಿರಲಿಲ್ಲ. ಈ ಬಾರಿ ಮೈಸೂರಿನ ಮೂರು ಕಡೆ ಜಾಗ ಗುರುತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತರೆಡ್ಡಿ ಶನಿವಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪೂರ್ವಸಿದ್ಧತಾ ಸಭೆಯಲ್ಲಿ ಮಾಹಿತಿ ನೀಡಿದರು.

ಮೈಸೂರಿನ ವಿಜಯನಗರ ಮೊದಲನೇ ಹಂತ, ವಿಜಯನಗರ 4ನೇ ಹಂತ ಹಾಗೂ ಸಾತಗಳ್ಳಿಯ ವರ್ತುಲ ರಸ್ತೆಯ ಬಳಿ ಸ್ಥಳ ಗುರುತಿಸಲಾಗಿದೆ. ಇದರಲ್ಲಿ ಒಂದು ಸ್ಥಳವನ್ನು ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

'ಕಂಬಳಕ್ಕೆ ಕನಿಷ್ಠ ಏಳು ಎಕರೆ ಜಾಗ ಬೇಕಿದೆ. ಪಾರ್ಕಿಂಗ್, ವೀಕ್ಷಕರ ಗ್ಯಾಲರಿ, ಕೋಣ ಹಾಗೂ ಆಯೋಜಕರು ಉಳಿದುಕೊಳ್ಳಲು ಬೇಕಾದಷ್ಟು ಸ್ಥಳ ಲಭ್ಯವಿದೆಯೇ ಎಂದು ಪರಿಶೀಲಿಸಿ ಜಾಗ ಆಯ್ಕೆ ಮಾಡಲಾಗುವುದು. ಕಂಬಳ ಉಪ ಸಮಿತಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನೋಡಲ್ ಅಧಿಕಾರಿ ಆಗಿರುತ್ತಾರೆ' ಎಂದರು.

ಎಂಇಎಸ್ ಕ್ಯಾತೆ: ಮಹಾರಾಷ್ಟ್ರದಲ್ಲಿ 24 ಮಂದಿ ವಶಕ್ಕೆ

ಬೆಳಗಾವಿ: ಕರ್ನಾಟಕ- ಮಹಾರಾಷ್ಟ್ರ ಗಡಿ ವಿವಾದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಲು ತೆರಳಿದ್ದ, ಬೆಳಗಾವಿಯ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) 24 ಮುಖಂಡರನ್ನು ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಪೊಲೀಸರು ವಶಕ್ಕೆ ಪಡೆದರು.

ಕೊಲ್ಹಾಪುರದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದ ಅಮಿತ್ ಶಾ ಅವರನ್ನು ಭೇಟಿಯಾಗಲು ಶನಿವಾರ ಬೆಳಿಗ್ಗೆ ಕಾರುಗಳಲ್ಲಿ ಹೊರಟಿದ್ದ 20 ಮುಖಂಡರನ್ನು ಪೊಲೀಸರು ಹುಕ್ಕೇರಿ ತಾಲ್ಲೂಕಿನ ಹತ್ತರಗಿ ಟೋಲ್‌ಗೇಟ್‌ನಲ್ಲೇ ತಡೆದರು. ಇದರ ನಂತರವೂ 24 ಎಂಇಎಸ್ ಕಾರ್ಯಕರ್ತರು ಬಸ್‌ಗಳ ಮೂಲಕ ಕೊಲ್ಹಾಪುರ ತಲುಪಿದರು. ಆದರೆ, ಅಲ್ಲಿಯೂ ಪೊಲೀಸರು ಅಮಿತ್ ಶಾ ಭೇಟಿಗೆ ಅವಕಾಶ ಕೊಡಲಿಲ್ಲ. ಕರ್ನಾಟಕ ವಿರೋಧ ಘೋಷಣೆ ಮೊಳಗಿಸಿದರು. ಅವರನ್ನು ಪೊಲೀಸರು ವಶಕ್ಕೆ ಪಡೆದರು.

'ಬೆಳಗಾವಿಯಲ್ಲಿ ಕನ್ನಡ ಕಡ್ಡಾಯ ಮಾಡಬಾರದು ಎಂದು ಆಗ್ರಹಿಸಿ, ಎಂಇಎಸ್ ನಾಯಕರು ಜೂನ್ 22ರಂದು ನಡೆಸಲು ಉದ್ದೇಶಿಸಿದ್ದ ರ‍್ಯಾಲಿಗೂ ಅನುಮತಿ ನೀಡಿಲ್ಲ' ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದ್ದಾರೆ.

ಪಡಿತರಕ್ಕೆ 'ಜಾತಿ' ಜೋಡಣೆ: ಸಚಿವ ಜೋಶಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಸರ್ಕಾರವು ಪಡಿತರಕ್ಕೆ ಜಾತಿ ಪ್ರಮಾಣ ಪತ್ರ ಜೋಡಣೆ ಮಾಡುವುದು ಕಾನೂನುಬಾಹಿರ ಕ್ರಮವಾಗಿದ್ದು, ಈ ಬಗ್ಗೆ ಮಾಹಿತಿ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಆಹಾರ ಭದ್ರತೆ ಒದಗಿಸುವಾಗ ಯಾವುದೇ ಜಾತಿ ಜೋಡಣೆ ಮಾಡಲು ಸಾಧ್ಯವಿಲ್ಲ ಎಂದಿರುವ ಸಚಿವರು, ಪಡಿತರಕ್ಕೆ ಜಾತಿ ಪ್ರಮಾಣ ಪತ್ರ ಕಡ್ಡಾಯಗೊಳಿಸಿರುವ ರಾಜ್ಯ ಸರ್ಕಾರದಿಂದ ಸ್ಪಷ್ಟನೆ ಕೇಳಿದ್ದಾರೆ.

ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ ಅಡಿ (ಪಿಎಂಜಿಕೆಎವೈ) ಪಡಿತರ ಪಡೆಯುವ ಫಲಾನುಭವಿಗಳಿಂದ ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ಕೇಳುತ್ತಿರುವ ಬಗ್ಗೆ ಅವರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅರ್ಹ ಫಲಾನುಭವಿಗಳಿಗೆ ಅವರ ಆರ್ಥಿಕ ಸ್ಥಿತಿ ಮತ್ತು ಅರ್ಹತೆ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ ಆಹಾರ ಧಾನ್ಯ ಒದಗಿಸಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಆಧಾರ್, ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆಗಳ ಯಶಸ್ವಿ ಏಕೀಕರಣದ ಹೊರತಾಗಿಯೂ ಜಾತಿ ಪ್ರಮಾಣ ಪತ್ರ ಕಡ್ಡಾಯಗೊಳಿಸುವುದರ ಹಿಂದಿನ ಉದ್ದೇಶವೇನು? ಎಂದು ಅವರು ಪ್ರಶ್ನಿಸಿದ್ದಾರೆ.

ದೇಶದ ಯಾವುದೇ ಭಾಗದಲ್ಲಿ ಅರ್ಹ ಫಲಾನುಭವಿಗಳಿಗೆ ಸಬ್ಸಿಡಿ ಆಹಾರ ಧಾನ್ಯ ಸುಲಭವಾಗಿ ಲಭ್ಯವಾಗುವಂತೆ ಮಾಡಲು ಕೇಂದ್ರ ಸರ್ಕಾರ ಒಂದು ರಾಷ್ಟ್ರ- ಒಂದು ಪಡಿತರ ಚೀಟಿ' ಉಪಕ್ರಮವನ್ನು ಪರಿಚಯಿಸಿದೆ. ಹೀಗಿರುವಾಗ ಸ್ಥಳೀಯವಾಗಿ ಸಲ್ಲದ ನೀತಿ ನಿಯಮ ಹೇರುವುದು ಕಡುಬಡವರು ಪಡಿತರ ಪಡೆಯುವ ಆಶಯಕ್ಕೆ ವಿರುದ್ಧ ಎಂದು ಅವರು ಹೇಳಿದ್ದಾರೆ.

ವಾಸ ಸ್ಥಳ ಪ್ರಮಾಣಪತ್ರ: ಪಿಡಿಒಗಳಿಗೆ ಅಧಿಕಾರ

ಬೆಂಗಳೂರು: ಗ್ರಾಮೀಣ ಜನರಿಗೆ ತುರ್ತು ಸಂದರ್ಭಗಳಲ್ಲಿ ತಕ್ಷಣವೇ 'ವಾಸ ಸ್ಥಳ ಪ್ರಮಾಣಪತ್ರ' ಸಿಗುವಂತೆ ಮಾಡಲು, ವಾಸ ಸ್ಥಳ ದೃಢೀಕರಣ ಪತ್ರ ನೀಡುವ ಜವಾಬ್ದಾರಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ (ಪಿಡಿಒ) ನೀಡಲಾಗಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆ-ಯಲ್ಲಿ ಇದೇ 13ರಂದು ನಡೆದ ಸಭೆಯ ನಿರ್ದೇಶನದಂತೆ ಗ್ರಾಮೀಣಾಭಿ ವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಈ ಕ್ರಮ ತೆಗೆದುಕೊಂಡಿದೆ.

ಸರ್ಕಾರದ ಈ ಕ್ರಮದಿಂದ ಗ್ರಾಮೀಣ ಜನರಿಗೆ ಸುಲಭವಾಗಿ ವಾಸ ಸ್ಥಳ ಪ್ರಮಾಣಪತ್ರ ದೊರೆಯಲಿದೆ. ಸ್ಥಳೀಯವಾಗಿ ಬಾಪೂಜಿ ಸೇವಾ ಕೇಂದ್ರಗಳ ಮೂಲಕ ಪ್ರಮಾಣಪತ್ರ ಪಡೆಯಲು ಸಾಧ್ಯವಾಗಲಿದೆ.

ಅಟಲ್ ಜೀ ಜನಸ್ನೇಹಿ ಕೇಂದ್ರದ ತಂತ್ರಾಂಶ ಬಳಸಿ ಕೊಂಡು ಗ್ರಾಮ ಪಂಚಾಯತಿ ವ್ಯಾಪ್ತಿಯ ಅರ್ಹ ನಿವಾಸಿಗಳಿಗೆ ಒಂದು ಬಾರಿಗೆ ಅಭಿಯಾನ ಮಾದರಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಪ್ರಮಾಣಪತ್ರ ನೀಡಲಾಗುವುದು. ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಶಾಸಕರಿಗೆ ₹50 ಕೋಟಿ ಆಮಿಷ'

ಬೇರೆ ಪಕ್ಷಕ್ಕೆ ಹೋಗುವುದಾದರೆ ಈಗಲೇ ಹೋಗಿ : ಶಾಸಕರಿಗೆ ಎಚ್‌ಡಿಕೆ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದರೆ ಒಬ್ಬೊಬ್ಬರ ಕಿಸೆಗೆ ₹50 ಕೋಟಿ ಮತ್ತು ಅವರ ಕ್ಷೇತ್ರಕ್ಕೆ ₹100 ಕೋಟಿ ಅನುದಾನ ಕೊಡುವ ಆಮಿಷ ಒಡ್ಡಿರುವುದು ಕೆಲಸ ಮಾಡಿದೆ' ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆರೋಪಿಸಿದರು.

ಪಕ್ಷದ ಶಾಸಕರ ಜತೆಗೆ ಶನಿವಾರ ಸಭೆ ನಡೆಸಿದ ನಂತರ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ಮೂರು ವರ್ಷಗಳಿಂದ ನಮ್ಮ ಶಾಸಕರ ಕ್ಷೇತ್ರಗಳಲ್ಲಿ ಸರಿಯಾಗಿ ಕೆಲಸ ಆಗುತ್ತಿಲ್ಲ. ಕಾರ್ಯಕರ್ತರು ಮತ್ತು ಸಾರ್ವಜನಿಕರಿಗೆ ಮುಖ ತೋರಿಸುವುದು ಕಷ್ಟವಾಗುತ್ತಿದೆ ಎಂದು ಶಾಸಕರು ಹೇಳುತ್ತಿದ್ದಾರೆ. ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರದ್ದೂ ಇದೇ ಸ್ಥಿತಿ. ಇದನ್ನು ದುರುಪಯೋಗ ಮಾಡಿಕೊಂಡು ಆಮಿಷ ಒಡ್ಡಲಾಗಿದೆ' ಎಂದು ಆಪಾದಿಸಿದರು.

'ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ಬೇರೆಡೆ ಹೋದರೆ ಅನುಕೂಲವಾಗು-ತ್ತದೆ ಮತ್ತು ಭವಿಷ್ಯ ಇದೆ ಎಂಬ ಭಾವನೆ ಇದ್ದರೆ, ಈಗಲೇ ಪಕ್ಷ ಬಿಟ್ಟುಹೋಗಿ. ಅಡ್ಡ ಮತದಾನ ಮಾಡಿ ಪಕ್ಷದ ವರ್ಚಸ್ಸಿಗೆ ಧಕ್ಕೆ ತರಬೇಡಿ ಎಂದು ತಾಕೀತು ಮಾಡಿದ್ದೇನೆ. ಮೈಸೂರಿನ ಶಾಸಕರೊಬ್ಬರು ಬಿಟ್ಟು ಉಳಿದವರೆಲ್ಲರೂ ಸಭೆಗೆ ಬಂದಿದ್ದರು' ಎಂದು ಮಾಹಿತಿ ನೀಡಿದರು.



> ಅಡ್ಡ ಮತದಾನದ ವಿಷಯ ಇರಿಸಿಕೊಂಡು ಬಿಜೆಪಿ–ಜೆಡಿಎಸ್ ಮೈತ್ರಿಯಲ್ಲಿ ಬಿರುಕು ಮೂಡಿಸಲು ಸಾಧ್ಯವಿಲ್ಲ. 2028ರ ಚುನಾವಣೆಯನ್ನು ಮೈತ್ರಿ ಮೂಲಕವೇ ಎದುರಿಸಲಿದ್ದೇವೆ
> **ಎಚ್‌.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

'20 ವರ್ಷಗಳಿಂದ ಪಕ್ಷದ ನೇತೃತ್ವ ವಹಿಸಿದ್ದೇನೆ. ಚುನಾವಣೆಯಲ್ಲಿ ಏನಾಗುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲವೇ? ನನಗೆ ಏನೂ ಗೊತ್ತಿಲ್ಲದೆ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುತ್ತೇನಾ? ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಜತೆಗೆ ಚರ್ಚಿಸಿಯೇ ಅಭ್ಯರ್ಥಿ ಹಾಕಿದೆವು. ನಮ್ಮ ಶಾಸಕರು ಎಷ್ಟು ಗಟ್ಟಿಯಾಗಿ, ದೃಢವಾಗಿ ನಿರ್ಧಾರ ತೆಗೆದು ಕೊಳ್ಳುತ್ತಾರೆ ಎಂಬುದನ್ನು ಪರೀಕ್ಷೆ ಮಾಡಲು ನಾನು ಅಭ್ಯರ್ಥಿಯನ್ನು ಹಾಕಬೇಕಾಯಿತು. ಆದರೆ, ಕೆಲ ಶಾಸಕರು ಪಕ್ಷದ ಜೊತೆ ಗಟ್ಟಿಯಾಗಿ ನಿಲ್ಲದೆ ಅನುದಾನಕ್ಕಾಗಿ ಚಂಚಲರಾದರು' ಎಂದು ಪ್ರಶ್ನೆಯೊಂದಕ್ಕೆ ವಿವರಿಸಿದರು.

'ಕೆಲ ಶಾಸಕರು ಅಡ್ಡ ಮತದಾನ ಮಾಡಿದ ತಕ್ಷಣ ನಮ್ಮ ಪಕ್ಷ ಮುಳುಗಿ ಹೋಗುವುದಿಲ್ಲ. 2017ರಲ್ಲಿ ಜೆಡಿಎಸ್‌ನ ಕೆಲ ಶಾಸಕರು ಕಾಂಗ್ರೆಸ್ ಪರವಾಗಿ ಮತ ಹಾಕಿದ್ದರು. 2018ರ ವಿಧಾನಸಭೆ ಚುನಾವಣೆಯಲ್ಲಿ ಸೋತರು. ಈಗಲೂ ಹಾಗೇ ಆಗುತ್ತದೆ. ಅಡ್ಡ ಮತದಾನ ಮಾಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

'ಯಾವ ನಂಬರ್‌ಗೆ ಕರೆ ಮಾಡಬೇಕು'

'ರಾಜ್ಯದಲ್ಲಿ ಭ್ರಷ್ಟಾಚಾರ ತೊಲಗಬೇಕು. ಯಾರಾದರು ಹತ್ತು ರೂಪಾಯಿ ಕೇಳಿದರೂ ಕರೆ ಮಾಡಿ ಎಂದು ಮುಖ್ಯಮಂತ್ರಿ ಒಂದು ನಂಬರ್ ನೀಡಿದ್ದಾರೆ. ಈ ಚುನಾವಣೆಯಲ್ಲಿ ಕೋಟಿ–ಕೋಟಿ ರೂಪಾಯಿ ಕೈಬದಲಾಗಿದೆ. ಈಗ ಯಾವ ನಂಬರ್‌ಗೆ ಕರೆ ಮಾಡಿ ದೂರು ನೀಡಬೇಕು' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ಚುನಾವಣೆ ವೇಳೆ ಹಣ ಕೊಟ್ಟವರು ಮತ್ತು ಪಡೆದುಕೊಂಡ ವರನ್ನು ಈ ಕರೆ ಮಾಡುವ ವ್ಯವಸ್ಥೆ ಯಿಂದ ಹೊರಗೆ ಇಟ್ಟಿದ್ದಾರಾ' ಎಂದು ಲೇವಡಿ ಮಾಡಿದರು.

'ಆಮಿಷಕ್ಕೆ ಒಳಗಾದವರ ವಿರುದ್ಧ ಕ್ರಮ'

ಹುಬ್ಬಳ್ಳಿ: 'ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಅಗಿರುವುದನ್ನು ಪಕ್ಷದ ರಾಷ್ಟ್ರೀಯ ನಾಯಕತ್ವ ಗಂಭೀರವಾಗಿ ಪರಿಗಣಿಸಿದೆ. ಹಣದ ಆಮಿಷಕ್ಕೆ ಒಳಗಾಗಿ ಅಡ್ಡ ಮತದಾನ ಮಾಡಿದವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.




ಪ್ರಲ್ಹಾದ ಜೋಶಿ

'ಗುಪ್ತ ಮತದಾನದಿಂದ ಯಾರಿಗೂ ಗೊತ್ತಾಗುವುದಿಲ್ಲ ಎಂದು ಭಾವಿಸುವುದು ತಪ್ಪು. ಈಗ ಯಾವುದೂ ಗುಪ್ತವಾಗಿ ಉಳಿದಿಲ್ಲ. ಪಕ್ಷದಿಂದ ಆಯ್ಕೆಯಾದವರು ಪಕ್ಷಕ್ಕೆ ನಿಷ್ಠೆಯಿಂದ ಇರಬೇಕು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

'ಆರ್‌ಎಸ್‌ಎಸ್‌ಗೆ ಬೈದರೆ, ಮುಖ್ಯಮಂತ್ರಿ ಆಗುತ್ತೇವೆ ಎಂಬ ಭ್ರಮೆಯಲ್ಲಿ ಕೆಲವರು ಇದ್ದಾರೆ. ಆರ್‌ಎಸ್‌ಎಸ್ ನೋಂದಣಿಗೆ ಸಂಬಂಧಿಸಿದಂತೆ ಸಂಘದ ಪ್ರಮುಖರು ಈಗಾಗಲೇ ಉತ್ತರಿಸಿದ್ದಾರೆ. ಈ ಬಗ್ಗೆ ಕೇಳುವ ಅಧಿಕಾರ ಯಾರಿಗೂ ಇಲ್ಲ. ಈ ಬಗ್ಗೆ ಚರ್ಚೆ ಅಪ್ರಸ್ತುತ' ಎಂದರು.

'ಹಣದ ಆಮಿಷದಿಂದ ಅಡ್ಡ ಮತದಾನ'

ಹಾವೇರಿ: 'ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ದೊಡ್ಡ ಪ್ರಮಾಣದ ರಾಜಕೀಯ ಭ್ರಷ್ಟಾಚಾರ ನಡೆದಿದೆ. ಹಣದ ಆಮಿಷಕ್ಕೆ ಬಿದ್ದು ನಮ್ಮ ಕೆಲ ಶಾಸಕರು ಅಡ್ಡ ಮತದಾನ ಮಾಡಿದ್ದಾರೆ. ಅಂಥವರ ಪತ್ತೆಗೆ ಸಮಿತಿ ರಚಿಸಲಾಗಿದ್ದು, ಅದರ ವರದಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಬಸವರಾಜ ಬೊಮ್ಮಾಯಿ

'ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನ ಪರಿಷತ್ ಚುನಾವಣೆಯಲ್ಲಿ ದೊಡ್ಡ ಪ್ರಮಾಣದ ಹಣ ಖರ್ಚು ಮಾಡಿದ್ದಾರೆ. ಅವರ ಆಮಿಷದಿಂದ ನಮ್ಮ ಶಾಸಕರು ಅಡ್ಡ ಮತದಾನ ಮಾಡಿದ್ದಾರೆ. ಮುಂದೆ ಇಂಥ ತಪ್ಪುಗಳಾಗದಂತೆ ಎಚ್ಚರಿಕೆ ವಹಿಸುತ್ತೇವೆ' ಎಂದರು.

ಕ್ರಿಪ್ಟೊ: ₹2,500 ಕೋಟಿ ಅಕ್ರಮ ವಹಿವಾಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ವಿವಿಧೆಡೆ ಶೋಧಕಾರ್ಯ ನಡೆಸಿದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಇಲ್ಲಿನ ಐದು ಕಂಪನಿಗಳು ₹2,500 ಕೋಟಿ ಮೊತ್ತದ ಕ್ರಿಪ್ಟೊ-ಕರೆನ್ಸಿ ವಹಿವಾಟನ್ನು ಅಕ್ರಮವಾಗಿ ನಡೆಸಿರುವುದನ್ನು ಪತ್ತೆ ಮಾಡಿದ್ದಾರೆ.



'ಯುಎಇ, ಅಮೆರಿಕದ ವಿವಿಧೆಡೆ ಕೇಂದ್ರ ಕಚೇರಿ ಹೊಂದಿರುವ ಟ್ರಾನ್ಸ್‌ಎಕೆ ಟೆಕ್ನಾಲಜೀಸ್ ಲಿಮಿಟೆಡ್, ಕ್ಯಾರ್ಟೆಕ್ಸ್ ಟೆಕ್ನಾಲಜೀಸ್ ಲಿಮಿಟೆಡ್, ಬೈಹಟ್ಕೆ ಇಂಟರ್‌ನೆಟ್ ಲಿಮಿಟೆಡ್, ಮೋಕ್ಷಜ್ಞ ಟೆಕ್ನಾಲಜೀಸ್ ಲಿಮಿಟೆಡ್ ಮತ್ತು ಅಭಿಬಾ ಟೆಕ್ನಾಲಜೀಸ್ ಲಿಮಿಟೆಡ್ ಬೆಂಗಳೂರಿನಿಂದ ಕಾರ್ಯನಿರ್ವಹಿಸುತ್ತಿದ್ದವು. ಅವುಗಳ ವಹಿವಾಟುಗಳು ಅನುಮಾನಾಸ್ಪದವಾಗಿ ಇದ್ದ ಕಾರಣ, ತನಿಖೆ ಆರಂಭಿಸಲಾಗಿತ್ತು' ಎಂದು ಇ.ಡಿ ಪ್ರಕಟಣೆ ತಿಳಿಸಿದೆ.

'ಈ ಕಂಪನಿಗಳು ಭಾರತೀಯ ಬ್ಯಾಂಕ್‌ಗಳಲ್ಲಿ ಚಾಲ್ತಿ ಖಾತೆ ಹೊಂದಿವೆ. ಜಾಲತಾಣಗಳು ಮತ್ತು ಆ್ಯಪ್‌ಗಳ ಮೂಲಕ ಗ್ರಾಹಕ ಸೇವೆ ನೀಡುತ್ತಿವೆ. ಗ್ರಾಹಕರಿಗೆ ಪ್ರತ್ಯೇಕ ವ್ಯಾಲೆಟ್ ನೀಡಿ, ಅದರಲ್ಲಿ ಹಣ ಜಮೆ ಮಾಡುವಂತೆ ತಿಳಿಸುತ್ತವೆ. ಅವು ಕಂಪನಿಯ ಖಾತೆಗಳಿಗೆ ಹೋಗುತ್ತವೆ. ಅದರ ಬದಲಿಗೆ ಬಿಟ್‌ಕಾಯಿನ್‌ನಂತಹ ಕ್ರಿಪ್ಟೊ ಕರೆನ್ಸಿಯನ್ನು ಅವರ ವ್ಯಾಲೆಟ್‌ಗೆ ಜಮೆ ಮಾಡುತ್ತವೆ. ಆದರೆ ಇಂತಹ ವಹಿವಾಟು ನಡೆಸಲು ಕಂಪನಿಗಳು ಆರ್‌ಬಿಐನ ಅನುಮತಿ ಪಡೆದಿಲ್ಲ' ಎಂದು ವಿವರಿಸಿವೆ.

'ಗ್ರಾಹಕರ ವ್ಯಾಲೆಟ್‌ಗಳಲ್ಲಿ ಇರುವ ಕ್ರಿಪ್ಟೊಕರೆನ್ಸಿಯನ್ನು ಬೇರೆ ದೇಶಗಳಲ್ಲಿ ಇರುವ ತಮ್ಮ ಇತರ ಖಾತೆಗಳಿಗೆ ವರ್ಗಾಯಿಸುತ್ತವೆ. ನಂತರ ಆ ಹಣವನ್ನು ಅಲ್ಲಿನ ಕರೆನ್ಸಿಗೆ ಪರಿವರ್ತನೆ ಮಾಡಿ-ಕೊಳ್ಳುತ್ತವೆ. ಹೀಗೆ ಹಣವನ್ನು ಅಕ್ರಮವಾಗಿ ಬೇರೆ ದೇಶಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ. ಈ ಪ್ರಕ್ರಿಯೆಗೆ ಕಟ್ಟಬೇಕಾದ ಶುಲ್ಕ ಮತ್ತು ತೆರಿಗೆಯನ್ನು ತಪ್ಪಿಸುತ್ತಿವೆ' ಎಂದು ಆರೋಪಿಸಿದೆ.

'ಇದೇ ರೀತಿ ಬೇರೆ ದೇಶಗಳ ಕರೆನ್ಸಿಯನ್ನು ಕ್ರಿಪ್ಟೊಕರೆನ್ಸಿಗೆ ಮತ್ತು ಆ ಮೂಲಕ ರೂಪಾಯಿಗೆ ಪರಿವರ್ತನೆ ಮಾಡಲಾಗಿದೆ. ಇಂತಹ ಸೇವೆ ನೀಡುವುದಾಗಿ ಐದೂ ಕಂಪನಿಗಳು ವಿವಿಧ ಮಾಧ್ಯಮಗಳಲ್ಲಿ ಜಾಹೀರಾತನ್ನೂ ನೀಡಿವೆ. ಹಲವು ಹಂತಗಳಲ್ಲಿ ಆರ್‌ಬಿಐನ ನಿಯಮಗಳನ್ನು ಉಲ್ಲಂಘಿಸಲಾಗಿದೆ' ಎಂದು ತಿಳಿಸಿದೆ.

'ಕ್ಯಾಲಿಫೋರ್ನಿಯಾದಲ್ಲಿ ನೆಲಸಿರುವ ಅನಿವಾಸಿ ಭಾರತೀಯ ವ್ಯಕ್ತಿ ಈ ಐದೂ ಕಂಪನಿಗಳನ್ನು ನಡೆಸುತ್ತಿದ್ದಾರೆ. ಅವರ ಕುಟುಂಬದವರು ಭಾರತದಲ್ಲಿ ಕುಳಿತು, ಕಾರ್ಯನಿರ್ವಹಿಸುತ್ತಿದ್ದಾರೆ. ತನಿಖೆ ಇನ್ನೂ ಪ್ರಾಥಮಿಕ ಹಂತದಲ್ಲಿದೆ' ಎಂದು ಮಾಹಿತಿ ನೀಡಿದೆ.

ಗಡಿಪಾರು ಆದೇಶ ಕಾನೂನು ಮಿತಿ ದಾಟದಿರಲಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಡಿಪಾರು ಆದೇಶವು ವ್ಯಕ್ತಿಯೊಬ್ಬನ ಸಂವಿಧಾನದ 21ನೇ ವಿಧಿಯಡಿ ಕೊಡಮಾಡಲಾದ ಜೀವಿಸುವ ಮತ್ತು ವ್ಯಕ್ತಿಗತ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಕಸಿದುಕೊಳ್ಳುವ ಕಠಿಣ ಕ್ರಮವಾಗಿದ್ದು, ಈ ಆದೇಶ ಗಳು ಕಾನೂನು ಮಿತಿಯೊಳಗೆ ಇರಬೇಕು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.



ತಮ್ಮನ್ನು ಬೆಳಗಾವಿಯಿಂದ ಗಡಿಪಾರು ಮಾಡಿದ್ದ ಆದೇಶ ಪ್ರಶ್ನಿಸಿ ಮುಜಮ್ಮಿಲ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್‌. ಸುನಿಲ್ ದತ್ ಯಾದವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗಡಿಪಾರು ಆದೇಶ ಎತ್ತಿಹಿಡಿದಿದ್ದ ಏಕಸದಸ್ಯ ಪೀಠದ ಆದೇಶವನ್ನು ರದ್ದುಗೊಳಿಸಿದೆ.

'ಕರ್ನಾಟಕ ಪೊಲೀಸ್ ಕಾಯ್ದೆಯ ಕಲಂ 56ರ ಅಡಿಯಲ್ಲಿ ಬರುವ ಅಪರಾಧಗಳನ್ನು ನೆಪವಾಗಿಟ್ಟುಕೊಂಡು ಗಡಿಪಾರು ಆದೇಶ ಹೊರಡಿಸಿರುವುದು ಕಾನೂನು ಬಾಹಿರ ಮತ್ತು ಅಧಿಕಾರ ವ್ಯಾಪ್ತಿ ಮೀರಿದ್ದು' ಎಂದು ನ್ಯಾಯಪೀಠ ಉಲ್ಲೇಖಿಸಿದೆ.

ಮುಜಮ್ಮಿಲ್ ವಿರುದ್ಧ ದಾಖಲಾಗಿದ್ದ ಜೂಜಾಟದ ಪ್ರಕರಣಗಳನ್ನು ಪರಿಶೀಲಿಸಿದ ನ್ಯಾಯ ಪೀಠ, 'ಅರ್ಜಿದಾರರ ವಿರುದ್ಧದ ಭಾರತೀಯ ದಂಡ ಸಂಹಿತೆ ಮತ್ತು ಕರ್ನಾಟಕ ಪೊಲೀಸ್ ಕಾಯ್ದೆ ಅಡಿ ದಾಖಲಿಸಿರುವ ಆಪಾದನೆಗಳು ಗಡಿಪಾರು ವ್ಯಾಪ್ತಿಗೆ ಬರುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಅರ್ಜಿದಾರರ ವಿರುದ್ಧ ಕಾನೂನು ಬದ್ಧವಾಗಿ ಹೊಸದಾಗಿ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸ್ವಾತಂತ್ರ್ಯ ಇರಲಿದೆ' ಎಂದೂ ಹೇಳಿದೆ.

ಬದುಕಿನ ಬಂಡಿ...

ಪ್ರಜಾವಾಣಿ ಚಿತ್ರ
ಅನೂಪ್ ರಾಘ ಟಿ.



ಮಕ್ಕಳ ಆಟಿಕೆ ಮತ್ತು ಬಣ್ಣ, ಬಣ್ಣದ ಬಲೂನು ಮಾರಾಟ ಮಾಡುವ ಬೀದಿಬದಿಯ ವ್ಯಾಪಾರಿಯೊಬ್ಬ ದ್ವಿಚಕ್ರ ವಾಹನದಲ್ಲಿ ತನ್ನ ಇಡೀ ಸಂಸಾರವನ್ನು ಹೊತ್ತು ಸಾಗಿದ ದೃಶ್ಯ ಶನಿವಾರ ಮೈಸೂರು–ಬನ್ನೂರು ರಸ್ತೆಯಲ್ಲಿ ಕಂಡು ಬಂತು

ಸಿಇಟಿ: ಆಯ್ಕೆ ದಾಖಲಿಸಲು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ಪಶು ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಆಯ್ಕೆ ದಾಖಲಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅವಕಾಶ ನೀಡಿದೆ.

ಅಭ್ಯರ್ಥಿಗಳು ತಮಗೆ ಇಷ್ಟ ಇರುವ ಕಾಲೇಜು ಹಾಗೂ ಕೋರ್ಸ್‌ಗಳನ್ನು ಆದ್ಯತಾ ಕ್ರಮದಲ್ಲಿ ದಾಖಲಿಸಲು ಜೂನ್ 30ರ ಬೆಳಿಗ್ಗೆ 10ರವರೆಗೆ ಸಮಯ ನಿಗದಿ ಮಾಡಲಾಗಿದ್ದು, ಜುಲೈ 6ರಂದು ಬೆಳಿಗ್ಗೆ 11ಕ್ಕೆ ಸೀಟು ಹಂಚಿಕೆಯ ಅಣಕು ಫಲಿತಾಂಶ ಪ್ರಕಟಿಸಲಾಗುತ್ತದೆ. ಜುಲೈ 9ರವರೆಗೆ ಆಯ್ಕೆಗಳನ್ನು ಸೇರಿಸಲು, ಅಳಿಸಲು, ಮಾರ್ಪಾಡು ಮಾಡಲು ಅವಕಾಶ ನೀಡಲಾಗುತ್ತದೆ. ಜುಲೈ 15ರಂದು ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್‌.ಪ್ರಸನ್ನ ಹೇಳಿದ್ದಾರೆ.

ಕೃಷಿ ಅಧಿಕಾರಿ ಹುದ್ದೆಗೆ ಅರ್ಜಿ: ಅವಧಿ ವಿಸ್ತರಣೆ

ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂನ್ 25ರವರೆಗೆ ವಿಸ್ತರಿಸಲಾಗಿದೆ.

ಬಿ.ಇ ಟೆಕ್ನಾಲಜಿ ಎಂಜಿನಿಯರಿಂಗ್ ಪದವಿಯನ್ನು ಬಿ.ಟೆಕ್ ಬಯೊ ಟೆಕ್ನಾಲಜಿ ಪದವಿಗೆ ಸಮಾನವೆಂದು ಸರ್ಕಾರ ಪರಿಗಣಿಸಿದೆ. ಹಾಗಾಗಿ, ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳಿಗೆ ಬಿ.ಇ ಬಯೊ ಟೆಕ್ನಾಲಜಿ ಅಭ್ಯರ್ಥಿಗಳು ಕೂಡ ಅರ್ಜಿ ಸಲ್ಲಿಸಬಹುದು ಕೆಇಎ ಹೇಳಿದೆ.

ಕೃಷಿ, ಪಶು ವೈದ್ಯಕೀಯ, ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ ಸೀಟು ಲಭ್ಯತಾ ಪಟ್ಟಿ ಬಂದಿದೆ. ಎಂಜಿನಿಯರಿಂಗ್ ಕೋರ್ಸ್‌ಗಳ ಅಂತಿಮ ಪಟ್ಟಿಗೆ ಕಾಯುತ್ತಿದ್ದೇವೆ. ಬಂದ ನಂತರ ಎಲ್ಲ ಮಾಹಿತಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಪೂರ್ವ ಸುತ್ತಿನ ಕೌನ್ಸೆಲಿಂಗ್ ಇಲ್ಲ: ನೀಟ್ ಮರು ಪರೀಕ್ಷೆ ಕಾರಣಕ್ಕೆ ಎಂಜಿನಿಯರಿಂಗ್ ಅಭ್ಯರ್ಥಿಗಳಿಗೆ ಆಗುತ್ತಿದ್ದ ವಿಳಂಬ ತಪ್ಪಿಸಲು ಪೂರ್ವ ಸುತ್ತಿನ ಸೀಟು ಹಂಚಿಕೆಗೆ ಮಾಡಿದ್ದ ತೀರ್ಮಾನವನ್ನು ಕೈಬಿಡಲಾಗಿದೆ. ಮೊದಲ ಸುತ್ತಿನಿಂದಲೇ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭವಾಗಲಿದೆ ಎಂದರು.

> ನೀಟ್ ಅಭ್ಯರ್ಥಿಗಳು 22ರಿಂದ ಆಯ್ಕೆ ದಾಖಲಿಸಬೇಕು. ಭಾನುವಾರದ ಪರೀಕ್ಷೆ ಕಡೆಗೆ ಗಮನ ಹರಿಸಬೇಕು. ಯಾರೂ ಆತಂಕ ಪಡಬೇಕಿಲ್ಲ
> **ಎಚ್‌.ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಪ್ರಜಾಸೇವೆಗೆ ಇಲಾಖೆ

ಒಂದನೇ ಪುಟದಿಂದ...

'ಜೊತೆಗೆ, ಕೇಂದ್ರದ ಯೋಜನೆಗಳನ್ನು ಕರ್ನಾಟಕಕ್ಕೆ ತರಲು ದೆಹಲಿಯಲ್ಲಿ ಅಧಿಕಾರಿಗಳ ತಂಡ ನಿಯೋಜಿಸಲಾಗುವುದು. ಈ ತಂಡಕ್ಕೆ ನಿವೃತ್ತ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ನೇಮಿಸಲಾಗುವುದು' ಎಂದರು.

ಇತರ ನಿರ್ಣಯಗಳು

- ಗ್ರಾಮೀಣ ಪ್ರದೇಶಗಳಿಗೆ 400 ಹಾಗೂ ವಾಯವ್ಯ ಸಾರಿಗೆ ನಿಗಮಕ್ಕೆ 220 ಸೇರಿ ಒಟ್ಟು ₹235 ಕೋಟಿ ವೆಚ್ಚದಲ್ಲಿ 620 ಹೊಸ ಬಸ್‌ಗಳ ಖರೀದಿ
- ಎಲ್ಲ ಸಾರಿಗೆ ನಿಗಮಗಳ ಅಡಿಯಲ್ಲಿ 11 ಕಡೆ ₹112 ಕೋಟಿ ವೆಚ್ಚದಲ್ಲಿ ಎಲೆಕ್ಟ್ರಿಕ್ ಬಸ್‌ಗಳ ಡಿಪೊ ಸ್ಥಾಪನೆ
- ಸಂಡೂರು ತಾಲ್ಲೂಕು ಕೇಂದ್ರದಲ್ಲಿ ₹30 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಾಣ
- ಯಾದಗಿರಿಯ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ₹100 ಕೋಟಿ ವೆಚ್ಚದಲ್ಲಿ 200 ಹಾಸಿಗೆ ಸಾಮರ್ಥ್ಯದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ
- ಕಾರವಾರ ವೈದ್ಯಕೀಯ ವಿಜ್ಞಾನ ಶಿಕ್ಷಣ ಸಂಸ್ಥೆಯಲ್ಲಿ ₹18 ಕೋಟಿ ವೆಚ್ಚದಲ್ಲಿ ಆರು ಸಿವಿಲ್ ಕಾಮಗಾರಿ
- ಬೆಂಗಳೂರು ವೈದ್ಯಕೀಯ ಸಂಶೋಧನಾ ಆಸ್ಪತ್ರೆಗೆ ಸುಮಾರು ₹60 ಕೋಟಿ ವೆಚ್ಚದಲ್ಲಿ ವೈದ್ಯಕೀಯ ಉಪಕರಣಗಳ ಖರೀದಿ
- ಗದಗ-ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳಸಾಪೂರ ಗ್ರಾಮದಲ್ಲಿನ ಒಟ್ಟು 18 ಎಕರೆ ಜಮೀನಿನಲ್ಲಿ 50:50ರ ಅನುಪಾತದಲ್ಲಿ ರೈತರು ಹಾಗೂ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ₹19.69 ಕೋಟಿ ಅಂದಾಜು ಮೊತ್ತದಲ್ಲಿ ವಸತಿ ಯೋಜನೆ
- ವಿಧಾನ ಪರಿಷತ್‌ನಲ್ಲಿ ಖಾಲಿ ಆಗಲಿರುವ ಐದು ಸ್ಥಾನಗಳಿಗೆ ನಾಮನಿರ್ದೇಶನ ಮಾಡಲು ಮುಖ್ಯಮಂತ್ರಿಗೆ ಅಧಿಕಾರ
- ಸಚಿವ ಸಂಪುಟ ಉಪಸಮಿತಿಗಳ ಪುನರ್‌ರಚನೆಯ ಜವಾಬ್ದಾರಿ ಮುಖ್ಯಮಂತ್ರಿಗೆ







ಭೂಸ್ವಾಧೀನ: ಅ.31ರವರೆಗೆ ಅವಕಾಶ

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕಿನಲ್ಲಿ ಭೂಸ್ವಾಧೀನದಿಂದ ಕೈಬಿಡಲಾಗಿದ್ದ ಜಮೀನಿನ ಪೈಕಿ, ಸ್ವಯಂ ಪ್ರೇರಿತವಾಗಿ ಜಮೀನು ನೀಡಲು ಮುಂದೆ ಬರುವ ರೈತರಿಗೆ ಅಕ್ಟೋಬರ್ 31ರವರೆಗೆ ಕಾಲಾವಕಾಶ ನೀಡಲಾಗಿದೆ.

ಶನಿವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ಈ ನಿರ್ಣಯ ಕೈಗೊಂಡಿದೆ. ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ 1,777 ಎಕರೆ ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿತ್ತು. ರೈತರು, ವಿವಿಧ ಸಂಘಟನೆಗಳ ಸರಣಿ ಹೋರಾಟಕ್ಕೆ ಮಣಿದಿದ್ದ ಸರ್ಕಾರ, ಭೂಸ್ವಾಧೀನ ಪ್ರಕ್ರಿಯೆಯಿಂದ ಹಿಂದೆ ಸರಿದಿತ್ತು. ಆದರೆ, ಸ್ವಪ್ರೇರಿತವಾಗಿ ಜಮೀನು ನೀಡಲು ಮುಂದೆ ಬರುವ ರೈತರಿಗೆ, ಅವಕಾಶ ಕಲ್ಪಿಸಿ ಗಡುವನ್ನು ನೀಡಿತ್ತು. ಅದನ್ನೀಗ ವಿಸ್ತರಿಸುವ ತೀರ್ಮಾನವನ್ನು ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಬಿಡದಿ ಟೌನ್‌ಶಿಪ್: ಕುಮಾರಸ್ವಾಮಿ ಡಿನೋಟಿಫೈ ಏಕೆ ಮಾಡಲಿಲ್ಲ—ಸಿ.ಎಂ

'ಜಮೀನು ಹೇಗೆ ಒದಗಿಸಬೇಕು ಹೇಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಕ್ಕೆ ಹೊಸ ಕೈಗಾರಿಕೆಗಳು ಬರಬೇಕು, ಅದಕ್ಕಾಗಿ ಜಮೀನು ಬೇಕು ಎಂದು ಹೇಳುತ್ತಾರೆ. ಭೂಸ್ವಾಧೀನ ಮಾಡದೆ, ಜಮೀನು ಎಲ್ಲಿಂದ ತಂದುಕೊಡಲಿ ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವರೇ (ಕುಮಾರಸ್ವಾಮಿ) ಹೇಳಲಿ' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒತ್ತಾಯಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ವಿರೋಧ ಪಕ್ಷಗಳು ರಾಜಕೀಯ ಕಾರಣಕ್ಕಾಗಿ ಮಾತ್ರವೇ ಬಿಡದಿ ಟೌನ್‌ಶಿಪ್ ಯೋಜನೆಯನ್ನು ವಿರೋಧಿಸುತ್ತಿವೆ' ಎಂದರು.

'ಕುಮಾರಸ್ವಾಮಿ ಅವರು ದೊಡ್ಡವರು, ಬೃಹತ್ ಕೈಗಾರಿಕಾ ಸಚಿವರು. ಅವರಿಗೆ ಕೈಗಾರಿಕೆಗಳನ್ನು ತರಬೇಕು ಎನ್ನುವ ಆಸೆಯಿದೆ. ಎಲ್ಲಿಗೆ ಕೈಗಾರಿಕೆಗಳನ್ನು ತರಬೇಕು, ಹೇಗೆ ತರಬೇಕು, ಯಾರ ಜಮೀನಿನಲ್ಲಿ ತರಬೇಕು ಎಂದು ಅವರೇ ಹೇಳಬೇಕು' ಎಂದು ಕುಟುಕಿದರು.



ಶಿವಕುಮಾರ್

'ಬಿಡದಿಯಲ್ಲಿ ಟೌನ್‌ಶಿಪ್ ಆರಂಭಿಸಲು ಹೊರಟದ್ದು ಕುಮಾರಸ್ವಾಮಿ. ಅವರು ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿದರು. ಯಡಿಯೂರಪ್ಪ ಅವರು ಮುಂದುವರೆಸಿದರು. ಜಗದೀಶ್ ಶೆಟ್ಟರ್ ಅವರು 1,000 ಎಕರೆ ಸ್ವಾಧೀನಕ್ಕೆ ತೆಗೆದುಕೊಂಡರು. ನಾವು ಅದನ್ನು ವಿಸ್ತ-ರಿಸುತ್ತಿದ್ದೇವೆ ಅಷ್ಟೆ' ಎಂದರು.

'ಆ ಪ್ರದೇಶವನ್ನು ಕುಮಾರಸ್ವಾಮಿ ಅವರು ಕೆಂಪು ವಲಯ ಎಂದು ಘೋಷಣೆ ಮಾಡಿದ್ದರು. ಏಕೆ ಹಾಗೆ ಮಾಡಿದರು ಎಂದು ತಿಳಿಸಲಿ. ಇದಕ್ಕೆಲ್ಲಾ ಅವರೇ ಪಿತಾಮಹ. ರೈತರ ಜಮೀನು ಭೂಸ್ವಾಧೀನಕ್ಕೆ ತೆಗೆದುಕೊಳ್ಳಬಾರದು ಎಂದಿದ್ದರೆ, ಈ ಎಲ್ಲರೂ ತಮ್ಮ ಅಧಿಕಾರದ ಅವಧಿಯಲ್ಲಿ ಡಿನೋಟಿಫಿಕೇಷನ್ ಮಾಡಬೇಕಿತ್ತಲ್ಲವೇ. ಏಕೆ ಮಾಡಲಿಲ್ಲ? ಇವರು ಮಾಡದೇ ಇದ್ದ ಡಿನೋಟಿಫಿಕೇಷನ್ ಅನ್ನು ನಾನು ಮಾಡಿ, ಜೈಲಿಗೆ ಹೋಗಲು ಸಿದ್ಧನಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ರೈತರಿಗೆ ಒಂದು ಎಕರೆಗೆ ₹2.50 ಕೋಟಿ ಪರಿಹಾರ ನೀಡುವ ಕೆಲಸ ಶುಕ್ರವಾರ ಆರಂಭವಾಗಿದೆ. ಬಿಡದಿಯ ರೈತರು ಒಳ್ಳೆಯವರು. ಅವರನ್ನು ದಾರಿ ತಪ್ಪಿಸಲಾಗುತ್ತಿದೆ. ಶೇ 80ರಷ್ಟು ರೈತರು ಭೂಮಿ ನೀಡಲು ಮುಂದೆ ಬಂದಿದ್ದಾರೆ. ಬೇರೆಯವರು ಮುಂದೆ ಬರಲಿಲ್ಲವೆಂದರೆ ನಾನು ಏನೂ ಮಾಡಲು ಸಾಧ್ಯವಿಲ್ಲ. ನಾವು ಕಾನೂನಿನ ಪ್ರಕಾರ ಹೋಗುತ್ತೇವೆ' ಎಂದರು.

'ಫಲವತ್ತಾದ ಭೂಮಿ ಸ್ವಾಧೀನಕ್ಕೆ ಮುಂದಾಗಿರಲಿಲ್ಲ'

'ಬಿಡದಿ ಟೌನ್‌ಶಿಪ್‌ಗಾಗಿ ನಾನು ಒಂದು ಇಂಚೂ ಫಲವತ್ತಾದ ಭೂಮಿಯನ್ನು ಸ್ವಾಧೀನಕ್ಕೆ ಪಡೆದುಕೊಳ್ಳುವುದಿಲ್ಲ ಎಂದು ಹೇಳಿದ್ದೆ. ಅದು ವಿಧಾನಸಭೆಯ ಕಡತಗಳಲ್ಲಿ ದಾಖಲಾಗಿದೆ. ಆಗ ಏನೇನು ಚರ್ಚೆಯಾಗಿತ್ತು ಎಂಬುದನ್ನು ಬಿಡದಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ದಾಖಲೆ ಬಿಡುಗಡೆ ಮಾಡುತ್ತೇನೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ನಾನು ಮುಖ್ಯಮಂತ್ರಿ ಆಗಿದ್ದಾಗ ಬಿಡದಿ ಟೌನ್‌ಶಿಪ್ ಯೋಜನೆಯನ್ನು ವಿರೋಧಿಸಿದವರು ಈಗ ಬೇರೆ ಪಕ್ಷದಲ್ಲಿ ಇದ್ದುಕೊಂಡು ಬೆಂಬಲಿಸುತ್ತಿದ್ದಾರೆ' ಎಂದು ಅವರು ಮಾಗಡಿ ಶಾಸಕ ಎಚ್‌.ಸಿ. ಬಾಲಕೃಷ್ಣ ಹೆಸರು ಉಲ್ಲೇಖಿಸದೇ ಟೀಕಿಸಿದರು.

'ಈಗ ಕೆಲವು ರೈತರಿಗೆ ಭೂಸ್ವಾಧೀನಾಧಿಕಾರಿ ಪರಿಹಾರದ ಚೆಕ್ ವಿತರಿಸಿದ್ದಾರೆ. ಆ ಹಣ ಎಷ್ಟು ದಿನ ಇರುತ್ತದೆ? ರೈತರಿಗೆ ₹2.30 ಕೋಟಿಯ ಚೆಕ್ ನೀಡಿ, ಆಸೆ ಹುಟ್ಟಿಸಿದ್ದಾರೆ. ಅದನ್ನು 20 ವರ್ಷಗಳವರೆಗೆ ನಿಶ್ಚಿತ ಠೇವಣಿ ಇರಿಸಿದರೂ ₹40 ಲಕ್ಷ ಬಡ್ಡಿ ಸಿಗಬಹುದು. ಆದರೆ, ಅದೇ ಜಮೀನನ್ನು ಇಟ್ಟುಕೊಂಡರೆ ಅದರ ಬೆಲೆ ₹20 ಕೋಟಿ ಆಗಲಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ವಿಪಕ್ಷವಾಗಿ ಬಿಜೆಪಿ ವಿಫಲ'

ಪ್ರಜಾವಾಣಿ ವಾರ್ತೆ

ಮಂಡ್ಯ: ಹೊಂದಾಣಿಕೆ ರಾಜಕಾರಣದಿಂದಾಗಿ ರಾಜ್ಯದಲ್ಲಿ ಬಿಜೆಪಿಗೆ ಹಿನ್ನಡೆಯಾಗುತ್ತಿದೆ. ವಿರೋಧ ಪಕ್ಷವಾಗಿ ಕೆಲಸ ಮಾಡುವಲ್ಲಿ ಪಕ್ಷ ವಿಫಲವಾಗಿದೆ ಎಂದು ಬಿಜೆಪಿ ಮುಖಂಡ ಕುಮಾರ್ ಬಂಗಾರಪ್ಪ ಆರೋಪ ಮಾಡಿದ್ದಾರೆ.

ಪಕ್ಷ ಸಂಘಟನೆ ಹೊಣೆ ಹೊತ್ತ ರಾಜ್ಯ ಘಟಕದ ಅಧ್ಯಕ್ಷರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬ ಕಾರಣದಿಂದಲೇ ಸಮಾನ ಮನಸ್ಕರು ಒಗ್ಗೂಡಿ ಧ್ವನಿ ಎತ್ತಿದ್ದೆವು ಎಂದು ನಗರದ ಪತ್ರಿಕಾ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅಸಮಾಧಾನ ಹೊರಹಾಕಿದರು.

ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷದವರೇ ಅಡ್ಡ ಮತದಾನ ಮಾಡಿದ್ದಾರೆ. ಉಪಚುನಾವಣೆ ಗಳಲ್ಲಿ ಪಕ್ಷಕ್ಕೆ ಸೋಲಾಗಿದೆ. ಈ ಎಲ್ಲಾ ಬೆಳವಣಿಗೆಗಳು ಪಕ್ಷದೊಳಗೆ ಎಲ್ಲವೂ ಸರಿಯಿಲ್ಲ ಎಂಬುದಕ್ಕೆ ಸಾಕ್ಷಿ. ಪಕ್ಷದಲ್ಲಿ ರುವ ಒಳ ಜಗಳ ಸರಿ ಮಾಡಿಕೊಳ್ಳ ಬೇಕಿದೆ. ಪಕ್ಷದ ಹಿತದೃಷ್ಟಿಯಿಂದ ಯತ್ನಾಳ್ ಮತ್ತು ಇತರರು ಸೇರಿ ಎತ್ತಿದ ಆಂತರಿಕ ಪ್ರಜಾಪ್ರಭುತ್ವದ ಧ್ವನಿಯನ್ನು ಹೈಕಮಾಂಡ್ ಹತ್ತಿಕ್ಕಿಲ್ಲ ಎಂದರು.

ಜಾತ್ಯತೀತ ಪಕ್ಷಗಳು ಜನಪರ ಸಂಘಟನೆಗಳ ಒಕ್ಕೂಟ ಘೋಷಣೆ • ಮತ ಕಾವಲು ಸಮಿತಿ ರಚನೆಗೆ ಒತ್ತಾಯ

'ಎಸ್‌ಐಆರ್ ನಾಟಕ: ಒಪ್ಪದು ಕರ್ನಾಟಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಹಾರ, ಪಶ್ಚಿಮ ಬಂಗಾಳದಲ್ಲಿ ನಡೆದಂತೆ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಾಟಕವು ಕರ್ನಾಟಕ ದಲ್ಲಿ ನಡೆಯಲು ಬಿಡಬಾರದು. ಎಲ್ಲ ಜಾತ್ಯತೀತ ಪಕ್ಷಗಳು ಒಟ್ಟಾಗಿ ಪ್ರತಿ ಗ್ರಾಮ ಪಂಚಾಯಿತಿಯ ಎಲ್ಲ ವಾರ್ಡ್‌ಗಳಲ್ಲೂ ಮತ ಕಾವಲು ಸಮಿತಿ ರಚಿಸಬೇಕು' ಎಂಬ ಸಂಕಲ್ಪವನ್ನು 'ಜಾತ್ಯತೀತ ಪಕ್ಷಗಳು- ಜನಪರ ಸಂಘಟನೆಗಳ ಒಕ್ಕೂಟಗಳು' ಮಾಡಿದವು.

ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ನಡೆದ 'ಎಸ್‌ಐಆರ್ ವಿರೋಧಿ ಪ್ರತಿರೋಧ ಸಮಾವೇಶ'ದಲ್ಲಿ ಒಕ್ಕೂಟದ ಪರವಾಗಿ ನಿರ್ಣಯವನ್ನು 'ಎದ್ದೇಳು ಕರ್ನಾಟಕ' ಸಂಘಟನೆಯ ನೂರ್ ಶ್ರೀಧರ್ ಮಂಡಿಸಿದರು.

'ಮತಪಟ್ಟಿಯಲ್ಲಿ ಯಾರೊಬ್ಬರೂ ಹೊರಗುಳಿದಿಲ್ಲ ಎಂಬುದು ಖಾತ್ರಿ ಆಗುವವರೆಗೂ ಹೋರಾಟ ನಿಲ್ಲಿಸ ಬಾರದು. ಜುಲೈ 15ರೊಳಗೆ ಕಾವಲು ಸಮಿತಿಗಳನ್ನು ರಚಿಸಿ ನೋಂದಾಯಿಸಿಕೊಳ್ಳಬೇಕು' ಎಂದರು.

'ಪಶ್ಚಿಮ ಬಂಗಾಳದಲ್ಲಿ 91 ಲಕ್ಷ ಜನರನ್ನು ಚುನಾವಣೆ ಪ್ರಕ್ರಿಯೆಯಿಂದ ಹೊರಗುಳಿಸಿದ 'ಲಾಜಿಕಲ್ ಡಿಸ್ಕ್ರಿಪೆನ್ಸಿ' ಸಾಫ್ಟ್‌ವೇರ್ ಅನ್ನು ರಾಜ್ಯದಲ್ಲಿ ಚುನಾವಣಾ ಆಯೋಗ ಬಳಸಬಾರದು. ಆಯೋಗವು ತಯಾರಿಸುವ ಮತದಾರರ ಪಟ್ಟಿಯ ಕರಡು ಪ್ರತಿ ಯನ್ನು ಪರಿಶೀಲನೆಗೆ ಅವಕಾಶವಿರು ವಂತೆ ಕಂಪ್ಯೂಟರ್ ಓದುವ ಮಾದರಿ ಯಲ್ಲಿಯೇ ಕೊಡಬೇಕು' ಎಂದು ಆಗ್ರಹಿಸಿದರು.

'ರಾಜ್ಯಮಟ್ಟದಲ್ಲಿ ತಜ್ಞರು, ಅಧಿಕಾರಿಗಳು, ನಾಗರಿಕ ಸಮಾಜದ ಪ್ರತಿನಿಧಿಗಳನ್ನು ಒಳಗೊಂಡ ಕಣ್ಗಾವಲು ಸಮಿತಿ ರಚಿಸಬೇಕು. ಜೂನ್ 30ರೊಳಗೆ ಈ ನಿರ್ಣಯದ ಬಗ್ಗೆ ಆಯೋಗವು ಸ್ಪಷ್ಟ ಅಭಿಪ್ರಾಯ ಕೊಡದಿದ್ದರೆ, ಎಲ್ಲ ಜಿಲ್ಲಾ ಚುನಾವಣಾಧಿಕಾರಿ ಕಚೇರಿಗಳ ಎದುರು ಬೃಹತ್ ಪ್ರತಿಭಟನೆ ನಡೆಸಬೇಕು' ಎಂದು ಹೇಳಿದರು. ಅದಕ್ಕೆ ಎಲ್ಲ ಸಂಘಟನೆಗಳ ಮುಖಂಡರು ದನಿಗೂಡಿಸಿದರು.



ಬೆಂಗಳೂರಿನಲ್ಲಿ 'ಜಾತ್ಯತೀತ ಪಕ್ಷಗಳು ಜನಪರ ಸಂಘಟನೆಗಳ ಒಕ್ಕೂಟ'ವು ಶನಿವಾರ ಆಯೋಜಿಸಿದ್ದ 'ಎಸ್‌ಐಆರ್ ವಿರೋಧಿ ಪ್ರತಿರೋಧ ಸಮಾವೇಶ'ದಲ್ಲಿ ಪಾಲ್ಗೊಂಡಿದ್ದ ಜನರು ಭಿತ್ತಿಪತ್ರಗಳನ್ನು ಹಿಡಿದು ಎಸ್‌ಐಆರ್ ವಿರುದ್ಧ ಘೋಷಣೆ ಕೂಗಿದರು —ಪ್ರಜಾವಾಣಿ ಚಿತ್ರ

> ಮತ ಚಲಾವಣೆ ಭಾರತೀಯನ ಆಜನ್ಮಸಿದ್ಧ ಹಕ್ಕು, ಅದನ್ನು ಕಸಿಯಬಾರದು. ರಾಜಕೀಯ ಅಧಿಕಾರಕ್ಕಾಗಿ ಆಯೋಗವು ನಿರ್ದಿಷ್ಟ ಸಮುದಾಯ, ಜನರನ್ನು ಕೈ ಬಿಡುವುದು ಸಲ್ಲ
> **ಪೀಟರ್ ಮಚಾದೊ,** ಬೆಂಗಳೂರು ಆರ್ಚ್‌ಬಿಷಪ್

> ಜನರಿಗೆ ಮತದಾನ ಮಹತ್ವ ಗೊತ್ತಿದ್ದರೂ ಚಲಾಯಿಸಲು ಅಡ್ಡಿಪಡಿಸುವ ಪ್ರಕ್ರಿಯೆ ನಡೆಯುತ್ತಿದೆ. ಪ್ರಜೆಗಳನ್ನು ಪ್ರಾಣಿಗಳನ್ನಾಗಿ ನೋಡಲಾಗುತ್ತಿದೆ. ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲೇಬೇಕು
> **ಬಿ.ಟಿ.ಲಲಿತಾನಾಯಕ್,** ಮಾಜಿ ಸಚಿವೆ

> ಕರ್ನಾಟಕವು ಬಿಹಾರ, ಪಶ್ಚಿಮ ಬಂಗಾಳವಲ್ಲ. ಇದು ಬಸವಣ್ಣ ಮತ್ತು ಕುವೆಂಪು ಅವರ ನಾಡು. ನಮ್ಮ ಆಗ್ರಹಗಳಿಗೆ ಆಯೋಗ ಸ್ಪಂದಿಸದಿದ್ದರೆ ಎಲ್ಲ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಗೆ ಮುತ್ತಿಗೆ ಖಚಿತ
> **ಬಡಗಲಪುರ ನಾಗೇಂದ್ರ,** ರೈತಸಂಘದ ಅಧ್ಯಕ್ಷ

'ಹೋರಾಟಕ್ಕೆ ಕಾಂಗ್ರೆಸ್ ಬೆಂಬಲ'

'ಗ್ರಾಮ ಸಭೆಗಳಲ್ಲಿ ವಾಸಸ್ಥಳ ದೃಢೀಕರಣ ಸೇರಿದಂತೆ ಹಕ್ಕು ಪತ್ರ ನೀಡಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಗಾಗಲೇ ಸೂಚಿಸಿದ್ದಾರೆ. ಎಸ್‌ಐಆರ್ ವಿರೋಧಿ ಹೋರಾಟದಲ್ಲಿ ಕಾಂಗ್ರೆಸ್ ಜೊತೆಗಿದೆ. ಸಮಾವೇಶದ ನಿರ್ಣಯಗಳ ಬಗ್ಗೆ ಮುಖ್ಯಮಂತ್ರಿ ಮತ್ತು ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸುವೆ' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಹೇಳಿದರು.

'ದೇಶದ ನಾಗರಿಕರು ಸುಳ್ಳು ಹೇಳುವುದಿಲ್ಲ, ನಕಲಿ ಕೆಲಸಗಳನ್ನು ಮಾಡುವುದಿಲ್ಲ. ಆ ಕೆಲಸ ಮಾಡುವವರು ಬಿಜೆಪಿ, ಆರ್‌ಎಸ್‌ಎಸ್‌ನವರು. ಪ್ರಧಾನಿ ನರೇಂದ್ರ ಮೋದಿ ಬಳಿ ಇರುವುದು ನಕಲಿ ಪದವಿ ಪ್ರಮಾಣ ಪತ್ರ. ಆದರೆ, ಎಸ್‌ಐಆರ್‌ಗಾಗಿ ಜನರ ದಾಖಲೆ ಕೇಳುತ್ತಿದ್ದಾರೆ' ಎಂದರು.

ಹರಿಪ್ರಸಾದ್ ಪದಗ್ರಹಣ ಇಂದು


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ನೂತನ ಸಾರಥಿಯಾಗಿ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರ ಪದಗ್ರಹಣ ಅರಮನೆ ಮೈದಾನದ ತ್ರಿಪುರವಾಸಿನಿ ಆವರಣದಲ್ಲಿ ಭಾನುವಾರ (ಜೂನ್ 21) ನಡೆಯಲಿದೆ.

ಬೆಳಿಗ್ಗೆ 11ಗಂಟೆಗೆ 'ಸಂಕಲ್ಪ ಸಮಾವೇಶ'ದ ಹೆಸರಿನಲ್ಲಿ ನಡೆಯಲಿ ರುವ ಈ ಕಾರ್ಯಕ್ರಮದಲ್ಲಿ ಹರಿಪ್ರಸಾದ್ ಅವರಿಗೆ ನಿಕಟಪೂರ್ವ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಧ್ವಜ ಹಸ್ತಾಂತರಿಸಲಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು, ಸಂಸದರು, ಶಾಸಕರು, ಕೆಪಿಸಿಸಿ ಕಾರ್ಯಾಧ್ಯಕ್ಷರು ಭಾಗವಹಿಸಲಿದ್ದಾರೆ.

ಪೂರ್ವಭಾವಿ ಸಿದ್ಧತೆಗಳನ್ನು ಶನಿವಾರ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, 'ಕಾರ್ಯಕ್ರಮ ದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ಭಾಗಿಯಾಗುವ ನಿರೀಕ್ಷೆಯಿದೆ. ಬೆಳಿಗ್ಗೆ 8 ಗಂಟೆಯಿಂದಲೇ ಉಪಾಹಾರ ವ್ಯವಸ್ಥೆ ಮಾಡಲಾಗಿದೆ. ಮಧ್ಯಾಹ್ನ ಊಟದ ವ್ಯವಸ್ಥೆಯಿದೆ. 70 ಕಡೆ ಆಹಾರ ವಿತರಣಾ ಕೌಂಟರ್ ತೆರೆಯ ಲಾಗಿದೆ' ಎಂದರು.



ಹರಿಪ್ರಸಾದ್

'ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಭಾನುವಾರವೇ ನೀಟ್ ಇರುವ ಕಾರಣಕ್ಕೆ ಕಾರ್ಯಕ್ರಮಕ್ಕೆ ಬರಲಾಗದಿದ್ದರೂ ಪರವಾಗಿಲ್ಲ ಜನರಿಗೆ ಸಮಸ್ಯೆ ಆಗದಂತೆ ಕಾರ್ಯಕರ್ತರು ನೋಡಿಕೊಳ್ಳಬೇಕು. ಪೊಲೀಸರ ಜೊತೆಗೆ ಚರ್ಚಿಸಿ, ಸಂಚಾರ ದಟ್ಟಣೆ ತಪ್ಪಿಸಲು ಮಾರ್ಗ ಬದಲಾವಣೆಯ ನಕ್ಷೆ ಸಿದ್ಧಪಡಿಸಲಾಗಿದೆ. ಎಂಟು ಸಮಿತಿಗಳನ್ನು ರಚಿಸಲಾಗಿದ್ದು, ಸಮಿತಿಯ ಸದಸ್ಯರು ಎಲ್ಲವನ್ನೂ ನಿರ್ವ-ಹಿಸಲಿದ್ದಾರೆ. ಕಾರ್ಯಕರ್ತರೇ ಎಲ್ಲ ಜವಾಬ್ದಾರಿ ಹೊತ್ತಿದ್ದಾರೆ' ಎಂದರು.

'ಸುಮಾರು 350 ಜನ ಗಣ್ಯರಿಗೆ ವೇದಿಕೆ ಮೇಲೆ ವ್ಯವಸ್ಥೆ ಕಲ್ಪಿಸಲಾಗಿದ್ದು, 200 ಜನ ಆಸೀನರಾಗುವ ಇನ್ನೊಂದು ವೇದಿಕೆಯೂ ಇದೆ. 4,000 ಬ್ಲಾಕ್ ಕಾಂಗ್ರೆಸ್ ಪ್ರತಿನಿಧಿಗಳಿಗೆ ಆಸನ ವ್ಯವಸ್ಥೆ ಮಾಡಲಾಗಿದೆ. 1,200 ಬಸ್‌ಗಳ ನಿಲುಗಡೆಗೂ ವ್ಯವಸ್ಥೆ ಮಾಡಲಾಗಿದೆ. ಯಾರ್‍ಯಾರು ಎಲ್ಲೆಲ್ಲಿ ಬರಬೇಕು ಎಂದು ಮೊದಲೇ ಸೂಚನೆ ನೀಡಲಾಗಿದೆ. ಸಮಾರಂಭ ನಡೆಯುವ ಸ್ಥಳದಲ್ಲಿ ಆರು ಆಂಬುಲೆನ್ಸ್ ಇರಲಿವೆ' ಎಂದರು.

'ಇದು ಕೇವಲ ಅಧಿಕಾರ ಹಸ್ತಾಂತರ ಕಾರ್ಯಕ್ರಮವಷ್ಟೇ ಅಲ್ಲ, 2028ರಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಹಾಗೂ 2029ರಲ್ಲಿ ಹೆಚ್ಚು ಸಂಸದರನ್ನು ಗೆಲ್ಲಿಸಿ ರಾಹುಲ್ ಗಾಂಧಿ ಅವರನ್ನು ಪ್ರಧಾನಿ ಸ್ಥಾನದಲ್ಲಿ ನೋಡಲು ಸಂಕಲ್ಪ ಮಾಡುವ ಕಾರ್ಯಕ್ರಮ ಇದಾಗಿದೆ. ದೊಡ್ಡ ನಿರ್ಧಾರವನ್ನು ತೆಗೆದುಕೊಳ್ಳುವ ವೇದಿಕೆ ಇದಾಗಲಿದೆ' ಎಂದರು.

'95 ಕ್ಷೇತ್ರಗಳಲ್ಲಿ ಸೋಲಿಸುವ ಹುನ್ನಾರ'

'ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಮೂಲಕ, ಕಾಂಗ್ರೆಸ್ ಶಾಸಕರಿರುವ 95 ಕ್ಷೇತ್ರಗಳಲ್ಲಿ ಸೋಲಿಸಲು ಬಿಜೆಪಿಯವರು ಯೋಜನೆ ರೂಪಿಸಿದ್ದಾರೆಂಬ ಮಾಹಿತಿಯಿದೆ' ಎಂದು ಜಿ. ಸಿ. ಚಂದ್ರಶೇಖರ್ ಹೇಳಿದರು. 'ರಾಹುಲ್ ಗಾಂಧಿ ಅವರನ್ನು ಆಹ್ವಾನಿಸಿ ಮುಂದೆ ಬಿಎಲ್‌ಎ–2 ಸಮಾವೇಶ ಮಾಡಲಾಗುವುದು. ರಾಜ್ಯದಲ್ಲಿ 59 ಸಾವಿರ ಬಿಎಲ್‌ಎ–2ಗಳನ್ನು ಈಗಾಗಲೇ ನೇಮಕ ಮಾಡಿದ್ದೇವೆ. ಎಸ್‌ಐಆರ್‌ನಿಂದ ಬಿಜೆಪಿಗರಿಗೆ ಏನೂ ಸಿಕ್ಕಿಲ್ಲ ಎನ್ನುವಂತೆ ಮಾಡುತ್ತೇವೆ. 8 ತಿಂಗಳಿಂದ ತಯಾರಿ ಮಾಡುತ್ತಿದ್ದು, 102 ಸಂಘಟನೆಗಳು ನಮಗೆ ಬೆಂಬಲ ನೀಡಿವೆ' ಎಂದರು.

ಕನ್ನಡ ಕಲಿಸದ ಶಾಲೆ ಮುಚ್ಚಿಸಿ

‘ಕನ್ನಡ ಮೊದಲು’ ಬಳಗ ಹಮ್ಮಿಕೊಂಡಿದ್ದ ದುಂಡುಮೇಜಿನ ಸಭೆಯಲ್ಲಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡವನ್ನು ಮೊದಲ ಅಥವಾ ಎರಡನೇ ಭಾಷೆಯಾಗಿ ಕಲಿಸುವ ಆದೇಶವನ್ನು ಪಾಲಿಸದ ಶಾಲೆಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಬೇಕು...

‘ಕನ್ನಡ ಮೊದಲು’ ಬಳಗದ ಆಶ್ರಯದಲ್ಲಿ ಶನಿವಾರ ನಡೆದ ದುಂಡು ಮೇಜಿನ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯವಿದು. ಕನ್ನಡ ಕಲಿಸದ ಶಾಲೆಗಳಿಗೆ ಒಂದು ವಾರದ ಗಡುವು ನೀಡುವುದು. ಆಗಲೂ ಕನ್ನಡ ಕಲಿಸಲು ಕ್ರಮ ಕೈಗೊಳ್ಳದಿದ್ದರೆ ಹೋರಾಟ ನಡೆಸುವುದು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕುವುದು, ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳುವುದು ಮುಂತಾದ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಕವಿ ಎಲ್. ಹನುಮಂತಯ್ಯ ಮಾತನಾಡಿ, ‘ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಭಾಷೆಯು ಐಚ್ಛಿಕವಾಗಿ ಇರಬಾರದು. ಅದು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಡ್ಡಾಯವಾಗಿರಬೇಕು. ಪ್ರತಿ ವರ್ಷ 7,500 ಕನ್ನಡ ಕೃತಿಗಳು ಪ್ರಕಟವಾಗುತ್ತವೆ. ಶಿಕ್ಷಣದಲ್ಲಿ ಕನ್ನಡ ಇಲ್ಲದೇ ಇದ್ದರೆ ಮುಂದೆ ಕನ್ನಡ ಪುಸ್ತಕಗಳಿಗೆ ಓದುಗರು ಇಲ್ಲದಂತಾಗುತ್ತದೆ. ಕನ್ನಡ ಸಿನಿಮಾಗಳಿಗೆ ಪ್ರೇಕ್ಷಕರು ಇಲ್ಲದಂತಾಗಲಿದೆ. ದ್ವಿಭಾಷಾ ಸೂತ್ರ ಬಂದಾಗ ಅದರಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಅನ್ನು ಆಯ್ಕೆ ಮಾಡುತ್ತಾರೆ. ಇನ್ನೊಂದು ಭಾಷೆಯಾಗಿ ಬೇರೆ ಯಾವುದೋ ಭಾಷೆಯನ್ನು ಆಯ್ಕೆ ಮಾಡಿಕೊಂಡರೆ ಕಷ್ಟ’ ಎಂದು ಹೇಳಿದರು.

ಸಿಬಿಎಸ್‌ಇ, ಐಸಿಎಸ್‌ಇ ಶಾಲೆಗಳಲ್ಲಿ ಕನ್ನಡ ಕಲಿಸಬೇಕು ಎಂದು ನಿಯಮ ಇದ್ದರೂ ಅನುಷ್ಠಾನಗೊಂಡಿಲ್ಲ. ಕನ್ನಡ ಮಾತನಾಡಿದರೆ ಮಕ್ಕಳಿಗೆ ದಂಡ ವಿಧಿಸುವ ವಿಪರ್ಯಾಸ ನಡೆಯುತ್ತಿದೆ. ಐಟಿ, ಬಿಟಿ, ಬ್ಯಾಂಕಿಂಗ್ ಕ್ಷೇತ್ರಗಳಲ್ಲಿ ಕನ್ನಡೇತರರೇ ಶೇ 85ರಷ್ಟು ಇದ್ದಾರೆ. ಕನ್ನಡಿಗರಿಗೆ ಉದ್ಯೋಗ ಸಿಗುವಂತೆ ಮಾಡಬೇಕು’ ಎಂದರು.

ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಮಾತನಾಡಿ, ‘ಕಾನೂನು ಮಾಡುವವರೇ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವುದರಿಂದ ಕಾನೂನು ಉಲ್ಲಂಘಿಸುವವರೂ ಅವರೇ ಆಗಿದ್ದಾರೆ. ಕಾನೂನುಗಳಿವೆ. ಅವು ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕು. ದ್ವಿಭಾಷಾ ನೀತಿ ಜಾರಿ ಮಾಡುವುದಿದ್ದರೆ ಕನ್ನಡವೇ ಪ್ರಥಮ ಭಾಷೆಯಾಗಬೇಕು’ ಎಂದು ತಿಳಿಸಿದರು.

ಇತಿಹಾಸ ತಜ್ಞ ತಲಕಾಡು ಚಿಕ್ಕರಂಗೇಗೌಡ ಮಾತನಾಡಿ, ‘ಭಾಷಾ ಅಲ್ಪಸಂಖ್ಯಾತರು, ಧಾರ್ಮಿಕ ಅಲ್ಪಸಂಖ್ಯಾತರು ತಮ್ಮ ಸಂಸ್ಕೃತಿ ರಕ್ಷಣೆಗೆ ಶಿಕ್ಷಣ ಸಂಸ್ಥೆಗಳನ್ನು ತೆರೆಯಬಹುದು ಎಂಬ ನಿಯಮವಿದೆ. ಈ ನಿಯಮವನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತರು ಅವರ ಭಾಷೆಯನ್ನು ಮಾಧ್ಯಮವಾಗಿ ಶಿಕ್ಷಣ ಸಂಸ್ಥೆ ತೆರೆಯುವ ಬದಲು ಆಂಗ್ಲ ಮಾಧ್ಯಮ ಶಾಲೆಗಳನ್ನೇ ತೆರೆಯುತ್ತಿದ್ದಾರೆ. ಅದರಲ್ಲಿ ಅವರ ಸಂಸ್ಕೃತಿ ಹೇಗೆ ರಕ್ಷಣೆ ಆಗುತ್ತದೆ ಎಂಬುದು ಗೊತ್ತಾಗುತ್ತಿಲ್ಲ’ ಎಂದು ಹೇಳಿದರು.

ಇಂಗ್ಲಿಷ್ ಮಾಧ್ಯಮದಲ್ಲಿಯೂ ರಾಜ್ಯ ಪಠ್ಯಕ್ರಮದಿಂದ ಕನ್ನಡಕ್ಕೆ ಧಕ್ಕೆಯಾಗಿಲ್ಲ. ಸಿಬಿಎಸ್‌ಇ ಮತ್ತು ಐಸಿಎಸ್‌ಇಗಳಿಂದ ಧಕ್ಕೆಯಾಗಿದೆ. ಶಿಕ್ಷಣ ಹಕ್ಕು (ಆರ್‌ಟಿಇ) ಯೋಜನೆಯು ಹೆಸರಿಗಷ್ಟೇ ಇದೆ. ಮಕ್ಕಳಿಗೆ ಸಿಗುತ್ತಿಲ್ಲ ಎಂದು ಚಿತ್ರ ನಿರ್ದೇಶಕ ವಿ. ನಾಗೇಂದ್ರ ಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ಕನ್ನಡ ಕಲಿತರೆ ಒಳ್ಳೆಯದಾಗುತ್ತದೆ ಎಂಬ ಭಾವನೆ ಕನ್ನಡಿಗರಿಗೆ ಇಲ್ಲವಾಗಿದೆ. ನಗರದಲ್ಲಿ ಮಾತ್ರವಲ್ಲ, ಹಳ್ಳಿಗಳಲ್ಲಿಯೂ ಇದೇ ಮನಸ್ಥಿತಿ ಇರುವುದರಿಂದ ಕನ್ನಡ ಕಲಿಯುವವರ ಸಂಖ್ಯೆ ಕುಸಿಯುತ್ತಿದೆ ಎಂದರು.

ಹೋರಾಟಗಾರರಾದ ಧರ್ಮೇಂದ್ರ ಅರೇನಹಳ್ಳಿ, ನೇ.ಭ. ರಾಮಲಿಂಗಶೆಟ್ಟಿ, ಪಾಲನೇತ್ರ, ಕೆ.ನ.ಲಿ. ಗೌಡ, ಭೀಮಶಂಕರ ಪಾಟೀಲ, ಮಂಚೇಗೌಡ, ಶಿವಕುಮಾರ್, ಕನ್ನಡ ಮೊದಲು ಬಳಗದ ಸಾರಿಕಾ ಶೋಭಾ, ಶ್ರೀರಾಜ್, ವಾಣಿ ಅಲ್ಲರಂಡ, ಶಶಿಕುಮಾರ್, ಜಯರಾಮ್, ಗಿರೀಶ್ ಉಪಸ್ಥಿತರಿದ್ದರು.



ಖಾಸಗಿ ಆಂಗ್ಲ ಶಾಲೆಗಳ ಕನ್ನಡ ದ್ರೋಹ ತಡೆಯಲು ನಡೆದ ದುಂಡುಮೇಜಿನ ಸಭೆಯಲ್ಲಿ ‘ಕನ್ನಡ ಶಾಲೆಗಳನ್ನು ಉಳಿಸಿ’ ನಾಮಫಲಕಗಳನ್ನು ಪ್ರದರ್ಶಿಸಲಾಯಿತು — ಪ್ರಜಾವಾಣಿ ಚಿತ್ರ

ಮಾತೃಭಾಷೆಯಲ್ಲ, ರಾಜ್ಯಭಾಷೆ

‘ಮಾತೃಭಾಷೆಯಲ್ಲಿ ಕಲಿಯುವುದು ಕಡ್ಡಾಯ ಮಾಡಿದರೆ ರಾಜ್ಯದಲ್ಲಿ ಬೇರೆ ಬೇರೆ ಭಾಷೆ ಮಾತನಾಡುವವರು ಇರುವುದರಿಂದ ಸಮಸ್ಯೆಯಾಗುತ್ತದೆ. ರಾಜ್ಯಭಾಷೆಯಲ್ಲಿ ಕಲಿಯಬೇಕು ಎಂಬುದನ್ನು ಕಡ್ಡಾಯಗೊಳಿಸಬೇಕು’ ಎಂದು ಕನ್ನಡ ಮೊದಲು ಬಳಗದ ಅಧ್ಯಕ್ಷ ಜ್ಞಾನೇಶ್ವರ್ ಆಗ್ರಹಿಸಿದರು.

‘ಯೇಗ್ದಾಗೆಲ್ಲಾ ಐತೆ’

• ಎಸ್. ಸೂರ್ಯಪ್ರಕಾಶ ಪಂಡಿತ್


ನಾವು ಆಗಾಗ ‘ಯೋಗ’ ಎಂಬ ಶಬ್ದವನ್ನು ಕೇಳುತ್ತಿರುತ್ತೇವೆ. ‘ಅವನಿಗೆ ಒಳ್ಳೆಯ ಯೋಗ’ – ಎಂಬಂಥ ಮಾತುಗಳಿಂದ ಹಿಡಿದು, ‘ಯೋಗವನ್ನು ಮಾಡು, ಎಲ್ಲ ಸುಧಾರಿಸುತ್ತೆ’ ಎನ್ನುವ ಮಾತುಗಳ ತನಕ ಕೇಳುತ್ತಿರುತ್ತೇವೆ. ಇಲ್ಲಿಯ ಮೊದಲನೆಯ ‘ಯೋಗ’ಕ್ಕೆ ಜೀವನಕ್ಕೆ ಒದಗಿದ ಒಳ್ಳೆಯ ಕಾಲ/ಅದೃಷ್ಟ ಎಂದೂ, ಎರಡನೆಯ ‘ಯೋಗ’ಕ್ಕೆ ಆರೋಗ್ಯವನ್ನು ಕಾಪಾಡಬಲ್ಲ ಯೋಗಾಸನ ಎಂದೂ ಅರ್ಥ. ಆದರೆ ಇಲ್ಲೊಂದು ಸ್ವಾರಸ್ಯವುಂಟು: ಜೀವನದಲ್ಲಿ ನಮಗೆ ಮೊದಲನೆಯ ಯೋಗ ಒದಗಬೇಕಾದರೆ ನಾವು ಎರಡನೆಯ ಯೋಗದಲ್ಲಿ ತೊಡಗಿಕೊಳ್ಳಬೇಕು. ಅರ್ಥಾತ್, ನಮ್ಮ ದೇಹ ಮತ್ತು ಮನಸ್ಸುಗಳ ಆರೋಗ್ಯವನ್ನು ಕಾಪಾಡಿಕೊಂಡರೆ, ಆಗ ನಮ್ಮ ಜೀವನ ಸುಖಮಯವಾಗಿರುತ್ತದೆ. 'ಯೇಗ್ದಾಗೆಲ್ಲಾ ಐತೆ' ಎಂಬ ಜನಪದದ ತಿಳಿವಳಿಕೆ ಇಲ್ಲಿ ಮನನೀಯ.

ಇಂದು ಯೋಗಕ್ಕೆ ಒಳ್ಳೆಯ ‘ಯೋಗ’ವೇ ಪ್ರಾಪ್ತವಾಗಿದೆ; ಪ್ರಪಂಚದ ತುಂಬ ಯೋಗಕ್ಕೆ ಮನ್ನಣೆ ದಕ್ಕಿದೆ. ಸಾವಿರಾರು ವರ್ಷಗಳಿಂದ ಈ ನೆಲದಲ್ಲಿ ಯೋಗಕ್ಕೆ ನೆಲೆ ಸಿಕ್ಕಿದೆ. ನಮ್ಮ ದೇಶದಲ್ಲಿ ತೋರಿಕೊಂಡಿರುವ ಬಹುಪಾಲು ದರ್ಶನಗಳು ಯೋಗವನ್ನು ಅಧ್ಯಾತ್ಮದ ಸಾಧನೆಯೊಂದಿಗೆ ಸಮೀಕರಿಸಿ, ಸ್ವೀಕರಿಸಿವೆ; ಅಲ್ಲಿಯ ವಿವರಗಳಲ್ಲಿ ವ್ಯತ್ಯಾಸಗಳಿರಬಹುದು; ಆದರೆ ಆಶಯದಲ್ಲಿ ಏಕಸೂತ್ರತೆಯೇ ಇದೆ.

ಆಧುನಿಕ ವಿಜ್ಞಾನ ಮತ್ತು ವೈದ್ಯಶಾಸ್ತ್ರ ತುಂಬ ಬೆಳೆದಿದೆ ಎಂಬುದು ದಿಟವೇ. ಹೀಗಿದ್ದರೂ ಇಂದು ನಮ್ಮನ್ನು ರೋಗಗಳೇ ಆಳುತ್ತಿರುವುದು! ಎಷ್ಟು ಔಷಧಗಳನ್ನು ಕಂಡುಹಿಡಿದರೂ, ಎಷ್ಟು ಚಿಕಿತ್ಸೆಯ ವಿಧಿ-ವಿಧಾನಗಳನ್ನು ಅಭಿವೃದ್ಧಿಪಡಿಸಿದರೂ ಮನುಷ್ಯ ಕಾಯಿಲೆಗಳ ಸುಳಿಯಲ್ಲಿ ಸಿಕ್ಕಿ, ನರಳುತ್ತಿರುವುದು ವಾಸ್ತವ. ಅವನು ತಿನ್ನುತ್ತಿರುವ ಆಹಾರ ಕಲುಷಿತವಾಗಿದೆ, ಸೇವಿಸುತ್ತಿರುವ ಗಾಳಿ ಶುದ್ಧವಾಗಿಲ್ಲ; ಕುಡಿಯುತ್ತಿರುವ ನೀರೂ ಅಯೋಗ್ಯವಾಗಿದೆ; ವಾಸಿಸುತ್ತಿರುವ ಒಟ್ಟು ಪರಿಸರವೇ ಉದ್ವೇಗಮಯವಾಗಿದೆ. ಹೀಗಾಗಿ ಅವನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಸುಲಭದ ಸಾಹಸವಲ್ಲ. ಇಂಥ ವಿಷಮಯ ಸನ್ನಿವೇಶದಲ್ಲಿ ಮನುಷ್ಯನ ಸರ್ವಾಂಗಿಣ ಆರೋಗ್ಯವನ್ನು ಕಾಪಾಡಬಲ್ಲ ಶಕ್ತಿ ಯೋಗಕ್ಕೆ ಇದೆ – ಎಂಬ ಭರವಸೆಯೊಂದಿಗೆ ಯೋಗ ನಮ್ಮ ಜೀವನದಲ್ಲಿ ಇಂದು ಪ್ರವೇಶಿಸಿದೆ. ನಾವು ಅನುಭವಿಸುತ್ತಿರುವ ಎಲ್ಲ ವಿಧದ ರೋಗಗಳಿಗೂ ಯೋಗವೇ ಮದ್ದಾದೀತೆ – ಎಂಬುದು ಬೇರೆಯ ಮಾತು; ಆದರೆ ಯೋಗ ಇಂಥದೊಂದು ಉಮೇದಿನಿಂದಲೇ ನಮ್ಮ ಹತ್ತಿರಕ್ಕೆ ಬಂದಿರುವುದು ಎಂಬುದನ್ನು ತಳ್ಳಿಹಾಕುವಂತಿಲ್ಲ.

ಇಂಥ ‘ಪವಾಡಸದೃಶ’ ಶಕ್ತಿಗಳನ್ನು ಗರ್ಭೀಕರಿಸಿಕೊಂಡಿರುವ ಯೋಗದ ದಿಟವಾದ ಲಕ್ಷಣ ಏನು? ಇದು ನಮ್ಮ ಕಾಲದಲ್ಲಿ ನಾವು ಕೇಳಿಕೊಳ್ಳಬೇಕಾದ ಮಹತ್ವದ ಪ್ರಶ್ನೆಯೇ ಹೌದು. ಏಕೆಂದರೆ ಯೋಗ ಎಂಬುದು ಇಂದು ಎಲ್ಲೆಲ್ಲೂ ‘ಸಲ್ಲುವ’ ಪದವಾಗಿರುವುದರಿಂದ, ಅದನ್ನು ಎಲ್ಲೆಲ್ಲೂ ‘ತಳ್ಳುವ’ ಕೃತ್ರಿಮ ಸಾಧನಗಳೂ ಮುನ್ನೆಲೆಗೆ ಬರುವುದು ಸಹಜವೇ. ಇಂಥ ಸಂದರ್ಭದಲ್ಲಿ, ಯೋಗದ ಈ ವೇಷಾಂತರಗಳ ಬಗ್ಗೆ ನಾವು ಎಚ್ಚರವಾಗಿರತಕ್ಕದ್ದು. ಸ್ವಾರಸ್ಯ ಎಂದರೆ, ನಾವು ಮಾಡುವ ಒಂದೊಂದು ಕೆಲಸವನ್ನೂ ಎಚ್ಚರದಿಂದಲೂ ಏಕಾಗ್ರದಿಂದಲೂ ಮಾಡುವುದೇ ದಿಟವಾದ ಯೋಗ; ‘ಯೋಗಃ ಕರ್ಮಸು ಕೌಶಲಂ’ ಎಂಬ ಗೀತಾಚಾರ್ಯನ ಮಾತೇ ಯೋಗಶಾಸ್ತ್ರದ ಬೀಜಮಂತ್ರ. ನಮಗೆ ‘ಯೋಗ’ವಾಗಿ ಒದಗಿಬರದ ‘ಅ-ಯೋಗ’ಗಳನ್ನು ಎಚ್ಚರದಿಂದ ಕಂಡುಕೊಂಡು, ಅವುಗಳಿಂದ ನಾವು ‘ವಿ-ಯೋಗ’ವನ್ನು ಸಾಧಿಸುವುದೇ ಯೋಗಾಭ್ಯಾಸ. ‘ಚಿತ್ತವೃತ್ತಿಗಳ ನಿರೋಧವೇ ಯೋಗ’ ಎಂಬ ಪತಂಜಲಿ ಮಹರ್ಷಿಯ ಯೋಗಸೂತ್ರ ಮನನೀಯ. ಮನಸ್ಸು, ಬುದ್ಧಿ ಮತ್ತು ಅಹಂಕಾರಗಳ ಸಮಷ್ಟಿಯೇ ಚಿತ್ತ. ಇವುಗಳಿಂದ ಬಿಡುಗಡೆಯನ್ನು ಸಾಧಿಸಿದ ಮನಸ್ಸು, ಅದು ‘ಯೋಗ’ದಲ್ಲಿದೆ ಎಂದೇ ಹೌದು. ಆಧುನಿಕತೆಗೆ ಇಂಥದೊಂದು ‘ಯೋಗದಿನ’ ದಕ್ಕೀತೆ?





ದೃಷ್ಟಿದೋಷ: ಚಿಕಿತ್ಸೆಗಾಗಿ ಒಪ್ಪಂದ

ಬೆಂಗಳೂರು: ಮಕ್ಕಳ ಕಣ್ಣಿನ ಆರೋಗ್ಯ ಮತ್ತು ಮಯೋಪಿಯಾ (ಸಮೀಪ ದೃಷ್ಟಿ) ಸಮಸ್ಯೆಯ ಚಿಕಿತ್ಸೆಗೆ ಶಂಕರ ಕಣ್ಣಿನ ಆಸ್ಪತ್ರೆ ಹಾಗೂ ಹಾಕಾಂಗ್‌ನ ಚೈನೀಸ್ ವಿಶ್ವವಿದ್ಯಾಲಯ ಒಡಂಬಡಿಕೆ ಮಾಡಿಕೊಂಡಿವೆ.

ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆಯ ವೈದ್ಯಕೀಯ ಆಡಳಿತ, ಗುಣಮಟ್ಟ ಮತ್ತು ತರಬೇತಿಯ ಅಧ್ಯಕ್ಷ ಡಾ. ಕೌಶಿಕ್ ಮುರಳಿ ಅವರು ಒಡಂಬಡಿಕೆಗೆ ಸಹಿ ಹಾಕಿದರು.

‘ಮಯೋಪಿಯಾ ಆನುವಂಶಿಕ ಹಾಗೂ ಚಟುವಟಿಕೆ ರಹಿತ ಜೀವನ ಶೈಲಿಯಿಂದ ಬರುವಂತಹ ದೃಷ್ಟಿ ಸಮಸ್ಯೆಯಾಗಿದೆ. ಈ ಸಮಸ್ಯೆ ನಿವಾರಣೆಗೆ ಸಹಕಾರಿಯಾದ ತಾಂತ್ರಿಕ ವಿಧಾನಗಳ ಅಭಿವೃದ್ಧಿಗೆ ಈ ಒಡಂಬಡಿಕೆ ಸಹಕಾರಿಯಾಗಿದೆ.’ ಎಂದು ಡಾ. ಕೌಶಿಕ್ ಮುರಳಿ ಹೇಳಿದರು.

ಚೈನೀಸ್ ವಿಶ್ವವಿದ್ಯಾಲಯದ ನೇತ್ರ ವಿಜ್ಞಾನ ವಿಭಾಗದ ಅಧ್ಯಕ್ಷ ಕ್ಲೆಮೆಂಟ್ ಥಾಮ್ ಸಹ ಮಾತನಾಡಿದರು.

ಗೀತಂ ವಿವಿ: 315 ವಿದ್ಯಾರ್ಥಿಗಳಿಗೆ ಪದವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೀತಂ ಡೀಮ್ಡ್ ವಿಶ್ವ ವಿದ್ಯಾಲಯವು ವಿಶಾಖಪಟ್ಟಣಂನಲ್ಲಿ ಹಮ್ಮಿಕೊಂಡಿದ್ದ ಗೀತಂ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಗೀತಂ ದಂತ ವೈದ್ಯಕೀಯ ಕಾಲೇಜಿನ ಜಂಟಿ ಪದವಿ ಪ್ರದಾನ ಸಮಾರಂಭದಲ್ಲಿ ಒಟ್ಟು 305 ವಿದ್ಯಾರ್ಥಿಗಳು ಪದವಿ ಸ್ವೀಕರಿಸಿದರು.

ಪದವಿ ಪಡೆದ ವಿದ್ಯಾರ್ಥಿಗಳಲ್ಲಿ 153 ಎಂಬಿಬಿಎಸ್ ಪದವೀಧರರು ಸೇರಿದ್ದಾರೆ. ಪದವಿ ಪ್ರದಾನ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಂಸದ ಡಾ.ಸಿ.ಎನ್. ಮಂಜುನಾಥ್, ‘ವೈದ್ಯರಾದವರು ರೋಗಿಗಳ ಜತೆಗೆ ಪರಿಣಾಮಕಾರಿಯಾಗಿ ಸಂವಹನ ನಡೆಸಬೇಕು. ಕೈಗೆಟುಕುವ ದರದಲ್ಲಿ ಗುಣಮಟ್ಟದ ಚಿಕಿತ್ಸೆ ಒದಗಿಸುವುದು ಇಂದಿನ ಅಗತ್ಯ. ಕೃತಕ ಬುದ್ಧಿಮತ್ತೆಯಂತಹ ಅತ್ಯಾಧುನಿಕ ತಂತ್ರಜ್ಞಾನಗಳು ರೋಗ ವಿಶ್ಲೇಷಣೆಗೆ ಸಹಕಾರಿಯಾಗಿವೆ. ಆದರೆ, ಇವು ವೈದ್ಯಕೀಯ ವೃತ್ತಿಪರರ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ಕೇಂದ್ರ ಸರ್ಕಾರವು ವೈದ್ಯಕೀಯ ಸೀಟುಗಳನ್ನು ಹೆಚ್ಚಳ ಮಾಡುವ ಜತೆಗೆ, ಜನರ ಆರೋಗ್ಯ ವೃದ್ಧಿಗೆ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಅಗ್ಗದ ದರದಲ್ಲಿ ಔಷಧ ಒದಗಿಸಲು ಜನೌಷಧ ಮಳಿಗೆಗಳನ್ನು ಸ್ಥಾಪಿಸಲಾಗಿದೆ. 17 ಕ್ಯಾನ್ಸರ್ ಔಷಧಗಳ ಮೇಲಿನ ಸುಂಕವನ್ನು ತೆಗೆಯಲಾಗಿದೆ. ಗರ್ಭಕಂಠ ಕ್ಯಾನ್ಸರ್ ತಡೆಗೆ ದೇಶದಾದ್ಯಂತ 14 ವರ್ಷದ ಹೆಣ್ಣು ಮಕ್ಕಳಿಗೆ ಎಚ್‌ಪಿವಿ ಲಸಿಕೆ ವಿತರಿಸಲಾಗುತ್ತಿದೆ’ ಎಂದು ಹೇಳಿದರು.

ಗೀತಂ ಅಧ್ಯಕ್ಷ ಎಂ.ಶ್ರೀಭರತ್, ‘ರೋಗಿಗಳ ಜತೆಗೆ ಭಾವನಾತ್ಮಕ ಸಂಪರ್ಕ ಸಾಧಿಸುವುದು ವೈದ್ಯಕೀಯ ಕ್ಷೇತ್ರದ ಅಡಿಪಾಯವಾಗಿದೆ. ರೋಬೊಟಿಕ್‌ನಂತಹ ತಂತ್ರಜ್ಞಾನಗಳು ವೈದ್ಯಕೀಯ ಕ್ಷೇತ್ರ ಪ್ರವೇಶಿಸಿದರೂ, ನುರಿತ ಶಸ್ತ್ರ ಚಿಕಿತ್ಸಕರ ಸ್ಥಾನ ತುಂಬಲು ಸಾಧ್ಯವಿಲ್ಲ’ ಎಂದು ಅಭಿಪ್ರಾಯಪಟ್ಟರು.

ಗೀತಂ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಪ್ರಾಂಶುಪಾಲ ಡಾ.ಜಿ. ಶಾಂಬಶಿವಾ ರಾವ್, ಗೀತಂ ವಿವಿ ಸಹ ಕುಲಾಧಿಪತಿ (ವೈದ್ಯಕೀಯ ವಿಜ್ಞಾನ) ಡಾ. ಗೀತಾಂಜಲಿ ಭಟಮಾನಬಾನೆ, ಡಾ. ಗೌತಮ್ ರಾವ್, ಕುಲಸಚಿವ ಡಾ.ಡಿ. ಗುಣಶೇಖರನ್, ಗೀತಂ ದಂತ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ವಿ.ವಿ. ನರಸಿಂಹ ರಾವ್ ಉಪಸ್ಥಿತರಿದ್ದರು.



ಸಮಾರಂಭದಲ್ಲಿ ಡಾ.ಸಿ.ಎನ್ ಮಂಜುನಾಥ್ ಅವರು ಪದವಿ ಪ್ರದಾನ ಮಾಡಿದರು. ಎಂ.ಶ್ರೀಭರತ್, ಡಾ.ಜಿ. ಶಾಂಬಶಿವಾ ರಾವ್, ಡಾ. ಗೀತಾಂಜಲಿ ಭಟಮಾನಬಾನೆ, ಡಾ. ಗೌತಮ್ ರಾವ್, ಡಾ.ಡಿ. ಗುಣಶೇಖರನ್, ಡಾ.ವಿ.ವಿ. ನರಸಿಂಹ ರಾವ್ ಉಪಸ್ಥಿತರಿದ್ದರು

2 ಸಾವಿರ ಮಂದಿ ಯೋಗಾಭ್ಯಾಸ

ಅಂತರರಾಷ್ಟ್ರೀಯ ಯೋಗ ದಿನ ಪ್ರಯುಕ್ತ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಆಯುಷ್ ಇಲಾಖೆಯು ಭಾನುವಾರ (ಜೂನ್ 21) ರಾಜ್ಯದಾದ್ಯಂತ ಯೋಗಾಭ್ಯಾಸಕ್ಕೆ ವ್ಯವಸ್ಥೆ ಮಾಡಿದ್ದು, ವಿಧಾನಸೌಧದ ಮುಂಭಾಗ ನಡೆಯುವ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಎರಡು ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಇಲಾಖೆ ಅಂದಾಜಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆರೋಗ್ಯ ಸಚಿವ ಯು.ಟಿ. ಖಾದರ್, ‘12ನೇ ವರ್ಷದ ಯೋಗ ದಿನಾಚರಣೆಯನ್ನು ‘ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ’ ಘೋಷವಾಕ್ಯದಡಿ ಹಮ್ಮಿಕೊಳ್ಳಲಾಗಿದೆ. ವಿಧಾನಸೌಧದ ಮುಂಭಾಗ ಬೆಳಿಗ್ಗೆ 7 ಗಂಟೆಯಿಂದ ಯೋಗಾಭ್ಯಾಸ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಈ ಕಾರ್ಯಕ್ರಮ ಉದ್ಘಾಟಿಸುತ್ತಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾಲ್ಗೊಳ್ಳುತ್ತಾರೆ. ನಟಿ ಸುಧಾರಾಣಿ, ವಸಿಷ್ಠ ಸಿಂಹ ಹಾಗೂ ಹರಿಪ್ರಿಯಾ ಅವರನ್ನು ಆಹ್ವಾನಿಸಲಾಗಿದೆ. 40 ನಿಮಿಷಗಳ ಯೋಗ ಪ್ರಾತ್ಯಕ್ಷಿಕೆ ನಡೆದ ಬಳಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ’ ಎಂದು ತಿಳಿಸಿದರು.

‘ಯೋಗ ದಿನವಾದ ಭಾನುವಾರ ರಾಜ್ಯದಾದ್ಯಂತ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯಕ್ರಮಗಳು ನಡೆಯಲಿದ್ದು, 10 ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಯೋಗಾಭ್ಯಾಸವನ್ನು ಒಂದು ದಿನಕ್ಕೆ ಸೀಮಿತಗೊಳಿಸಿದೆ ನಿತ್ಯವೂ ಮಾಡಬೇಕಿದೆ. ಆದ್ದರಿಂದ ಈ ವರ್ಷ ‘ನಿತ್ಯ ಯೋಗ’ ಶೀರ್ಷಿಕೆಯಡಿ ಎಲ್ಲ ಆಯುಷ್ ಸಂಸ್ಥೆಗಳಲ್ಲಿ 365 ದಿನ ವಿಶೇಷ ಯೋಗ ಶಿಬಿರಗಳನ್ನು ಆಯೋಜಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ’ ಎಂದರು.

‘ಯೋಗ ದಿನಾಚರಣೆಯ ಭಾಗವಾಗಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಜಯದೇವ ಹೃದ್ರೋಗ ಸಂಸ್ಥೆ ಸೇರಿ ವಿವಿಧೆಡೆ ಜುಲೈ ತಿಂಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದರು.

‘360 ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ‘ಗ್ರಾಮೀಣ ಯೋಗ’ ಕಾರ್ಯಕ್ರಮ ಇಡೀ ವರ್ಷ ನಡೆಯಲಿದೆ. ಯುವಜನರಿಗೆ ಯೋಗದ ಬಗ್ಗೆ ಆಸಕ್ತಿ ಹೆಚ್ಚಿಸಲು ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಆಶ್ರಯದಲ್ಲಿ ವಿವಿಧ ಸ್ಪರ್ಧೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ 50 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು’ ಎಂದು ಮಾಹಿತಿ ನೀಡಿದರು. ಆರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ, ಆಯುಕ್ತ ಗುರುದತ್ತ ಹೆಗಡೆ, ಆಯುಷ್ ಇಲಾಖೆಯ ಆಯುಕ್ತ ಸುನೀಲ್ ಪನ್ವಾರ್ ಉಪಸ್ಥಿತರಿದ್ದರು.

‘ಅನ್ನದಾತನ ಆರ್ಥಿಕ ಸ್ಥಿತಿ ಸುಧಾರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತಾವಧಿಯಲ್ಲಿ ಕೃಷಿಕರ ಆರ್ಥಿಕ ಪರಿಸ್ಥಿತಿ ಗಣನೀಯ ಮಟ್ಟದಲ್ಲಿ ಸುಧಾರಿಸಿದೆ. ಅದಕ್ಕೆ ಕಿಸಾನ್ ಸಮ್ಮಾನ ಯೋಜನೆಯ ಕೊಡುಗೆಯೂ ಇದೆ ಎಂದು ಕೇಂದ್ರದ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

‘ಪಿಎಂ-ಕಿಸಾನ್’ ಯೋಜನೆಯ 23ನೇ ಕಂತಿನ ಹಣವನ್ನು ರೈತರ ಬ್ಯಾಂಕ್ ಖಾತೆಗಳಿಗೆ ಪ್ರಧಾನಿ ನರೇಂದ್ರ ಮೋದಿ ವರ್ಗಾವಣೆ ಮಾಡುವ ಯೋಜನೆಗೆ ಸಂಬಂಧಿಸಿದಂತೆ ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ತಾರಕೇಶ್ವರದಲ್ಲಿ ನಡೆದ ಈ ಮುಖ್ಯ ಕಾರ್ಯಕ್ರಮಕ್ಕೆ ಸಚಿವ ಕುಮಾರಸ್ವಾಮಿ ಅವರು ವರ್ಚುವಲ್ ವೇದಿಕೆ ಮೂಲಕ ಹಾಜರಾದರು. 23ನೇ ಕಂತಿನ ₹18,800 ಕೋಟಿ ಹಣವನ್ನು ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದ್ದಾರೆ. ಬಿತ್ತನೆ ಸಂದರ್ಭದಲ್ಲಿ ರೈತರಿಗೆ ಬಿತ್ತನೆ ಬೀಜ, ಗೊಬ್ಬರ ಖರೀದಿಗೆ ಈ ಹಣವು ನೆರವಿಗೆ ಬರಲಿದೆ ಎಂದು ಹೇಳಿದರು. ಯಾವುದೇ ರೀತಿಯ ಮಧ್ಯವರ್ತಿಗಳು ಇಲ್ಲದ, ಸೋರಿಕೆ ಇಲ್ಲದ ರೀತಿಯಲ್ಲಿ ಹಣವನ್ನು ರೈತರ ಖಾತೆಗಳಿಗೆ ನೇರ ವರ್ಗಾವಣೆ ಆಗಿದೆ. 9.44 ಕೋಟಿ ರೈತರಿಗೆ ತಲಾ ₹2,000 ಜಮೆ ಆಗಿದೆ ಎಂದು ಹೇಳಿದರು. ‘ದೇಶಕ್ಕೆ ಅನ್ನ ನೀಡುವ ಅನ್ನದಾತನ ಸಬಲೀಕರಣ ಆಗದಿದ್ದರೆ ಅಭಿವೃದ್ಧಿಗೆ ಅರ್ಥ ಇರುವುದಿಲ್ಲ. ಕಳೆದ 12 ವರ್ಷಗಳಲ್ಲಿ ಇಂತಹ ವಿರೋಧಾಭಾಸಗಳಿಗೆ ತಿಲಾಂಜಲಿ ಇಟ್ಟು ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಕಲ್ಯಾಣಕ್ಕಾಗಿ ದುಡಿಯುತ್ತಿದ್ದಾರೆ’ ಎಂದರು.

2026-27ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಬೃಹತ್ ಪ್ರಮಾಣದ ಅನುದಾನ ನೀಡಲಾಗಿದೆ. ರೈತರಿಗೆ ಕೈಗೆಟುಕುವ ಬೆಲೆಯಲ್ಲಿ ರಸಗೊಬ್ಬರಗಳು ಸಕಾಲಕ್ಕೆ ದೊರೆಯುವಂತೆ ಮಾಡುವ ಸರ್ಕಾರದ ಕ್ರಮ ವಹಿಸಿದೆ. ದೇಶೀಯ ಉತ್ಪಾದನೆಗೆ ಬೆಂಬಲ ನೀಡುವುದು ಮತ್ತು ಪೋಷಕಾಂಶಗಳ ಸಮತೋಲಿತ ಬಳಕೆಯನ್ನು ಉತ್ತೇಜಿಸುವುದು ಕೇಂದ್ರದ ಮುಖ್ಯ ಉದ್ದೇಶವಾಗಿದೆ ಎಂದರು.

ಭಾರತೀಯ ತೋಟರಿಕಾ ಸಂಶೋಧನಾ ಸಂಸ್ಥೆಯ ನಿರ್ದೇಶಕ ಟಿ.ಕೆ. ಬೆಹೆರಾ, ಸಂಸ್ಥೆಯ ಯೋಜನಾ ನಿರ್ದೇಶಕ ಪ್ರಕಾಶ್ ಪಾಟೀಲ ಉಪಸ್ಥಿತರಿದ್ದರು.

ಬೆಂಗಳೂರಿಗೆ 4.75 ಟಿಎಂಸಿ ಅಡಿ ನೀರು

ಪ್ರಜಾವಾಣಿ ವಾರ್ತೆ


ಬೆಂಗಳೂರು: ಮೇಕೆದಾಟು ಅಣೆಕಟ್ಟು ನಿರ್ಮಾಣವಾದರೆ ಬೆಂಗಳೂರಿಗೆ 4.75 ಟಿಎಂಸಿ ಅಡಿ ಕುಡಿಯುವ ನೀರು ಸಿಗುತ್ತದೆ. 400 ಮೆಗಾವಾಟ್ ವಿದ್ಯುತ್ ಉತ್ಪಾದಿಸಬಹುದು ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಯೋಜನೆಯ ನೀರನ್ನು ವ್ಯವಸಾಯಕ್ಕೆ ಬಳಸುವುದಿಲ್ಲ. ನಾಲ್ಕೈದು ವರ್ಷಕ್ಕೊಮ್ಮೆ ರಾಜ್ಯದಲ್ಲಿ ಮಳೆ ಕೊರತೆ ಎದುರಾಗುತ್ತಿದೆ. ಇಂತಹ ಸಮಯದಲ್ಲಿಯೂ ಸುಪ್ರೀಂಕೋರ್ಟ್ ಆದೇಶದಂತೆ ತಮಿಳುನಾಡಿಗೆ ನೀರು ಹರಿಸಬೇಕಾಗುತ್ತದೆ. ಈ ಎಲ್ಲ ವಿಷಯಗಳನ್ನು ಪರಿಶೀಲಿಸಿ, ಮೇಕೆದಾಟು ಯೋಜನೆಯ ನೀರನ್ನು ಕೃಷಿಗೆ ಬಳಸದಿರಲು ನಿರ್ಧರಿಸಲಾಗಿದೆ’ ಎಂದರು.

‘ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ಸುಪ್ರೀಂಕೋರ್ಟ್‌ಗೆ ಹಾಕಿದ್ದ ಅರ್ಜಿ ಎರಡು ಬಾರಿಯೂ ತಿರಸ್ಕೃತವಾಗಿದೆ. ಅವರ ತಕರಾರಿನಲ್ಲಿ ಸತ್ಯಾಂಶವಿಲ್ಲ. ಕರ್ನಾಟಕದ ಪಾಲಿಗೆ ಹಂಚಿಕೆಯಾಗಿರುವ ನೀರನ್ನಷ್ಟೇ ಬಳಸಿಕೊಳ್ಳುತ್ತೇವೆ. ಅಣೆಕಟ್ಟು ನಿರ್ಮಾಣದಿಂದ ತಮಿಳುನಾಡಿಗೂ ಉಪಯೋಗ. ಸಂಕಷ್ಟದ ಸಮಯದಲ್ಲಿ ನೀರು ಹರಿಸಲು ಸಾಧ್ಯವಾಗುತ್ತದೆ. ವಿರೋಧ ಮಾಡಿದರೆ ಅವರ ರೈತರಿಗೇ ನಷ್ಟ’ ಎಂದು ಹೇಳಿದರು.

‘ಉತ್ತಮ ಮಳೆಯಾದರೆ ಯಾವ ಸಮಸ್ಯೆಯೂ ಇರುವುದಿಲ್ಲ. ಕೆಆರ್‌ಎಸ್‌ನಲ್ಲಿ 11 ಟಿಎಂಸಿ ಅಡಿ ಇದ್ದರೂ ಕುಡಿಯುವ ನೀರಿನ ಅಗತ್ಯ ಹೊರತುಪಡಿಸಿ ಕೇವಲ 3 ಟಿಎಂಸಿ ಅಡಿ ಹೆಚ್ಚುವರಿ ನೀರಿದೆ. ಮಳೆ ಕೊರತೆಯ ಸಮಯದಲ್ಲಿ ಕರ್ನಾಟಕ ನೆಲ, ಜಲ, ಭಾಷೆಯ ವಿಚಾರದಲ್ಲಿ ಒಗ್ಗಟ್ಟಿನಿಂದ ಹೋರಾಡಬೇಕಾಗುತ್ತದೆ. ಚುನಾವಣೆ ನಂತರ ವಿರೋಧ ಮರೆಯಬೇಕು, ನೀರಿನ ವಿಚಾರದಲ್ಲಿ ಎಲ್ಲರೂ ಒಟ್ಟಿಗೆ ಕೆಲಸ ಮಾಡಬೇಕು’ ಎಂದರು.

‘ಕೇಂದ್ರ ಸಚಿವರನ್ನು ಈಚೆಗೆ ಭೇಟಿ ಮಾಡಿ ಮಾತುಕತೆ ನಡೆಸಲಾಗಿದೆ. ಮೇಕೆದಾಟು ವಿಚಾರ ಕುರಿತು ತಮಿಳುನಾಡು ಮುಖ್ಯಮಂತ್ರಿ ಜತೆ ಮಾತುಕತೆಗೆ ಅವಕಾಶ ಕೇಳಲಾಗಿದೆ. ಕೃಷ್ಣ ನದಿ ನೀರಿನ ಹಂಚಿಕೆಯಲ್ಲೂ ಸೂಕ್ತ ಪರಿಹಾರ ಸಿಗಬೇಕಿದೆ’ ಎಂದು ಹೇಳಿದರು.



ಮೇ-ಜೂನ್‌ನಲ್ಲಿ ವಾಡಿಕೆಯಷ್ಟು ಮಳೆ ಆಗದಿದ್ದರೂ ಕುಡಿಯುವ ನೀರಿಗೆ ತೊಂದರೆ ಇಲ್ಲ. ಎರಡು ತಿಂಗಳು ನಿಭಾಯಿಸಬಹುದು. ಪರ್ಯಾಯ ವ್ಯವಸ್ಥೆಗಳ ಕುರಿತು ವಿವಿಧ ಇಲಾಖೆಗಳ ಜತೆ ಸಮನ್ವಯ ಸಾಧಿಸಲಾಗುತ್ತಿದೆ

ರಾಮಲಿಂಗಾರೆಡ್ಡಿ, ಜಲಸಂಪನ್ಮೂಲ ಸಚಿವ

ಎಸ್ಸಿ-ಎಸ್ಟಿ ಕಾಯ್ದೆ ದುರ್ಬಳಕೆ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾರ್ಮಿಕ ಮತ್ತು ಸಿವಿಲ್ ಪ್ರಕರಣಗಳಿಗೆ ಕ್ರಿಮಿನಲ್ ಸ್ವರೂಪ ನೀಡಿ, ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಆರೋಪ ಹೊರಿಸಿ ಕಾಯ್ದೆಯ ದುರುಪಯೋಗ ಮಾಡಿಕೊಳ್ಳಲು ಅವಕಾಶವಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಭದ್ರಾವತಿಯ ‘ಮಲ್ನಾಡ್ ಅಲಾಯ್ಸ್ ಕಾಸ್ಟಿಂಗ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ’ಯ ವ್ಯವಸ್ಥಾಪಕ ಮಧುಕರ್ ಜೋಯಿಸ್ ಸೇರಿದಂತೆ ಮತ್ತಿತರರು ಸಲ್ಲಿಸಿದ್ದ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಕಂಪನಿ ಷೋಕಾಸ್ ನೋಟಿಸ್ ನೀಡಿ ಶಿಸ್ತು ಕ್ರಮ ಕೈಗೊಂಡಿದ್ದಕ್ಕೆ ಪ್ರತೀಕಾರವಾಗಿ ಆಡಳಿತ ಮಂಡಳಿ ವಿರುದ್ಧ ಈ ಸುಳ್ಳು ದೂರನ್ನು ದಾಖಲಿಸಲಾಗಿದೆ ಎಂಬುದು ವೇದ್ಯವಾಗುತ್ತದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ಕಂಪನಿ ವ್ಯವಸ್ಥಾಪಕ ನಿರ್ದೇಶಕ ಸೇರಿದಂತೆ ಐವರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದುಗೊಳಿಸಿದೆ.

‘ಪರಿಶಿಷ್ಟ ಜಾತಿ ಮತ್ತು ಪಂಗಡ ಕಾಯ್ದೆಯಡಿ ದೂರು ದಾಖಲು ಮಾಡಬೇಕಾದರೆ, ಅಂತಹ ನಿಂದನಾತ್ಮಕ ಘಟನೆಯು ಸಾರ್ವಜನಿಕರು ಗಮನಿಸುವ ಅಥವಾ ಸಾರ್ವಜನಿಕ ಸ್ಥಳದಲ್ಲಿ ನಡೆದಿರಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ಈಗಾಗಲೇ ಸಾಕಷ್ಟು ಪ್ರಕರಣಗಳಲ್ಲಿ ತೀರ್ಮಾನಿಸಿದೆ. ಹಾಗಾಗಿ, ಈ ಪ್ರಕರಣದಲ್ಲಿ ಆರೋಪಿಸಲಾದ ಘಟನೆ ಕಂಪನಿಯ ಒಳಗಿನ ನಾಲ್ಕು ಗೋಡೆಗಳ ಮಧ್ಯೆ ನಡೆದಿದೆ’ ಎಂದು ನ್ಯಾಯಪೀಠ ಅವಲೋಕಿಸಿದೆ.

‘ಸಿವಿಲ್ ಮತ್ತು ಸೇವಾ ವಿವಾದಗಳಿಗೆ ಕ್ರಿಮಿನಲ್ ಬಣ್ಣ ಬಳಿದು ವಿಶೇಷ ಕಾಯ್ದೆಗಳನ್ನು ದುರುಪಯೋಗ ಮಾಡಿಕೊಳ್ಳುವುದು ಕಾನೂನಿನ ಪ್ರಕ್ರಿಯೆಯ ದುರ್ಬಳಕೆ’ ಎಂದು ನ್ಯಾಯಪೀಠ ತಿಳಿಸಿದೆ.

ದೂರುದಾರ ರವಿ, ಭದ್ರಾವತಿ ನ್ಯೂ ಟೌನ್ ಪೊಲೀಸ್ ಠಾಣೆಯಲ್ಲಿ ಕಂಪನಿಯ ವ್ಯವಸ್ಥಾಪಕ ಮಧುಕರ್ ಜೋಯಿಸ್, ಕಾರ್ಯನಿರ್ವಾಹಕ ನಿರ್ದೇಶಕ ಪ್ರತೀಕ್ ಎಂ. ಜೋಯಿಸ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಎಸ್. ಜಗದೀಶ್ ಸೇರಿದಂತೆ ಇತರೆ ಇಬ್ಬರು ಮಾನವ ಸಂಪನ್ಮೂಲ ವಿಭಾಗದ ವ್ಯವಸ್ಥಾಪಕರ ವಿರುದ್ಧ ಜಾತಿ ನಿಂದನೆ ಹಾಗೂ ಜೀವ ಬೆದರಿಕೆ ಆರೋಪದ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.



ನಗರದಲ್ಲಿ ಇಂದು

ಎವರೆಸ್ಟ್ ಪರ್ವತಾರೋಹಿಗಳಾದ ಸಂತೋಷ್ ದೇವರಾಜಪ್ಪ, ಚಿನ್ಮಯಿ ತ್ರಿಶೂಲಮೂರ್ತಿ ಅವರಿಗೆ ಸನ್ಮಾನ: ಅತಿಥಿ: ಪಿಜಿಆರ್ ಸಿಂಧ್ಯ, ಎನ್.ಮಂಜುನಾಥ ಪ್ರಸಾದ್, ಕೀರ್ತಿ ಪಯಾಸ್, ಆಯೋಜನೆ: ಕರ್ನಾಟಕ ಮೌಂಟೇನೀರಿಂಗ್ ಅಸೋಸಿಯೇಷನ್, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, 39, ಶಾಂತಿ ಗೃಹ, ಅರಮನೆ ರಸ್ತೆ, ಬೆಳಿಗ್ಗೆ 9.30

ವಿದ್ಯಾರ್ಥಿ ನಿಲಯ ಉದ್ಘಾಟನೆ: ಎಸ್. ಕೇಶವಪ್ರಸಾದ್, ಆರ್.ಲಕ್ಷ್ಮಿನಾರಾಯಣ, ಎಂ.ಕೃಷ್ಣಪ್ಪ, ಆಯೋಜನೆ: ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿ ನಿಲಯ ಚಾರಿಟಬಲ್ ಟ್ರಸ್ಟ್, ಸ್ಥಳ: # 1,013, ಲಾಲ್‌ಬಹದ್ದೂರ್‌ಶಾಸ್ತ್ರಿ ನಗರ, ಬಿಡಿಎ ಬಡಾವಣೆ 8ನೇ ಹಂತ, ಅಂಜನಾಪುರ, ಬೆಳಿಗ್ಗೆ 10

ಸುಗಮ ಸಂಗೀತ ಶಿಬಿರ, ಕನ್ನಡ ಗಜಲ್ ಯಾತ್ರೆ: ಅತಿಥಿ: ರತ್ನಮಾಲಾ ಪ್ರಕಾಶ್, ಆಯೋಜನೆ: ಅನುರಾಗ್ಸ್ ಸಂಗೀತ ಗುರುಕುಲ, ಸ್ಥಳ: ಎಂ.ಚಿದಾನಂದಮೂರ್ತಿ ಸಭಾಂಗಣ, ವಿಜಯನಗರ ಮೆಟ್ರೊ ನಿಲ್ದಾಣ ಸಮೀಪ, ಬೆಳಿಗ್ಗೆ 10



ರತ್ನಮಾಲಾ ಪ್ರಕಾಶ್

‘ಬಲಿಪಾದ’, ‘ತಿಟ್ಟತ್ತಿ ತಿರುಗಿ’, ‘ಅಪರಿಚಿತ ನೆರಳು’ ಕೃತಿಗಳ ಜನಾರ್ಪಣೆ: ಬಸವರಾಜ ಕಲ್ಗುಡಿ, ಕರ್ಕಿ ಕೃಷ್ಣಮೂರ್ತಿ, ಎಸ್. ರಶ್ಮಿ, ಲೇಖಕರು: ಶ್ರೀಧರ ಬಳಗಾರ, ಜಯಲಕ್ಷ್ಮಿ ಪಾಟೀಲ, ಗುರುರಾಜ ಕೊಡ್ಕಣಿ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಸುಚಿತ್ರ ಸಭಾಂಗಣ, # 36, 9ನೇ ಮುಖ್ಯರಸ್ತೆ, ಬಿ.ವಿ.ಕಾರಂತ ರಸ್ತೆ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 10.30

ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಉದ್ಘಾಟನೆ: ಜಿ.ಜಗದೀಶ್, ವಿಜಯ ರಾಘವೇಂದ್ರ, ಎಸ್.ಎಚ್.ಪದ್ಮಾ ರವೀಂದ್ರ, ಅಧ್ಯಕ್ಷತೆ: ಎಂ.ನಾಗರಾಜ, ಆಯೋಜನೆ: ಬೆಂಗಳೂರು ಈಡಿಗರ ವಿದ್ಯಾರ್ಥಿ ನಿಲಯದ ಹಳೆ ವಿದ್ಯಾರ್ಥಿಗಳ ಸಂಘ, ಸ್ಥಳ: ಈಡಿಗ ಭವನ, ಕರ್ನಾಟಕ ರಾಜ್ಯ ಆರ್ಯ ಈಡಿಗರ ಸಂಘ, #185, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 10.30

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ ‘ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು’ ವಿಶೇಷ ಕಲಾ ಪ್ರದರ್ಶನ: ಆಯೋಜನೆ: ‘ಸೀಗಲ್’ ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

‘ಭಾರತ ಮತ್ತು ಕಾಂಬೋಡಿಯಾದಲ್ಲಿ ವಿಷ್ಣು- ಅನಂತಸಾಯಿ’ ಎಂಪಿಎಲ್ ಶಾಸ್ತ್ರಿ ದತ್ತಿ ಉಪನ್ಯಾಸ: ವಸುಧಾ ನಾರಾಯಣ, ಆಯೋಜನೆ: ಇನ್‌ಟ್ಯಾಕ್, ಸ್ಥಳ: ಶತಮಾನೋತ್ಸವ ಸಭಾಂಗಣ, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ರಾಷ್ಟ್ರೀಯ ಆಧ್ಯಾತ್ಮಿಕ ಮಹಾಸಮ್ಮೇಳನ: ಅತಿಥಿ: ನಿತಿನ್ ಶ್ರೀರಾಮ್ ಮೋರೆ, ಆಯೋಜನೆ: ಅಖಿಲ ಭಾರತೀಯ ಶ್ರೀಸ್ವಾಮಿ ಸಮರ್ಥ ಗುರುಪೀಠ, ಸ್ಥಳ: ಎಸ್‌ಎಂವಿ ಕನ್ವೆನ್ಶನ್ ಹಾಲ್, ಇಮ್ಮಡಿ ಹಳ್ಳಿ, ವೈಟ್‌ಫೀಲ್ಡ್, ಬೆಳಿಗ್ಗೆ 11

‘ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ’ ನೃತ್ಯ ರೂಪಕ ಪ್ರದರ್ಶನ: ರಚನೆ: ಟಿ.ಕೆ.ರಾಮಚಂದ್ರ, ಸಂಗೀತ: ಎಚ್.ಎಸ್.ನಾಗರಾಜರಾವ್, ನೃತ್ಯ: ಕಾವ್ಯಾ ಚಂದ್ರಶೇಖರ್, ದೀಪು, ಅತಿಥಿ: ಎಂ.ಕೃಷ್ಣಪ್ಪ, ಪ್ರಿಯಕೃಷ್ಣ, ರಘುನಾಥ್ ನಾಯ್ಡು, ವಿ.ಎಸ್.ಆರಾಧ್ಯ, ಆಯೋಜನೆ: ಸೂರ್ಯ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 6

‘ನನಗೆ ಕನ್ನಡ ಗೊತ್ತು’ 7ನೇ ಘಟಿಕೋತ್ಸವ: ಅತಿಥಿ: ಡಿ.ಕೆ.ಮೋಹನ್ ಬಾಬು, ಡಾ.ಸಿ.ಆರ್. ಚಂದ್ರಶೇಖರ್, ನಿತಿನ್ ಮೋಹನ್, ಸತೀಶ್ ಮಲ್ಯ, ಅರುಣ್, ವಿಕ್ರಂ ರೈ, ಮಿನಿ ಥಾಮಸ್, ಆರ್.ಕೆ.ಮೀನಾ, ಆಯೋಜನೆ: ಮಕರಂದ ಸ್ಥಳ: ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೆ.ಆರ್. ಪುರ, ಮಧ್ಯಾಹ್ನ 2

ಮಾಜಿ ಕಾನೂನು ಕಾರ್ಯದರ್ಶಿ ಕೆ.ಆರ್. ಚಾಮಯ್ಯ ಅವರಿಗೆ ಶ್ರದ್ಧಾಂಜಲಿ: ನುಡಿನಮನ: ಧರ್ಮಪಾಲ ಗೌಡ ಎಣ್ಣೆಮಜಲು, ಆಯೋಜನೆ: ಪಯಸ್ವಿನಿ ಗೆಳೆಯರ ಬಳಗ, ಸ್ಥಳ: ಗಾಂಧೀ ಸಾಹಿತ್ಯ ಸಂಘ, 8ನೇ ಕ್ರಾಸ್, 4ನೇ ಮುಖ್ಯರಸ್ತೆ, ಮಲ್ಲೇಶ್ವರ, ಮಧ್ಯಾಹ್ನ 3.30

ವಿಶ್ವ ಸಂಗೀತ ದಿನಾಚರಣೆ ಸಂಭ್ರಮ: ವಯಲಿನ್ ಜುಗಲ್‌ಬಂದಿ: ಸ.ಪ ಎನ್ಸೇಂಬಲ್, ಕರ್ನಾಟಕ ಶಾಸ್ತ್ರೀಯ ವಾದನ: ಶ್ರೇಯಾ ದೇವನಾಥ್, ಮೈಲೈ ಎಂ.ಕಾರ್ತಿಕೇಯನ್, ಪ್ರವೀಣ್ ಸ್ಪರ್ಶ್, ಗುಮ್ಮಿಡಿಪೂಂಡಿ ಆರ್.ಜೀವ, ಆಯೋಜನೆ: ಎಸ್‌ವಿಎನ್‌ಎಂಎ ಬೆಂಗಳೂರು, ಮ್ಯೂಸಿಕ್ ಡ್ರಾಮಾ ಎನ್ ಡ್ಯಾನ್ಸ್, ಸ್ಥಳ: ರಮಣ ಮಹರ್ಷಿ ಹೆರಿಟೇಜ್ ಆಡಿಟೋರಿಯಮ್, ಸಂಜಯನಗರ, ಸಂಜೆ 4.15

ಬೃಹತ್ ಮುಕ್ತಿನಾಗ ರಥೋತ್ಸವ: ಉಪಸ್ಥಿತಿ: ಪಾವಗಡ ಪ್ರಕಾಶ್‌ರಾವ್, ಗೌರಿ ಸುಬ್ರಹ್ಮಣ್ಯ, ವಿಜಯಲಕ್ಷ್ಮಿ ಕಶ್ಯಪ್, ಸುಬ್ರಹ್ಮಣ್ಯಶಾಸ್ತ್ರಿ, ಆಯೋಜನೆ ಮತ್ತು ಸ್ಥಳ: ಮುಕ್ತಿನಾಗ ದೇವಸ್ಥಾನ. ದೊಡ್ಡ ಆಲದಮರದ ರಸ್ತೆ, ರಾಮೋಹಳ್ಳಿ ಸಂಜೆ 5

ಯುವ ಸಂಗೀತೋತ್ಸವ: ಅತಿಥಿ: ಸುಮಾ ಸುಧೀಂದ್ರ, ಶಾಸ್ತ್ರೀಯ ಸಂಗೀತ ಗಾಯನ: ಲಕ್ಷ್ಮಿನಾರಾಯಣ ಭಟ್, ಸುರಂಜನ್ ಖಾಂಡಲ್‌ಕರ್, ಆಯೋಜನೆ: ಸಪ್ತಕ್, ಸ್ಥಳ: ಸೇವಾ ಸದನ, 14ನೇ ಕ್ರಾಸ್, ಮಲ್ಲೇಶ್ವರ, ಸಂಜೆ 5.30

ಜಗನ್ನಾಥದಾಸ ರಚಿತ ‘ಹರಿಕಥಾಮೃತಸಾರ’ ಪ್ರವಚನ: ದ್ವೈಪಾಯನಾಚಾರ್ಯ, ಆಯೋಜನೆ ಮತ್ತು ಸ್ಥಳ: ಸೋಸಲೆ ಶ್ರೀವ್ಯಾಸರಾಜ ಮಠ, 5ನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ಸಂಜೆ 6

‘ಯಕ್ಷಪ್ರಶ್ನೆ’ ಧಾರ್ಮಿಕ ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

‘ತಲೆದಂಡ’ ನಾಟಕ ಪ್ರದರ್ಶನ: ರಚನೆ: ಗಿರೀಶ್ ಕಾರ್ನಾಡ್, ನಿರ್ದೇಶನ: ಶಿವು ಹೊನ್ನಿಗನಹಳ್ಳಿ, ಆಯೋಜನೆ: ಬಿಂಕ ಬಿನ್ನಾಣರು ರಂಗ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

‘ಬಿಗ್ ಬಾರೊ ಅಳಿಯ’ ಹಾಸ್ಯ ನಾಟಕ ಪ್ರದರ್ಶನ: ರಚನೆ: ಎಂ.ಎಸ್.ನರಸಿಂಹಮೂರ್ತಿ, ನಿರ್ದೇಶನ: ಹನು ರಾಮಸಂಜೀವ, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ನಾಣಿ ಅಂಗಳ, ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ ಎರಡನೇ ಹಂತ, ಸಂಜೆ 5.15 ಮತ್ತು 7.30

‘ಶೂರ್ಪನಖಿ’ ನಾಟಕ ಪ್ರದರ್ಶನ: ರಚನೆ: ಅಪೂರ್ವ ಕಾಸರವಳ್ಳಿ, ನಿರ್ದೇಶನ: ವಂದನಾ ಸುಪ್ರಿಯಾ ಕಾಸರವಳ್ಳಿ, ತಂಡ: ಆನಂದಿ ಆರ್ಟ್ಸ್ ಅಕಾಡೆಮಿ, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30 ಮತ್ತು ಸಂಜೆ 7.30

ಯೋಗ ದಿನಾಚರಣೆ



108 ಸೂರ್ಯ ನಮಸ್ಕಾರ: ಅತಿಥಿ: ಅಶ್ವಿನಿ ಪುನೀತ್ ರಾಜ್‌ಕುಮಾರ್, ಆಯೋಜನೆ: ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಸ್ಥಳ: ಮಲ್ಲೇಶ್ವರ ಆಟದ ಮೈದಾನ, ಬೆಳಿಗ್ಗೆ 6.15

ಯೋಗಾಭ್ಯಾಸ ಮಾಡೋಣ ಬನ್ನಿ: ಅತಿಥಿ: ಡಾ.ಬಿ.ಎನ್.ಗಂಗಾಧರ್, ಕೆ.ಎಸ್.ನಾರಾಯಣ, ಆಯೋಜನೆ: ರಾಷ್ಟ್ರೋತ್ಥಾನ ಯೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಸ್ಥಳ: ಚಂದ್ರಗುಪ್ತಮೌರ್ಯ ಆಟದ ಮೈದಾನ, ಜಯನಗರ 5ನೇ ಹಂತ, ಬೆಳಿಗ್ಗೆ 6.15

ಯೋಗ ದಿನಾಚರಣೆ: ಉದ್ಘಾಟನೆ: ಎಸ್. ಸೋಮನಾಥ್, ಎನ್.ದಿನೇಶ್ ಹೆಗಡೆ, ಆಯೋಜನೆ: ರಾಷ್ಟ್ರೋತ್ಥಾನ ಯೋಗ ಕೇಂದ್ರ, ಸ್ಥಳ: ಉದಯಭಾನು ಕಲಾಸಂಘ ಆಟದ ಮೈದಾನ, ಕೆಂಪೇಗೌಡ ನಗರ, ಬೆಳಿಗ್ಗೆ 6.15

ಯೋಗಾಭ್ಯಾಸ: ಆಯೋಜನೆ ಮತ್ತು ಸ್ಥಳ: ಅಕ್ಷರ್ ಯೋಗ ಕೇಂದ್ರ, 13ನೇ ಕ್ರಾಸ್, ಸದಾಶಿವನಗರ, ಬೆಳಿಗ್ಗೆ 8

ಯೋಗ ದಿನಾಚರಣೆ: ಉದ್ಘಾಟನೆ: ಬಿ.ರಮೇಶ್, ಟಿ.ಉಪೇಂದ್ರ, ಆಯೋಜನೆ: ಡಾ.ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಸೆಂಟ್ರಲ್ ಕಾಲೇಜು, ಅಂಬೇಡ್ಕರ್ ವೀದಿ, ಬೆಳಿಗ್ಗೆ 8.30

ಸಂಪಾಜೆ ಸಾಂಸ್ಕೃತಿಕ ಸಂಭ್ರಮ, ‘ಯಾನೊರಿ ಬರೊಲಿಯಾ’ ತುಳು ಹಾಸ್ಯ ನಾಟಕ ಪ್ರದರ್ಶನ: ಉದ್ಘಾಟನೆ: ಶಂಕರಭಟ್, ಸುರೇಶ್ ರೈ, ಅಧ್ಯಕ್ಷತೆ: ಗಂಡಸಿ ಸದಾನಂದಸ್ವಾಮಿ, ಆಯೋಜನೆ: ಸಂಪಾಜೆ ರಂಗ ಸಂಗಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಮಧ್ಯಾಹ್ನ 2.30

ಸಹಜ ಯೋಗ ಧ್ಯಾನ: ಆಯೋಜನೆ: ಸಹಜ ಯೋಗ, ಸ್ಥಳ: ಎಸ್‌ವಿಎನ್ ಇಂಗ್ಲಿಷ್ ಶಾಲೆ, ನಾಗವಾರ, ಸಂಜೆ 5.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..

nagaradalli_indu@prajavani.co.in

ಬೆಂಗಳೂರು ರೇಸ್

ಡಾರ್ಟಗ್ನಾನ್ ಗೆಲ್ಲುವ ನಿರೀಕ್ಷೆ

ಝುವಾರೆ ಎಸ್. ಪೂನಾವಾಲ ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡಾರ್ಟಗ್ನಾನ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಂಜಾಕ್ ಪೆರೇಡ್ 2, ಚನ್ನಾಗಿದೆ 7, ಚಿಸಾಕ್ಸ್ 1

2ನೇ ರೇಸ್: ಅಫೆಲಿಯನ್ 2, ಮೆಜೆಸ್ಟಿಕ್ ಪರ್ಸೋನ 3, ಸಿಆರ್ ಸೆವೆನ್ 4

3ನೇ ರೇಸ್: ಒಸಾಕ 9, ರಿಝ್ 10, ಫೈನ್ ಸಿಲ್ವರ್ 5

4ನೇ ರೇಸ್: ಬಾರ್ಟೋಲಿನೊ 3, ಥ್ರಿಲ್ ಆಫ್ ಬ್ರೆಜಿಲ್ 1, ಡಾರ್ಡನಸ್ 5

5ನೇ ರೇಸ್: ಐಸ್ ಆಫ್ ಫೈರ್ 4, ಕೆಸಿನಿ 5, ಪ್ರೊಕೊಫಿವ್ 1

6ನೇ ರೇಸ್: ಡಾರ್ಟಗ್ನಾನ್ 2, ಸ್ಟಡ್ ಪೋಕರ್ 6, ಸೀಝ್ ಸ್ಟಾರ್ಮ್ 5

7ನೇ ರೇಸ್: ಪ್ಯಾಂಡರ್ 5, ಹರ್ಶ್ಡ್ 4, ಸುಪ್ರೀಂ ಸರ್ಕಸ್ 7

8ನೇ ರೇಸ್: ಮಿಸ್ಟಿಕಲ್ ಕ್ವೀನ್ 4, ಮೈ ಸಾಲಿಟೇರ್ 7, ಲೆಜೆಂಡರಿ ಇಂಪ್ಯಾಕ್ಟ್ 9

ಉತ್ತಮ ಬೆಟ್: ಬಾರ್ಟೋಲಿನೊ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಡಬ್ಬಿಂಗ್‌ನಿಂದ ಕನ್ನಡ ಚಿತ್ರರಂಗ ತಳಮಟ್ಟಕ್ಕೆ

ಹಿಂದೆಯೇ ಎಚ್ಚರಿಸಿದ್ದ ರಾಜಕುಮಾರ್ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರನಟ ರಾಜಕುಮಾರ್ ಅವರು ಡಬ್ಬಿಂಗ್‌ಗೆ ವಿರೋಧವಾಗಿದ್ದರು. ಇಂದು ಕನ್ನಡ ಚಿತ್ರರಂಗ ತಳಮಟ್ಟಕ್ಕೆ ಬರಲು ಡಬ್ಬಿಂಗ್ ಕಾರಣ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಜಯಮಾಲಾ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಶನಿವಾರ ಕರ್ನಾಟಕ ಸ್ವಾಭಿಮಾನಿ ವೇದಿಕೆ ಆಯೋಜಿಸಿದ್ದ ಸಮಾರಂಭದಲ್ಲಿ ಹೋರಾಟಗಾರ ಸಾ.ರಾ.ಗೋವಿಂದು ಅವರಿಗೆ 'ಚಂಪಾ (ಚಂದ್ರಶೇಖರ ಪಾಟೀಲ) ಸಿರಿಗನ್ನಡ' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

'ವಾಣಿಜ್ಯ ಮಂಡಳಿ ಅಧ್ಯಕ್ಷೆಯಾಗಿ ಈ ಮಾತು ಹೇಳುವಂತಿಲ್ಲ. ಪ್ಯಾನ್ ಇಂಡಿಯಾ, ಒಟಿಟಿ ಒಪ್ಪಿಕೊಂಡು, ಚಿತ್ರರಂಗದಲ್ಲಿ ಡಿಜಿಟಲ್‌ನಿಂದಾಗುವ ಪರಿವರ್ತನೆಗಳನ್ನು ಬಹಳ ಹತ್ತಿರದಿಂದ ಕಂಡಿರುವಾಗ ಇದನ್ನು ಹೇಳಬಾರದು. ಡಬ್ಬಿಂಗ್ ಬಂದರೆ ಚಿತ್ರರಂಗ ನಾಶವಾಗುತ್ತದೆ ಎಂದು ಅಂದೇ ರಾಜಕುಮಾರ್ ಎಚ್ಚರಿಸಿದ್ದರು. ಅವರ ಹೋರಾಟವನ್ನು ಈಗಲೂ ಸ್ಮರಿಸಿಕೊಳ್ಳುತ್ತೇವೆ' ಎಂದು ಹೇಳಿದರು.

'ಗೋವಿಂದು ಅವರು ನಿರ್ಮಾಪಕರ ಕಷ್ಟಕ್ಕೆ ಸ್ಪಂದಿಸುತ್ತಿದ್ದಾರೆ. ವಾಣಿಜ್ಯ ಮಂಡಳಿಯಲ್ಲಿ ಕಲ್ಯಾಣನಿಧಿ ಸ್ಥಾಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕನ್ನಡ, ನೆಲ, ಜಲ, ಭಾಷೆ ಕುರಿತು ಹೋರಾಟ ಮಾಡುತ್ತಿದ್ದಾರೆ. ಅಧಿಕಾರದಲ್ಲಿ ಇರಲಿ, ಇಲ್ಲದಿರಲಿ ಸರ್ಕಾರದ ಮೇಲೆ ಒತ್ತಡ ಹೇರಿ ಕೆಲಸ ಮಾಡಿಸುತ್ತಾರೆ' ಎಂದರು.



ಸಾ.ರಾ. ಗೋವಿಂದು ಅವರಿಗೆ 'ಚಂಪಾ ಸಿರಿಗನ್ನಡ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಮೀನಾ ಪಾಟೀಲ, ಜಯಮಾಲಾ, ಸಿ.ಕೆ. ರಾಮೇಗೌಡ, ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಶಂಕರ್ ಹೂಗಾರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ.

ಚಂಪಾ ಅವರು ಬೆಂಕಿಯಿದ್ದಂತೆ. ಶಬರಿಮಲೆ ವಿಚಾರದಲ್ಲಿ ಹೋರಾಟ ಹೇಗೆ ಇರಬೇಕು ಎಂದು ನನಗೆ ಮಾರ್ಗದರ್ಶನ ಮಾಡಿದ್ದರು ಎಂದು ನೆನಪಿಸಿಕೊಂಡರು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, 'ಚಂಪಾ ಮತ್ತು ಗೋವಿಂದು ಹೋರಾಟಗಾರರು. ಕನ್ನಡಕ್ಕೆ ಕುತ್ತು ಬಂದಾಗ ಮೊದಲು ದನಿ ಎತ್ತುತ್ತಿದ್ದವರು ಚಂಪಾ. ರಾಜಕುಮಾರ್ ಅಭಿಮಾನಿ ಸಂಘ ಕಟ್ಟಿಕೊಂಡು, ಕನ್ನಡ ಮತ್ತು ಕನ್ನಡಿಗರ ಆಶಯಗಳಿಗೆ ಧಕ್ಕೆ ಬಂದಾಗ ಗೋವಿಂದು ಹೋರಾಟ ಮಾಡುತ್ತಿದ್ದರು. ಕನ್ನಡ ಚಿತ್ರರಂಗ ಸದುಭಿರುಚಿ, ಸಾಮಾಜಿಕ ಹೊಣೆಗಾರಿಕೆ ಈಗಲೂ ಕಾಪಾಡಿಕೊಂಡಿರುವುದಕ್ಕೆ ರಾಜಕುಮಾರ್ ಕಾರಣ' ಎಂದರು.

ಸಾ.ರಾ.ಗೋವಿಂದು ಮಾತನಾಡಿ, 'ಯಾವುದೇ ಪ್ರಶಸ್ತಿಗೆ ಹೋರಾಟ ಮಾಡಿಲ್ಲ. ಅರಸಿ ಬಂದ ಪ್ರಶಸ್ತಿಗಳನ್ನು ತಿರಸ್ಕರಿಸಿಲ್ಲ. ನನಗೆ ಬಂದಿರುವ ಈ ಪ್ರಶಸ್ತಿಯನ್ನು ರಾಜಕುಮಾರ್ ಅವರಿಗೆ ಅರ್ಪಿಸುತ್ತೇನೆ. ಕನ್ನಡದ ನೆಲ, ಜಲ, ಭಾಷೆ ವಿಚಾರದಲ್ಲಿ ಎಂದೂ ರಾಜೀ ಆಗಿಲ್ಲ. ರಾಜಕುಮಾರ್ ಅವರ ಆದರ್ಶ ಪಾಲಿಸಿಕೊಂಡು ಬಂದಿದ್ದೇನೆ' ಎಂದು ತಿಳಿಸಿದರು.

'ಮೇಕೆದಾಟು ಮತ್ತು ಕಳಸಾ ಬಂಡೂರಿ ಯೋಜನೆ ಅನುಷ್ಠಾನಕ್ಕೆ ಹೋರಾಟ ಮಾಡಲಾಗುವುದು. ಮೇಕೆದಾಟು ಯೋಜನೆಗೆ ತಮಿಳುನಾಡು ಮುಖ್ಯಮಂತ್ರಿ ವಿರೋಧ ವ್ಯಕ್ತಪಡಿಸಿದ್ದಾರೆ. ಕುಡಿಯುವ ನೀರಿಗೆ ಈ ಯೋಜನೆ ಬಳಸಿಕೊಳ್ಳಲಾಗುತ್ತಿದೆ. ಆದರೆ, ಅವರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ' ಎಂದರು.

ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ.ರಾಮೇಗೌಡ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸ್ವಾಭಿಮಾನಿ ವೇದಿಕೆ ಅಧ್ಯಕ್ಷ ಶಂಕರ ಹೂಗಾರ, ದಯಾನಂದ ಕಟ್ಟೆ ಹಾಜರಿದ್ದರು.

ಬೆದರಿಕೆ ಕರೆ, ಪತ್ರ..

ತಂದೆ ಚಂದ್ರಶೇಖರ ಪಾಟೀಲ ಅವರ ಜೊತೆಗಿನ ಒಡನಾಟ ಸ್ಮರಿಸಿದ ಕಾರ್ಮಿಕ ಇಲಾಖೆ ಉಪ ಆಯುಕ್ತೆ ಮೀನಾಕ್ಷಿ ಪಾಟೀಲ, 'ಇಂಗ್ಲೆಂಡ್ ಪ್ರವಾಸದಿಂದ ಮರಳಿದ ಬಳಿಕ ತಂದೆ ಸಂಪೂರ್ಣ ನಾಸ್ತಿಕರಾದರು. ಸ್ವಾಮೀಜಿಗಳು ಮತ್ತು ರಾಜಕಾರಣಿಗಳನ್ನು ಟೀಕಿಸಲು ಆರಂಭಿಸಿದರು. ಆಗ ದೂರವಾಣಿ ಬೆದರಿಕೆ ಕರೆ ಮತ್ತು ಪತ್ರಗಳು ಬರಲು ಆರಂಭಿಸಿದವು' ಎಂದರು.

'ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದಾಗ ಬೆಂಗಳೂರಿಗೆ ಬಂದೆವು. ಅವ್ವ ನಮ್ಮ ಜವಾಬ್ದಾರಿ ತೆಗೆದುಕೊಂಡು ಬೆಳೆಸಿದಳು. ಮೈಸೂರಿನಲ್ಲಿ ನಡೆದ ಕವಿಗೋಷ್ಠಿಯಲ್ಲಿ 'ಅಪ್ಪ' ಶೀರ್ಷಿಕೆಯ ಕವಿತೆ ವಾಚನ ಮಾಡಿದೆ. ಇದರ ಬಗ್ಗೆ ಅಪ್ಪನಿಗೂ ಹೇಳಿರಲಿಲ್ಲ' ಎಂದರು.

'ಅನಿವಾಸಿ ಕನ್ನಡಿಗರಿಗಾಗಿ ಇಲಾಖೆ ಸ್ಥಾಪಿಸಿ'

ಬೆಂಗಳೂರು: ಅನಿವಾಸಿ ಕನ್ನಡಿಗರ ನೆರವಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು ಎಂದು ಜಾಗತಿಕ ಅನಿವಾಸಿ ಕನ್ನಡಿಗರ ಒಕ್ಕೂಟಗಳ ಪ್ರತಿನಿಧಿಗಳ ನಿಯೋಗವು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದೆ.

'ವಲಸೆ, ಶಿಕ್ಷಣ, ಉದ್ಯೋಗ, ಕಾನೂನು ನೆರವು, ತುರ್ತುಸೇವೆಗಳ ಸಂದರ್ಭದಲ್ಲಿ ಯಾವ ಇಲಾಖೆಯನ್ನು ಸಂಪರ್ಕಿಸಬೇಕು ಎಂಬ ನಿಯಮವಿಲ್ಲ. ತುರ್ತು ಸಂದರ್ಭದಲ್ಲಿ ಮನವಿ ಮಾಡಿದ ನಂತರ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಈ ಅನನುಕೂಲವನ್ನು ತಪ್ಪಿಸಲು ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಬೇಕು ಎಂದು ಕೋರಿದ್ದೇವೆ' ಎಂದು ಅನಿವಾಸಿ ಕನ್ನಡಿಗ ಉದ್ಯಮಿ ರೊನಾಲ್ಡ್ ಕೊಲಾಸೊ ಸುದ್ದಿಗಾರರಿಗೆ ತಿಳಿಸಿದರು.



'ಜೈನ ಸಾಹಿತ್ಯ ಸಿರಿ' ಕಾರ್ಯಕ್ರಮದಲ್ಲಿ ಅರುಣ ಆದಿರಾಜ್, ಜಿನೇಂದ್ರ ಖನಗಾವಿ, ಹಾ.ಮಾ.ನಾಗರ್ಜುನ, ನಾಗಶ್ರೀ ಮುಪ್ಪಾನೆ ಭಾಗವಹಿಸಿದ್ದರು

'ಸಮ ಸಮಾಜದ ಕಲ್ಪನೆ ಪ್ರತಿಪಾದಿಸಿದ್ದ ನಯಸೇನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರು ಹಂಚಿ ತಿನ್ನಬೇಕು, ಸಮ ಸಮಾಜ ಇರಬೇಕು ಎಂಬ ಕಲ್ಪನೆಯನ್ನು ಮೊದಲಿಗೆ ಪ್ರತಿಪಾದಿಸಿದವರಲ್ಲಿ ನಯಸೇನ ಆಚಾರ್ಯರು ಒಬ್ಬರು' ಎಂದು ಹಾ.ಮಾ. ನಾಗರ್ಜುನ ಅಭಿಪ್ರಾಯಪಟ್ಟರು.

ಜೈನ್ ಮಿಲನ್, ಸೆಂಟ್ರಲ್ ಬೆಂಗಳೂರು ಹಾಗೂ ಜಯನಗರದ ಶ್ರೀಚಕ್ರೇಶ್ವರಿ ಮಹಿಳಾ ಸಮಾಜ ಹಮ್ಮಿಕೊಂಡಿದ್ದ 'ಜೈನ ಸಾಹಿತ್ಯ ಸಿರಿ' ಕಾರ್ಯಕ್ರಮದ ತಿಂಗಳ ಉಪನ್ಯಾಸದಲ್ಲಿ ಮಾತನಾಡಿದರು.

'ಜೈನಧರ್ಮಕ್ಕೆ ನಯಸೇನರ ಕಾಲಕ್ಕೆ ಬಂದ ಬಾಹ್ಯ ಆಘಾತಗಳನ್ನು ಎದುರಿಸಲು ಹಾಗೂ ತನ್ನ ಧರ್ಮವನ್ನು ಉಳಿಸಿಕೊಳ್ಳಲು 'ಧರ್ಮಾಮೃತ' ಕೃತಿಯಲ್ಲಿ ಹೇಳಬೇಕಾದ ಜರೂರು ಇತ್ತು. ಸ್ವಮತದ ಶ್ರೇಷ್ಠತೆ ಹಾಗೂ ತನ್ನ ಕಾಲಘಟ್ಟವಾದ 12ನೇ ಶತಮಾನದಲ್ಲಿ ಬೇರೆ ಮತಗಳು ಹೇಗೆ ವರ್ತಿಸುತ್ತಿದ್ದವು ಎಂಬುದನ್ನು ತನ್ನ ಗ್ರಂಥವಾದ 'ಧರ್ಮಾಮೃತ'ದಲ್ಲಿ ಹೇಳಿದ್ದಾರೆ. ಲೌಕಿಕವನ್ನು ಜಯಿಸುತ್ತಲೇ ಅಲೌಕಿಕ ಜಗತ್ತಿಗೆ ಸಾಗುವ ಕ್ರಿಯೆಯನ್ನು ನಯಸೇನ ತಿಳಿಸುತ್ತಾರೆ. ಕಥೆಗಳನ್ನು ಹೇಳುತ್ತಲೇ ಧರ್ಮವನ್ನು ಜನಸಾಮಾನ್ಯರಿಗೆ ತಿಳಿಸುವ ಪ್ರಯತ್ನವನ್ನು ಮಾಡಿದ್ದಾರೆ' ಎಂದರು.

ಕಾರಾಗೃಹ ಇಲಾಖೆಯ ಐಡಿಜಿಪಿ ಜಿನೇಂದ್ರ ಖನಗಾವಿ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಧಾರ್ಮಿಕ ಸಂಘರ್ಷ ಕಾಲದಲ್ಲಿ ಬಂದ ನಯಸೇನ ರಾಜಾಶ್ರಯ ಕಳೆದುಕೊಂಡ ಕಾಲದಲ್ಲಿ ಜನಾಶ್ರಯ ಪಡೆಯಲು ಸಾಮಾನ್ಯ ಕಥೆಗಳನ್ನು ಆಯ್ಕೆ ಮಾಡಿಕೊಂಡರು' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸೆಂಟ್ರಲ್ ಜೈನ್ ಮಿಲನ್ ಉಪಾಧ್ಯಕ್ಷೆ ಅರುಣ ಆದಿರಾಜ್ ಹಾಗೂ ಚಕ್ರೇಶ್ವರಿ ಮಹಿಳಾ ಸಮಾಜದ ಅಧ್ಯಕ್ಷೆ ನಾಗಶ್ರೀ ಮುಪ್ಪಾನೆ, ಸಂಚಾಲಕರಾದ ಪದ್ಮಿನಿ ನಾಗರಾಜು, ಬ್ರಾಹ್ಮಿಲ ಮದನಕುಮಾರ, ಸೌದಾಮಿನಿ ಅಜಿತ್ ಉಪಸ್ಥಿತರಿದ್ದರು.

ಅಡಿಕೆ ಧಾರಣೆ

ಚಿತ್ರದುರ್ಗ		ಪುತ್ತೂರು			
ಆಪಿ	52119-52529	ಕೋಕ	20000-33500	ಬಿಳಿಗೋಟು	24000-34500
ಬೆಟ್ಟೆ	39559-39999	ಹೊಸತು	30000-47000	ಚಾಲಿ	44029-48239
ಕೆಂಪುಗೋಟು	32509-32910	ಶಿರಸಿ		ಕೆಂಪುಗೋಟು	27258-36099
ರಾಶಿ	51639-52069	ಬೆಟ್ಟೆ	40199-45899	ರಾಶಿ	48099-52000

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹705
12 ಕ್ಕೆ	₹94
ಮೈಸೂರು: 100 ಕ್ಕೆ	₹720

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹269
ಆರ್‌ಎಸ್‌ಎಸ್-5	₹263
ಗುಡ್ ಲಾಟ್	₹230

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹455-705
ದ್ವಿತಳಿ (ಬಿ.ವಿ)	₹380-861

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1450 (1450)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1470 (1470)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23250
ಎಸಿ	₹14000
ಆರ್‌ಪಿ	₹18550
ಆರ್‌ಸಿ	₹10025

ಎಫ್‌ಸಿಎನ್‌ಆರ್(ಬಿ) ಠೇವಣಿಗೆ ಹೆಚ್ಚಿನ ಬಡ್ಡಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬ್ಯಾಂಕ್ ಆಫ್ ಬರೋಡ ತನ್ನ 'ಬಾಬ್ ಲೆಜೆಂಡ್ ಎಫ್‌ಸಿಎನ್‌ಆರ್(ಬಿ) ಠೇವಣಿ ಯೋಜನೆ'ಯ ಅಡಿ ಅನಿವಾಸಿ ಭಾರತೀಯರಿಗೆ (ಎನ್‌ಆರ್‌ಐ) ವಾರ್ಷಿಕ ಶೇ 6.25ರವರೆಗೆ ಬಡ್ಡಿ ನೀಡಲಿದೆ.

ಅಮೆರಿಕನ್ ಡಾಲರ್ ರೂಪದಲ್ಲಿ ಎನ್‌ಆರ್‌ಐಗಳು ಈ ಯೋಜನೆಯ ಅಡಿಯಲ್ಲಿ ಇರಿಸುವ ಠೇವಣಿಗೆ ಈ ಪ್ರಮಾಣದ ಬಡ್ಡಿ ಸಿಗಲಿದೆ. ಬ್ರಿಟಿಷ್ ಪೌಂಡ್ ಸ್ಟರ್ಲಿಂಗ್ ಹಾಗೂ ಆಸ್ಟ್ರೇಲಿಯನ್ ಡಾಲರ್ ರೂಪದಲ್ಲಿ ಅವರು ಇರಿಸುವ ಠೇವಣಿಗಳಿಗೆ ಶೇ 4.75ರಷ್ಟು, ಕೆನಡಿಯನ್ ಡಾಲರ್ ರೂಪದಲ್ಲಿ ಇರಿಸುವ ಠೇವಣಿಗೆ ಶೇ 5.15ರಷ್ಟು ಹಾಗೂ ಯೂರೊ ರೂಪದಲ್ಲಿ ಇರಿಸುವ ಠೇವಣಿಗೆಗಳಿಗೆ ಶೇ 3.75ರಷ್ಟು ಬಡ್ಡಿ ನೀಡಲಾಗುತ್ತದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

ಎನ್‌ಆರ್‌ಐಗಳು ಎಫ್‌ಸಿಎನ್‌ಆರ್(ಬಿ) ಠೇವಣಿಗಳನ್ನು ಆಧರಿಸಿ ಒ.ಡಿ/ಸಾಲ ಪಡೆಯಲು ಅವಕಾಶ ಇದೆ ಎಂದು ಕೂಡ ಪ್ರಕಟಣೆ ತಿಳಿಸಿದೆ.

ಕೆನರಾ ಬ್ಯಾಂಕ್ ಕೊಡುಗೆ: 'ಭಾರತದಲ್ಲಿ ಸುರಕ್ಷಿತವಾಗಿ ಹೂಡಿಕೆ ಮಾಡಿ, ಉಳಿತಾಯವನ್ನು ಹೆಚ್ಚಿಸಿಕೊಳ್ಳಲು ಎನ್‌ಆರ್‌ಐಗಳಿಗೆ ಎಫ್‌ಸಿಎನ್‌ಆರ್(ಬಿ) ಠೇವಣಿಗಳ ಮೂಲಕ ಅವಕಾಶ ಕಲ್ಪಿಸಲಾಗಿದೆ. ಇದು ದೇಶಕ್ಕೆ ವಿದೇಶಿ ಕರೆನ್ಸಿ ಹರಿದುಬರುವುದನ್ನು ಪ್ರೋತ್ಸಾಹಿಸಲು ಆರ್‌ಬಿಐ ಈಚೆಗೆ ಮಾಡಿದ ಘೋಷಣೆಗಳಿಗೆ ಅನುಗುಣವಾಗಿ ಇದೆ' ಎಂದು ಕೆನರಾ ಬ್ಯಾಂಕ್ ಪ್ರಕಟಣೆ ಹೇಳಿದೆ.

ಅಮೆರಿಕನ್ ಡಾಲರ್ ರೂಪದಲ್ಲಿ ಇರಿಸುವ ಠೇವಣಿಗಳಿಗೆ ಶೇ 6.50ರಷ್ಟು ಬಡ್ಡಿ ನೀಡಲಾಗುತ್ತದೆ. ಇದಕ್ಕೆ ಒಂದು ವರ್ಷದ ಲಾಕ್-ಇನ್ ಅವಧಿ ಅನ್ವಯವಾಗುತ್ತದೆ ಎಂದು ಕೆನರಾ ಬ್ಯಾಂಕ್ ಹೇಳಿದೆ.

ಹೂಡಿಕೆ ಮಾಡಿದ ಮೊತ್ತ ಹಾಗೂ ಬಡ್ಡಿ ಗಳಿಕೆಯನ್ನು ಯಾವುದೇ ನಿರ್ಬಂಧ ಇಲ್ಲದೆ ಹೊರದೇಶಗಳಿಗೆ ವರ್ಗಾವಣೆ ಮಾಡಿಕೊಳ್ಳಬಹುದು. ಈ ಠೇವಣಿಗಳಿಂದ ಪಡೆಯುವ ಬಡ್ಡಿಗೆ ಭಾರತದಲ್ಲಿ ತೆರಿಗೆ ಇಲ್ಲ ಎಂದು ಪ್ರಕಟಣೆ ಹೇಳಿದೆ.

ಖಾಸಗಿ ವಲಯದ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಎಫ್‌ಸಿಎನ್‌ಆರ್(ಬಿ) ಅಡಿ ಅಮೆರಿಕನ್ ಡಾಲರ್ ರೂಪದಲ್ಲಿನ ಠೇವಣಿಗಳಿಗೆ ಶೇ 7.13ರಷ್ಟು ಬಡ್ಡಿ ನೀಡುವುದಾಗಿ ತಿಳಿಸಿದೆ.

'ಇಂಧನ ಬೆಲೆ ಇಳಿಕೆ ಸಾಧ್ಯತೆ'

ಕಚ್ಚಾ ತೈಲ ಬೆಲೆ ಇಳಿಕೆ ಕುರಿತ ಪ್ರಶ್ನೆಗೆ ಇಂಧನ ಸಚಿವರ ವಿವರಣೆ

ಸೋನಭದ್ರ (ಪಿಟಿಐ): ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇಳಿಕೆ ಆಗುವ ಸಾಧ್ಯತೆ ಇದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ಶನಿವಾರ ಹೇಳಿದ್ದಾರೆ.

ಉತ್ತರ ಪ್ರದೇಶದ ಸೋನಭದ್ರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು, ಕಚ್ಚಾ ತೈಲದ ಬೆಲೆ ಇಳಿಕೆಗೆ ಸಂಬಂಧಿಸಿದಂತೆ ಸುದ್ದಿಗಾರರು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಈ ಮಾತು ಹೇಳಿದ್ದಾರೆ.

'ಈಗ ತೈಲ ಕಂಪನಿಗಳ ಬಳಿ ಹೆಚ್ಚಿನ ಬೆಲೆಗೆ ಖರೀದಿಸಿದ ಕಚ್ಚಾ ತೈಲದ ಸಂಗ್ರಹ ಇದೆ. ಕಡಿಮೆ ಬೆಲೆಗೆ ಖರೀದಿ ಆಗುತ್ತಿರುವ ಕಚ್ಚಾ ತೈಲವು ಕಂಪನಿಗಳನ್ನು ತಲುಪಿದಾಗ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ತಗ್ಗಿಸುವ ಸಾಧ್ಯತೆ ಇದೆ' ಎಂದು ಪುರಿ ಅವರು ತಿಳಿಸಿದ್ದಾರೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಆಗಿರುವ ಒಟ್ಟು ಹೆಚ್ಚಳವು ಲೀಟರಿಗೆ ₹7.60 ಮಾತ್ರ. ರಷ್ಯಾ-ಉಕ್ರೇನ್ ಯುದ್ಧ 2022ರಲ್ಲಿ ಶುರುವಾದ ಸಂದರ್ಭದಲ್ಲಿನ ಬೆಲೆಗೆ ಹೋಲಿಸಿದರೆ 'ಇಂಧನ ಬೆಲೆಯಲ್ಲಿ ವಾಸ್ತವದಲ್ಲಿ ಹೆಚ್ಚಳವೇ ಆಗಿಲ್ಲ' ಎಂದು ಪುರಿ ಹೇಳಿದ್ದಾರೆ.

ಹೊರ್ಮುಜ್ ಜಲಸಂಧಿಯ ಸುತ್ತಲಿನ ಬಿಕ್ಕಟ್ಟಿನ ಬಗ್ಗೆ ಉಲ್ಲೇಖಿಸಿದ ಅವರು, ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನಗಳ ಮಾರಾಟ ಕಂಪನಿಗಳು ನಿತ್ಯ ₹1,000 ಕೋಟಿಯಷ್ಟು ನಷ್ಟ ಅನುಭವಿಸುತ್ತಿವೆ ಎಂದಿದ್ದಾರೆ. ಆದರೆ, ಹೊರೆಯು ಜನರ ಮೇಲೆ ವರ್ಗಾವಣೆ ಆಗದಂತೆ ಸರ್ಕಾರ ನೋಡಿಕೊಂಡಿದೆ ಎಂದು ಹೇಳಿದ್ದಾರೆ.

'2022ರಲ್ಲಿ ಇದ್ದ ಬೆಲೆಗೆ ಹೋಲಿಸಿದರೆ ಈಗ ಬೆಲೆಯು ವಾಸ್ತವದಲ್ಲಿ ಕಡಿಮೆ ಇದೆ' ಎಂದು ಅವರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಇಂಧನದ ಮೇಲಿನ ಎಕ್ಸೈಸ್ ಸುಂಕವನ್ನು 2021ರ ನವೆಂಬರ್‌ನಲ್ಲಿ ಒಂದು ಬಾರಿ ಹಾಗೂ 2022ರ ಮೇ ತಿಂಗಳಲ್ಲಿ ಒಂದು ಬಾರಿ ತಗ್ಗಿಸಿದ್ದಾರೆ. ಈಚೆಗೂ ಒಮ್ಮೆ ಇಳಿಕೆ ಮಾಡಲಾಗಿದೆ. ಇದರಿಂದಾಗಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟದ ಮೇಲೆ ಸರ್ಕಾರವು ಲೀಟರಿಗೆ ₹10ರಷ್ಟು ಹೊರೆ ಹೊರುತ್ತಿದೆ ಎಂದು ಅವರು ತಿಳಿಸಿದ್ದಾರೆ.



ಮೋದಿ ಅವರ ನಾಯಕತ್ವದ ಕಳೆದ 12 ವರ್ಷಗಳಲ್ಲಿ ದೇಶವು ಮೂಲಸೌಕರ್ಯ, ಇಂಧನ, ಸಾಮಾಜಿಕ ಭದ್ರತೆ, ಅಭಿವೃದ್ಧಿ ಮತ್ತು ಸ್ವಾವಲಂಬನೆಯಲ್ಲಿ ಹಿಂದೆಂದೂ ಆಗಿರದಿದ್ದ ಬೆಳವಣಿಗೆ ಸಾಧಿಸಿದೆ

ಹರದೀಪ್ ಸಿಂಗ್ ಪುರಿ, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ

ಹಾನಿಕಾರಕ 16 ಔಷಧಗಳ ನಿಷೇಧ

ನವದೆಹಲಿ (ಪಿಟಿಐ): 'ಸ್ಥಿರ ಡೋಸ್ ಸಂಯೋಜನೆ' (ಎಫ್‌ಡಿಸಿ) ಒಳಗೊಂಡ 16 ಔಷಧಗಳ ಉತ್ಪಾದನೆ, ಮಾರಾಟ ಮತ್ತು ವಿತರಣೆಯನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ.

'ಈ ಔಷಧಗಳನ್ನು ನಿರಂತರವಾಗಿ ಬಳಸುವುದರಿಂದ ಆಗುವ ಅನುಕೂಲಕ್ಕಿಂತ ಹಾನಿಯೇ ಹೆಚ್ಚು' ಎಂದು ಕೇಂದ್ರ ಆರೋಗ್ಯ ಇಲಾಖೆ ಹೇಳಿದೆ.

'ಸಾರ್ವಜನಿಕರ ಆರೋಗ್ಯದ ಸುರಕ್ಷತೆ ಹಾಗೂ ಪರಿಣಾಮಕಾರಿ ಮತ್ತು ವೈಜ್ಞಾನಿಕವಾಗಿ ಪ್ರಮಾಣೀಕರಿಸಿದ ಔಷಧಗಳು ಮಾತ್ರ ಬಳಕೆಗೆ ಸಿಗಬೇಕು ಎಂಬ ನಿಟ್ಟಿನಲ್ಲಿ ಈ ಔಷಧಗಳನ್ನು ನಿಷೇಧಿಸಲಾಗಿದೆ. ಎಲ್ಲ ರಾಜ್ಯಗಳ ಔಷಧ ನಿಯಂತ್ರಕರು, ನಿಯಂತ್ರಕ ಸಂಸ್ಥೆಗಳು ಈ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು' ಎಂದು ತಿಳಿಸಿದೆ.

ಮುಖ್ಯಾಂಶಗಳು

- ಔಷಧಗಳಿಗಿಲ್ಲ ಪ್ರಾಯೋಗಿಕ ಬೆಂಬಲ
- ಬಳಸಿದರೆ ಲಾಭಕ್ಕಿಂತ ಹಾನಿಯೇ ಹೆಚ್ಚು
- ಸುಪ್ರೀಂ ಕೋರ್ಟ್ ನಿರ್ದೇಶನದ ಅನುಸಾರ ಕ್ರಮ

'ಚರ್ಮರೋಗ, ನೋವು ನಿವಾರಕ, ಸ್ನಾಯು ಸಡಿಲಗೊಳಿಸುವ ಮತ್ತು ಪ್ರತಿಜೀವಕ ಆಧಾರಿತ ಸಂಯೋಜನೆಗಳನ್ನು ಒಳಗೊಂಡ 16 ಔಷಧಗಳನ್ನು ಗುರುತಿಸಲಾಗಿದ್ದು, ತಕ್ಷಣದಿಂದಲೇ ದೇಶದಾದ್ಯಂತ ಬಳಕೆಗೆ ನಿಷೇಧಿಸಲಾಗಿದೆ' ಎಂದು ಅದು ತಿಳಿಸಿದೆ.

ವಿವಿಧ ಔಷಧಗಳ ಸಂಯೋಜನೆ, ಅವುಗಳ ವೈಜ್ಞಾನಿಕ ಪ್ರಮಾಣೀಕರಣ ಮತ್ತು ಸಂಭವನೀಯ ಹಾನಿಯ ಕುರಿತು ಪರೀಕ್ಷಿಸಲು ಔಷಧಗಳ ತಾಂತ್ರಿಕ ಸಲಹಾ ಮಂಡಳಿಯು ತಜ್ಞರ ಸಮಿತಿಯೊಂದನ್ನು ನೇಮಕ ಮಾಡಿತ್ತು. ಸುಪ್ರೀಂ ಕೋರ್ಟ್‌ನ ನಿರ್ದೇಶನಗಳಿಗೆ ಅನುಸಾರ ಕೈಗೊಂಡ ಎಫ್‌ಡಿಸಿಗಳ ಪರಿಶೀಲನೆಯ ಬಳಿಕ ಸಚಿವಾಲಯವು ಈ ನಿರ್ಧಾರ ಪ್ರಕಟಿಸಿದೆ.

ಎಫ್‌ಡಿಸಿ ಎಂದರೇನು?: ಎರಡು ಅಥವಾ ಅದಕ್ಕಿಂತ ಹೆಚ್ಚು ಸಕ್ರಿಯ ಔಷಧೀಯ ಪದಾರ್ಥಗಳ (ಎಪಿಐ) ಸ್ಥಿರ ಸಂಯೋಜನೆಯನ್ನು ಹೊಂದಿರುವ ಔಷಧಗಳನ್ನು ಎಫ್‌ಡಿಸಿ ಎನ್ನಲಾಗುತ್ತದೆ.

'ರಿಲಯನ್ಸ್ ಉತ್ತರಾಧಿಕಾರ, ಬಹುತೇಕ ಪೂರ್ಣ'

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ನಿತ್ಯದ ವ್ಯವಹಾರಗಳ ಹೊಣೆಯನ್ನು ತಮ್ಮ ಮಕ್ಕಳಿಗೆ ವರ್ಗಾವಣೆ ಮಾಡುವ ಪ್ರಕ್ರಿಯೆಯು ಬಹುತೇಕ ಪೂರ್ಣಗೊಂಡಿದೆ ಎಂದು ಕಂಪನಿಯ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ.

ಶುಕ್ರವಾರ ನಡೆದ ಷೇರುದಾರರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, 'ಆಕಾಶ್, ಇಶಾ ಮತ್ತು ಅನಂತ್ ಅವರು ಸಮೂಹದ ಪ್ರಮುಖ ವಹಿವಾಟುಗಳ ನೇತೃತ್ವ ವಹಿಸಿದ್ದಾರೆ. ಅವರು ಸಮೂಹದ ಮುಂದಿನ ಹಂತದ ಬೆಳವಣಿಗೆಯನ್ನು ಸಾಧ್ಯವಾಗಿಸಲಿದ್ದಾರೆ' ಎಂದು ಹೇಳಿದ್ದಾರೆ.

ರಿಲಯನ್ಸ್ ಸಮೂಹದ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಬೆಳವಣಿಗೆಗಳನ್ನು ಹೂಡಿಕೆದಾರರು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ.

ರಿಲಯನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಕೂಡ ಆಗಿರುವ ಮುಕೇಶ್ ಅಂಬಾನಿ ಅವರು ಕಂಪನಿಯ ಪೂರ್ಣ ಹೊಣೆಗಾರಿಕೆಯನ್ನು ತಮ್ಮ ಮಕ್ಕಳಿಗೆ ವರ್ಗಾವಣೆ ಮಾಡುವುದು ಯಾವಾಗ ಎಂಬುದನ್ನು ತಿಳಿಸಿಲ್ಲ. ಮುಕೇಶ್ ಅಂಬಾನಿ ಅವರ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯ ಅವಧಿಯು 2028ರ ಆಗಸ್ಟ್‌ವರೆಗೆ ಇದೆ.

ಸುದ್ದಿ 2 ನಿಮಿಷ

'ಎಲ್‌ಪಿಜಿ: ಮೂಲ ಹೆಚ್ಚಿಸಿಕೊಂಡ ಭಾರತ'

ನವದೆಹಲಿ (ಪಿಟಿಐ): 'ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಸಂದರ್ಭದಲ್ಲಿ ಭಾರತವು ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು (ಎಲ್‌ಪಿಜಿ) ಹಲವು ದೇಶಗಳಿಂದ ಖರೀದಿಸುವ ಮೂಲಕ ತನ್ನ ಎಲ್‌ಪಿಜಿ ಆಮದು ಮೂಲಗಳನ್ನು ಹೆಚ್ಚಿಸಿಕೊಂಡಿದೆ' ಎಂದು ಕ್ರಿಸಿಲ್ ರೇಟಿಂಗ್ಸ್ ಸಂಸ್ಥೆಯ ವರದಿ ತಿಳಿಸಿದೆ.

ಕೊಲ್ಲಿ ರಾಷ್ಟ್ರಗಳ ಮೇಲಿನ ಅವಲಂಬನೆಯನ್ನು ತಗ್ಗಿಸಲು ಅಮೆರಿಕ ಸೇರಿದಂತೆ ಹಲವಾರು ರಾಷ್ಟ್ರಗಳಿಂದ ಆಮದು ಪ್ರಮಾಣವನ್ನು ಹೆಚ್ಚಿಸಿಕೊಳ್ಳಲಾಗಿದೆ ಎಂದು ತಿಳಿಸಿದೆ.

ಸಂಘರ್ಷಕ್ಕೆ ಮುನ್ನ ಭಾರತವು ಪಶ್ಚಿಮ ಏಷ್ಯಾದ ರಾಷ್ಟ್ರಗಳಿಂದ ಶೇ 90ರಷ್ಟು ಎಲ್‌ಪಿಜಿ ಆಮದು ಮಾಡಿಕೊಳ್ಳುತ್ತಿತ್ತು. ಈ ಪ್ರದೇಶದಲ್ಲಿ ಅಡಚಣೆ ಹೆಚ್ಚಾದ ಬಳಿಕ ಆಮದು ತಗ್ಗಿತು. ಏಪ್ರಿಲ್ ವೇಳೆಗೆ ಭಾರತಕ್ಕೆ ಅಗತ್ಯವಿರುವ ಎಲ್‌ಪಿಜಿಯಲ್ಲಿ ಅಮೆರಿಕವು ಮೂರನೇ ಒಂದು ಭಾಗದಷ್ಟು ಪೂರೈಸಿತು. ಇದು ಫೆಬ್ರುವರಿಯಲ್ಲಿ ಶೇ 8ರಷ್ಟಿತ್ತು.

ಕಳೆದ ವರ್ಷದ ಅಂತ್ಯದಲ್ಲಿ ವಾರ್ಷಿಕ 22 ಲಕ್ಷ ಟನ್ ಎಲ್‌ಪಿಜಿ ಪೂರೈಕೆಯ ಒಪ್ಪಂದಕ್ಕೆ ಅಮೆರಿಕದ ಜೊತೆ ಸಹಿ ಮಾಡಿಕೊಳ್ಳಲಾಗಿತ್ತು. ಇದು ಸಂಘರ್ಷದ ವೇಳೆ ನೆರವಾಯಿತು. ಇದು ದೇಶದ ವಾರ್ಷಿಕ ಆಮದಿನ ಶೇ 10ರಷ್ಟಾಗಿದೆ. ಇದೇ ವೇಳೆ ಇರಾನ್‌ನಿಂದ ಎಲ್‌ಪಿಜಿ ಆಮದು ಏಪ್ರಿಲ್‌ನಲ್ಲಿ ಶೇ 6ರಷ್ಟಾಗಿತ್ತು. ಅರ್ಜೆಂಟೀನಾ, ಚಿಲಿ, ಫ್ರಾನ್ಸ್ ಮತ್ತು ನೆದರ್ಲೆಂಡ್ಸ್‌ನಿಂದ ಕೂಡ ಎಲ್‌ಪಿಜಿ ಪೂರೈಕೆ ಆಗಿದೆ ಎಂದು ತಿಳಿಸಿದೆ.



ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಕಡಿಮೆ ಆಗುತ್ತಿರುವುದು ಮತ್ತು ಪ್ರಮುಖ ವ್ಯಾಪಾರ ಮಾರ್ಗಗಳನ್ನು ಮತ್ತೆ ತೆರೆಯುತ್ತಿರುವುದರಿಂದ ಪೂರೈಕೆ ಸಮಸ್ಯೆ ಕಡಿಮೆ ಆಗಲಿದೆ ಮತ್ತು ಜಾಗತಿಕ ಮಟ್ಟದಲ್ಲಿ ಎಲ್‌ಪಿಜಿ ದರ ಕಡಿಮೆ ಆಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

'ಜಿಸಿಸಿಗೆ ಭಾರತ ನೆಚ್ಚಿನ ತಾಣ'

ಹೂಸ್ಟನ್ (ಪಿಟಿಐ): 'ಭಾರತವು ತಯಾರಿಕಾ ವಲಯ ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರಗಳಿಗೆ (ಜಿಸಿಸಿ) ಆದ್ಯತೆಯ ತಾಣವಾಗಿ ಪರಿವರ್ತನೆ ಆಗಿದೆ' ಎಂದು ಹೂಸ್ಟನ್‌ನಲ್ಲಿ ನಡೆದ ದುಂಡುಮೇಜಿನ ಸಭೆಯಲ್ಲಿ ಉದ್ಯಮದ ನಾಯಕರು, ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರದ ನಿಯಮಗಳಲ್ಲಿನ ಸುಧಾರಣೆಗಳು, ಕೌಶಲ ಹೊಂದಿರುವ ಸಿಬ್ಬಂದಿ, ಸ್ಪರ್ಧಾತ್ಮಕ ವೆಚ್ಚ ಮತ್ತು ಸದೃಢವಾದ ಡಿಜಿಟಲ್ ಮೂಲಸೌಕರ್ಯವು ದೇಶವನ್ನು ಸುಧಾರಿತ ತಯಾರಿಕಾ ಕೇಂದ್ರಗಳಿಗೆ ಮತ್ತು ಜಾಗತಿಕ ಸಾಮರ್ಥ್ಯ ಕೇಂದ್ರಗಳಿಗೆ ಆದ್ಯತೆಯ ತಾಣವನ್ನಾಗಿಸಿವೆ ಎಂಬ ಅಭಿಪ್ರಾಯವು ಭಾರತೀಯ ಕಾನ್ಸುಲೇಟ್ ಜನರಲ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವ್ಯಕ್ತವಾಗಿದೆ.

ಹೂಸ್ಟನ್‌ನಲ್ಲಿನ ಭಾರತದ ಕಾನ್ಸುಲ್ ಜನರಲ್ ಡಿ.ಸಿ. ಮಂಜುನಾಥ್ ಮಾತನಾಡಿ, 'ಭಾರತದಲ್ಲಿನ ಆರ್ಥಿಕ ಸುಧಾರಣೆಗಳು, ಹೂಡಿಕೆ ಸ್ನೇಹಿ ನಿಯಮಗಳು ಮತ್ತು ಪ್ರೋತ್ಸಾಹ ನೀಡುವ ಯೋಜನೆಗಳು ಜಾಗತಿಕ ತಯಾರಿಕಾ ಮತ್ತು ನಾವೀನ್ಯ ಕೇಂದ್ರವನ್ನಾಗಿ (ಹಬ್) ದೇಶದ ಸ್ಥಾನವನ್ನು ಸದೃಢಗೊಳಿಸುವ ಗುರಿ ಹೊಂದಿವೆ' ಎಂದು ಹೇಳಿದ್ದಾರೆ.

ಐಸಿಐಸಿಐ ಬ್ಯಾಂಕ್, ಜೆಎಲ್‌ಎಲ್ ಇಂಡಿಯಾ ಮತ್ತು ಅಮೆರಿಕ ಮೂಲದ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಂಪನಿ ಕೆಬಿಆರ್‌ನ ತಜ್ಞರು ಭಾರತದಲ್ಲಿ ಕ್ಷಿಪ್ರವಾಗಿ ಬೆಳವಣಿಗೆ ಆಗುತ್ತಿರುವ ಜಿಸಿಸಿ ವಲಯದ ಬಗ್ಗೆ ಚರ್ಚೆ ನಡೆಸಿದರು. ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್‌ನಿಂದ ಹಣಕಾಸು ಸೇವೆಗಳು ಮತ್ತು ಆರೋಗ್ಯದವರೆಗಿನ ವಲಯಗಳಲ್ಲಿ ವಾರ್ಷಿಕ 100ಕ್ಕೂ ಹೆಚ್ಚು ಜಿಸಿಸಿ ಕೇಂದ್ರಗಳು ಸ್ಥಾಪನೆ ಆಗುತ್ತಿವೆ.

ಶಿಗೆಲ್ಲಾ: ಮತ್ತೆ 13 ಪ್ರಕರಣ ಪತ್ತೆ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಶಿಗೆಲ್ಲಾ ಸೋಂಕು ಹರಡುವಿಕೆ ಹೆಚ್ಚಳವಾಗುತ್ತಿದ್ದು, ಶನಿವಾರ ಹೊಸದಾಗಿ 13 ಪ್ರಕರಣಗಳು ಪತ್ತೆಯಾಗಿವೆ.

'ಕೊಯಿಕ್ಕೋಡ್‌ನಲ್ಲಿ ನಿಫಾ ಸೋಂಕಿತರೊಂದಿಗೆ ಸಂಪರ್ಕದಲ್ಲಿದ್ದ ಆರೋಗ್ಯ ಸಿಬ್ಬಂದಿ ಹಾಗೂ ಇತರ 15 ಜನರ ಪರೀಕ್ಷೆ ನಡೆಸಲಾಗಿದ್ದು, ಯಾರಲ್ಲಿಯೂ ಸೋಂಕು ಪತ್ತೆಯಾಗಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವರ್ಷದಲ್ಲಿ ದಾಖಲಾದ ಶಿಗೆಲ್ಲಾ ಪ್ರಕರಣಗಳ ಸಂಖ್ಯೆ 209ಕ್ಕೆ ಏರಿದ್ದು, ಈವರೆಗೆ ಒಟ್ಟು ಆರು ಜನರು ಮೃತಪಟ್ಟಿದ್ದಾರೆ. ಕೊಯಿಕ್ಕೋಡ್ ಮತ್ತು ವಯನಾಡ್‌ನಲ್ಲಿ ಹೆಚ್ಚಿನ ಪ್ರಕರಣಗಳು ಪತ್ತೆಯಾಗುತ್ತಿವೆ.

ಮುಂಬೈ ಧಾರಣೆ (ಶೇಂಗಾ)

20-06-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಪಾಮ್ ವಾರದ ಡೆಲಿವರಿ	1468 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1570 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,44,900 (1,44,800)
ಬೆಳ್ಳಿ ಕೆ.ಜಿಗೆ	2,34,000 (2,33,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಬ್ಯಾಂಕ್ ಲಾಕರ್‌ನಲ್ಲಿ ₹1.5 ಕೋಟಿ ನಗದು, 2 ಕೆ.ಜಿ ಚಿನ್ನ ಪತ್ತೆ

ಹೈದರಾಬಾದ್ (ಪಿಟಿಐ): ಸರ್ವೆ ಹಾಗೂ ಭೂದಾಖಲೆಗಳ ವಿಭಾಗದ ಉಪ ನಿರ್ದೇಶಕರೊಬ್ಬರಿಗೆ ಸೇರಿದ ಆಸ್ತಿಗಳ ಮೇಲೆ ದಾಳಿ ನಡೆಸಿದ ತೆಲಂಗಾಣದ ಭ್ರಷ್ಟಾಚಾರ ನಿಗ್ರಹ ಪಡೆ (ಎಸಿಬಿ) ಅಧಿಕಾರಿಗಳು ₹1.5 ಕೋಟಿ ನಗದು 2 ಕೆ.ಜಿ. ಚಿನ್ನ ಹಾಗೂ ವಜ್ರಾಭರಣವನ್ನು ಬ್ಯಾಂಕ್ ಲಾಕರ್‌ನಲ್ಲಿರುವುದನ್ನು ಪತ್ತೆ ಹಚ್ಚಿದ್ದಾರೆ.

ಎಸ್.ನರಹರಿರಾವ್ ಅವರ ಮನೆ ಹಾಗೂ ಸಂಬಂಧಿಕರ ಮನೆಯ ಮೇಲೆ ಜೂನ್ 16ರಂದು ದಾಳಿ ನಡೆಸಿದ್ದ ಎಸಿಬಿ ಅಧಿಕಾರಿಗಳು ₹13 ಕೋಟಿ ಮೌಲ್ಯದ ಆಸ್ತಿಯನ್ನು ಪತ್ತೆಹಚ್ಚಿದ್ದರು. ಇದಾದ ಬಳಿಕ ಅಧಿಕಾರಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

'ವಿಚಾರಣೆ ವೇಳೆ ಪತ್ನಿ ಹಾಗೂ ತನ್ನ ಹೆಸರಿನಲ್ಲಿ ಎರಡು ಬ್ಯಾಂಕ್ ಲಾಕರ್ ಹೊಂದಿರುವ ಕುರಿತು ಮಾಹಿತಿ ನೀಡಿದ್ದರು. ಅಧಿಕಾರಿಗಳು ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆದುಕೊಂಡು ಶನಿವಾರ ಲಾಕರ್‌ಗಳನ್ನು ತೆರೆದ ವೇಳೆ ₹1.5 ಕೋಟಿ ನಗದು ಹಾಗೂ 2 ಕೆ.ಜಿ ಚಿನ್ನಾಭರಣಗಳು ದೊರೆತಿವೆ' ಎಂದು ಎಸಿಬಿಯು ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ದೇಣಿಗೆ ನೀಡಿದ 39 ಕೆ.ಜಿ ಬೆಳ್ಳಿ ಎಲ್ಲಿದೆ: ಐಬಿಜೆಎ ಪ್ರಶ್ನೆ

ಲಖನೌ (ಪಿಟಿಐ): ಅಯೋಧ್ಯೆಯ ರಾಮ ಮಂದಿರದಲ್ಲಿ ಕಾಣಿಕೆ ಹಣ ನಾಪತ್ತೆಯಾದ ಪ್ರಕರಣದ ಬೆನ್ನಲ್ಲೇ, ಲಖನೌ ಮೂಲದ ಆಭರಣ ವ್ಯಾಪಾರಿಯೊಬ್ಬರು ತಾವು ರಾಮ ಮಂದಿರಕ್ಕೆ ವೈಯಕ್ತಿಕ ದೇಣಿಗೆಯಾಗಿ ನೀಡಿದ್ದ 3 ಕೆ.ಜಿ ತೂಕದ ಬೆಳ್ಳಿಯ ದೀಪದ ಸದ್ಯದ ಸ್ಥಿತಿ ಈಗ ಏನಾಗಿದೆಯೋ ತಿಳಿದಿಲ್ಲ ಎಂದು ದೂರಿದ್ದಾರೆ.



ಬೆಳ್ಳಿ ಗಟ್ಟಿ ಮತ್ತು ಆಭರಣ ವ್ಯಾಪಾರಿಗಳ ಸಂಘದ (ಐಬಿಜೆಎ) ಉತ್ತರ ಭಾರತ ಘಟಕದ ಅಧ್ಯಕ್ಷ ಅನುರಾಗ್ ರಸ್ತೋಗಿ ಈ ಆರೋಪ ಮಾಡಿದ್ದಾರೆ.

ಅಯೋಧ್ಯೆಯಲ್ಲಿ 2020ರಲ್ಲಿ ನಡೆದ ಭೂಮಿಪೂಜೆಗೆ ಮುಂಚಿತವಾಗಿ 'ಐಬಿಜೆಎ' ವತಿಯಿಂದ ದಾನ ಮಾಡಲಾಗಿದ್ದ 39.26 ಕೆ.ಜಿ ತೂಕದ ಬೆಳ್ಳಿ ಎಲ್ಲಿದೆ ಎಂಬುದು ಸಹ ಗೊತ್ತಾಗಿಲ್ಲ ಎಂದು ಅವರು ಹೇಳಿದ್ದಾರೆ.

'ನನ್ನ ಕುಟುಂಬದ ವತಿಯಿಂದ ರಾಮ ಮಂದಿರಕ್ಕೆ ಅನಾಮಧೇಯ ಕಾಣಿಕೆಯಾಗಿ ಮೂರು ಕೆಜಿ ತೂಕದ ಬೆಳ್ಳಿ ದೀಪವನ್ನು ನೀಡಿದ್ದೇನೆ. ಇದರ ಹೊರತಾಗಿಯೂ ಐಬಿಜೆಎ ವತಿಯಿಂದ ಬೆಳ್ಳಿಯ ಉಪಕರಣಗಳನ್ನು ದೇಣಿಗೆ ನೀಡಲಾಗಿದ್ದು, ಇದರ ಪ್ರಸ್ತುತ ಸ್ಥಿತಿಯ ಬಗ್ಗೆ ತಿಳಿದಿಲ್ಲ ಎಂದು ಅವರು ಹೇಳಿದ್ದಾರೆ.

ಸಭಾಮಂಟಪ ಚಾವಣಿ ಕುಸಿತ: ಐವರು ಸಾವು

ಛತ್ರಪತಿ ಸಂಭಾಜಿನಗರ (ಪಿಟಿಐ): ಮಹಾರಾಷ್ಟ್ರದ ಪರ್ಭಾನಿ ಜಿಲ್ಲೆಯ ಯಶ್ವಾಡಿ ಗ್ರಾಮದಲ್ಲಿ ಆಂಜನೇಯ ದೇವಸ್ಥಾನದ ಗರ್ಭಗುಡಿ ಮುಂಭಾಗದಲ್ಲಿ ನಿರ್ಮಾಣ ಹಂತದಲ್ಲಿದ್ದ ಸಭಾ ಮಂಟಪದ ಚಾವಣಿ ಕುಸಿದು ಶನಿವಾರ ಕನಿಷ್ಠ ಐವರು ಮೃತಪಟ್ಟಿದ್ದು, 20ಕ್ಕೂ ಹೆಚ್ಚು ಭಕ್ತರು ಅವಶೇಷಗಳಡಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ.

ಯಶ್ವಾಡಿ ಗ್ರಾಮವು ಛತ್ರಪತಿ ಸಂಭಾಜಿನಗರ ಜಿಲ್ಲಾ ಕೇಂದ್ರದಿಂದ 190 ಕಿ.ಮೀ ದೂರದಲ್ಲಿದೆ. ಶನಿವಾರವಾದ್ದರಿಂದ ದೇವಸ್ಥಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು.

ಘಟನೆ ನಡೆದಾಗ ಕೆಲವು ಭಕ್ತರು ಈ ಚಾವಣಿಯ ಕೆಳಗೆ ನಿಂತಿದ್ದರು. ಇದುವರೆಗೆ 25 ಭಕ್ತರನ್ನು ರಕ್ಷಿಸಲಾಗಿದೆ. ಅವಶೇಷಗಳಡಿ ಇನ್ನೂ ಹಲವರು ಸಿಲುಕಿರುವ ಶಂಕೆ ಇದ್ದು, ಸಾವಿನ ಸಂಖ್ಯೆ ಇನ್ನೂ ಹೆಚ್ಚಬಹುದು ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ. 'ಮೃತರ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ ಘೋಷಿಸಲಾಗಿದೆ' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಟಿಕೆಟ್ ರಹಿತ ಪ್ರಯಾಣ: ದಂಡ ₹500ಕ್ಕೆ ಏರಿಕೆ

ಒಂದನೇ ಪುಟದಿಂದ...

ಟಿಕೆಟ್ ರಹಿತ ಪ್ರಯಾಣಕ್ಕಾಗಿ ಈಗಾಗಲೇ ನಿಗದಿಪಡಿಸಿರುವ ಶಿಕ್ಷೆ, ದಂಡದ ಗರಿಷ್ಠ ಮೊತ್ತದಲ್ಲಿ ಯಾವುದೇ ಬದಲಾವಣೆಯನ್ನು ರೈಲ್ವೆ ಸಚಿವಾಲಯ ಮಾಡಿಲ್ಲ. ಸದ್ಯ ಇದು 6 ತಿಂಗಳವರೆಗೆ ಜೈಲು ಶಿಕ್ಷೆ, ₹1 ಸಾವಿರ ದಂಡ ಅಥವಾ ಎರಡನ್ನೂ ಒಳಗೊಂಡಿದೆ.

ಗಮ್ಯಸ್ಥಾನ ಮೀರಿ ಪ್ರಯಾಣಿಸುವ ವ್ಯಕ್ತಿಗಳು ₹500 ದಂಡ ಪಾವತಿಸಬೇಕಾಗುತ್ತದೆ. ದಂಡ ವಸೂಲಿ ಮತ್ತು ಹೆಚ್ಚುವರಿ ಶುಲ್ಕಗಳಿಗೆ ಸಂಬಂಧಿಸಿದ ನಿಬಂಧನೆಗಳು ಹಿಂದಿನಂತೆಯೇ ಮುಂದುವರಿಯಲಿವೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ.

'ಟಿಕೆಟ್ ಪರಿಶೀಲನೆ ವ್ಯವಸ್ಥೆಯನ್ನು ಬಲಪಡಿಸುವುದರ ಮೂಲಕ, ರೈಲ್ವೆಯ ವರಮಾನ ಸೋರಿಕೆಯನ್ನು ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗಿದೆ' ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಫೋಟೊಗಾಗಿ ಬೇಡಿಕೊಂಡಿದ್ದ ಮೆಲೊನಿ: ಟ್ರಂಪ್ ಮತ್ತೆ ಹೇಳಿಕೆ

ವಾಷಿಂಗ್ಟನ್ (ಎಎಫ್‌ಪಿ): 'ಫ್ರಾನ್ಸ್‌ನಲ್ಲಿ ಈಚೆಗೆ ನಡೆದ ಜಿ7 ಶೃಂಗಸಭೆಯ ವೇಳೆ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೊನಿ ನನ್ನೊಂದಿಗೆ ಫೋಟೊ ತೆಗೆಸಿಕೊಳ್ಳಲು ಪದೇಪದೇ ಬೇಡಿಕೊಂಡಿದ್ದರು' ಎಂಬ ತಮ್ಮ ಹೇಳಿಕೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಪ್ರಸ್ತಾಪಿಸಿದ್ದಾರೆ.


ತಮ್ಮ ಸಾಮಾಜಿಕ ಜಾಲತಾಣ 'ಟ್ರುಥ್ ಸೋಷಿಯಲ್'ನಲ್ಲಿ ಮತ್ತೆ ಈ ವಿಚಾರವನ್ನು ಉಲ್ಲೇಖಿಸಿದ ಟ್ರಂಪ್, 'ಬಹುಶಃ ಅಮೆರಿಕವನ್ನು ಕಡೆಗಣಿಸಿದ್ದಕ್ಕಾಗಿ ಇಟಲಿಯಲ್ಲಿ ಆಕೆಯ ಜನಪ್ರಿಯತೆ ಕುಸಿದಿದೆ. ಆದರೆ ಅಮೆರಿಕವು ನಿಜಕ್ಕೂ ಇಟಲಿಯನ್ನು ಪ್ರೀತಿಸುತ್ತದೆ ಮತ್ತು ಪೋಷಿಸುತ್ತದೆ' ಎಂದು ಬರೆದುಕೊಂಡಿದ್ದಾರೆ.

ಇದು ಇಬ್ಬರು ನಾಯಕರ ನಡುವಿನ ವೈಮನಸ್ಸು ಮತ್ತು ಉಭಯ ರಾಷ್ಟ್ರಗಳ ರಾಜತಾಂತ್ರಿಕ ಸಂಬಂಧಕ್ಕೆ ಪೆಟ್ಟು ನೀಡಿದ್ದಷ್ಟೇ ಅಲ್ಲ, ಇರಾನ್ ವಿರುದ್ಧದ ಯುದ್ಧ ಮತ್ತು ನ್ಯಾಟೊ ಬಣದೊಂದಿಗಿನ ಟ್ರಂಪ್ ಮುನಿಸಿನೊಂದಿಗೂ ತಳಕು ಹಾಕಿಕೊಳ್ಳುತ್ತಿದೆ.

'ಇರಾನ್ ವಿರುದ್ಧದ ಅಮೆರಿಕದ ಕಾರ್ಯಾಚರಣೆಗೆ ಬೆಂಬಲಿಸಲು ಇಟಲಿ ವಿಫಲವಾಗಿದೆ. ಈಗ ಆಂತರಿಕ ರಾಜಕೀಯದ ಕಾರಣಕ್ಕೆ ವಾಷಿಂಗ್ಟನ್ ಜೊತೆ ಸಂಬಂಧ ಸುಧಾರಣೆಗೆ ಮೆಲೊನಿ ಯತ್ನಿಸುತ್ತಿದ್ದಾರೆ. ಅಮೆರಿಕವು ಇರಾನ್ ಸೇನೆಯನ್ನು ಸದೆಬಡಿದ ಬಳಿಕ ಆಕೆ ತನ್ನ ಜನಪ್ರಿಯತೆಯನ್ನು ಮರಳಿ ಗಳಿಸಲೆಂದು ಸ್ನೇಹ ಬಯಸುತ್ತಿದ್ದಾಳೆ. ಅದರ ಅಗತ್ಯವಿಲ್ಲ' ಎಂದು ಬರೆದಿದ್ದಾರೆ.

'ಮೋದಿ ಶ್ರೇಷ್ಠ ನಾಯಕ, ಗಟ್ಟಿಗ'

ವಾಷಿಂಗ್ಟನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಶ್ರೇಷ್ಠ ನಾಯಕ ಹಾಗೂ ಗಟ್ಟಿಗ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಣ್ಣಿಸಿದ್ದಾರೆ.



ನರೇಂದ್ರ ಮೋದಿ

ಮಾಧ್ಯಮವೊಂದಕ್ಕೆ ಸಂದರ್ಶನ ನೀಡಿದ ಅವರು, 'ಅಧಿಕಾರ, ಪ್ರಭಾವ ಹಾಗೂ ಅವುಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ವಿಚಾರದಲ್ಲಿ ನಾನು ಬಹುವಾಗಿ ಮೆಚ್ಚಿಕೊಂಡ ಇಬ್ಬರು ನಾಯಕರೆಂದರೆ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್' ಎಂದು ಹೇಳಿದರು.

'ಭಾರತದಲ್ಲಿ ಯಾರೇ ಆದರೂ ಆರು ತಿಂಗಳು, ಹೆಚ್ಚೆಂದರೆ ಒಂದು ವರ್ಷ ಅಧಿಕಾರ ನಡೆಸುತ್ತಿದ್ದರು. ಇದ್ದಕ್ಕಿದ್ದಂತೆ ಅದನ್ನೆಲ್ಲ ಕೊನೆಗಾಣಿಸಿ ಅಧಿಕಾರದ ಗದ್ದುಗೆ ಏರಿದ ಮೋದಿ ಸಮರ್ಥವಾಗಿ 12 ವರ್ಷ ಪೂರೈಸಿದ್ದಾರೆ. ಅವರ ಆಡಳಿತದಲ್ಲಿ ಅತ್ಯಂತ ಶಾಂತ ವಾತಾವರಣ ಇದೆ. ಆದರೆ ಮೋದಿ ಮಾತ್ರ ಅಷ್ಟು ಮೃದು ವ್ಯಕ್ತಿಯಲ್ಲ, ತುಂಬಾ ಗಟ್ಟಿಗ' ಎಂದು ಹೊಗಳಿದರು.

'ಮೋದಿ ಯುದ್ಧದಿಂದ ಹೊರಗುಳಿದು ಚಾಣಾಕ್ಷತನ ಪ್ರದರ್ಶಿಸಿದರು. ಅವರು ನಿಜಕ್ಕೂ ದೊಡ್ಡವರು, ಭಾರತ ನಿಜಕ್ಕೂ ದೊಡ್ಡದು' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ವ್ಯಾಪಾರದಲ್ಲಿ ಸಮಾನತೆ': 'ಈ ಹಿಂದೆ ಭಾರತದೊಂದಿಗೆ ಅಮೆರಿಕ ಸಾಕಷ್ಟು ವ್ಯಾಪಾರ ನಡೆಸುತ್ತಿದ್ದರೂ, ಅವರ ಮುಂದೆ ನಾವು ಸಮಾನರಾಗಿರಲಿಲ್ಲ. ಅದಕ್ಕಾಗಿ ನಾನು ಅವರ ಮೇಲೆ ಆರೋಪ ಹೊರಿಸುವುದಿಲ್ಲ, ನಮ್ಮಲ್ಲೇ ಇದ್ದ ಮೂರ್ಖ ನಾಯಕರು ಅದಕ್ಕೆ ಕಾರಣರಾಗಿದ್ದರು. ಈಗ ನಾವು ಭಾರತದೊಂದಿಗೆ ನ್ಯಾಯಯುತ ವ್ಯಾಪಾರ ನಡೆಸುತ್ತಿದ್ದೇವೆ' ಎಂದ ಟ್ರಂಪ್, 'ಅದು ಅವರಿಗೆ ಅಷ್ಟೊಂದು ಖುಷಿ ತರುತ್ತಿಲ್ಲ' ಎಂದೂ ಸೇರಿಸಿದರು.

ಲೆಬನಾನ್ ಮೇಲೆ ಇಸ್ರೇಲ್ ದಾಳಿಗೆ ಖಂಡನೆ: ಐಆರ್‌ಜಿಸಿ ಎಚ್ಚರಿಕೆ

ಮತ್ತೆ ಹೊರ್ಮುಜ್ ಮುಚ್ಚಿದ ಇರಾನ್

ಟೆಹರಾನ್/ ವಾಷಿಂಗ್ಟನ್ (ಎಎಫ್‌ಪಿ): ಕದನ ವಿರಾಮ ಜಾರಿಯಾದರೂ, ಲೆಬನಾನ್ ಮೇಲೆ ಇಸ್ರೇಲ್ ದಾಳಿ ಮುಂದುವರಿಸಿರುವುದನ್ನು ಖಂಡಿಸಿ, ಹೊರ್ಮುಜ್ ಜಲಸಂಧಿಯನ್ನು ಮತ್ತೆ ಮುಚ್ಚಿರುವುದಾಗಿ ಇರಾನ್ ಶನಿವಾರ ಹೇಳಿದೆ.

'ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ಸಂಚಾರವನ್ನು ಪೂರ್ಣವಾಗಿ ನಿಷೇಧಿಸಲಾಗಿದೆ' ಎಂದು ಇರಾನ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಹೇಳಿದೆ.

ಆದರೆ, 'ಶನಿವಾರ 55 ಹಡಗುಗಳು ಹೊರ್ಮುಜ್ ಜಲಸಂಧಿಯನ್ನು ದಾಟಿವೆ. ಒಪ್ಪಂದದ ಎಲ್ಲ ಅಂಶಗಳು ಕಾರ್ಯರೂಪಕ್ಕೆ ಬರುವುದು ಖಚಿತವಾಗುವವರೆಗೆ ನಾವು ಸನ್ನದ್ಧ ಸ್ಥಿತಿಯಲ್ಲೇ ಇದ್ದೇವೆ' ಎಂದು ಅಮೆರಿಕದ ಸೇನೆ ಹೇಳಿದೆ.

'ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಇರಾನ್, ಅಮೆರಿಕದೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ಇಸ್ರೇಲ್ ಉಲ್ಲಂಘಿಸಿದೆ. ಲೆಬನಾನ್ ಮೇಲಿನ ದಾಳಿ ನಿಲ್ಲಿಸುವುದೂ ಈ ಒಪ್ಪಂದದ ಭಾಗವಾಗಿದೆ' ಎಂದು ಇರಾನ್ ಪ್ರತಿಪಾದಿಸಿದೆ.



ಸ್ವಿಟ್ಜರ್ಲೆಂಡ್‌ಗೆ ವಿಟ್ಕಾಫ್, ಅರಾಘ್ಚಿ: ಲೆಬನಾನ್‌ನಲ್ಲಿ ಕದನ ವಿರಾಮ ಜಾರಿಗೊಂಡ ಬೆನ್ನಲ್ಲೇ, ಅಮೆರಿಕ-ಇರಾನ್ ನಡುವಿನ ಅಂತಿಮ ಒಪ್ಪಂದದ ಮಾತುಕತೆಗೆ ಹಾದಿ ಸುಗಮಗೊಂಡಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಮತ್ತು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರು ಸ್ವಿಟ್ಜರ್ಲೆಂಡ್‌ಗೆ ಪ್ರಯಾಣ ಬೆಳೆಸಿದ್ದಾರೆ ಎಂದು ಅಮೆರಿಕದ ಮಾಧ್ಯಮ ಸಂಸ್ಥೆ 'ಆಕ್ಸಿಯೊಸ್' ವರದಿ ಮಾಡಿದೆ.

ನಿಗದಿಯಂತೆ ಸ್ವಿಟ್ಜರ್ಲೆಂಡ್‌ನಲ್ಲಿ ಶುಕ್ರವಾರ ಅಮೆರಿಕ-ಇರಾನ್ ನಡುವೆ ಅಂತಿಮ ಸುತ್ತಿನ ಮಾತುಕತೆ ಆರಂಭಗೊಳ್ಳಬೇಕಿತ್ತು. ಆದರೆ, ಇಸ್ರೇಲ್-ಲೆಬನಾನ್ ಕದನ ವಿರಾಮ ಅನಿಶ್ಚಿತತೆಯಿಂದಾಗಿ ಅಮೆರಿಕದ ಉಪಾಧ್ಯಕ್ಷ ಜೆ.ಡಿ ವ್ಯಾನ್ಸ್ ಅವರ ಸ್ವಿಟ್ಜರ್ಲೆಂಡ್ ಭೇಟಿಯನ್ನು ಗುರುವಾರ ಮುಂದೂಡಲಾಗಿತ್ತು.

ಇರಾನ್‌ನ ಪ್ರತಿನಿಧಿಗಳ ಜತೆ ನಡೆಯುವ ಮಾತುಕತೆಯಲ್ಲಿ ಅಮೆರಿಕದ ನಿಯೋಗದಲ್ಲಿ ಶ್ವೇತಭವನದ ಸಲಹೆಗಾರ ಜಾರೆಡ್ ಕಶ್ನರ್ ಕೂಡ ಭಾಗವಹಿಸಲಿದ್ದಾರೆ ಎಂದು 'ಆಕ್ಸಿಯೊಸ್' ಹೇಳಿದೆ. ಆದರೆ, ವಿಟ್ಕಾಫ್ ಅವರ ಭೇಟಿಯ ಬಗ್ಗೆ ಶ್ವೇತಭವನ ಅಧಿಕೃತವಾಗಿ ಯಾವುದೇ ಹೇಳಿಕೆ ನೀಡಿಲ್ಲ.

ಇಸ್ರೇಲ್ ದಾಳಿಗೆ 16 ಸಾವು

ಟೈರ್ (ಎಪಿ): ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ 16 ಮಂದಿ ಮೃತಪಟ್ಟಿದ್ದು, 12 ಜನ ಗಾಯಗೊಂಡಿದ್ದಾರೆ.

ನಬತಿ ನಗರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಈ ದಾಳಿ ನಡೆದಿದೆ ಎಂದು ಲೆಬನಾನ್ ರಾಷ್ಟ್ರೀಯ ಸುದ್ದಿ ಸಂಸ್ಥೆ ವರದಿ ಮಾಡಿದೆ.

'ಲೆಬನಾನ್‌ನಲ್ಲಿರುವ ಇಸ್ರೇಲ್ ಪಡೆಗಳ ಮೇಲೆ ಹಿಜ್ಬುಲ್ಲಾ ಬಂಡುಕೋರರು ರಾತ್ರಿಯಿಡೀ 50ಕ್ಕೂ ಹೆಚ್ಚು ಸ್ಫೋಟಕಗಳನ್ನು ಹಾರಿಸಿದ್ದಾರೆ. ಬಂಡುಕೋರರನ್ನು ಗುರಿಯಾಗಿಸಿ ನಾವು ಪ್ರತಿದಾಳಿ ನಡೆಸಿದ್ದೇವೆ' ಎಂದು ಇಸ್ರೇಲ್ ಸೇನೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕದನ ವಿರಾಮದ ಬಗ್ಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 'ಇಸ್ರೇಲ್ ಸೇನೆಯು ಹಿಜ್ಬುಲ್ಲಾ ಬಂಡುಕೋರರ 150 ಸ್ಥಳಗಳನ್ನು ಗುರಿಯಾಗಿಸಿ ದಾಳಿ ನಡೆಸಿದೆ ಹಾಗೂ ಹಲವು ಬಂಡುಕೋರರನ್ನು ಹತ್ಯೆ ಮಾಡಿದೆ' ಎಂದು ಶುಕ್ರವಾರ 'ಎಕ್ಸ್' ಪೋಸ್ಟ್‌ನಲ್ಲಿ ಹೇಳಿದ್ದಾರೆ.



ಪ್ರಸಿದ್ಧ ಬಿರುಗಾಳಿ; ಯಶಸ್ವಿ ಅಬ್ಬರದ ಆಟ

ಭಾರತಕ್ಕೆ ಸರಣಿ ಜಯ: ರೋಹಿತ್ ಶರ್ಮಾ ಮಿಂಚು • ಹಷ್ಮತ್‌ವುಲ್ಲಾ ಶಹೀದಿ ಶತಕ

ಚೆನ್ನೈ (ಪಿಟಿಐ): ಕನ್ನಡಿಗ ಪ್ರಸಿದ್ಧಕೃಷ್ಣ ಅವರ ಜೀವನ ಶ್ರೇಷ್ಠ ಬೌಲಿಂಗ್ ದಾಳಿ, ಯಶಸ್ವಿ ಜೈಸ್ವಾಲ್ ಅಮೋಘ ಶತಕ ಮತ್ತು ರೋಹಿತ್ ಶರ್ಮಾ ಅವರ ಲೀಲಾಜಾಲವಾದ ಬ್ಯಾಟಿಂಗ್ ಕೌಶಲಗಳ ಮುಂದೆ ಅಫ್ಗಾನಿಸ್ತಾನ ತಂಡಕ್ಕೆ 'ಸಮಾಧಾನಕರ ಗೆಲುವು' ಸಾಧಿಸಲು ಸಾಧ್ಯವಾಗಲಿಲ್ಲ. ಆತಿಥೇಯ ಭಾರತವು ಏಕದಿನ ಕ್ರಿಕೆಟ್ ಸರಣಿಯನ್ನು 3–0ಯಿಂದ ಕ್ಲೀನ್‌ಸ್ವೀಪ್ ಮಾಡಿತು.

ಚೆಪಾಕ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಅಫ್ಗನ್ ತಂಡವನ್ನು ಪ್ರಸಿದ್ಧಕೃಷ್ಣ (8.2–2–23–5) ಅವರು 218 (44.2 ಓವರ್) ರನ್ ಮೊತ್ತಕ್ಕೆ ಕಟ್ಟಿಹಾಕಿದರು. ಭಾರತದ ಬೌಲಿಂಗ್ ಪಡೆಯ ಉತ್ತಮ ದಾಳಿಯ ನಡುವೆಯೂ ಅಫ್ಗನ್ ತಂಡದ ನಾಯಕ ಹಷ್ಮತ್‌ವುಲ್ಲಾ ಶಹೀದಿ (102; 131ಎ, 4X13, 6X1) ಶತಕ ದಾಖಲಿಸಿದರು. ಅಜ್ಮತ್‌ವುಲ್ಲಾ ಒಮರ್‌ಝೈ (50; 56ಎ) ಅರ್ಧಶತಕವೂ ಗಮನ ಸೆಳೆಯಿತು.

ಗುರಿ ಬೆನ್ನಟ್ಟಿದ ಭಾರತ ತಂಡದ ಆರಂಭಿಕ ಜೋಡಿ ಯಶಸ್ವಿ (ಅಜೇಯ 110) ಮತ್ತು ರೋಹಿತ್ (79 ರನ್) ಅವರು ಮೊದಲ ವಿಕೆಟ್ ಜತೆಯಾಟದಲ್ಲಿ 170 ರನ್ ಸೇರಿಸಿದರು. ಇದರಿಂದಾಗಿ ಕೇವಲ 28.4 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 224 ರನ್ ಗಳಿಸಿತು.

ಈ ಪಂದ್ಯದಲ್ಲಿ ಬ್ಯಾಟರ್ ಕೆ.ಎಲ್. ರಾಹುಲ್, ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ಎಡಗೈ ವೇಗಿ ಅರ್ಷದೀಪ್ ಸಿಂಗ್ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ಶ್ರೇಯಸ್ ಅಯ್ಯರ್ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದರು. ಕೀಪಿಂಗ್ ಹೊಣೆಯನ್ನು ಇಶಾನ್ ಕಿಶನ್ ನಿಭಾಯಿಸಿದರು.

ಈ ಪಂದ್ಯದಲ್ಲಿ ರೋಹಿತ್ ಮತ್ತು ಯಶಸ್ವಿ ಅವರ ಬ್ಯಾಟಿಂಗ್ ಲಯದ ಮೇಲೆ ಎಲ್ಲರ ಕಣ್ಣು ನೆಟ್ಟಿತ್ತು. ಅವರು ಫಾರ್ಮ್‌ಗೆ ಮರಳಿದ್ದು ತಂಡದ ಶಕ್ತಿ ಹೆಚ್ಚಿದಂತಾಗಿದೆ.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 44.2 ಓವರ್‌ಗಳಲ್ಲಿ 218 (ಹಷ್ಮತ್‌ವುಲ್ಲಾ ಶಹೀದಿ 102, ಅಜ್ಮತ್‌ವುಲ್ಲಾ ಒಮರ್‌ಝೈ 50, ಮೊಹಮ್ಮದ್ ನಬಿ 21, ಪ್ರಸಿದ್ಧಕೃಷ್ಣ 23ಕ್ಕೆ5) ಭಾರತ: 28.4 ಓವರ್‌ಗಳಲ್ಲಿ 1 ವಿಕೆಟ್‌ಗೆ 224 (ಯಶಸ್ವಿ ಜೈಸ್ವಾಲ್ ಔಟಾಗದೇ 110, ರೋಹಿತ್ ಶರ್ಮಾ 79, ಶ್ರೇಯಸ್ ಅಯ್ಯರ್ ಔಟಾಗದೇ 20, ಮೊಹಮ್ಮದ್ ನಬಿ 47ಕ್ಕೆ1) ಫಲಿತಾಂಶ: ಭಾರತ ತಂಡಕ್ಕೆ 9 ವಿಕೆಟ್ ಜಯ. ಸರಣಿಯಲ್ಲಿ 3–0 ಜಯ. ಪಂದ್ಯಶ್ರೇಷ್ಠ: ಪ್ರಸಿದ್ಧಕೃಷ್ಣ, ಸರಣಿಶ್ರೇಷ್ಠ: ಶುಭಮನ್ ಗಿಲ್.



ಚೆನ್ನೈನಲ್ಲಿ ನಡೆದ ಅಫ್ಗಾನಿಸ್ತಾನ ಎದುರಿನ ಮೂರನೇ ಏಕದಿನ ಪಂದ್ಯ ಜಯಭೇರಿ ಬಾರಿಸಿದ ಭಾರತ ತಂಡವು ಸರಣಿಯನ್ನೂ ಗೆದ್ದು ಟ್ರೋಫಿಯೊಂದಿಗೆ ಸಂಭ್ರಮಿಸಿತು ಎಎಫ್‌ಪಿ ಚಿತ್ರ

ಆತ್ಮವಿಶ್ವಾಸದ ಉತ್ತುಂಗದಲ್ಲಿರುವ ಭಾರತದ ವನಿತೆಯರು

ಕೌರ್ ಪಡೆಗೆ ದಕ್ಷಿಣ ಆಫ್ರಿಕಾ ಸವಾಲು

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಇಂದಿನ ಪಂದ್ಯ

ವೆಸ್ಟ್ ಇಂಡೀಸ್ V/s ಶ್ರೀಲಂಕಾ
ತಾಣ: ಬ್ರಿಸ್ಟಲ್, ಆರಂಭ: ಮಧ್ಯಾಹ್ನ 3

ದಕ್ಷಿಣ ಆಫ್ರಿಕಾ V/s ಭಾರತ
ತಾಣ: ಮ್ಯಾಂಚೆಸ್ಟರ್, ಆರಂಭ: ಸಂಜೆ 7

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಮ್ಯಾಂಚೆಸ್ಟರ್ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಮೊದಲೆರಡೂ ಪಂದ್ಯ ಜಯಿಸಿದೆ. ಅದರೊಂದಿಗೆ ಟೂರ್ನಿಯಲ್ಲಿ ಉತ್ತಮ ಆರಂಭ ಮಾಡಿದೆ.

ಇದೀಗ ಕಠಿಣ ಸವಾಲುಗಳ ಹಾದಿ ಆರಂಭವಾಗಲಿದೆ. ಅದರಲ್ಲಿ ಭಾನುವಾರ ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಪಂದ್ಯವೂ ಒಂದು. ಟೂರ್ನಿಯ ಮೊದಲ ಪಂದ್ಯದಲ್ಲಿ ಕೌರ್ ಬಳಗವು ಪಾಕಿಸ್ತಾನ ಎದುರು 64 ರನ್ ಜಯ ಸಾಧಿಸಿತ್ತು. ಆ ಪಂದ್ಯದಲ್ಲಿ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಮತ್ತು ವಿಕೆಟ್‌ಕೀಪರ್ –ಬ್ಯಾಟರ್ ರಿಚಾ ಘೋಷ್ ಅವರು ಉತ್ತಮ ಕಾಣಿಕೆ ನೀಡಿದ್ದರು. ಸ್ಪಿನ್ನರ್ ದೀಪ್ತಿ ಶರ್ಮಾ ಐದು ವಿಕೆಟ್ ಗಳಿಸಿದ್ದರು. ಎರಡನೇ ಪಂದ್ಯದಲ್ಲಿ ನೆದರ್ಲೆಂಡ್ಸ್ ವಿರುದ್ಧವೂ 95 ರನ್‌ಗಳ ದೊಡ್ಡ ಅಂತರದ ಜಯವನ್ನು ಭಾರತ ಸಾಧಿಸಿತ್ತು.



ಹರ್ಮನ್‌ಪ್ರೀತ್

ಆದರೆ ದಕ್ಷಿಣ ಆಫ್ರಿಕಾ ತಂಡದ ಎದುರು ಆಡುವುದು ಸುಲಭದ ಸವಾಲು ಅಲ್ಲ. ಆ ತಂಡದ ಬೌಲಿಂಗ್ ಅಮೋಘವಾಗಿದೆ. ಲಾರಾ ವೋಲ್ವಾರ್ಟ್ ನಾಯಕತ್ವದ ದಕ್ಷಿಣ ಆಫ್ರಿಕಾ ಬೌಲರ್‌ಗಳು ಭಾರತದ ಅಗ್ರಕ್ರಮಾಂಕದ ಬ್ಯಾಟರ್‌ಗಳಿಗೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ. ಪವರ್‌ಪ್ಲೇಯಲ್ಲಿ ಸ್ಮೃತಿ ಹಾಗೂ ಶಫಾಲಿ ವರ್ಮಾ ಅವರು ಉತ್ತಮವಾಗಿ ಆಡಬಲ್ಲರು. ರಿಚಾ ಘೋಷ್ ಅವರು ಕೊನೆಯ ಹಂತದ ಓವರ್‌ಗಳಲ್ಲಿ ರನ್ ಕಾಣಿಕೆ ನೀಡಬಲ್ಲ ಸಮರ್ಥರು.

ಮಧ್ಯಮಕ್ರಮಾಂಕದಲ್ಲಿ ಹರ್ಮನ್‌ಪ್ರೀತ್ ಕೌರ್, ಜೆಮಿಮಾ ರಾಡ್ರಿಗಸ್ ಹಾಗೂ ಯಸ್ತಿಕಾ ಭಾಟಿಯಾ ಅವರು ಲಯಕ್ಕೆ ಮರಳಬೇಕಿದೆ. ಬೌಲಿಂಗ್ ವಿಭಾಗದಲ್ಲಿ ಆಫ್‌ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಅವರು ಗೈರುಹಾಜರಿಯು ಪರಿಣಾಮ ಬೀರಬಹುದು. ಅದರೆ ದೀಪ್ತಿ ಮತ್ತು ಶ್ರೀಚರಣಿ ಅವರು ಉತ್ತಮ ಲಯದಲ್ಲಿರುವುದರಿಂದ ಸಮತೋಲನ ಸಾಧಿಸಬಹುದು.

ದಕ್ಷಿಣ ಆಫ್ರಿಕಾ ತಂಡ ಎಲ್ಲ ವಿಭಾಗಗಳಲ್ಲೂ ಉತ್ತಮ ಆಟಗಾರ್ತಿಯರನ್ನು ಹೊಂದಿದೆ. ನಾಯಕಿ ಲಾರಾ, ಆಲ್‌ರೌಂಡರ್ ನದಿನ್ ಡಿ ಕ್ಲರ್ಕ್, ಮರಿಝಾನ್ ಕಾಪ್, ತಾಜ್ಮಿನ್ ಬ್ರಿಟ್ಸ್, ಅನೇರಿ ಡಿಕೆನ್ಸನ್ ಹಾಗೂ ಸುನೆ ಲುಸ್ ಅವರು ತಮ್ಮ ತಂಡಕ್ಕೆ ಯಾವುದೇ ಹಂತದಲ್ಲಿಯೂ ಉಪಯುಕ್ತ ಕಾಣಿಕೆ ನೀಡಬಲ್ಲವರು.



ಮಂಡ್ಯದಲ್ಲಿ ನಡೆದ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆಶಿತ್ ಸೂರ್ಯ, ಹರ್ಷದ್ ಶಾದಿಶ್, ಮಯೂಖ್ ಡಿ.ಬಿ., ಶ್ರೇಯಸ್ ಚಂದ್ರಶೇಖರ್, ವೈಭವ್, ಕೆ.ಯದುನಂದನ್, ಸಾಯಿ ಅಕ್ಷರಾ, ನಿಧಿ ಆತ್ಮಾರಾಮ್, ಸೆಲ್ವ ಸಮೃದ್ಧಿ, ಸಮೀಕ್ಷಾ ಎಚ್.ಎನ್, ದಿಶಾ ಸಂತೋಷ್, ರಶ್ಮಿ ಗಣೇಶ್, ಅಮೃತಾ ಪಿ. ಅವರು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಗಳಿಸಿದರು

ಬ್ಯಾಡ್ಮಿಂಟನ್: ಹರ್ಷದ್, ಸಮೀಕ್ಷಾಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಡ್ಯ: ಬೆಂಗಳೂರಿನ ಹರ್ಷದ್ ಶಾದಿಶ್ ಮತ್ತು ಸಮೀಕ್ಷಾ ಎಚ್.ಎನ್. ಇಲ್ಲಿ ಶನಿವಾರ ಮುಕ್ತಾಯಗೊಂಡ ಯಾನೆಕ್ಸ್–ಸನ್‌ರೈಸ್ ಕರ್ನಾಟಕ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಕರ್ನಾಟಕ ರಾಜ್ಯ ಬ್ಯಾಡ್ಮಿಂಟನ್ ಸಂಸ್ಥೆ ವತಿಯಿಂದ ನಗರದ ಪಿಇಟಿ ಒಳಾಂಗಣ ಕ್ರೀಡಾಂಗಣದಲ್ಲಿ ಜೂನ್ 14ರಿಂದ ಜೂನ್ 20ರವರೆಗೆ ಆಯೋಜಿಸಿದ್ದ ಟೂರ್ನಿಯ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಹರ್ಷದ್ 20–22, 21–17, 21–16ರಿಂದ ಲಕ್ಷ್ ಚೆಂಗಪ್ಪ ಅವರನ್ನು ಮಣಿಸಿದರು. ಮಹಿಳೆಯರ ವಿಭಾಗದ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಬೆಂಗಳೂರಿನ ಸಮೀಕ್ಷಾ 21–18, 10–21, 21–13ರಿಂದ ಮುಸ್ಕಾನ್ ಖಾನ್ ವಿರುದ್ಧ ಜಯಿಸಿದರು.

ವಿಜೇತರು: ಸೀನಿಯರ್ ವಿಭಾಗ: ಪುರುಷರ ಡಬಲ್ಸ್: ಆಶಿತ್ ಸೂರ್ಯ ಮತ್ತು ವೈಭವ್ ಅವರು 21–13, 22–20 ರಿಂದ ಕಿಷಲ್ ಗಣಪತಿ ಮತ್ತು ಪ್ರಕಾಶ್ ರಾಜ್ ಜೋಡಿ ವಿರುದ್ಧ ಗೆಲುವು. ಮಹಿಳಾ ಡಬಲ್ಸ್: ಅಮೃತಾ ಪಿ ಮತ್ತು ರಶ್ಮಿ ಗಣೇಶ್ ಅವರು 21–15, 21–18 ರಿಂದ ಗ್ಲೋರಿಯಾ ಅಠಾವಲೆ ಮತ್ತು ಪ್ರೇರಣಾ ನೀಲುರಿ ವಿರುದ್ಧ ಗೆಲುವು. ಮಿಶ್ರ ಡಬಲ್ಸ್: ಅಶಿತ್ ಸೂರ್ಯ ಮತ್ತು ಅಮೃತಾ ಪಿ. ಅವರು 21–14, 21–14 ರಿಂದ ವೈಭವ್ ಬಿ.ಎಸ್. ಮತ್ತು ಕರ್ಣಿಕಾಶ್ರೀ ವಿರುದ್ಧ ಜಯ.

19 ವರ್ಷದೊಳಗಿನವರು: ಬಾಲಕರ ಸಿಂಗಲ್ಸ್: ಹರ್ಷದ್ ಶಾದಿಶ್ 18–21–21–13,21–8 ರಿಂದ ಹಾರ್ದಿಕ್ ದಿವ್ಯಾಂಶ್ ವಿರುದ್ಧ ಗೆಲುವು. ಬಾಲಕಿಯರ ಸಿಂಗಲ್ಸ್: ದಿಶಾ ಸಂತೋಷ್ 21–18,21–16 ರಿಂದ ಆಶಿದಾಸ್ ವಿರುದ್ಧ ಗೆಲುವು. ಬಾಲಕರ ಡಬಲ್ಸ್: ಮಯೂಖ್ ಡಿ.ಬಿ. ಮತ್ತು ಶ್ರೇಯಸ್ ಚಂದ್ರಶೇಖರ್ ಅವರು 13–21, 21–19, 23–21ರಿಂದ ಅಮಿತ್ ರಾಜ್ ನಟರಾಜ್ ಮತ್ತು ಕೆ.ಯದುನಂದನ್ ವಿರುದ್ಧ ಜಯ. ಬಾಲಕಿಯರ್ ಡಬಲ್ಸ್: ನಿಧಿ ಆತ್ಮಾರಾಮ್ ಮತ್ತು ಸೆಲ್ವ ಸಮೃದ್ಧಿ ಅವರು 18–21,21–15,21–12ರಿಂದ ರಕ್ಷಾ ಎನ್.–ಸಾಯಿ ಅಕ್ಷರ ಜೋಡಿ ವಿರುದ್ಧ ಗೆಲುವು.

ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ: ಶುಭಾಂಗ್ ಆಲ್‌ರೌಂಡ್ ಆಟ

ಬೆಂಗಳೂರು ಬ್ಲಾಸ್ಟರ್ಸ್ 'ಶುಭಾರಂಭ'

• ಆರ್.ಜಿತೇಂದ್ರ

ಮೈಸೂರು: ನಾಯಕ ಶುಭಾಂಗ್ ಹೆಗ್ಡೆ ಆಲ್‌ರೌಂಡ್ ಆಟದ (ಔಟಾಗದೇ 36 ಹಾಗೂ44ಕ್ಕೆ 2) ಬಲದಿಂದ 'ಮಹಾರಾಜ ಟ್ರೋಫಿ' ಟಿ20 ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲೇ ಬೆಂಗಳೂರು ಬ್ಲಾಸ್ಟರ್ಸ್ ತಂಡಕ್ಕೆ ರೋಚಕ ಗೆಲುವಿನ ಕಾಣಿಕೆ ನೀಡಿದರು.

ಮಾನಸಗಂಗೋತ್ರಿಯ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ಒಡ್ಡಿದ 202 ರನ್‌ಗಳ ಗುರಿ ಬೆನ್ನತ್ತಿದ್ದ ಬೆಂಗಳೂರು 6 ವಿಕೆಟ್‌ಗಳಿಂದ ಜಯಿಸಿತು. ಬೆಂಗಳೂರು ತಂಡದ ಆರಂಭಿಕ ಬ್ಯಾಟರ್‌ಗಳಾದ ಭುವನ್ ರಾಜ್ (56; 29ಎ, 4X3, 6X4) ಹಾಗೂ ರೋಹನ್ ಪಾಟೀಲ(31) ಬಿರುಸಿನ ಆರಂಭ ಒದಗಿಸಿದರು. ಈ ಜೋಡಿ 43 ಎಸೆತಗಳಲ್ಲಿ 88 ರನ್ ಸೇರಿಸಿ ಭದ್ರ ಅಡಿಪಾಯ ಹಾಕಿದರು. ಇಬ್ಬರ ನಿರ್ಗಮನದ ಬಳಿಕ ಪಂದ್ಯ ಆಚೀಚೆ ವಾಲಿತು.

ಬೆಂಗಳೂರು ಗೆಲುವಿಗೆ ಕಡೆಯ ಐದು ಓವರ್‌ಗಳಲ್ಲಿ 55 ರನ್ ಬೇಕಿದ್ದು, ಮೆಕ್ನಿಲ್ ನೊರೊನಾ 16ನೇ ಓವರ್‌ನ ಮೊದಲ ಎಸೆತದಲ್ಲೇ ಸಮಿತ್ ದ್ರಾವಿಡ್ (11) ವಿಕೆಟ್ ಗಳಿಸಿದರು. ಆದರೆ ಶುಭಾಂಗ್ ಹಾಗೂ ಪ್ರವೀಣ್ (32) ಜೋಡಿ 5ನೇ ವಿಕೆಟ್‌ಗೆ ಕೇವಲ 29 ಎಸೆತದಲ್ಲಿ ಅಜೇಯ 55 ರನ್ ಪೇರಿಸಿ ಗೆಲುವು ಖಾತ್ರಿಪಡಿಸಿತು.



ಬೆಂಗಳೂರು ಬ್ಲಾಸ್ಟರ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಪ್ರವೀಣ್ ದುಬೆ (ಎಡ) ನಾಯಕ ಶುಭಾಂಗ್ ಹೆಗ್ಡೆ ಚಿತ್ರ: ಅನೂಪ್ ರಾಘ್ ಟಿ

ಪ್ರಖರ್–ಆರವ್ ಅಬ್ಬರ: ಮೊದಲು ಬ್ಯಾಟಿಂಗ್ ನಡೆಸಿದ ಗುಲ್ಬರ್ಗ ತಂಡಕ್ಕೆ ಪ್ರಖರ್ ಚತುರ್ವೇದಿ (64; 38 ಎ, 4X6, 6X4) ಹಾಗೂ ಆರವ್ ಮಹೇಶ್ (63 ರನ್, 41 ಎ, 4X6, 6X3) ಉತ್ತಮ ಜೊತೆಯಾಟವಾಡಿದರು. ಈ ಜೋಡಿಯು ಎರಡನೇ ವಿಕೆಟ್‌ಗೆ 56 ಎಸೆತಗಳಲ್ಲಿ 110 ರನ್ ಪೇರಿಸಿತು. ಕಡೆಯ ಓವರ್‌ಗಳಲ್ಲಿ ನಾಯಕ ಮನೀಷ್ ಪಾಂಡೆ (19) ಹಾಗೂ ತಿಪ್ಪಾರೆಡ್ಡಿ (ಔಟಾಗದೇ 20) ರನ್ ವೇಗ ಹೆಚ್ಚಿಸಿದರು.

ಸಂಕ್ಷಿಪ್ತ ಸ್ಕೋರ್: ಗುಲ್ಬರ್ಗ ಮಿಸ್ಟಿಕ್ಸ್: 20 ಓವರ್‌ಗಳಲ್ಲಿ 201 (ಪ್ರಖರ್ ಚತುರ್ವೇದಿ 64, ಆರವ್ ಮಹೇಶ್ 63. ಶ್ರೀವತ್ಸ ಆಚಾರ್ಯ 36ಕ್ಕೆ 2, ಶುಭಾಂಗ್ ಹೆಗ್ಡೆ 44ಕ್ಕೆ 2) ಬೆಂಗಳೂರು ಬ್ಲಾಸ್ಟರ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 202 (ಭುವನ್ ರಾಜ್ 56, ಶುಭಾಂಗ್ ಹೆಗ್ಡೆ ಔಟಾಗದೇ 36, ಪ್ರವೀಣ್ ದುಬೆ ಔಟಾಗದೇ 32, ರೋಹನ್ ಪಾಟೀಲ 31. ಪಾರಸ್ ಆರ್ಯ 34ಕ್ಕೆ 2)

ಪಂದ್ಯದ ಆಟಗಾರ: ಶುಭಾಂಗ್ ಹೆಗ್ಡೆ

ಇಂದಿನ ಪಂದ್ಯ

ಕೋಸ್ಟಲ್ ಕಿಂಗ್ಸ್ ಮಂಗಳೂರು V/s ಹುಬ್ಬಳ್ಳಿ ಟೈಗರ್ಸ್
ಆರಂಭ: ಮಧ್ಯಾಹ್ನ 2.30

ಬೆಂಗಳೂರು ಬ್ಲಾಸ್ಟರ್ಸ್ V/s ಶಿವಮೊಗ್ಗ ಯೋಧಾಸ್
ಆರಂಭ: ಸಂಜೆ 7

ಶಿವಮೊಗ್ಗಕ್ಕೆ ಮಣಿದ ವಾರಿಯರ್ಸ್

ಮೈಸೂರು: ತವರಿನ ಅಂಗಳದಲ್ಲಿ ಮೊದಲ ಪಂದ್ಯದಲ್ಲೇ ಮೈಸೂರು ವಾರಿಯರ್ಸ್ ಮುಗ್ಗರಿಸಿದ್ದು, ಶಿವಮೊಗ್ಗ ಯೋಧಾಸ್ ಎದುರು 90 ರನ್‌ಗಳ ಸೋಲು ಅನುಭವಿಸಿತು.

ಶನಿವಾರದ ಎರಡನೇ ಪಂದ್ಯದಲ್ಲಿ 191 ರನ್‌ಗಳ ಗುರಿ ಬೆನ್ನತ್ತಿದ ಮೈಸೂರು 100 ರನ್‌ಗಳಿಗೆ ಆಲೌಟ್ ಆಯಿತು. ಶಿವಮೊಗ್ಗ ಪರ ಸ್ಪಿನ್ನರ್ ಯಶ್‌ರಾಜ್ ಪೂಂಜ 4 ವಿಕೆಟ್ ಗಳಿಸಿದರು.

ಸ್ಕೋರ್: ಶಿವಮೊಗ್ಗ ಯೋಧಾಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 190. ಮೈಸೂರು ವಾರಿಯರ್ಸ್: 14.5 ಓವರ್‌ಗಳಲ್ಲಿ 100.

ಆಸ್ಟ್ರೇಲಿಯಾಕ್ಕೆ ಮಣಿದ ನೆದರ್ಲೆಂಡ್ಸ್

ಸೌತಾಂಪ್ಟನ್ (ಎಪಿ): ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ವನಿತೆಯರ ತಂಡವು ಟಿ20 ವಿಶ್ವಕಪ್‌ನಲ್ಲಿ ಹ್ಯಾಟ್ರಿಕ್ ಜಯ ದಾಖಲಿಸಿತು. ಶನಿವಾರ ನಡೆದ ಎ ಗುಂಪಿನ ಪಂದ್ಯದಲ್ಲಿ 98 ರನ್‌ಗಳಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 219 (ಬೆತ್ ಮೂನಿ 74, ಆ್ಯಶ್ಲೆ ಗಾರ್ಡನರ್ 58, ಜಾರ್ಜಿಯಾ ವೇರ್‌ಹ್ಯಾಮ್ 41; ಐರಿಸ್ ಜ್ವಿಲ್ಲಿಂಗ್ 52ಕ್ಕೆ 3). ನೆದರ್ಲೆಂಡ್ಸ್: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 121 (ಬಾಬೆಟ್ ಡಿ ಲೀಡ್ 56, ಸ್ಟರ್ ಕಾಲಿಸ್ 44; ಕಿಮ್ ಗಾರ್ತ್ 20ಕ್ಕೆ 2). ಪಂದ್ಯದ ಆಟಗಾರ್ತಿ: ಬೆತ್ ಮೂನಿ

ಕಿವೀಸ್ ಸೆಮೀಸ್ ಕನಸು ಜೀವಂತ

ಲಂಡನ್ (ಎಎಫ್‌ಪಿ): ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಶುಕ್ರವಾರ ತಡರಾತ್ರಿ ನಡೆದ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಸ್ಕಾಟ್ಲೆಂಡ್ ವಿರುದ್ಧ 4 ರನ್‌ಗಳ ರೋಚಕ ಜಯ ದಾಖಲಿಸಿತು. ಇದರೊಂದಿಗೆ ಸೆಮಿಫೈನಲ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು.

ಸ್ಕೋರ್: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 140. ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 136 .

ಸಚಿವ ಪ್ರಧಾನ್ ರಾಜೀನಾಮೆಗೆ ಪಟ್ಟು • ರಾತ್ರಿಯೂ ಮುಂದುವರಿದ ಹೋರಾಟ

ಸಿಜೆಪಿ ಪ್ರತಿಭಟನೆ: ಮೊಳಗಿದ ತಟ್ಟೆ ಸದ್ದು

ನವದೆಹಲಿ (ಪಿಟಿಐ): ಪರೀಕ್ಷಾ ಅಕ್ರಮ, ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಮತ್ತು ಸರ್ಕಾರದ ಉತ್ತರದಾಯಿತ್ವಕ್ಕೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ದೆಹಲಿಯ ಜಂತರ್‌ಮಂತರ್‌ನಲ್ಲಿ ಶನಿವಾರ ನಡೆಸಿದ ಎರಡನೇ ಪ್ರತಿಭಟನೆಯಲ್ಲಿ, ಬೃಹತ್ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮತ್ತು ಬೆಂಬಲಿಗರು ಭಾಗಿಯಾಗಿದ್ದರು.

ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆ ನೀಡಿದ್ದ ಕರೆ ಮೇರೆಗೆ ಪ್ರತಿಭಟನಕಾರರು, ಚಮಚದಿಂದ ತಟ್ಟೆಗೆ ಬಡಿಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂಬ ಬರಹಗಳಿದ್ದ ಭಿತ್ತಿಫಲಕಗಳನ್ನು ಪ್ರದರ್ಶಿಸಿದರು.

'ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸಲು ಹೋರಾಡುವುದಾಗಿ' ದೀಪ್ಕೆ ತಿಳಿಸಿದರು. ಹೋರಾಟಗಾರ ಸೋನಂ ವಾಂಗ್ಚುಕ್ ಅವರು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು.



ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಮತ್ತು ಸಿಜೆಪಿ ಬೆಂಬಲಿಗರು ಭಾಗಿಯಾಗಿದ್ದರು — ಪಿಟಿಐ ಚಿತ್ರ

ಪ್ರತಿಭಟನಕಾರರು ಬೃಹತ್ ಸಂಖ್ಯೆಯಲ್ಲಿ ಜಮಾಯಿಸಿದ್ದ ಕಾರಣ ಭಾರಿ ಪ್ರಮಾಣದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು

ಅನುಮತಿ ನಿರಾಕರಣೆ: ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡುವವರೆಗೂ ಪ್ರತಿಭಟನಾ ಸ್ಥಳ ಬಿಟ್ಟು ಕದಲುವುದಿಲ್ಲ ಎಂದು ಅಭಿಜೀತ್ ದೀಪ್ಕೆ ಹೇಳಿದ್ದರು. ಆದರೆ, ಪ್ರತಿಭಟನೆ ಮುಂದುವರಿಸಲು ದೆಹಲಿ ಪೊಲೀಸರು ಅನುಮತಿ ನೀಡಲಿಲ್ಲ.

'ಪ್ರತಿಭಟನೆಯಲ್ಲಿ ಎಲ್ಲರೂ ಭಾಗವಹಿಸಿ. ಪ್ರತಿಭಟನೆ ಅವಧಿ ವಿಸ್ತರಣೆಗೆ ಪೊಲೀಸರು ಅವಕಾಶ ನೀಡುತ್ತಾರೆ' ಎಂದು ದೀಪ್ಕೆ ಕರೆ ನೀಡಿದ್ದರು. ಆದರೆ, ಸ್ಥಳದಿಂದ ತೆರಳುವಂತೆ ಪೊಲೀಸರು ಸಿಜೆಪಿ ಬೆಂಬಲಿಗರಿಗೆ ಸೂಚಿಸಿದರು. ಆದಾಗ್ಯೂ, ಸಿಜೆಪಿ ಕಾರ್ಯಕರ್ತರು ಮೊಬೈಲ್ ಟಾರ್ಚ್‌ಗಳ ಬೆಳಕಿನಡಿಯೇ ರಾತ್ರಿ ಪ್ರತಿಭಟನೆ ಮುಂದುವರಿಸಿದರು. ಆ ವೇಳೆಗೆ ಬೆರಳೆಣಿಕೆಯಷ್ಟು ಪೊಲೀಸರು ಮಾತ್ರ ಇದ್ದರು.

ನೀಟ್–ಯುಜಿ ಮರುಪರೀಕ್ಷೆ ಇಂದು

22.79 ಲಕ್ಷ	5,440	2 ಲಕ್ಷ	6,669	1.38 ಲಕ್ಷ
ಪರೀಕ್ಷೆ ಬರೆಯಲಿರುವ ಅಭ್ಯರ್ಥಿಗಳು	ಪರೀಕ್ಷಾ ಕೇಂದ್ರಗಳ ಸಂಖ್ಯೆ	ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿ	ಪರೀಕ್ಷಾ ಕೇಂದ್ರಗಳಲ್ಲಿ ಮೇಲ್ವಿಚಾರಣೆಗೆ ನಿಯೋಜನೆಗೊಂಡ ವೀಕ್ಷಕರು	ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ. ಕ್ಯಾಮೆರಾಗಳು

ಒಂದನೇ ಪುಟದಿಂದ...

ಮರುಪರೀಕ್ಷೆಯನ್ನು ಸುಗಮವಾಗಿ ನಡೆಸಲು ಪೊಲೀಸರು ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಸೇರಿದಂತೆ 2 ಲಕ್ಷಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ನಗರ ಸಂಯೋಜಕರು, ವೀಕ್ಷಕರು, ಪರೀಕ್ಷಾ ಮೇಲ್ವಿಚಾರಕರನ್ನು ನೇಮಿಸಲಾಗಿದೆ.

'ನ್ಯಾಯಯುತ ಹಾಗೂ ಸುರಕ್ಷಿತವಾಗಿ ಪರೀಕ್ಷೆ ನಡೆಸಲು ಬಹು–ಹಂತದ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗೋಪ್ಯ ಸಾಮಗ್ರಿಗಳ ಸುರಕ್ಷಿತ ನಿರ್ವಹಣೆ, ಸಾಮಗ್ರಿಗಳನ್ನು ಸಾಗಿಸಲು ಪೊಲೀಸ್ ಬೆಂಗಾವಲು ಪಡೆ ಜತೆಗೆ ಜಿಪಿಎಸ್ ವ್ಯವಸ್ಥೆ ಹೊಂದಿರುವ ವಾಹನಗಳು, ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು ಮತ್ತು ನಕಲು ಮಾಡುವುದನ್ನು ತಡೆಗಟ್ಟಲು ಆಧಾರ್ ಆಧಾರಿತ ಬಯೋಮೆಟ್ರಿಕ್ ದೃಢೀಕರಣ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ತಿಳಿಸಿದೆ.

'ಇದೇ ಮೊದಲ ಬಾರಿಗೆ, ಪ್ರಶ್ನೆಪತ್ರಿಕೆಗಳನ್ನು ಸಾಗಿಸಲು ಭಾರತೀಯ ವಾಯುಪಡೆಯನ್ನು ಬಳಸಿಕೊಳ್ಳಲಾಗಿದೆ' ಎಂದು ಹೇಳಿದೆ.

'ಅಭ್ಯರ್ಥಿಗಳ ಪರಿಶೀಲನಾ ಕಾರ್ಯವನ್ನು ತ್ವರಿತವಾಗಿ ನಡೆಸಲು ಹೆಚ್ಚುವರಿ ಬಯೋಮೆಟ್ರಿಕ್ ಯಂತ್ರಗಳನ್ನು ನಿಯೋಜಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ವಿದ್ಯುತ್ ವ್ಯವಸ್ಥೆ, ಫ್ಯಾನ್, ಗೋಡೆ ಗಡಿಯಾರ, ಕುಡಿಯುವ ನೀರು, ನೈರ್ಮಲ್ಯ ಮತ್ತು ವೈದ್ಯಕೀಯ ಸೌಲಭ್ಯ ಕಲ್ಪಿಸಲಾಗಿದೆ' ಎಂದು ಮಾಹಿತಿ ನೀಡಿದೆ.

'ಅಭ್ಯರ್ಥಿಗಳಿಗೆ ಅಧಿಕೃತ ಮಾಹಿತಿಯನ್ನು ನೇರವಾಗಿ ಒದಗಿಸಲು ವಾಟ್ಸ್‌ಆ್ಯಪ್ ಸಂವಹನ ಚಾನೆಲ್ ಆರಂಭಿಸಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ, ಕೀ ಉತ್ತರಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಹರಡುವವರ ಮೇಲೆ ನಿಗಾವಹಿಸಲಾಗಿದೆ. ತಪ್ಪು ಎಸಗುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುತ್ತದೆ' ಎಂದು ಎನ್‌ಟಿಎ ಎಚ್ಚರಿಕೆ ನೀಡಿದೆ.

ಅಭ್ಯರ್ಥಿಗಳು ಸಕಾಲಕ್ಕೆ ಪರೀಕ್ಷಾ ಕೇಂದ್ರಗಳಿಗೆ ತಲುಪಲು ಅನುಕೂಲಕ್ಕಾಗಿ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸುವುದಾಗಿ ಹಲವಾರು ರಾಜ್ಯಗಳು ಘೋಷಿಸಿವೆ.

ಅಣಕು ಕಾರ್ಯಾಚರಣೆ: ನೀಟ್–ಯುಜಿ ಮರುಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸುವ ಸಲುವಾಗಿ ಎನ್‌ಟಿಎ ದೇಶ ವ್ಯಾಪಿ ಅಣಕು ಕಾರ್ಯಾಚರಣೆ ನಡೆಸಿದೆ. ಮೇ 3ರಂದು ನಡೆದ ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಕಾರಣಕ್ಕೆ ರದ್ದುಪಡಿಸಲಾಗಿತ್ತು. ಇದು ದೇಶದಾದ್ಯಂತ ರಾಜಕೀಯ ಜಟಾಪಟಿ, ಕಾನೂನು ಹೋರಾಟಕ್ಕೆ ಕಾರಣವಾಗಿತ್ತು.

ನಾಗ್ಪುರ ವಿದ್ಯಾರ್ಥಿಗೆ ಅಬುಧಾಬಿ ಕೇಂದ್ರ ಹಂಚಿಕೆ

ನಾಗ್ಪುರ (ಪಿಟಿಐ): ನೀಟ್–ಯುಜಿ ಮರುಪರೀಕ್ಷೆಗೆ ಹೆಸರು ನೋಂದಾಯಿಸಿದ್ದ ಮಹಾರಾಷ್ಟ್ರದ ನಾಗ್ಪುರದ ಅಬ್ದುಲ್ಲಾ ತಾಲಿಬ್ ಎಂಬವರಿಗೆ ಯುನೈಟೆಡ್ ಅರಬ್ ಎಮಿರೇಟ್ಸ್ ರಾಜಧಾನಿ ಅಬುಧಾಬಿಯ ಪರೀಕ್ಷಾ ಕೇಂದ್ರವನ್ನು ಎನ್‌ಟಿಎ ಹಂಚಿಕೆ ಮಾಡಿರುವುದು ಟೀಕೆಗೆ ಗುರಿಯಾಗಿದೆ.

'ನನ್ನ ಮಗ ನಾಗ್ಪುರ, ವಾರ್ಧಾ ಮತ್ತು ಭಂಡಾರದ ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿದ್ದ. ಆದರೆ, ಎನ್‌ಟಿಎ ನೀಡಿದ ಪ್ರವೇಶ ಪತ್ರದಲ್ಲಿ ಅಬುಧಾಬಿಯ ಪರೀಕ್ಷಾ ಕೇಂದ್ರವನ್ನು ಹಂಚಿಕೆ ಮಾಡಿರುವುದನ್ನು ತಿಳಿದು ಆಘಾತವಾಯಿತು' ಎಂದು ಅವರ ತಂದೆ ಡಾ. ಮೊಹಮ್ಮದ್ ತಾಲಿಬ್ ತಿಳಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಎನ್‌ಟಿಎ, 'ಈ ಸಮಸ್ಯೆಯನ್ನು ಬಗೆಹರಿಸಲಾಗಿದೆ. ನಾಗ್ಪುರ ಪರೀಕ್ಷಾ ಕೇಂದ್ರವನ್ನೇ ಹಂಚಿಕೆ ಮಾಡಲಾಗಿದೆ' ಎಂದು ಎನ್‌ಟಿಎ ತಿಳಿಸಿದೆ.

'ಅಭ್ಯರ್ಥಿಯು ತನ್ನ ನೋಂದಾಯಿತ ಲಾಗಿನ್ ಮೂಲಕ ಅಬುಧಾಬಿ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿದ್ದರು. ಬಳಿಕ, ಪರೀಕ್ಷಾ ಕೇಂದ್ರವನ್ನು ನಾಗ್ಪುರಕ್ಕೆ ಬದಲಾಯಿಸುವಂತೆ ಜೂನ್ 19ರಂದು ಸಂಜೆ ಅನೌಪಚಾರಿಕ ವಿನಂತಿ ಬಂದಿತ್ತು. ಎನ್‌ಟಿಎ ಸಿಬ್ಬಂದಿಯು ಕೂಡಲೇ ಅಭ್ಯರ್ಥಿಯ ತಂದೆಯನ್ನು ಸಂಪರ್ಕಿಸಿದ್ದರು. ಅಭ್ಯರ್ಥಿ ಬಯಸಿದ ಕೇಂದ್ರವನ್ನೇ ನೀಡಲಾಗಿದೆ' ಎಂದು ಎನ್‌ಟಿಎ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದೆ.

'ಅಭ್ಯರ್ಥಿಗಳ ಅನುಕೂಲಕ್ಕಾಗಿ ಪರೀಕ್ಷಾ ಕೇಂದ್ರಗಳ ತಿದ್ದುಪಡಿ ವಿಂಡೋವನ್ನು ಮತ್ತೆ ತೆರೆಯಲಾಗಿದೆ. ಸುಮಾರು 3.2 ಲಕ್ಷ ಮಂದಿ ಇದನ್ನು ಬಳಸಿದ್ದಾರೆ. ಅವರಲ್ಲಿ ಶೇ 99.5ಕ್ಕಿಂತ ಹೆಚ್ಚು ಅಭ್ಯರ್ಥಿಗಳಿಗೆ ಆದ್ಯತೆಯ ಪರೀಕ್ಷಾ ಕೇಂದ್ರವನ್ನು ನೀಡಲಾಗಿದೆ ಎಂದು ಹೇಳಿದೆ.

ಬಬಲಾದ ಟು ಬೆಂಗಳೂರು ಒಡಲಧ್ವನಿಯ ಪಯಣ



ಅಣ್ಣೋರೆ..ಈ ಬಾಕ್ಸ್‌ನ ಲಗೇಜ್ ಬಾಕ್ಸ್‌ಗೆ ಹಾಕ್ಬೇಕಿತ್ರಿ...



ತಾಜಾ ತಾಜಾ ಐಟಂ ಐತ್ರಿ...

ತಾವು ಬೆಳೆದ ಬೆಳೆಗೆ ಮೌಲ್ಯವರ್ಧನೆ ಮಾಡಿ, ಅದನ್ನು ರಾಜಧಾನಿಯ ಮಾರುಕಟ್ಟೆಗೆ ಕೊಂಡೊಯ್ದ ಬಬಲಾದದ 'ಒಡಲಧ್ವನಿ' ಮಹಿಳೆಯರು ಇಂದು ಸ್ವಾವಲಂಬನೆ, ಸಂಘಟಿತ ಶಕ್ತಿ ಮತ್ತು ಗ್ರಾಮೀಣ ಉದ್ಯಮಶೀಲತೆಯ ಹೊಸ ಕಥೆ ಬರೆದಿದ್ದಾರೆ.

• ಬಸವರಾಜ್ ಸಂಪಳ್ಳಿ

ಬಬಲಾದ ಎಂಬ ಹಳ್ಳಿಯ ಬಸ್ ನಿಲ್ದಾಣದಲ್ಲಿ ಎಂಟತ್ತು ಮಹಿಳೆಯರ ಗುಂಪೊಂದು ಪ್ರಯಾಣಕ್ಕೆ ಸಜ್ಜಾದಂತೆ ಕಂಡಿತು. ಪ್ರತಿಯೊಬ್ಬರ ಕೈಯಲ್ಲೂ ಗಂಟು–ಮೂಟೆ, ಚೀಲಗಳಿದ್ದವು. ಒಂದಿಬ್ಬರು ತಾಯಂದಿರ ಜೊತೆ ಚಿಕ್ಕ ಮಕ್ಕಳು ಬಸ್ಸಿಗಾಗಿ ಕಾದು ಕುಳಿತಿದ್ದರು.

'ಬೆಂಗಳೂರು ಬಸ್' ಹಳ್ಳಿಯತ್ತ ಬರುತ್ತಿದ್ದಂತೆ ಮಹಿಳೆಯರ ಮುಖದಲ್ಲಿ ಅವ್ಯಕ್ತ ಖುಷಿ ಮತ್ತು ಹುರುಪು ಮೂಡಿತು. ಜೋಳದ ಕಡಕ್ ರೊಟ್ಟಿ, ಸಜ್ಜೆ ರೊಟ್ಟಿ, ಶೇಂಗಾ ಚಟ್ನಿ, ಶೇಂಗಾ ಉಂಡೆ, ವಿವಿಧ ಬೇಳೆಕಾಳುಗಳು ಹಾಗೂ ಉತ್ತರ ಕರ್ನಾಟಕದ ಜವಾರಿ ಕಾಯಿಪಲ್ಲೆಗಳಿಂದ ತುಂಬಿದ್ದ ಚೀಲಗಳನ್ನು ಬಸ್ಸಿನ ಲಗೇಜ್ ಬಾಕ್ಸ್‌ಗೆ ಜೋಪಾನವಾಗಿ ಜೋಡಿಸಿಡಲು ಮುಂದಾದರು. ಚಾಲಕ ಮತ್ತು ನಿರ್ವಾಹಕರೂ ಅಷ್ಟೇ ತಾಳ್ಮೆ ಮತ್ತು ಕಾಳಜಿಯಿಂದ ಅವುಗಳನ್ನು ಜೋಡಿಸಿಟ್ಟರು.

ಪ್ರತಿ ಶನಿವಾರ ಸುಮಾರು 550 ಕಿಲೊಮೀಟರ್ ದೂರದ ಬೆಂಗಳೂರಿಗೆ ತೆರಳಿ, ತಮ್ಮ ಕೈಯಾರೆ ತಯಾರಿಸಿದ ಆಹಾರ ಪದಾರ್ಥ ಮತ್ತು ತರಕಾರಿಗಳನ್ನು ಮಾರಾಟ ಮಾಡುವ ಮಹಿಳೆಯರು ಇವರು.

ವಿಜಯಪುರ ಜಿಲ್ಲೆಯ ಇಂಡಿಯಿಂದ ಬೆಂಗಳೂರಿಗೆ ಸಾಗುವ ಬಸ್ಸಿನಲ್ಲಿ ಅವರೊಂದಿಗೆ ಮಾತಿಗಿಳಿದಾಗ 'ಒಡಲಧ್ವನಿ' ಸಂಘಟನೆಯ ಭುವನೇಶ್ವರಿ ಕಾಂಬಳೆ, ಲಕ್ಷ್ಮೀ ದ್ರಾವಿಡ, ಇಂದು ಹೊಸಮನಿ, ಸಂಗೀತಾ ಮಯೂರ, ಮಲ್ಲಮ್ಮ ಹಳ್ಳಿ, ರಾಜಶ್ರೀ ಮಖಣಾಪೂರ, ಭಾರತಿ ಹೊಸಮನಿ ಮತ್ತಿತರರು ತಮ್ಮ ಬದುಕಿನ ಹೊಸ ಅಧ್ಯಾಯವನ್ನು ಉತ್ಸಾಹದಿಂದ ವಿವರಿಸಿದರು.



ನಾವ್ ಬೆಂಗಳೂರಿಗೆ ಹೊರ್ಡಾಕ ರೆಡಿ ರಿ...

ಚಿತ್ರಗಳು: ಸಂಜೀವ ಅಕ್ಕಿ

'2024ರಲ್ಲಿ ನಮ್ಮೂರಿನ ಇಪ್ಪತ್ತು ರೈತ ಮಹಿಳೆಯರು ಸಾವಯವ ಕೃಷಿ ಆರಂಭಿಸಿದೆವು. ಶೇಂಗಾ, ಸಜ್ಜೆ, ತೊಗರಿ, ಜೋಳ ಬೆಳೆದೆವು. ಬೆಳೆ ಮಾರಿದರೂ ವರ್ಷಪೂರ್ತಿ ಆದಾಯದ ಸಮಸ್ಯೆ ಇತ್ತು. ಆಗ ನಮ್ಮ ಬೆಳೆಗಳಿಗೆ ಮೌಲ್ಯವರ್ಧನೆ ಮಾಡಿ ರೊಟ್ಟಿ, ಹೋಳಿಗೆ, ಉಂಡೆ, ಚಟ್ನಿ ಪುಡಿ ತಯಾರಿಸಲು ಆರಂಭಿಸಿದೆವು' ಎಂದು 'ಒಡಲಧ್ವನಿ' ಸಂಸ್ಥಾಪಕಿ ಭುವನೇಶ್ವರಿ ಕಾಂಬಳೆ ಹೇಳುತ್ತಾರೆ.

ಆದರೆ ಸ್ಥಳೀಯವಾಗಿ ಈ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಇರಲಿಲ್ಲ. ಕಾರಣ, ಈ ಭಾಗದ ಬಹುತೇಕ ಮನೆಗಳಲ್ಲಿ ಇಂತಹ ಆಹಾರ ಪದಾರ್ಥಗಳನ್ನು ಜನ ತಾವೇ ತಯಾರಿಸಿಕೊಳ್ಳುತ್ತಾರೆ.

'ಬೆಂಗಳೂರಿಗೆ ತೆಗೆದುಕೊಂಡು ಹೋದರೆ ಹೇಗೆ ಎಂಬ ಯೋಚನೆ ಬಂತು. ಸಾವಯವ ಸುಸ್ಥಿರ ಮಾರುಕಟ್ಟೆಗಳಿಗೆ ಭೇಟಿ ನೀಡಿ ಅಲ್ಲಿನ ಒಕ್ಕೂಟಗಳ ಪರಿಚಯ ಮಾಡಿಕೊಂಡೆವು. ನಂತರ ನೇರವಾಗಿ ಹೋಗಿ ಮಾರಾಟ ಮಾಡಲು ನಿರ್ಧರಿಸಿದೆವು. ಅದೇ ಸಂದರ್ಭದಲ್ಲಿ ಸರ್ಕಾರದ 'ಶಕ್ತಿ' ಯೋಜನೆಯೂ ನಮಗೆ ದೊಡ್ಡ ಬೆಂಬಲವಾಯಿತು' ಎಂದು ಅವರು ಹೇಳುತ್ತಾರೆ.

ಮೊದಲ ವರ್ಷ ಇಪ್ಪತ್ತು ಮಹಿಳೆಯರಿಂದ ಆರಂಭವಾದ ಪ್ರಯತ್ನಕ್ಕೆ 2025ರಲ್ಲಿ ಇನ್ನೂ ಇಪ್ಪತ್ತು ಮಹಿಳೆಯರು ಸೇರಿದರು. ಅವರಲ್ಲಿ ಕೆಲವರು ತಮ್ಮ ಜವಾರಿ ಕಾಯಿಪಲ್ಲೆಗಳನ್ನೂ ಬೆಂಗಳೂರಿಗೆ ಕೊಂಡೊಯ್ಯಲು ಆರಂಭಿಸಿದರು. 2026ಕ್ಕೆ ಸದಸ್ಯರ ಸಂಖ್ಯೆ ಅರವತ್ತಕ್ಕೆ ಏರಿದೆ.

ಈಗ ಬೆಂಗಳೂರಿನ 'ರಾಗಿಕಣ' ಸಾವಯವ ಮಾರುಕಟ್ಟೆಯಲ್ಲಿ 'ಬಿಸಿ ರೊಟ್ಟಿ ಕೆಫೆ' ನಡೆಸುತ್ತಿದ್ದಾರೆ. ಸ್ಥಳದಲ್ಲೇ ಬಿಸಿ ರೊಟ್ಟಿ ತಯಾರಿಸಿ ಗ್ರಾಹಕರಿಗೆ ನೀಡುತ್ತಿದ್ದಾರೆ.

'ಉತ್ತರ ಕರ್ನಾಟಕದ ರೊಟ್ಟಿ, ಹೋಳಿಗೆ, ಚಟ್ನಿ, ತರಕಾರಿಗಳಿಗೆ ಜನ ಮುಗಿಬಿದ್ದು ಬರುತ್ತಾರೆ. ಅದು ನಮಗೆ ಮತ್ತಷ್ಟು ಆತ್ಮವಿಶ್ವಾಸ ತುಂಬಿದೆ' ಎಂದು ಭುವನೇಶ್ವರಿ ಹೇಳುತ್ತಾರೆ.

'ಶಕ್ತಿ ಯೋಜನೆಯ ಬಸ್‌ನಲ್ಲಿ ಹಳ್ಳಿಯಿಂದ ಬೆಂಗಳೂರಿಗೆ ತೆರಳಿ ನಾವು ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಿರುವ ಕುರಿತು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ಬಂದಿತ್ತು. ಅದರಿಂದ ನಮ್ಮ ಒಡಲಧ್ವನಿ ಸಂಘಟನೆಯ ಕಾರ್ಯ ಅವರಿಗೆ ಪರಿಚಯವಾಯಿತು. ನಮ್ಮನ್ನು ಬೆಂಗಳೂರಿಗೆ ಕರೆಸಿ ಸನ್ಮಾನಿಸಿದ ಕ್ಷಣ ಇಂದು ಕೂಡ ನೆನಪಿದೆ. ನಮ್ಮ ಪರಿಶ್ರಮಕ್ಕೆ ಸಿಕ್ಕ ಆ ಗೌರವ, ಶಕ್ತಿ ಯೋಜನೆಯ ಮೂಲಕ ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಸಾಧ್ಯವಾಗಿರುವ ಬದಲಾವಣೆಗೆ ದೊರೆತ ಮಾನ್ಯತೆಯಂತಿತ್ತು' ಎಂದು ಭುವನೇಶ್ವರಿ ಕಾಂಬಳೆ ಹೇಳುತ್ತಾರೆ.

2024ರಲ್ಲಿ ಆರಂಭವಾದ ಈ ಪ್ರಯತ್ನ ಈಗ ಕೇವಲ ಮಾರಾಟ ಚಟುವಟಿಕೆಯಾಗಿಲ್ಲ. ಗ್ರಾಮೀಣ ಮಹಿಳೆಯರು ಸ್ವತಃ ಉತ್ಪಾದಕರು, ಮೌಲ್ಯವರ್ಧಕರು ಮತ್ತು ಮಾರಾಟಗಾರರಾಗುವ ಮಾದರಿಯಾಗಿ ರೂಪುಗೊಂಡಿದೆ. ತಮ್ಮ ಹೊಲದಲ್ಲಿ ಬೆಳೆದ ಬೆಳೆಗೆ ತಾವೇ ಬೆಲೆ ನಿಗದಿಪಡಿಸಿ, ನೇರವಾಗಿ ಗ್ರಾಹಕರನ್ನು ತಲುಪುವ ಮೂಲಕ ಮಧ್ಯವರ್ತಿಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಂಡಿದ್ದಾರೆ. ಗ್ರಾಮೀಣ ಮಹಿಳೆಯರ ಕೈಯಲ್ಲಿ ಉದ್ಯಮಶೀಲತೆಯ ಹೊಸ ಸಾಧ್ಯತೆಗಳನ್ನು ಈ ಪ್ರಯತ್ನ ತೆರೆದಿಟ್ಟಿದೆ.

ಆರಂಭದಲ್ಲಿ ಇವರ ಪಯಣ ಸುಲಭವಾಗಿರಲಿಲ್ಲ. ಬಬಲಾದದಿಂದ ಇಂಡಿ ಅಥವಾ ಹೊರ್ತಿಗೆ ತೆರಳಿ ಅಲ್ಲಿಂದ ಬೆಂಗಳೂರಿನ ಬಸ್ ಹಿಡಿಯಬೇಕಾಗುತ್ತಿತ್ತು. ಆಹಾರ ಪದಾರ್ಥಗಳು, ತರಕಾರಿಗಳ ಚೀಲಗಳನ್ನು ಹೊತ್ತು ಸಾಗಿಸುವುದೂ ಕಷ್ಟವಾಗುತ್ತಿತ್ತು. ಮುಖ್ಯಮಂತ್ರಿ ನಮ್ಮನ್ನು ಸನ್ಮಾನಿಸಿದ ಬಳಿಕ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸ್ಪಂದಿಸಿದರು. ಇಂಡಿ–ಅಥರ್ಗಾ ಮಾರ್ಗದಲ್ಲಿ ಸಂಚರಿಸುತ್ತಿದ್ದ ಒಂದು ಬಸ್ಸನ್ನು ಇಂಡಿ–ಬಬಲಾದ–ಹೊರ್ತಿ ಮಾರ್ಗವಾಗಿ ಓಡಿಸಲು ವ್ಯವಸ್ಥೆ ಮಾಡಲಾಯಿತು. ಇದರಿಂದ ಆಹಾರ ಪದಾರ್ಥ ಮತ್ತು ತರಕಾರಿಗಳನ್ನು ನೇರವಾಗಿ ಬೆಂಗಳೂರಿಗೆ ಸಾಗಿಸಲು ಅನುಕೂಲವಾಯಿತು.

12ನೇ ಪುಟಕ್ಕೆ...



ಜೋಸೆಫ್ ಮಚಾಡೊ

ಬಸ್ ಚಾಲನೆಗೆ ಮಚಾಡೊ ಮಾದರಿ

• ಬಾಲಕೃಷ್ಣ ಪಿ.ಎಚ್.

ಬಸ್ ನಿಲ್ದಾಣದಲ್ಲಿ ಪ್ರಯಾಣಿಕರು ಕಾಣಿಸಿಕೊಳ್ಳುವ ಮೊದಲೇ ಅವರು ಅಲ್ಲಿ ಇರುತ್ತಿದ್ದರು. ಬಸ್ ರಾತ್ರಿ 9 ಗಂಟೆಗೆ ಹೊರಡಬೇಕಿದ್ದರೆ, ಜೋಸೆಫ್ ಮಚಾಡೊ ರಾತ್ರಿ 8 ಗಂಟೆಗೇ ಡಿಪೊ ತಲುಪುತ್ತಿದ್ದರು. ಟೈರ್, ಎಂಜಿನ್, ಬ್ರೇಕ್‌ಗಳನ್ನು ಪರಿಶೀಲಿಸಿ ಬಸ್ ಅನ್ನು ನಿಲ್ದಾಣಕ್ಕೆ ತಂದು ನಿಲ್ಲಿಸುತ್ತಿದ್ದರು. ಪ್ರಯಾಣಿಕರು ಬರುವುದನ್ನು ಕಾಯುತ್ತಿದ್ದರು.

ಇದು ಒಂದು ದಿನದ ಶಿಸ್ತು ಅಲ್ಲ. ಒಂದು ತಿಂಗಳ ಅಭ್ಯಾಸವೂ ಅಲ್ಲ. ಬರೋಬ್ಬರಿ 34 ವರ್ಷಗಳು ಅವರು ಪಾಲಿಸಿಕೊಂಡು ಬಂದ ಜೀವನಕ್ರಮ.

ಕೆಎಸ್‌ಆರ್‌ಟಿಸಿಯ ಸಾವಿರಾರು ಚಾಲಕರಲ್ಲಿ ಜೋಸೆಫ್ ಮಚಾಡೊ ಅವರನ್ನು ಪ್ರತ್ಯೇಕವಾಗಿ ಗುರುತಿಸುವುದು ಅವರ ನಿವೃತ್ತಿಯಲ್ಲ. ಆ 34 ವರ್ಷಗಳಲ್ಲಿ ಒಂದೇ ಒಂದು ಅಪಘಾತವೂ ಆಗದಿರುವುದು, ಒಂದೇ ಒಂದು ಬಾರಿ ಚಾಕರಿಕ್ಕೆ ತಡವಾಗಿ ಹಾಜರಾಗದಿರುವುದು ಮತ್ತು ಪ್ರಯಾಣಿಕರ ಸುರಕ್ಷತೆಯನ್ನು ತನ್ನ ಜವಾಬ್ದಾರಿಯಂತೆ ಕಂಡಿರುವುದು.

ಮೇ 31ರಂದು ಅವರು ನಿವೃತ್ತರಾದರು. ಆದರೆ ಅವರ ನಿವೃತ್ತಿ ಒಂದು ಸಿಬ್ಬಂದಿಯ ಸೇವಾವಧಿಯ ಅಂತ್ಯ ಮಾತ್ರವಲ್ಲ; ವೃತ್ತಿಯನ್ನು ಹೇಗೆ ಪ್ರೀತಿಸಬೇಕು, ಕರ್ತವ್ಯವನ್ನು ಹೇಗೆ ಗೌರವಿಸಬೇಕು ಎಂಬುದನ್ನು ಬದುಕಿನ ಮೂಲಕ ತೋರಿಸಿದ ವ್ಯಕ್ತಿಯೊಬ್ಬರ ಪಯಣದ ಮೈಲಿಗಲ್ಲು.

ಉಡುಪಿ ಸಮೀಪದ ಉದ್ಯಾವರದ ಬಡ ಕುಟುಂಬದಲ್ಲಿ ಜನಿಸಿದ ಮಚಾಡೊ ಅವರಿಗೆ ಶಿಕ್ಷಣ ಮುಂದುವರಿಸುವ ಅವಕಾಶ ಸಿಗಲಿಲ್ಲ. 1982ರಲ್ಲಿ 8ನೇ ತರಗತಿಯನ್ನು ಅರ್ಧದಲ್ಲೇ ಬಿಟ್ಟು ಕೆಲಸಕ್ಕೆ ಸೇರಬೇಕಾಯಿತು. ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡಿದ ಅವರು ಮುಂದೆ ಟ್ರಕ್ ಕ್ಲೀನರ್ ಆದರು. ಮುಂಬೈ, ಹೈದರಾಬಾದ್ ಸೇರಿದಂತೆ ದೂರದ ಮಹಾನಗರಗಳಿಗೆ ಸಂಚರಿಸುತ್ತಾ ಚಾಲನೆ ಕಲಿತರು. ನಂತರ 'ಮಂಜುನಾಥ ಟ್ರಾವೆಲ್ಸ್' ಬಸ್‌ನಲ್ಲಿ ಚಾಲಕರಾದರು.

ಅದೇ ಸಮಯದಲ್ಲಿ ಕೆಎಸ್‌ಆರ್‌ಟಿಸಿಯಲ್ಲಿ ಚಾಲಕರ ನೇಮಕಾತಿ ನಡೆಯುತ್ತಿತ್ತು. ಓದಿಗಿಂತ ಅನುಭವಕ್ಕೆ ಹೆಚ್ಚು ಬೆಲೆ ಇದ್ದ ಕಾಲ ಅದು. ಪ್ರಾಯೋಗಿಕ ಪರೀಕ್ಷೆಯಲ್ಲಿ ಅವರ ಚಾಲನಾ ಕೌಶಲ ಕಂಡ ಅಧಿಕಾರಿಗಳು ಅವರನ್ನು ಆಯ್ಕೆ ಮಾಡಿದರು. 1992ರಲ್ಲಿ ಕುಂದಾಪುರ ಡಿಪೊದಲ್ಲಿ ಚಾಲಕರಾಗಿ ಸೇವೆ ಆರಂಭಿಸಿದ ಅವರು ನಿವೃತ್ತಿಯಾಗುವವರೆಗೂ ಸ್ಟೀರಿಂಗ್ ಬಿಡಲಿಲ್ಲ.

ತಾಳ್ಮೆ, ಶಿಸ್ತು ಮತ್ತು ಸುರಕ್ಷಿತ ಚಾಲನೆಯ ಮೂಲಕ 34 ವರ್ಷಗಳ ಸೇವೆಯಲ್ಲಿ ಒಂದೂ ಅಪಘಾತವಿಲ್ಲದೇ, ಒಂದೂ ಬಾರಿ ತಡವಾಗದೇ ಕರ್ತವ್ಯಕ್ಕೆ ಹಾಜರಾದ ಜೋಸೆಫ್ ಮಚಾಡೊ ಚಾಲಕರಿಗೆ ಮಾದರಿ.

ಕೊಲ್ಲೂರು–ಚೆನ್ನೈ ಮಾರ್ಗದಲ್ಲಿ ರಾಜಹಂಸ ಬಸ್‌ನ ಚಾಲಕರಾಗಿ ಸೇವೆ ಸಲ್ಲಿಸಿದ ಅವರು, 2005ರಲ್ಲಿ ಆ ಮಾರ್ಗದಲ್ಲಿ ವೋಲ್ವೊ ಬಸ್ ಪರಿಚಯವಾದಾಗ ಅದರ ಚಾಲಕರೂ ಆದರು. ನಂತರ ಮಂಗಳೂರು–ಚೆನ್ನೈ ಮಾರ್ಗದಲ್ಲಿ ಕರ್ತವ್ಯ ನಿರ್ವಹಿಸಿ, ಅನಂತರ ಮಂಗಳೂರು–ಮುಂಬೈ ವೋಲ್ವೊ ಐರಾವತ ಮಲ್ಟಿ ಆ್ಯಕ್ಸೆಲ್ ಬಸ್‌ನ ಚಾಲಕರಾಗಿ ಸುಮಾರು ಒಂದೂವರೆ ದಶಕ ಸೇವೆ ಸಲ್ಲಿಸಿದರು.

ದೂರದ ಮಾರ್ಗಗಳೇ ಅವರಿಗೆ ಅಚ್ಚುಮೆಚ್ಚು. ಸಾವಿರಾರು ಕಿಲೋಮೀಟರ್‌ಗಳ ಪಯಣ, ರಾತ್ರಿ ಚಾಲನೆ, ಮಳೆ, ಸಂಚಾರ ದಟ್ಟಣೆ, ವಾಹನಗಳ ಒತ್ತಡ ಇವೆಲ್ಲವೂ ಅವರ ವೃತ್ತಿಯ ಭಾಗವಾಗಿದ್ದವು. ಆದರೆ ಯಾವುದೂ ಅವರ ತಾಳ್ಮೆಯನ್ನು ಕದಡಲಿಲ್ಲ. ನಿವೃತ್ತಿಯ ಮುಂಚಿನ ಕೊನೆಯ ಟ್ರಿಪ್ ಕೂಡ ಮುಂಬೈಗೆ ಆಗಿದ್ದು, ದೂರದ ಪ್ರಯಾಣಗಳ ಮೇಲಿದ್ದ ಅವರ ಪ್ರೀತಿಯನ್ನು ನೆನಪಿಸುತ್ತದೆ.

'ದುಡುಕಿನ ಸ್ವಭಾವ ಇದ್ದಾಗ ಮಾತ್ರ ದುರ್ಘಟನೆ ನಡೆಯಲು ಸಾಧ್ಯ' ಎನ್ನುವುದು ಅವರ ನಂಬಿಕೆ. ಅದನ್ನು ಅವರು ಜೀವನದಲ್ಲೇ ಪಾಲಿಸಿದರು.

ಒಮ್ಮೆ ಮುಂಬೈ ಮಾರ್ಗದಲ್ಲಿ ಬಸ್ ಮಧ್ಯರಾತ್ರಿ ಕೆಟ್ಟು ನಿಂತಿತ್ತು. ಮೆಕ್ಯಾನಿಕ್ ಬರುವವರೆಗೆ ಕಾಯುವುದರಿಂದ ಪ್ರಯಾಣಿಕರಿಗೆ ತೊಂದರೆ ಆಗುತ್ತದೆ ಎಂದುಕೊಂಡ ಅವರು, ತಮ್ಮ ಅನುಭವದ ಆಧಾರದಲ್ಲಿ ಸಮಸ್ಯೆ ಪತ್ತೆಹಚ್ಚಿ ಎಂಜಿನ್ ಸರಿಪಡಿಸಿದರು. ಬಸ್ ಮತ್ತೆ ಪಯಣ ಮುಂದುವರಿಸಿತು. ಕರ್ತವ್ಯದ ಬಗ್ಗೆ ಅವರಿಗಿದ್ದ ಬದ್ಧತೆಯ ಉದಾಹರಣೆ ಅದು.

ಅವರಿಗೆ ಪದೋನ್ನತಿಯ ಅವಕಾಶಗಳು ಬಂದಿದ್ದವು. ತರಬೇತುದಾರನಾಗಿ ಅಥವಾ ಬೇರೆ ಹುದ್ದೆಗಳಲ್ಲಿ ಕೆಲಸ ಮಾಡುವ ಅವಕಾಶವೂ ಇತ್ತು. 11ನೇ ಪುಟಕ್ಕೆ...



ಜೋಸೆಫ್ ಮಚಾಡೊ

ಮೆಟ್ಟಿಲುಬಾವಿಗಳ ಕಲಾಲೋಕ

ನೀರಿನ ಸಂಗ್ರಹದ ಅಗತ್ಯದಿಂದ ನಿರ್ಮಾಣವಾದ ಮೆಟ್ಟಿಲು ಬಾವಿಗಳು ಕಾಲಕ್ರಮೇಣ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಅದ್ಭುತ ಮಾದರಿಗಳಾಗಿ ರೂಪುಗೊಂಡವು. ಗದಗ ಜಿಲ್ಲೆಯ ಲಕ್ಷ್ಮೇಶ್ವರದ ಮೆಟ್ಟಿಲು ಬಾವಿಗಳು ಈ ಕಲಾಲೋಕದ ವೈಭವವನ್ನು ಇಂದಿಗೂ ಸಾರುತ್ತಿವೆ.



ಪುಲಿಗೆರೆಯ ಮೆಟ್ಟಿಲು ಬಾವಿಯಲ್ಲಿ ಕಂಡುಬರುವ ಕಲ್ಲಿನ ತೊಲೆಗಳು

• ಶ್ರೀಕುಮಾರ್ ಎಂ. ಮೆನನ್

ಮೆಟ್ಟಿಲುಗಳನ್ನು ಬಳಸಿ ಕೆಳಗೆ ಇಳಿಯುವ ದಾರಿ ಕಿರಿದಾಗಿದೆ. ಎರಡೂ ಬದಿಯ ಕಲ್ಲಿನ ಗೋಡೆಗಳು ತೀರಾ ಸಾಧಾರಣ. ಅವುಗಳ ಮೇಲೆ ಯಾವುದೇ ಚಿತ್ರಗಳಿಲ್ಲ, ಕೆತ್ತನೆಗಳಿಲ್ಲ. ಅಲ್ಲೊಂದು ಇಲ್ಲೊಂದು ಕಲ್ಲು ಮಾತ್ರ ಸ್ವಲ್ಪ ಒಳಗೆ ಅಥವಾ ಹೊರಗೆ ಚಾಚಿಕೊಂಡು ಒರಟುತನದ ನಡುವೆ ಕೊಂಚ ವೈವಿಧ್ಯವನ್ನು ಮೂಡಿಸಿದೆ. ಸ್ವಲ್ಪ ದೂರ ಸಾಗುತ್ತಿದ್ದಂತೆ ಮೆಟ್ಟಿಲುಗಳು ಬಲಕ್ಕೆ ತಿರುಗಿ, ಮತ್ತೆ ಎಡಕ್ಕೆ ಹೊರಳುತ್ತಾ ಭೂಮಿಯ ಆಳದತ್ತ ಕರೆದೊಯ್ಯುತ್ತವೆ. ಗೋಡೆಗಳ ಒತ್ತಡವನ್ನು ತಡೆಯಲು ಅಲ್ಲಲ್ಲಿ ಹಾಕಿರುವ ಕಲ್ಲಿನ ತೊಲೆಗಳು ಆಕಾಶದ ಮೇಲೆ ಯಾರೋ ಅಡ್ಡಪಟ್ಟಿಗಳನ್ನು ಎಳೆದಂತಿವೆ. ಕೊನೆಗೆ ಮೆಟ್ಟಿಲುಗಳು ಮುಗಿಯುವಲ್ಲಿ ಪಾಚಿಕಟ್ಟಿದ ಕಡುಹಸಿರು ನೀರು ನಿಶ್ಚಲವಾಗಿ ಕಣ್ಣಿಗೆ ಬೀಳುತ್ತದೆ.

ಗದಗ ಜಿಲ್ಲೆಯ ಲಕ್ಷ್ಮೇಶ್ವರದ (ಪುಲಿಗೆರೆ) ಸೋಮೇಶ್ವರ ದೇವಸ್ಥಾನದ ಆವರಣದಲ್ಲಿರುವ ಕಲ್ಯಾಣಿಯ ವೈಶಿಷ್ಟ್ಯ ಇದು. ದೇವಸ್ಥಾನದ ಗೋಡೆಗಳು ಮತ್ತು ಮುಂಭಾಗ ಕಲಾತ್ಮಕ ಕೆತ್ತನೆಗಳು ಹಾಗೂ ಸಂಕೀರ್ಣ ವಿನ್ಯಾಸಗಳಿಂದ ಕಂಗೊಳಿಸುತ್ತವೆ. ಆದರೆ ಇದಕ್ಕೆ ತದ್ವಿರುದ್ಧವಾಗಿ, ಈ ಕಲ್ಯಾಣಿಯಲ್ಲಿ ಕಲ್ಲಿನ ಗೋಡೆಗಳು ಮತ್ತು ಕಲ್ಲಿನ ತೊಲೆಗಳಷ್ಟೇ ಕಾಣುತ್ತವೆ. ಆದರೂ ಇದೇ ಸರಳತೆ ಅದಕ್ಕೆ ವಿಶಿಷ್ಟವಾದ ಸೌಂದರ್ಯವನ್ನು ನೀಡಿದೆ. ದೇಗುಲದ ಹತ್ತಿರದಲ್ಲೇ ಇರುವುದರಿಂದ ಈ ಕಲ್ಯಾಣಿಯನ್ನು 'ಒಕ್ಕರಣೆ ಬಾವಿ' ಎಂದು ಕರೆಯಲಾಗುತ್ತದೆ. ಇದು ದೇವಸ್ಥಾನದ ದೈನಂದಿನ ಪೂಜಾ ಕೈಂಕರ್ಯಗಳಿಗೆ ಮತ್ತು ಧಾರ್ಮಿಕ ವಿಧಿವಿಧಾನಗಳಿಗೆ ನೀರನ್ನು ಒದಗಿಸುವ ಪುಷ್ಕರಣಿಯಾಗಿದೆ.

ಹತ್ತಿರದ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗಿರುವ ಸಂತಾನ ಮತ್ತು ಸಮೃದ್ಧಿಯ ದೇವತೆಯಾದ 'ಲಜ್ಜಾಗೌರಿ'ಯ ವಿಗ್ರಹವೂ ಇದೇ ಕಲ್ಯಾಣಿಯ ಸಮೀಪ ಪತ್ತೆಯಾಗಿತ್ತು. ಅನಾದಿಕಾಲದಿಂದಲೂ ನೀರನ್ನು ಸಮೃದ್ಧಿಯ ಸಂಕೇತವೆಂದು ಪರಿಗಣಿಸಲಾಗಿದ್ದು, ಇಂತಹ ವಿಗ್ರಹಗಳು ಬಾವಿ ಮತ್ತು ಕಲ್ಯಾಣಿಗಳ ಸುತ್ತಮುತ್ತ ಹೆಚ್ಚಾಗಿ ಕಂಡುಬರುತ್ತವೆ.



ಐಹೊಳೆಯ ಹುಚ್ಚಿಮಲ್ಲಿ ಗುಡಿಯಲ್ಲಿರುವ ಮೆಟ್ಟಿಲುಬಾವಿ

ಒಕ್ಕರಣೆ ಬಾವಿಯಂತಹ ರಚನೆಗಳನ್ನೇ ಸಾಮಾನ್ಯವಾಗಿ ಮೆಟ್ಟಿಲುಬಾವಿಗಳು ಎಂದು ಕರೆಯಲಾಗುತ್ತದೆ. ಭೂಮಿಯನ್ನು ಅಗೆದು ನಿರ್ಮಿಸಲಾದ ಈ ರಚನೆಗಳು ಕೆಲವೊಮ್ಮೆ ಅಂತರ್ಜಲ ಸ್ತರಗಳನ್ನು ಭೇದಿಸಿ ಸಾಗುವುದರಿಂದ ವರ್ಷಪೂರ್ತಿ ನೀರನ್ನು ಒದಗಿಸುತ್ತವೆ. ಋತುಮಾನಕ್ಕೆ ಅನುಗುಣವಾಗಿ ಬದಲಾಗುವ ನೀರಿನ ಮಟ್ಟವನ್ನು ತಲುಪಲು ಮೆಟ್ಟಿಲುಗಳನ್ನು ನಿರ್ಮಿಸಲಾಗುತ್ತದೆ. ಕೆಲವೊಮ್ಮೆ ಬಂಡೆಯನ್ನು ಕೊರೆದು ಇವುಗಳನ್ನು ರೂಪಿಸಲಾಗುತ್ತದೆ. ಮೇಲ್ಭಾಗದಲ್ಲಿ ಮಣ್ಣು ಕುಸಿಯದಂತೆ ಕಲ್ಲಿನ ತಡೆಗೋಡೆಗಳನ್ನು ಕಟ್ಟಲಾಗುತ್ತದೆ. ಭಾರತದಲ್ಲಿ ಇಂತಹ ಮೆಟ್ಟಿಲುಬಾವಿಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಅವು ಹೆಚ್ಚಾಗಿ ಶುಷ್ಕ ಪ್ರದೇಶಗಳಲ್ಲಿ ಕಂಡುಬರುತ್ತವೆ. ಅಂತರ್ಜಲದ ಮಟ್ಟಕ್ಕೆ ಅನುಗುಣವಾಗಿ ಇವುಗಳ ಆಳ ಮತ್ತು ವಿನ್ಯಾಸ ಬದಲಾಗುತ್ತವೆ.

ಆದರೆ ಎಲ್ಲಾ ಮೆಟ್ಟಿಲುಬಾವಿಗಳೂ ಸರಳವಾಗಿರುವುದಿಲ್ಲ. ಗದಗ ಜಿಲ್ಲೆಯ ಸೂಡಿಯಲ್ಲಿರುವ 'ನಾಗಕುಂಡ' ಅದ್ಭುತ ಶಿಲ್ಪಕಲೆಯ ಮೆಟ್ಟಿಲುಬಾವಿಗೆ ಅತ್ಯುತ್ತಮ ಉದಾಹರಣೆ. ಸುಮಾರು ಒಂದು ಸಹಸ್ರಮಾನದ ಹಿಂದೆ ಕಲ್ಯಾಣಿ ಚಾಲುಕ್ಯರ ಅಧಿಕಾರಿಯಾಗಿದ್ದ ನಾಗದೇವನು ಇದನ್ನು ನಿರ್ಮಿಸಿದನು. ವಾಸ್ತುಶಿಲ್ಪ ಇತಿಹಾಸಕಾರ ಆ್ಯಡಮ್ ಹಾರ್ಡಿ ಅವರ ಮಾತಿನಲ್ಲಿ, ಇದು 'ಅಕ್ಷರಶಃ ಭೂಮಿಯೊಳಗೆ ಹುದುಗಿರುವ ವಿಲೋಮ ಶೈಲಿಯ ದೇವಸ್ಥಾನ'ದಂತಿದೆ.

ಈ ಮೆಟ್ಟಿಲುಬಾವಿಯ ಒಳಗೋಡೆಗಳ ರಚನೆ ಆ ಕಾಲದ ವೇಸರ ಶೈಲಿಯ ದೇವಸ್ಥಾನಗಳ ಹೊರಗೋಡೆಗಳ ಜ್ಯಾಮಿತೀಯ ವಿನ್ಯಾಸವನ್ನು ನಿಖರವಾಗಿ ಹೋಲುತ್ತದೆ. ಸಮೀಪದಲ್ಲಿಯೇ ನಾಗದೇವ ನಿರ್ಮಿಸಿದ ಜೋಡು ಕಳಸ ದೇಗುಲವೂ ಇದೆ. ವಿಶಿಷ್ಟ ಕೆತ್ತನೆಗಳಿಂದ ಕಂಗೊಳಿಸುವ ಈ ಮೆಟ್ಟಿಲುಬಾವಿಯಲ್ಲಿ ನೀರಿನತ್ತ ಇಳಿಯುವುದು ಭೂಮಿಯೊಳಗಿನ ದೇವಸ್ಥಾನವೊಂದರ ಗರ್ಭಗುಡಿಗೆ ಪ್ರವೇಶಿಸುವ ಅನುಭವವನ್ನು ನೀಡುತ್ತದೆ. ದೇವಸ್ಥಾನದಂತಿರುವ ಗೋಡೆಗಳು ದಾರಿಯ ಇಕ್ಕೆಲಗಳಲ್ಲಿ ಹತ್ತಿರಕ್ಕೆ ಬಂದು, ಬಾವಿಯ ಮುಖ್ಯ ಭಾಗದ ಬಳಿ ವಿಸ್ತಾರವಾಗಿ ತೆರೆದುಕೊಳ್ಳುತ್ತವೆ. ಶತಮಾನಗಳ ನಿರ್ಲಕ್ಷ್ಯದ ಬಳಿಕ ಈ ಮೆಟ್ಟಿಲುಬಾವಿಯನ್ನು ಇತ್ತೀಚೆಗೆ ಡೆಕ್ಕನ್ ಹೆರಿಟೇಜ್ ಫೌಂಡೇಶನ್ ಜೀರ್ಣೋದ್ಧಾರ ಮಾಡಿದೆ.

ನೀರಾವರಿ ಉದ್ದೇಶಕ್ಕಾಗಿ ನಿರ್ಮಿಸಲಾದ ಮೆಟ್ಟಿಲುಬಾವಿಗಳು ಸಾಮಾನ್ಯವಾಗಿ ಜನವಸತಿಯಿಂದ ದೂರದ ಹೊಲಗಳಲ್ಲಿ ಕಂಡುಬರುತ್ತವೆ. ಅವುಗಳ ರಚನೆಯಲ್ಲಿ ಹೆಚ್ಚಿನ ಕಲಾತ್ಮಕತೆ ಇರುವುದಿಲ್ಲ. ಆದರೆ ಪ್ರಯಾಣಿಕರ ಅನುಕೂಲಕ್ಕಾಗಿ ನಿರ್ಮಿಸಲಾದ ಬಾವಿಗಳು ಸಾರಿಗೆ ಮಾರ್ಗಗಳ ಬಳಿ ಇರುತ್ತವೆ. ಅವುಗಳಲ್ಲಿ ವಿಶ್ರಾಂತಿ, ಪೂಜೆ ಮತ್ತು ಇತರ ಚಟುವಟಿಕೆಗಳಿಗಾಗಿ ಕೋಣೆಗಳು ಹಾಗೂ ಮಂಟಪಗಳನ್ನು ನಿರ್ಮಿಸಲಾಗುತ್ತಿತ್ತು.

13ನೇ ಪುಟಕ್ಕೆ...

ಕೆರೆ ಅಂಗಳದಲ್ಲಿ ಅರಳಿದ ಹಸಿರು ಕನಸು



ಮಾರೇಗೌಡ ಬೆಳೆಸಿದ ಮರಗಳು

• ಎಂ ವಿ ನೆಗಳೂರ

ವೃಕ್ಷಮಾತೆ ಎಂದೇ ಖ್ಯಾತರಾದ ಸಾಲುಮರದ ತಿಮ್ಮಕ್ಕ ನಮ್ಮೊಂದಿಗೆ ಇಲ್ಲದಿದ್ದರೂ, ಅವರು ನೆಟ್ಟು ಬೆಳೆಸಿದ ಮರಗಳಲ್ಲಿ ಇಂದಿಗೂ ಜೀವಂತವಾಗಿ ಉಸಿರಾಡುತ್ತಿದ್ದಾರೆ. ಪರಿಸರ ಪ್ರೇಮ, ನಿಸ್ವಾರ್ಥ ಸೇವೆ ಮತ್ತು ಸಾಮಾಜಿಕ ಬದ್ಧತೆಗೆ ಅವರು ನೀಡಿದ ಪ್ರೇರಣೆ ಇಂದಿಗೂ ಅನೇಕರನ್ನು ಹಸಿರು ಕಾರ್ಯಗಳತ್ತ ಸೆಳೆಯುತ್ತಿದೆ. ತಿಮ್ಮಕ್ಕ ಅವರ ಹಾದಿಯಲ್ಲಿ ನಡೆಯುವ ಅನೇಕ ಪರಿಸರ ಪ್ರೇಮಿಗಳ ಪೈಕಿ ನೆಲಮಂಗಲ ತಾಲ್ಲೂಕಿನ ವಾದಕುಂಟೆ ಗ್ರಾಮದ ಮಾರೇಗೌಡರು ಕೂಡ ಒಬ್ಬರು.

ಹದಿನೈದು ವರ್ಷಗಳಿಂದ ಅವರು ಗ್ರಾಮದ ಕೆರೆ ಏರಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಹಣ್ಣು-ಹಂಪಲುಗಳ ಸಸಿಗಳನ್ನು ನೆಟ್ಟು ಬೆಳೆಸುತ್ತಿದ್ದಾರೆ. ಭೂದಾಹಿಗಳ ಕಣ್ಣಿಗೆ ಬೀಳಬಹುದಾದ ಸಾರ್ವಜನಿಕ ಜಾಗವನ್ನು ಹಸಿರಿನಿಂದ ಆವರಿಸಿ ಸಂರಕ್ಷಿಸುವ ಕೆಲಸದಲ್ಲಿ ಅವರು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಆರಂಭದಲ್ಲಿ ಈ ಕಾರ್ಯಕ್ಕೆ ವಿರೋಧವೂ ಎದುರಾಯಿತು. ಜಾನುವಾರುಗಳಿಗೆ ಮೇಯಲು ಜಾಗ ಕಡಿಮೆಯಾಗುತ್ತದೆ ಎಂಬ ಕಾರಣ ನೀಡಿ ಕೆಲವರು ನೆಟ್ಟ ಸಸಿಗಳನ್ನು ಕಿತ್ತುಹಾಕಿದ ಘಟನೆಗಳೂ ನಡೆದವು. ಆದರೂ ಮಾರೇಗೌಡರು ಹಿಂಜರಿಯಲಿಲ್ಲ.

ಇಂದು ಅವರು ಬೆಳೆಸಿದ 250ಕ್ಕೂ ಹೆಚ್ಚು ಮರಗಳು ಫಲ ನೀಡುತ್ತಿವೆ. ನೇರಳೆ, ಮಾವು, ಹಲಸು, ಸಪೋಟ, ಸೀಬೆ ಸೇರಿದಂತೆ ವಿವಿಧ ಹಣ್ಣಿನ ಮರಗಳು ಕೆರೆ ಅಂಗಳವನ್ನು ಹಸಿರಿನಿಂದ ಕಂಗೊಳಿಸುತ್ತಿವೆ. ಅವುಗಳ ಕೊಂಬೆಗಳಲ್ಲಿ ಪಕ್ಷಿಗಳ ಕಲರವ ಕೇಳಿಸುತ್ತದೆ. ಹಣ್ಣುಗಳ ಸುವಾಸನೆಗೆ ಸೆಳೆಯಲ್ಪಟ್ಟ ಅಳಿಲು, ಮುಂಗುಸಿ, ಕಪ್ಪೆ, ಆಮೆ, ನೀರುಹಾವು, ವಿವಿಧ ಪಕ್ಷಿಗಳು ಮತ್ತು ಇತರ ಜೀವಿಗಳು ಇಲ್ಲಿ ಆಶ್ರಯ ಕಂಡುಕೊಂಡಿವೆ.

ಇನ್ನೂ ವಿಶೇಷವೆಂದರೆ, ಈ ಮರಗಳ ನೆರಳಿನಲ್ಲಿ ಗ್ರಾಮದ ಮಕ್ಕಳಿಗೂ ಪ್ರಕೃತಿಯೊಂದಿಗಿನ ಬಾಂಧವ್ಯ ಬೆಳೆದಿದೆ. ಶಾಲೆ ಮುಗಿದ ಬಳಿಕ ಹಣ್ಣುಗಳಿಗಾಗಿ ಮರಗಳತ್ತ ಧಾವಿಸುವ ಮಕ್ಕಳ ದಂಡು ಅಲ್ಲಿ ಸಾಮಾನ್ಯ ದೃಶ್ಯ. ಹಣ್ಣುಗಳ ರುಚಿಯ ಜೊತೆಗೆ ಅವರು ಅರಿವಿಲ್ಲದೇ ಪ್ರಕೃತಿಯ ಪಾಠವನ್ನೂ ಕಲಿಯುತ್ತಿದ್ದಾರೆ. ಜೀವಜಾಲದ ಕೊಂಡಿಯಾದ ಮರಗಳು ಪರಿಸರ ವಿಜ್ಞಾನದ ಜೀವಂತ ಗ್ರಂಥಾಲಯಗಳಾಗಿವೆ. ಸಹಬಾಳ್ವೆಯ ಪಾಠವನ್ನು ಅವು ತಣ್ಣಗೆ ಹೇಳುತ್ತವೆ.



ತಾವು ಬೆಳೆದ ನೇರಳೆಯೊಂದಿಗೆ ಮಾರೇಗೌಡ

ಈ ಹಸಿರು ಸಾಧನೆಯ ಹಿಂದೆ ಒಂದು ಕುಟುಂಬದ ಪರಿಶ್ರಮವೂ ಇದೆ. ಮಾರೇಗೌಡರ ಪತ್ನಿ ಆಶಾ, ಮಗ ನೇಹನ್ ಗೌಡ ಹಾಗೂ ಮಗಳು ಚೈತನ್ಯ ಈ ಕಾರ್ಯದಲ್ಲಿ ಕೈಜೋಡಿಸಿದ್ದಾರೆ. ಆರಂಭದ ದಿನಗಳಲ್ಲಿ ಸಸಿಗಳಿಗೆ ನೀರುಣಿಸಲು ಕೆರೆಯಿಂದ ಅಡ್ಡೆಯಲ್ಲಿ ನೀರು ಹೊತ್ತು ತಂದಿದ್ದಾರೆ. ನಂತರ ಸೈಕಲ್ ಮತ್ತು ಸ್ಕೂಟರ್‌ಗಳಲ್ಲಿ ನೀರು ಸಾಗಿಸಿದ್ದಾರೆ. ಬೇಸಿಗೆಯಲ್ಲಿ ನೀರಿನ ಕೊರತೆ ಉಂಟಾದಾಗ ದೂರದಿಂದ ಟ್ಯಾಂಕರ್ ಮೂಲಕ ನೀರು ತರಿಸಿ ಸಸಿಗಳನ್ನು ಉಳಿಸಿಕೊಂಡಿದ್ದಾರೆ. ಈ ಕಾರ್ಯಕ್ಕಾಗಿ ಅವರು ಯಾರ ಸಹಾಯವನ್ನೂ ನಿರೀಕ್ಷಿಸಲಿಲ್ಲ. ತಮ್ಮ ಖರ್ಚಿನಲ್ಲೇ ಸಸಿಗಳನ್ನು ಸಂಗ್ರಹಿಸಿ ನೆಟ್ಟು ಬೆಳೆಸಿದ್ದಾರೆ.

ಕಂಪನಿಯೊಂದರಲ್ಲಿ ಕೆಲಸ ಮಾಡುವ ಮಾರೇಗೌಡ ಅವರು ಪರಿಸರ ಸೇವೆಗೆ ಸಮಯ ಮೀಸಲಿಡುತ್ತಾರೆ. ಬೆಳಿಗ್ಗೆ ಕೆಲಸಕ್ಕೆ ತೆರಳುವ ಮುನ್ನ ಕೆರೆ ಅಂಗಳಕ್ಕೆ ಭೇಟಿ ನೀಡಿ ಅಗತ್ಯ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಸಂಜೆ ಮತ್ತು ರಜಾದಿನಗಳಲ್ಲಿ ಕುಟುಂಬದವರೊಂದಿಗೆ ಸೇರಿ ಮರಗಳ ಆರೈಕೆಯಲ್ಲಿ ತೊಡಗುತ್ತಾರೆ. ತಮ್ಮ ಅಲ್ಪಭೂಮಿಯಲ್ಲಿ ನರ್ಸರಿ ನಿರ್ಮಿಸಿ ಆಸಕ್ತರಿಗೆ ಉಚಿತವಾಗಿ ಸಸಿಗಳನ್ನು ವಿತರಿಸುತ್ತಿದ್ದಾರೆ.

ಗ್ರಾಮಗಳ ಜೀವನಾಡಿಯಾಗಿದ್ದ ಕೆರೆಗಳು ಇಂದು ನಮ್ಮ ನಿರ್ಲಕ್ಷ್ಯ ಮತ್ತು ದುರಾಸೆಯಿಂದ ಕಣ್ಮರೆಯಾಗುತ್ತಿವೆ. ಉಳಿದಿರುವ ಅನೇಕ ಕೆರೆಗಳು ಕಲುಷಿತ ನೀರಿನ ತೊಟ್ಟಿಗಳಾಗಿ ಮಾರ್ಪಟ್ಟಿವೆ. ಆದರೆ ಕೆರೆಗಳು ಕೇವಲ ನೀರಿನ ಸಂಗ್ರಹ ತಾಣಗಳಲ್ಲ. ಸಾವಿರಾರು ಜಲಚರ, ಸಸ್ಯ ಮತ್ತು ಸೂಕ್ಷ್ಮಜೀವಿಗಳ ಆವಾಸಸ್ಥಾನಗಳಾಗಿವೆ. ಕೆರೆಯ ಭೌತಿಕ, ರಾಸಾಯನಿಕ ಮತ್ತು ಜೈವಿಕ ಅಂಶಗಳು ಪರಸ್ಪರ ಅವಲಂಬಿತವಾಗಿದ್ದು, ಒಂದರ ಮೇಲಿನ ಹಾನಿ ಇಡೀ ಪರಿಸರ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಈ ಸತ್ಯವನ್ನು ಯಾವುದೇ ಪಠ್ಯಪುಸ್ತಕಕ್ಕಿಂತ ಜೀವನಾನುಭವದ ಮೂಲಕ ಅರಿತಿರುವ ಮಾರೇಗೌಡರು, ಕೆರೆ ಮತ್ತು ಮರಗಳನ್ನು ಒಟ್ಟಿಗೆ ಉಳಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ಒಮ್ಮೆ ಅವರ ಕಾರ್ಯವನ್ನು ವಿರೋಧಿಸಿದ್ದವರೇ ಇಂದು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಮರಗಳ ನೆರಳು, ಹಣ್ಣುಗಳ ಸವಿ ಮತ್ತು ಪಕ್ಷಿಗಳ ಕಲರವದ ನಡುವೆ ಮಾರೇಗೌಡರ ಪರಿಶ್ರಮದ ಮೌಲ್ಯ ಗ್ರಾಮಸ್ಥರಿಗೆ ಅರ್ಥವಾಗತೊಡಗಿದೆ.

ಮಾರೇಗೌಡರಂತಹ ಪರಿಸರ ಸೇವಕರು ಪ್ರತಿಯೊಂದು ಗ್ರಾಮದಲ್ಲೂ ಇದ್ದರೆ ನಮ್ಮ ಹಳ್ಳಿಗಳ ಚಿತ್ರಣವೇ ಬದಲಾಗಬಹುದು. ನಮಗೆ ಬದುಕು ನೀಡಿದ ಭೂಮಿ, ಉಸಿರಾಡಲು ಗಾಳಿ, ಕುಡಿಯಲು ನೀರು-ಇವೆಲ್ಲವೂ ಪ್ರಕೃತಿಯ ಕೊಡುಗೆ. ಆ ಋಣವನ್ನು ಸಂಪೂರ್ಣವಾಗಿ ತೀರಿಸಲು ಸಾಧ್ಯವಾಗದಿದ್ದರೂ, ನಮ್ಮ ಹುಟ್ಟುಹಬ್ಬ ಅಥವಾ ವಿಶೇಷ ದಿನಗಳಂದು ಒಂದು ಗಿಡ ನೆಟ್ಟು ಬೆಳೆಸುವ ಸಂಕಲ್ಪ ಮಾಡಬಹುದು.

ಸಾಲುಮರದ ತಿಮ್ಮಕ್ಕ ಅವರಂತೆ ಎಲ್ಲರೂ ಆಗಬೇಕೆಂದಿಲ್ಲ. ಆದರೆ ಮಾರೇಗೌಡರಂತೆ ತಮ್ಮ ಸುತ್ತಲಿನ ಪರಿಸರಕ್ಕಾಗಿ ಸ್ವಲ್ಪ ಸಮಯ ಮೀಸಲಿಟ್ಟರೆ ಸಾಕು. ಹಸಿರು ಉಳಿಯುತ್ತದೆ, ಕೆರೆ ಉಳಿಯುತ್ತದೆ, ಜೀವಜಾಲ ಉಳಿಯುತ್ತದೆ. ಅಂತಹ ನಿಸ್ವಾರ್ಥ ಸೇವಕರನ್ನು ಸಮಾಜ, ಸರ್ಕಾರ ಮತ್ತು ಸಂಘ-ಸಂಸ್ಥೆಗಳು ಗುರುತಿಸಿ ಪ್ರೋತ್ಸಾಹಿಸಿದರೆ ಅದು ಮತ್ತಷ್ಟು ಹಸಿರು ಕನಸುಗಳಿಗೆ ಬೀಜವಾಗಲಿದೆ. ❖

ಚಾಲನೆಗೆ ಮಚಾಡೊ ಮಾದರಿ

10ನೇ ಪುಟದಿಂದ...

ಆದರೆ ಅವರು ಆಯ್ಕೆ ಮಾಡಿಕೊಂಡಿದ್ದು ಸ್ಟೀರಿಂಗ್ ಚಕ್ರವನ್ನೇ.

'ನನಗೆ ಬಸ್ ಚಲಾಯಿಸುವುದೇ ಇಷ್ಟ' ಎಂದು ಅವರು ಹೇಳುತ್ತಾರೆ.

ಅನೇಕರು ಹುದ್ದೆಯಲ್ಲಿ ದೊಡ್ಡವರಾಗಲು ಬಯಸುತ್ತಾರೆ. ಆದರೆ ಮಚಾಡೊ ತಮ್ಮ ಕೆಲಸದಲ್ಲೇ ದೊಡ್ಡವರಾದರು. ತಮ್ಮ ಕಾರ್ಯವೈಖರಿಯಿಂದ ಗೌರವ ಗಳಿಸಿದರು.

ರಾತ್ರಿ ಪ್ರಯಾಣದ ವೇಳೆ ನಿದ್ದೆ ಬರುತ್ತಿದೆ ಎಂದು ಅನಿಸಿದಾಗ ಅವರು ಬಸ್ ಅನ್ನು ಸುರಕ್ಷಿತವಾಗಿ ಬದಿಗೆ ನಿಲ್ಲಿಸುತ್ತಿದ್ದರು. ಟೈರ್‌ಗಳನ್ನು ಪರಿಶೀಲಿಸುತ್ತಿದ್ದರು. ಮುಖ ತೊಳೆದುಕೊಳ್ಳುತ್ತಿದ್ದರು. ಥರ್ಮಸ್‌ನಲ್ಲಿ ತಂದಿದ್ದ ಲೆಮನ್ ಟೀ ಕುಡಿದು ಮತ್ತೆ ಚಾಲನೆ ಆರಂಭಿಸುತ್ತಿದ್ದರು. ಸುರಕ್ಷತೆಯ ವಿಚಾರದಲ್ಲಿ ಯಾವುದೇ ರಾಜಿ ಇರಲಿಲ್ಲ.

8ನೇ ತರಗತಿಗೆ ವಿದ್ಯಾಭ್ಯಾಸ ನಿಂತಿದ್ದರೂ ಅವರು ಕಲಿಯುವುದನ್ನು ನಿಲ್ಲಿಸಲಿಲ್ಲ. ಕೆಎಸ್‌ಆರ್‌ಟಿಸಿಗೆ ಸೇರಿದ ಬಳಿಕ ಮೋಟಾರ್ ವೈಂಡಿಂಗ್ ಮತ್ತು ಟಿ.ವಿ. ಮೆಕ್ಯಾನಿಕಲ್ ಕೋರ್ಸ್‌ಗಳನ್ನು ಮಾಡಿ ತಮ್ಮ ಜ್ಞಾನವನ್ನು ವಿಸ್ತರಿಸಿಕೊಂಡರು. ಪುಸ್ತಕಜ್ಞಾನದ ಜೊತೆಗೆ ಅನುಭವಜ್ಞಾನವೂ ಇರಬೇಕು ಎಂಬ ಅವರ ನಂಬಿಕೆ, ವೃತ್ತಿ ಬದುಕಿನಲ್ಲಿಯೂ ಪ್ರತಿಫಲಿಸಿತು.

ತಮ್ಮ ಯಶಸ್ಸಿನ ಹಿಂದೆ ಕುಟುಂಬ ಮತ್ತು ಸಹೋದ್ಯೋಗಿಗಳ ಪಾತ್ರವನ್ನು ಅವರು ಮರೆಯುವುದಿಲ್ಲ. ಪತ್ನಿ ಜಾಯ್ಸ್‌ರೂಪಾ ಮಚಾಡೊ ಶಿಕ್ಷಕಿಯಾಗಿದ್ದು ಮನೆಯ ಜವಾಬ್ದಾರಿಯನ್ನು ನಿರ್ವಹಿಸಿದ್ದರು. ಮಕ್ಕಳಾದ ಜಾಯಿಲಿನ್ ಮತ್ತು ಪ್ರಿನ್ಸಿಯಾ ಮಚಾಡೊ ಹೊಂದಿಕೊಂಡು ಹೋಗಿದ್ದರು. ಮನೆ ಕಡೆಯಿಂದ ಯಾವುದೇ ಒತ್ತಡವಿಲ್ಲದೇ ಕೆಲಸ ನಿರ್ವಹಿಸಲು ಸಾಧ್ಯವಾದದ್ದು ಅವರ ಪಾಲಿಗೆ ದೊಡ್ಡ ಬೆಂಬಲವಾಗಿತ್ತು.

ಅದೇ ರೀತಿ ಕೆಎಸ್‌ಆರ್‌ಟಿಸಿಯ ಅಧಿಕಾರಿಗಳು ಹಾಗೂ ತಮ್ಮ ಜೊತೆ ಕೆಲಸ ಮಾಡಿದ ನಿರ್ವಾಹಕರ ಸಹಕಾರವನ್ನೂ ಅವರು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ.

ಇಂದು ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವ ಕಾಲದಲ್ಲಿ ಮಚಾಡೊ ಅವರ ವೃತ್ತಿ ಜೀವನ ಒಂದು ಪಾಠದಂತೆ ಕಾಣುತ್ತದೆ. ಉತ್ತಮ ಚಾಲಕನಾಗಲು ವಾಹನ ಚಲಾಯಿಸುವುದು ತಿಳಿದರೆ ಸಾಲದು; ಸಮಯಪಾಲನೆ, ತಾಳ್ಮೆ, ಜಾಗರೂಕತೆ, ಪ್ರಯಾಣಿಕರ ಬಗ್ಗೆ ಕಾಳಜಿ ಮತ್ತು ವೃತ್ತಿಯ ಬಗ್ಗೆ ಗೌರವ ಇರಬೇಕು ಎಂಬುದನ್ನು ಅವರ ಬದುಕು ಹೇಳುತ್ತದೆ.

ವಿಶೇಷವಾಗಿ ಯುವ ಚಾಲಕರಿಗೆ ಜೋಸೆಫ್ ಮಚಾಡೊ ಅವರ ಕಥೆ ಪ್ರೇರಣೆಯಾಗಬೇಕು. ಅವರು ಯಾವುದೇ ದಾಖಲೆಗಾಗಿ ಕೆಲಸ ಮಾಡಲಿಲ್ಲ. ಯಾವುದೇ ಪ್ರಶಸ್ತಿಗಾಗಿ ಓಡಲಿಲ್ಲ. ಪ್ರತಿದಿನದ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಾ ಹೋದರು. ಅದರ ಫಲವಾಗಿ ನಿವೃತ್ತಿಯ ದಿನ ಹೆಮ್ಮೆಯಿಂದ ಹೇಳಬಹುದಾದ ಒಂದು ವಾಕ್ಯವನ್ನು ಸಂಪಾದಿಸಿಕೊಂಡರು–'ನನ್ನಿಂದಾಗಿ ಒಂದೇ ಒಂದು ಅಪಘಾತವೂ ಆಗಿಲ್ಲ'.

ಯಾವುದೇ ವೃತ್ತಿಯಲ್ಲಿ ಇದಕ್ಕಿಂತ ದೊಡ್ಡ ಸಾಧನೆ ವಿರಳ.

ಜೋಸೆಫ್ ಮಚಾಡೊ ನಿವೃತ್ತರಾಗಿರಬಹುದು. ಆದರೆ ಅವರು ಬಿಟ್ಟುಹೋದ ಸಂದೇಶ ಇನ್ನೂ ದೂರ ಸಾಗುವ ಶಕ್ತಿಯನ್ನು ಹೊಂದಿದೆ. ವಾಹನವನ್ನು ಓಡಿಸುವುದು ಕೈಗಳ ಕೆಲಸ; ಸುರಕ್ಷಿತವಾಗಿ ಗಮ್ಯ ತಲುಪಿಸುವುದು ಮನಸ್ಸಿನ ಕೆಲಸ. ಜೋಸೆಫ್ ಮಚಾಡೊ ಅವರ ಮೂವತ್ತನಾಲ್ಕು ವರ್ಷಗಳ ಸೇವೆ ಜೀವಂತ ಸಾಕ್ಷಿಯಾಗಿದೆ. ❖



ಅಡವಿ ಬೆಕ್ಕಿನ ಕಳೇಬರ

'ನಮ್ಮನ್ನೂ ಬದುಕಲು ಬಿಡಿ...' ಅಡವಿ ಬೆಕ್ಕುಗಳ ವಿನಂತಿ



ಅಡವಿ ಬೆಕ್ಕು

• ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ

'**ತುಂಗಭದ್ರಾ** ಹಿನ್ನೀರಿನ ದಡದಲ್ಲಿ ಆಗತಾನೆ ಅರಳಿ ನಿಂತಿರೋ ಮಲ್ಲಿಗೆ ಹೂವಿನಂಥ ಊರು ರೀ ನಮ್ಮದು. ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬಾಚಿಗೊಂಡನಹಳ್ಳಿ. ಇಷ್ಟಕ್ಕೂ ನನ್ನ ಪರಿಚಯ ಮಾಡ್ಕೊಳ್ಳಿಲ್ಲ ಅಲ್ವಾ? ನಮಸ್ಕಾರ ರೀ, ನಾವು ಅಡವಿ ಬೆಕ್ಕುಗಳು...'

ಅಡವಿ ಬೆಕ್ಕು ಅಂದ ತಕ್ಷಣ ದಟ್ಟ ಕಾಡುಗಳಲ್ಲಿ ಮಾತ್ರ ವಾಸಿಸುವ ಪ್ರಾಣಿ ಎಂದುಕೊಳ್ಳಬೇಡಿ. ನಾವು ಬಯಲುಸೀಮೆಯ ಹುಲ್ಲುಗಾವಲು, ರೈತರ ಕಬ್ಬಿನ ಗದ್ದೆ, ಭತ್ತದ ಹೊಲಗಳಲ್ಲೂ ಬದುಕುತ್ತೇವೆ.

ನಮ್ಮ ವಿಜಯನಗರ ಜಿಲ್ಲೆಯ ಭಾಗದಲ್ಲಿ ನಾವು ಹೆಚ್ಚಾಗಿ ಕಾಣಿಸಿಕೊಳ್ಳಲು ಕಾರಣವೂ ಇದೆ. ಇಲ್ಲಿನ ಅನೇಕ ಗ್ರಾಮಗಳಲ್ಲಿ ಹೈನುಗಾರಿಕೆಯೇ ಪ್ರಮುಖ ಕಸುಬು. ಹೈನುಗಾರಿಕೆಗಾಗಿ ವರ್ಷಪೂರ್ತಿ ವಿವಿಧ ಬಗೆಯ ಹುಲ್ಲುಗಳನ್ನು ಬೆಳೆಯುತ್ತಾರೆ. ಕಬ್ಬು, ಎಲೆತೋಟಗಳು, ಭತ್ತದ ಗದ್ದೆಗಳು ನಮಗೆ ಸುರಕ್ಷಿತ ಆವಾಸ ಒದಗಿಸುತ್ತವೆ. ಭತ್ತದ ಬೆಳೆಯಿಂದ ಇಲಿ–ಹೆಗ್ಗಣಗಳ ಸಂಖ್ಯೆ ಹೆಚ್ಚಿರುತ್ತದೆ. ಭತ್ತ ಹಾಗೂ ಹಣ್ಣಿನ ಬೆಳೆಗಳಿಗೆ ಬರುವ ಕೀಟಗಳೂ ನಮಗೆ ಆಹಾರವಾಗುತ್ತವೆ. ವರ್ಷಪೂರ್ತಿ ನೀರು ಹಾಗೂ ಆಹಾರದ ಲಭ್ಯತೆ ಇರುವುದರಿಂದ ನಮ್ಮ ಬದುಕು ಸಾಧ್ಯವಾಗುತ್ತಿದೆ. ಗಣಿಗಾರಿಕೆಯ ಒತ್ತಡವೂ ಕಡಿಮೆ ಇರುವ ಕಾರಣ ನಮ್ಮ ಸಂತಾನೋತ್ಪತ್ತಿಗೆ ಅನುಕೂಲವಾಗಿದೆ ಎಂದು ಬಾಚಿಗೊಂಡನಹಳ್ಳಿಯ ವನ್ಯಜೀವಿ ಅಧ್ಯಯನಕಾರ ಹೇಳುತ್ತಾರೆ.

ಮೊನ್ನೆ ಸಂಜೆ ನಮ್ಮೂರಿನ ಸೋಮಣ್ಣನ ಹೊಲದಲ್ಲಿದ್ದ ನೇಪಿಯರ್ ಹುಲ್ಲಿನ ಮಧ್ಯೆ ತಣ್ಣಗೆ ಮಲಗಿದ್ದೆ. ಇದ್ದಕ್ಕಿದ್ದಂತೆ ಬುಸು ಬುಸು ಉಸಿರಾಡುವ ಸದ್ದು ಕೇಳಿಸಿತು. ಹೊಲದ ಬದಿಯಿಂದ ಏನೋ ಓಡಾಡಿದ ಸದ್ದೂ ಕೇಳಿಸಿತು. ಅನುಭವ ಹೇಳುತ್ತಿತ್ತು; ನಾಲ್ಕಾರು ನಾಯಿಗಳು ನನ್ನ ಸುತ್ತುವರಿಯಲು ಯತ್ನಿಸುತ್ತಿವೆ ಎಂದು. ಅವುಗಳಿಗೆ ಇನ್ನೂ ನನ್ನ ನಿಖರ ಜಾಡು ಸಿಕ್ಕಿರಲಿಲ್ಲ. ಅಷ್ಟರಲ್ಲೇ ನಾನು ಎಚ್ಚೆತ್ತುಕೊಂಡೆ.

ಬೇರೆ ದಾರಿಯಿಂದ ತಪ್ಪಿಸಿಕೊಳ್ಳೋಣ ಎಂದು ಯೋಚಿಸಿ ಹುಲ್ಲಿನ ಸಂದಿಯಿಂದ ಹೊರಗೆ ನೋಡಿದೆ. ಅಯ್ಯೋ! ಒಬ್ಬ ಮನುಷ್ಯ ದೊಡ್ಡ ಬಲೆ ಹಿಡಿದು ಹೊಂಚು ಹಾಕಿ ನಿಂತಿದ್ದ. ಆಗ ಅರ್ಥವಾಯಿತು. ನಾಯಿಗಳು ಅವನವೇ. ನಾನು ಓಡುವ ದಾರಿ ಒಂದೇ, ಆದರೆ ಅದು ನೇರವಾಗಿ ಬಲೆಯತ್ತ.

ಅಷ್ಟರಲ್ಲಿ ಸೋಮಣ್ಣನ ಧ್ವನಿ ಕೇಳಿಸಿತು.

'ಹೇಯ್, ಯಾರಪ್ಪಾ ಹೊಲದಾಗ? ಏನ್ಮಾಡ್ತಿದೀಯ?'

ಬೇಟೆಗಾರ ಉತ್ತರಿಸಿದ:

'ಏನಿಲ್ಲ ಧಣಿ, ಬೆಕ್ಕು-ಮೊಲ ಸಿಕ್ಕಾವೇನಂತ ಬಲೆ ಹಾಕಿದ್ನಪ್ಪಾ. ಒಳಗೇ ಏನೋ ಇದ್ದಂಗೈತಿ. ನಾಯಿಗಳು ಸುತ್ತಾಡ್ತಾವೆ'.

ಸೋಮಣ್ಣ ಹೇಳಿದ:

'ಹಂಗಾ... ಸರಿ ಸರಿ, ಗಡಾ ಹಿಡ್ಕೊಂಡು ಹೊರಾಕೋಗು. ಅಡವಿ ಬೆಕ್ಕೇನಾದ್ರು ಸಿಕ್ಕಿದ್ರೆ ಜಗ್ಗಿ ಹಿಡ್ಕೋ'.

ಆ ಮಾತು ಕೇಳಿ ನನಗಂತೂ ಸಿಡಿಲೆರಗಿದಂತಾಯಿತು.

ಸೋಮಣ್ಣ, ನಾವು ನಿನಗೆ ಎಷ್ಟು ಉಪಕಾರ ಮಾಡ್ತೀವಿ ಗೊತ್ತಾ? ನಿನ್ನ ಭತ್ತದ ತೆನೆ ತಿನ್ನಲು ಬರುವ ಇಲಿ–ಹೆಗ್ಗಣಗಳನ್ನು ಹಿಡಿದು ತಿನ್ನುತ್ತೇವೆ. ಬೆಳೆ ನಾಶ ಮಾಡುವ ಕೀಟಗಳನ್ನು ನಿಯಂತ್ರಿಸುತ್ತೇವೆ. ನಿನ್ನ ಹೊಲದ ಸುತ್ತ ಓಡಾಡುವ ಹಾವು-ಚೇಳುಗಳ ಸಂಖ್ಯೆಯನ್ನೂ ಕಡಿಮೆ ಮಾಡುತ್ತೇವೆ. ಪ್ರತಿಯಾಗಿ ನಿನ್ನಿಂದ ಏನನ್ನೂ ಕೇಳಿಲ್ಲ.

ಆದರೆ ನೀನು ಬಳಸುವ ರಾಸಾಯನಿಕ ಗೊಬ್ಬರ, ಕಳೆನಾಶಕ, ವಿಷಕಾರಿ ಔಷಧಗಳಿಂದ ನಮ್ಮ ಬದುಕು ಹಾನಿಯಾಗುತ್ತಿದೆ. ಆದರೂ ನಾವು ನಿನ್ನ ಹೊಲ ಬಿಟ್ಟು ಹೋಗಿಲ್ಲ. ಅಂತಹ ನಮ್ಮನ್ನೇ ಹಿಡಿದುಕೊಂಡು ಹೋಗಲಿ ಎಂದು ಎಷ್ಟು ಸುಲಭವಾಗಿ ಹೇಳಿಬಿಟ್ಟೆಯಲ್ಲ!

ಆದರೆ ಆ ಕ್ಷಣದಲ್ಲಿ ಭಾವೋದ್ವೇಗಕ್ಕೆ ಜಾಗ ಇರಲಿಲ್ಲ. ಜೀವ ಉಳಿಸಿಕೊಳ್ಳುವುದು ಮುಖ್ಯವಾಗಿತ್ತು.

ಇದು ಕೇವಲ ಸೋಮಣ್ಣನೊಬ್ಬನ ಕಥೆಯಲ್ಲ. ನಮ್ಮ ಭಾಗದ ಅನೇಕ ಹೊಲಗಳಲ್ಲಿ ನಡೆಯುವ ಕಥೆ. ವನ್ಯಜೀವಿಗಳ ಕಳ್ಳಬೇಟೆಯನ್ನು ತಡೆಯುವುದು ಅರಣ್ಯ ಇಲಾಖೆಯಷ್ಟೇ ಅಲ್ಲ, ರೈತರ ಜವಾಬ್ದಾರಿಯೂ ಹೌದು. ಯಾಕೆಂದರೆ ಪ್ರಕೃತಿಯೊಂದಿಗೆ ಅತ್ಯಂತ ನಿಕಟವಾಗಿ ಬದುಕುವವರು ಅವರೇ.

ಇರಲಿ, ನಮ್ಮ ಬದುಕಿನ ಬಗ್ಗೆ ಸ್ವಲ್ಪ ಹೇಳ್ತೀನಿ ರೀ.

ಕಂದು ಬಣ್ಣದ ತುಪ್ಪಳ ಹೊಂದಿರುವ ನಮ್ಮ ದೇಹದ ಮೇಲೆ ಸಾಮಾನ್ಯವಾಗಿ ಚುಕ್ಕೆಗಳಿರುವುದಿಲ್ಲ. ಮರಿಗಳೊಂದಿಗೆ ಇದ್ದಾಗ ಮಾತ್ರ ಗುಂಪಿನಂತೆ ಕಾಣುತ್ತೇವೆ; ಉಳಿದ ಸಮಯದಲ್ಲಿ ಒಂಟಿಯಾಗಿಯೇ ಬದುಕುತ್ತೇವೆ. ಡಿಸೆಂಬರ್‌ನಿಂದ ಜೂನ್‌ವರೆಗೆ ನಮ್ಮ ಸಂತಾನೋತ್ಪತ್ತಿಯ ಕಾಲ. ಸುಮಾರು ಅರವತ್ತು ದಿನಗಳ ಗರ್ಭಾವಧಿಯ ನಂತರ ಮರಿಗಳು ಜನಿಸುತ್ತವೆ. ಆರು ತಿಂಗಳವರೆಗೆ ಅವುಗಳನ್ನು ಪೋಷಿಸಿ, ಬೇಟೆ ಮತ್ತು ಬದುಕುಳಿಯುವ ಕೌಶಲ್ಯವನ್ನು ಕಲಿಸಿ ಸ್ವತಂತ್ರವಾಗಿ ಬಿಡುತ್ತೇವೆ.

ಆದರೆ ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಂಕಷ್ಟಗಳು ಹೆಚ್ಚುತ್ತಿವೆ. ಊರಿನ ಸಾಕುಬೆಕ್ಕುಗಳು ಹೊಲಗದ್ದೆಗಳಿಗೆ ಬರುತ್ತಿರುವುದರಿಂದ ಆಹಾರ ಮತ್ತು ಆವಾಸಕ್ಕಾಗಿ ಅವುಗಳೊಂದಿಗೆ ಪೈಪೋಟಿ ನಡೆಸಬೇಕಾಗಿದೆ. ಕೆಲವೊಮ್ಮೆ ಅವುಗಳೊಂದಿಗೆ ಸಂಕರಗೊಂಡು ನಮ್ಮ ಮೂಲ ತಳಿಯ ವೈಶಿಷ್ಟ್ಯವನ್ನೇ ಕಳೆದುಕೊಳ್ಳುವ ಸ್ಥಿತಿ ಎದುರಾಗುತ್ತಿದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಸಾಕುಬೆಕ್ಕುಗಳಿಂದ ಹರಡುವ ರೋಗಗಳು ನಮಗೂ ತಗುಲಿ ಸಾವಿಗೆ ಕಾರಣವಾಗುತ್ತಿವೆ.



ನಮ್ಮನ್ನು ಬೇಟೆಯಾಡುವವರು ಹಸಿವಿನಿಂದ ಅಥವಾ ಆಹಾರದ ಕೊರತೆಯಿಂದ ಹಾಗೆ ಮಾಡುವುದಿಲ್ಲ. ಅದರ ಹಿಂದೆ ಮೂಢನಂಬಿಕೆಗಳಿವೆ. ನಮ್ಮ ಮಾಂಸ ಸೇವಿಸಿದರೆ ನರದೌರ್ಬಲ್ಯ ಕಡಿಮೆಯಾಗುತ್ತದೆ, ಸಂತಾನಶಕ್ತಿ ಹೆಚ್ಚುತ್ತದೆ ಎಂಬ ನಂಬಿಕೆ ಕೆಲವರಲ್ಲಿದೆ. ನಮ್ಮ ಮೂಳೆಗಳನ್ನು ಬಳಸಿ ವಾಮಾಚಾರ ನಡೆಸಿದರೆ ಯಶಸ್ಸು ಸಿಗುತ್ತದೆಯೆಂಬ ಭ್ರಮೆಯೂ ಇದೆ. ನಮ್ಮ ಹಸಿ ರಕ್ತವು ಪಾರ್ಶ್ವವಾಯುವಿನಂತಹ ರೋಗಗಳಿಗೆ ಔಷಧ ಎಂದು ಕೆಲವರು ನಂಬುತ್ತಾರೆ.

ಆದರೆ ಈ ಎಲ್ಲ ನಂಬಿಕೆಗಳಿಗೆ ಯಾವುದೇ ವೈಜ್ಞಾನಿಕ ಪುರಾವೆಗಳು ಇಲ್ಲ. ಇವೆಲ್ಲವೂ ಕಟ್ಟುಕಥೆಗಳಷ್ಟೇ. ಬದಲಾಗಿ ನಮ್ಮ ಮಾಂಸ ಸೇವನೆಯಿಂದ ಮನುಷ್ಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯೇ ಹೆಚ್ಚು. ನಮ್ಮ ದೇಹದಲ್ಲಿರಬಹುದಾದ ಪರೋಪಜೀವಿಗಳು ಮನುಷ್ಯರ ದೇಹ ಪ್ರವೇಶಿಸಿ ರೋಗ ಹರಡಬಹುದು. ಕೃಷಿಯಲ್ಲಿ ಬಳಸುವ ಕ್ರಿಮಿನಾಶಕಗಳ ವಿಷವೂ ನಮ್ಮ ದೇಹದಲ್ಲಿ ಸಂಗ್ರಹವಾಗಿರುವ ಸಾಧ್ಯತೆ ಇರುತ್ತದೆ. ಅದು ಆಹಾರ ಸರಪಳಿಯ ಮೂಲಕ ಮನುಷ್ಯರಿಗೂ ತಲುಪಬಹುದು.

ನಾವು ರೈತರ ಮಿತ್ರರು. ಆದರೂ ನಮ್ಮನ್ನು ಅರ್ಥಮಾಡಿಕೊಳ್ಳುವವರ ಸಂಖ್ಯೆ ಕಡಿಮೆ. ಕಳ್ಳಬೇಟೆ, ಮೂಢನಂಬಿಕೆಗಳು, ಆವಾಸ ನಾಶ, ಅವೈಜ್ಞಾನಿಕ ಅಭಿವೃದ್ಧಿ ಕಾಮಗಾರಿಗಳು ಮತ್ತು ರಾಸಾಯನಿಕ ಕೃಷಿ ಪದ್ಧತಿಗಳು ನಮ್ಮ ಬದುಕಿನ ಮೇಲೆ ದೊಡ್ಡ ಹೊಡೆತ ನೀಡುತ್ತಿವೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ–1972ರ ಪ್ರಕಾರ ಅಡವಿ ಬೆಕ್ಕುಗಳ ಬೇಟೆ, ಸಾಗಣೆ ಅಥವಾ ದಾಸ್ತಾನು ಕಾನೂನುಬಾಹಿರ. ಇಂತಹ ಕೃತ್ಯಗಳಿಗೆ ಶಿಕ್ಷೆಯೂ ಇದೆ. ಆದರೂ ನಮ್ಮ ಮೇಲಿನ ಬೆದರಿಕೆ ಇನ್ನೂ ಸಂಪೂರ್ಣ ನಿಂತಿಲ್ಲ.

ಪ್ರಕೃತಿಯ ಸಮತೋಲನದಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ಪಾತ್ರವಿದೆ. ಹೊಲದಲ್ಲಿ ಓಡಾಡುವ ಒಂದು ಅಡವಿ ಬೆಕ್ಕು ಕಾಣೆಯಾಗುವುದು ಕೇವಲ ಒಂದು ಪ್ರಾಣಿಯ ಅಳಿವಲ್ಲ; ಅದು ಪರಿಸರದ ಒಂದು ಕೊಂಡಿ ತುಂಡಾಗುವುದೂ ಹೌದು. ಆದ್ದರಿಂದ ನಮ್ಮನ್ನು ಉಳಿಸಿ. ನಮ್ಮ ಬದುಕನ್ನು ಉಳಿಸಿ. ಏಕೆಂದರೆ, ನಮ್ಮ ಅಳಿವು ನಿಮ್ಮ ಅಳಿವಿನ ಮುನ್ಸೂಚನೆಯೂ ಆಗಬಹುದು.

ವಂದನೆಗಳು ರೀ... ❖

ಮುನ್ನೋಟ 21-06-2026 ರಿಂದ 27-06-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಹೆಚ್ಚು ಆದಾಯವನ್ನು ಗಳಿಸಬಹುದು. ಹಿರಿಯರ ಸಹಕಾರ ಪಡೆಯುವಿರಿ. ಆಸ್ತಿ ವ್ಯವಹಾರ ಮಾಡುವವರಿಗೆ ಅತ್ಯಧಿಕ ಲಾಭವಿರುತ್ತದೆ. ತಲೆ ನೋವು ಇರುವವರು ಎಚ್ಚರ ವಹಿಸಿ. ಸಂಗಾತಿಯ ಸಹಕಾರದಿಂದ ಸಂಸಾರ ಸರಿದೂಗುತ್ತದೆ. ಕೆಲ ಕೃಷಿಕರಿಗೆ ಅನಿರೀಕ್ಷಿತ ಲಾಭವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಕೆಲಸ ಮಾಡುವ ಹುಮ್ಮಸ್ಸು ತುಂಬಿರುತ್ತದೆ. ಆದಾಯವು ನಿರೀಕ್ಷೆಯ ಹತ್ತಿರ ಬರುತ್ತದೆ. ಗುರು ಹಿರಿಯರ ಸಹಕಾರ ದೊರೆಯುತ್ತದೆ. ಬೀಜಗಳ ತಳಿ ಸಂರಕ್ಷಣೆ ಮಾಡುವವರಿಗೆ ಗೌರವ ದೊರೆಯುತ್ತದೆ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ಸಂಗಾತಿ ಸಹಕಾರ ಕಡಿಮೆಯಾಗಬಹುದು. ಹಿರಿಯರ ಹಣ ಅನಿರೀಕ್ಷಿತವಾಗಿ ದೊರಕುವ ಸಾಧ್ಯತೆ ಇದೆ. ಸಾಂಪ್ರದಾಯಿಕ ಕೃಷಿಯಲ್ಲಿ ಹೆಚ್ಚು ಲಾಭವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆದಾಯವು ನಿರೀಕ್ಷೆಗೆ ಮೀರಿರುತ್ತದೆ. ನಿಮ್ಮ ಹಿರಿಯರು ಈಗ ಕಾರ್ಯಕ್ರಮಗಳಿಗೆ ಸಹಾಯ ಮಾಡುವರು. ಆಸ್ತಿ ಕೊಳ್ಳುವ ಪ್ರಯತ್ನದಲ್ಲಿ ಮುಂದುವರೆಯಬಹುದು. ಮೂಳೆ ಸಂಬಂಧಿತ ತೊಂದರೆಗಳು ಕೆಲವರನ್ನು ಕಾಡಬಹುದು. ಸಂಗಾತಿಯ ಆರ್ಥಿಕ ಆದಾಯ ಹೆಚ್ಚುತ್ತದೆ. ಸಂಗಾತಿಯ ಜತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿದೆ. ಉದ್ಯೋಗ ಸ್ಥಳದಲ್ಲಿ ಹಿತಶತ್ರುಗಳು ಕಡಿಮೆಯಾಗುವರು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಎಲ್ಲವೂ ತಿಳಿದ ವಿದ್ವಾಂಸರಂತೆ ವರ್ತಿಸುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳು ಕೇವಲ ಲಾಭಕ್ಕಾಗಿ ಮಾತ್ರ ನಿಮ್ಮ ಬಳಿಗೆ ಬರುವರು. ರಿಯಲ್ ಎಸ್ಟೇಟ್‌ನಲ್ಲಿ ಹೆಚ್ಚು ಲಾಭವಿರುತ್ತದೆ. ಕೃಷಿ ಸಂಬಂಧಿತ ವಿಷಯಗಳನ್ನು ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇದೆ. ನೀರಿನ ವ್ಯತ್ಯಾಸದಿಂದ ಆರೋಗ್ಯ ತಪ್ಪಬಹುದು. ಸಂಗಾತಿಯು ಮಾಡುವ ಕೆಲಸಗಳಿಗೆ ಹೆಚ್ಚು ಲಾಭ ದೊರೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮಡುಗಟ್ಟಿದ್ದ ಮನಸ್ಸಿನಲ್ಲಿ ಹೊಸ ಹುರುಪು ಮೂಡುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಆಸ್ತಿಕೊಳ್ಳುವ ಮುಂಚೆ ಅದಕ್ಕೆ ತಕ್ಕ ಹಣಕಾಸು ವ್ಯವಸ್ಥೆ ಮಾಡಿಕೊಳ್ಳಿ. ವಿದ್ಯಾರ್ಥಿಗಳಿಗೆ ಕಡಿಮೆ ಮಟ್ಟದ ಫಲಿತಾಂಶ ಬರುವ ಸಾಧ್ಯತೆ ಇದೆ. ಕೆಲವರಿಗೆ ಪಾದಗಳಲ್ಲಿ ನೋವು ಕಾಣಿಸಬಹುದು. ವಿದೇಶದಲ್ಲಿರುವ ಸಂಗಾತಿಯನ್ನು ಸೇರಲು ಈಗ ಅವಕಾಶಗಳು ದೊರೆಯುತ್ತವೆ. ಕೃಷಿ ಸಂಶೋಧಕರಿಗೆ ಬೆಳವಣಿಗೆ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ಮಾತಿನಲ್ಲಿ ವ್ಯಾವಹಾರಿಕತೆ ಇರುತ್ತದೆ. ಆದಾಯವು ಚೇತರಿಕೆಯ ಹಾದಿಯಲ್ಲಿರುತ್ತದೆ. ಬಂಧುಗಳು ಸಹಕಾರ ನೀಡುವುದು ಕಷ್ಟ. ಮಕ್ಕಳ ಬಗ್ಗೆ ಗಮನಕೊಡಿರಿ. ಕೀಲುಗಳಲ್ಲಿ ನೋವುಗಳು ಕಾಣಿಸಬಹುದು. ಸಂಗಾತಿಯ ದುಡಿಮೆ ಸಂಸಾರಕ್ಕೆ ಸಾಲುವುದಿಲ್ಲ. ಕೃಷಿಯಿಂದ ಅಪೇಕ್ಷಿತ ಆದಾಯ ಬರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಮಾತು, ಕೃತಿ ಎರಡೂ ಒಂದಾಗಿದ್ದರೆ ಒಳ್ಳೆಯದು, ಇಲ್ಲವಾದಲ್ಲಿ ಜನರ ನಂಬಿಕೆ ಕಳೆದುಕೊಳ್ಳುವಿರಿ. ಆದಾಯವು ಕಡಿಮೆ ಇರುತ್ತದೆ. ಬಂಧುಗಳ ಸಹಕಾರ ಪಡೆಯಲು ಪ್ರಯತ್ನ ಮಾಡಲೇಬೇಕು. ಆಸ್ತಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ಇರುವುದಿಲ್ಲ. ವಿದೇಶಿ ಮಕ್ಕಳಿಗೆ ಆನ್‌ಲೈನ್ ಪಾಠವನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಕಾಲು ನೋವು ಕಾಣಿಸಬಹುದು. ಸಂಗಾತಿಯ ಬಿರುನುಡಿಗಳು ಮುಜುಗರ ತರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಅತಿಯಾದ ಆಲಸಿತನ ಮುಳುವಾಗಬಹುದು. ಆದಾಯ ತಕ್ಕಮಟ್ಟಿಗೆ ಇರುತ್ತದೆ. ನಿಮ್ಮ ನಡವಳಿಕೆಯಿಂದ ಜನರ ಗಮನ ಸೆಳೆಯುವಿರಿ. ವಿದೇಶದಲ್ಲಿರುವವರು ಆಸ್ತಿ ಕೊಳ್ಳುವಾಗ ಎಚ್ಚರವಹಿಸಿರಿ. ಸಾಂಪ್ರದಾಯಿಕ ಕೃಷಿಕರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಸಂಗಾತಿ ಆರೋಗ್ಯದಲ್ಲಿ ಏರಿಳಿತ ಆಗಬಹುದು. ಹಿರಿಯರು ಆರ್ಥಿಕ ಸಹಕಾರ ನೀಡುವರು. ವೃತ್ತಿ ಸ್ಥಳದಲ್ಲಿ ತೊಂದರೆಗಳು ಕಡಿಮೆ ಆಗುತ್ತವೆ. ಸರ್ಕಾರಿ ಗುತ್ತಿಗೆದಾರರಿಗೆ ಸ್ವಲ್ಪ ಹಣ ಬರಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಹಿರಿಯರಿಂದ ವ್ಯವಹಾರ ಜಾಣ್ಮೆ ಕಲಿಯುವಿರಿ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಂಧುಗಳು ತಮ್ಮ ಕೆಲಸದ ನಂತರ ವಿರೋಧಿಸುವರು. ಕೃಷಿಭೂಮಿಯನ್ನು ಅಭಿವೃದ್ಧಿಪಡಿಸುವವರಿಗೆ ಉತ್ತಮ ಅವಕಾಶಗಳಿವೆ. ಬೆಳ್ಳಿ ವ್ಯಾಪಾರಿಗಳಿಗೆ ಏರಿಳಿತವಾಗಬಹುದು. ತಾಯಿಯಿಂದ ಸಹಾಯ ದೊರೆಯುತ್ತದೆ. ವಂಶಪಾರಂಪರ್ಯ ವಿದ್ಯೆಯಿಂದ ಅನುಕೂಲವಿದೆ. ವೃತ್ತಿಯಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಬಹಳ ಪರಾಕ್ರಮದಿಂದ ಇರುವಿರಿ. ಆದಾಯ ಕಡಿಮೆ ಇದ್ದರೂ ಸಮಯೋಚಿತವಾಗಿ ತೂಗಿಸುವಿರಿ. ಭೂಮಿ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಹಣ ದೊರೆಯುತ್ತದೆ. ಕಟ್ಟಡ ಕಾರ್ಮಿಕರಿಗೆ ಆದಾಯ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಕಾಲ. ಸಂಗಾತಿಯ ವ್ಯವಹಾರಗಳಲ್ಲಿ ಲಾಭ ಹೆಚ್ಚು. ಚಿನ್ನದ ವ್ಯಾಪಾರಿಗಳಿಗೆ ಆದಾಯ ಹೆಚ್ಚುತ್ತದೆ. ಪುಸ್ತಕ ಪ್ರಕಾಶಕರಿಗೆ ಉತ್ತಮ ಬೇಡಿಕೆ ಇರುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಯುವಕರಿಗೆ ವಿದೇಶಿ ವ್ಯಾಮೋಹ ಬಹಳವಾಗಿರುತ್ತದೆ. ಬಂಧುಗಳು ಸ್ವಲ್ಪ ಮಟ್ಟಿನ ಸಹಾಯಮಾಡುವರು. ಗಣಿತ ವಿದ್ಯಾರ್ಥಿಗಳಿಗೆ ಅತಿಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ. ಸ್ತ್ರೀಯರಿಗೆ ಹೊಟ್ಟೆಯಲ್ಲಿ ತೊಂದರೆ ಕಾಣಿಸಬಹುದು. ಪ್ರೀತಿ ಪ್ರೇಮದ ಬಗ್ಗೆ ಎಚ್ಚರವಾಗಿರಿ, ಇದು ಈಗ ದಾರಿ ತಪ್ಪಿಸಬಹುದು. ಅದಿರು ಮಾರಾಟಗಾರರಿಗೆ ನಿರೀಕ್ಷೆ ಮೀರಿದ ಆದಾಯ ಸಿಗಬಹುದು. ಹಿರಿಯರಿಂದ ಸಿಗುತ್ತಿದ್ದ ಸಹಾಯ ನಿಲ್ಲುವ ಸಾಧ್ಯತೆಗಳಿವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಎಲ್ಲರನ್ನು ಅಸಡ್ಡೆಯಾಗಿ ಕಾಣುವಿರಿ, ಇದು ಒಳಿತಲ್ಲ. ಆದಾಯವು ಮಂದಗತಿಯಲ್ಲಿರುತ್ತದೆ. ಬಂಧುಗಳ ವಿರೋಧ ಇರುತ್ತದೆ. ಸಂಘ ಸಂಸ್ಥೆಗಳಿಂದ ಆಸ್ತಿಯನ್ನು ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗುವ ಸಾಧ್ಯತೆಗಳಿವೆ. ಕಣ್ಣಿನ ತೊಂದರೆಯ ಬಗ್ಗೆ ಹೆಚ್ಚು ಕಾಳಜಿವಹಿಸಿರಿ. ಬೆಳ್ಳಿ ಕೆಲಸ ಮಾಡುವವರಿಗೆ ಬೇಡಿಕೆ ಇರುತ್ತದೆ.

ಪದಬಂಧ 2949



ಮೇಲಿನಿಂದ ಕೆಳಕ್ಕೆ

1.ಗರ್ಭದ ಒಂಬತ್ತು ತಿಂಗಳು 4
2. ಜಲಕ್ಕೆ ಪ್ರಾಸವಾಗುವ ಭೂಮಿ 2
3. ನಮ್ಮ ರಾಷ್ಟ್ರದೇವಿಯ ಸುಪುತ್ರ 5
4. ಯಾದವರ ಕುವರ 5
6. ಅರುಂಧತಿಯ ಶ್ರೇಷ್ಠ ಪತಿ ಈ ಮಹರ್ಷಿ 3
9. ಮನ್ಮಥನ ಸತಿಯಂತಹ ಸುಂದರ ಆಕಾರ 4
10. ಎಂದೆಂದೂ ವ್ಯಾಮೋಹಕ್ಕೊಳಪಡಿಸುವ ಪರರಾಷ್ಟ್ರ 3
11. ಬದುಕಿನ ಪರ್ಯಂತ ಅಳೆಯುವ ಮರ್ಯಾದೆ 4
12. ಆಡುವ, ಬರೆಯುವ ನುಡಿಯ ಮೇಲಿರುವ ಮಮಕಾರ 5
13. ಬೆಳ್ಳಿಯಂತೆ ಹೊಳೆಯುವ ಪರ್ವತ 5
14. ಸ್ಯಮಂತಕ ಮಣಿಗಾಗಿ ಕೊಲೆಯಾದ ರಾಜ 3
15. ಮೂರು ಲೋಕಗಳನ್ನು ಕ್ರಮಿಸಿ ಜಯಸಿದವ 4
18. ಬೆಲೆಕಟ್ಟಲಾಗದ ಹಾಸ 2

ಎಡದಿಂದ ಬಲಕ್ಕೆ

1. ಅಭಿಮಾನದಿಂದ ಹೇಳಿಕೊಳ್ಳುವ ಸ್ವಂತಿಕೆಯ ಗೃಹ 4
3. ಆಕಾಶದ ಸೂರ್ಯನಿಗೆ ಇಷ್ಟವಾದವಳು 4
5. ಉಪ್ಪಿನ ರುಚಿಯನ್ನು ತೋರಿಸುವ ರಾಕ್ಷಸ 5
7. ಕೇರಳದ ಶ್ರೇಷ್ಠವಾದ ಹಬ್ಬ 4
8. ಯುದ್ಧದಲ್ಲಿ ಉತ್ತಮೋತ್ತಮ 5
10. ಕೆಲಸದಿಂದ ನಿವೃತ್ತರಾದವರ ಬದುಕು 6
12. ಸೋದರಿ ಪತಿಯ ಅಂತರಂಗ ಮಿಡಿದು ಅನ್ಯರ ಅಧೀನ 6
14. ನಮ್ಮ ರಾಷ್ಟ್ರಾಡಳಿತದ ಸೂತ್ರಹಿಡಿದ ಪ್ರಮುಖ ರೂವಾರಿ 5
16. ಪಕ್ಷದ ಒಗ್ಗಟ್ಟನ್ನು ಛಿದ್ರಗೊಳಿಸುವ ಓಟು 4
17. ಕಾವ್ಯಮಯವಾಗಿ ಬೆಟ್ಟ ಕಾಡು... 5
19. ಒಂಬತ್ತು ರೀತಿಯ ಹೊಸ ಐಶ್ವರ್ಯ 4
20. ದೇಶದ ರಾಜಧಾನಿಗೆ ಹತ್ತಿರ ಈ ಮಾರ್ಗದರ್ಶಕನ ಊರು 4

ಪದಬಂಧ ಉತ್ತರ -2948

ಮೇಲಿಂದ ಕೆಳಕ್ಕೆ

1. ಮಕರ 2.ತ್ರಿಪುರ 3.ಕಳಸ 5.ಸುರನಾಯಕ 7.ದಿನಗಳಿಕೆ 9.ಗ್ರಹಗತಿ 11.ರಾಮರಾವಣ 13.ಶತರುದ್ರ 14.ಪುರುಷೋತ್ತಮ 20.ಸುಮತಿ 21.ಗುಲಾಮ 22.ವರಾಹ

ಎಡದಿಂದ ಬಲಕ್ಕೆ

1. ಮಧುರಮೈತ್ರಿ 3.ಕರ್ನಾಟಕ 4.ಪುನರ್ವಸು 6.ರವಿಚಂದಿರ 8.ಸಮಗ್ರ 10.ಹಜಾರಾ 12.ಗಣೇಶ 14.ಪುನ್ನಾಗ 15.ಮರಳಿ 16.ತನಕ 17.ತಿಸರಾ 18.ಕೆಸರು 19.ದ್ರವಿಸು 21.ಗುಣಸ್ವಭಾವ 23.ಮಣಿಮಾಲಾ 24.ರಾಜನೀತಿ 25.ಮನೋನಿಗ್ರಹ

ಟನ್‌ಗಟ್ಟಲೆ ಕಲ್ಲು ಜೋಡೆತ್ತುಗಳ ಜೋರು





ಜೋಡೆತ್ತಿನ ಕಸರತ್ತು

ರಾಯಚೂರಿನ ರಾಜೇಂದ್ರ ಗಂಜ್‌ನಲ್ಲಿ ನಡೆಯುವ ಮುಂಗಾರು ಹಬ್ಬ ಹಲವು ಆಕರ್ಷಣೆಗಳನ್ನು ಒಳಗೊಂಡಿದೆ. ಜೋಡೆತ್ತುಗಳ ಕಲ್ಲು ಎಳೆಯುವ ಸ್ಪರ್ಧೆ, ಕುಸ್ತಿ ಹಾಗೂ ಜನಪದ ಕಲಾ ಪ್ರದರ್ಶನಗಳೊಂದಿಗೆ ನಡೆಯುವ ಈ ಉತ್ಸವದಲ್ಲಿ ರೈತ ಸಂಸ್ಕೃತಿಯ ವೈಭವ ಅನಾವರಣಗೊಳ್ಳುತ್ತದೆ.



ಕಲ್ಲು ಎಳೆದು ಗುರಿ ತಲುಪಿದ ಜೋಡೆತ್ತುಗಳು

• ಈರಣ್ಣ ಬೆಂಗಾಲಿ

ಬಾರುಕೋಲು ಸದ್ದು ಕೇಳುತ್ತಿದ್ದಂತೆ ಮೈದಾನದಲ್ಲಿದ್ದ ಜನಸ್ತೋಮದ ಗಮನ ಒಂದೇ ಕಡೆ ನೆಟ್ಟಿತು. ನೊಗಕ್ಕೆ ಸರಪಳಿಯಿಂದ ಕಟ್ಟಿದ ಭಾರವಾದ ಕಲ್ಲನ್ನು ಜಗ್ಗಿಕೊಂಡು ಜೋಡೆತ್ತುಗಳು ಮುನ್ನುಗ್ಗಿದವು. ‘ಕಾಳ... ಭೈರ... ಓಡು!’ ಎಂದು ರೈತರು ತಮ್ಮ ಎತ್ತುಗಳನ್ನು ಹುರಿದುಂಬಿಸಿದರು. ಸುತ್ತಲೂ ಶಿಳ್ಳೆ, ಕೇಕೆ, ಚಪ್ಪಾಳೆಗಳ ಸದ್ದು. ಬ್ಯಾರಿಕೇಡ್‌ಗಳ ಹಿಂದೆ ನಿಂತವರು, ಗೋದಾಮು ಮತ್ತು ಅಂಗಡಿಗಳ ಮಾಳಿಗೆಗಳ ಮೇಲೆ ಕುಳಿತವರು ಉಸಿರು ಬಿಗಿಹಿಡಿದು ಸ್ಪರ್ಧೆಯನ್ನು ವೀಕ್ಷಿಸುತ್ತಿದ್ದರು. ಓಟ ಮುಗಿಸಿ ದಣಿದ ಎತ್ತುಗಳ ಮೈಯನ್ನು ಮಾಲೀಕರು ನೇವರಿಸುತ್ತಿದ್ದರು; ಕೊಡದಿಂದ ನೀರು ಸುರಿದು ಅವುಗಳನ್ನು ತಂಪಾಗಿಸುತ್ತಿದ್ದರು. ರಾಯಚೂರಿನ ಮುಂಗಾರು ಸಾಂಸ್ಕೃತಿಕ ಹಬ್ಬದ ಪ್ರಮುಖ ಆಕರ್ಷಣೆಯಾದ ಜೋಡೆತ್ತುಗಳ ಕಲ್ಲು ಎಳೆಯುವ ಸ್ಪರ್ಧೆಯ ಚಿತ್ರಣ ಇದು.

ಪ್ರತಿವರ್ಷ ಕಾರಹುಣ್ಣಿಮೆಯ ಅಂಗವಾಗಿ ರಾಯಚೂರಿನ ಮುನ್ನೂರುಕಾಪು ಬಲಿಜ ಸಮಾಜ ರಾಜೇಂದ್ರ ಗಂಜ್ ಆವರಣದಲ್ಲಿ ಮುಂಗಾರು ಸಾಂಸ್ಕೃತಿಕ ಹಬ್ಬವನ್ನು ಆಯೋಜಿಸುತ್ತದೆ. ಮೂರು ದಿನಗಳು ನಡೆಯುವ ಈ ಹಬ್ಬವು ಕೇವಲ ಒಂದು ಸಮಾಜದ ಕಾರ್ಯಕ್ರಮವಾಗಿ ಉಳಿದಿಲ್ಲ; ರಾಯಚೂರಿನ ಸಾಂಸ್ಕೃತಿಕ ಗುರುತಾಗಿ ಬೆಳೆದಿದೆ.

ಹಬ್ಬದ ಕೇಂದ್ರಬಿಂದುವೇ ಜೋಡೆತ್ತುಗಳ ಕಲ್ಲು ಎಳೆಯುವ ಸ್ಪರ್ಧೆ. ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ರೈತರು ತಮ್ಮ ಜೋಡೆತ್ತುಗಳೊಂದಿಗೆ ಆಗಮಿಸುತ್ತಾರೆ. ಕಿಲಾರಿ, ಒಂಗೋಲ್, ದೇವಣಿ ಸೇರಿದಂತೆ ವಿವಿಧ ತಳಿಗಳ ಬೃಹತ್ ಗಾತ್ರದ ಎತ್ತುಗಳು ಟ್ರ್ಯಾಕ್‌ನಲ್ಲಿ ಕಾಣಿಸಿಕೊಂಡಾಗ ಪ್ರೇಕ್ಷಕರ ಗಮನ ಸೆಳೆಯುತ್ತವೆ.

ಈ ಸ್ಪರ್ಧೆಗಾಗಿ ರೈತರು ತಿಂಗಳುಗಟ್ಟಲೆ ಸಿದ್ಧತೆ ನಡೆಸುತ್ತಾರೆ. ಎತ್ತುಗಳಿಗೆ ವಿಶೇಷ ಆಹಾರ ನೀಡುವುದು, ನಿಯಮಿತ ತಾಲೀಮು ಮಾಡಿಸುವುದು, ಆರೋಗ್ಯದ ಮೇಲೆ ನಿಗಾ ವಹಿಸುವುದು ಸಾಮಾನ್ಯ ಸಂಗತಿಯಲ್ಲ. ಅನೇಕ ರೈತರಿಗೆ ಸ್ಪರ್ಧೆಯಲ್ಲಿ ಗೆಲುವು ಸಾಧಿಸುವುದು ಕೇವಲ ಬಹುಮಾನದ ಪ್ರಶ್ನೆಯಲ್ಲ; ಅದು ಗೌರವ ಮತ್ತು ಪ್ರತಿಷ್ಠೆಯ ವಿಷಯ.

ಸ್ಪರ್ಧೆಯು ಮೂರು ಹಂತಗಳಲ್ಲಿ ನಡೆಯುತ್ತದೆ. ಮೊದಲ ದಿನ ಒಂದೂವರೆ ಟನ್, ಎರಡನೇ ದಿನ ಎರಡು ಟನ್ ಹಾಗೂ ಮೂರನೇ ದಿನ ಎರಡೂವರೆ ಟನ್ ಕಲ್ಲುಗಳನ್ನು ಎಳೆಯುವ ಸ್ಪರ್ಧೆ ಜರುಗುತ್ತದೆ. ವಿವಿಧ ಹಂತಗಳಲ್ಲಿ ಸಾವಿರಾರು ರೂಪಾಯಿಗಳ ನಗದು ಬಹುಮಾನಗಳನ್ನು ಘೋಷಿಸಲಾಗಿದ್ದು, ದೇಶದ ವಿವಿಧ ಭಾಗಗಳಿಂದ ಸ್ಪರ್ಧಿಗಳನ್ನು ಆಕರ್ಷಿಸುತ್ತದೆ.

ಈ ಹಬ್ಬವನ್ನು ಆಯೋಜಿಸುವುದು ಸುಲಭದ ಕೆಲಸವಲ್ಲ. ಲಕ್ಷಾಂತರ ರೂಪಾಯಿ ವೆಚ್ಚದ ಈ ಉತ್ಸವಕ್ಕಾಗಿ ತಿಂಗಳುಗಳ ಮುಂಚೆಯೇ ಸಿದ್ಧತೆ ಆರಂಭವಾಗುತ್ತದೆ. ಸ್ಪರ್ಧೆಗೆ ಆಗಮಿಸುವ ರೈತರಿಗೆ ಊಟ, ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಎತ್ತುಗಳಿಗೆ ವಿಶ್ರಾಂತಿ ಮತ್ತು ರಕ್ಷಣೆಯ ವ್ಯವಸ್ಥೆಯೂ ಇರುತ್ತದೆ. ಮುನ್ನೂರುಕಾಪು ಸಮಾಜದ ಹಿರಿಯರು, ಯುವಕರು ಮತ್ತು ಸದಸ್ಯರು ಒಗ್ಗಟ್ಟಿನಿಂದ ಹಬ್ಬವನ್ನು ಯಶಸ್ವಿಗೊಳಿಸುತ್ತಾರೆ.

ಈ ಉತ್ಸವದ ಹಿಂದೆ ಒಂದು ಇತಿಹಾಸವೂ ಇದೆ. ಸ್ವಾತಂತ್ರ್ಯ ಹೋರಾಟಗಾರ ಗಂಗನಗಾರ ನಾಗಣ್ಣ ಅವರ ಕಾಲದಲ್ಲಿ ಎತ್ತುಗಳ ಮೆರವಣಿಗೆಯ ರೂಪದಲ್ಲಿ ಆರಂಭವಾದ ಸಂಪ್ರದಾಯವು, 2000ನೇ ಇಸವಿಯಲ್ಲಿ ಸಮಾಜದ ಮುಖಂಡ ಎ. ಪಾಪಾರೆಡ್ಡಿ ಅವರ ನೇತೃತ್ವದಲ್ಲಿ ಹೊಸ ರೂಪ ಪಡೆದುಕೊಂಡಿತು. ರೈತರ ಜೀವನದಲ್ಲಿ ಎತ್ತುಗಳ ಪಾತ್ರವನ್ನು ಸ್ಮರಿಸುವ ಉದ್ದೇಶದಿಂದ ಕಲ್ಲು ಎಳೆಯುವ ಸ್ಪರ್ಧೆಯನ್ನು ಸೇರಿಸಲಾಯಿತು. ಅಂದಿನಿಂದ ಈ ಹಬ್ಬವು ವರ್ಷದಿಂದ ವರ್ಷಕ್ಕೆ ಬೆಳೆಯುತ್ತಾ ಬಂದಿದೆ.

‘ಈ ಸ್ಪರ್ಧೆ ಆರಂಭವಾದಾಗಿನಿಂದಲೇ ನಮ್ಮ ಎತ್ತುಗಳೊಂದಿಗೆ ಭಾಗವಹಿಸುತ್ತಿದ್ದೇನೆ. ಇದುವರೆಗೆ ಹಲವು ಬಾರಿ ಎರಡನೇ ಹಾಗೂ ಮೂರನೇ ಸ್ಥಾನ ಪಡೆದಿದ್ದೇನೆ. ಮೊದಲ ಬಹುಮಾನ ಗೆಲ್ಲುವ ಕನಸು ಇನ್ನೂ ಜೀವಂತವಾಗಿದೆ’ ಎಂದು ರಾಮದುರ್ಗದ ರೈತ ಆಂಜನೇಯ ಸುಖಮುನಿ ಹೇಳುತ್ತಾರೆ.

‘ನಮ್ಮ ಎತ್ತುಗಳು ವರ್ಷಪೂರ್ತಿ ಕೃಷಿ ಕೆಲಸ ಮಾಡುತ್ತವೆ. ಅವುಗಳಿಗೆ ಹುರುಳಿ ಸೇರಿದಂತೆ ಪೌಷ್ಟಿಕ ಆಹಾರ ನೀಡುತ್ತೇವೆ. ನಿಯಮಿತವಾಗಿ ಮೇಯಿಸಿ, ಭಾರದ ಕಲ್ಲು ಎಳೆಯುವ ತಾಲೀಮನ್ನೂ ಮಾಡಿಸುತ್ತೇವೆ. ವರ್ಷಪೂರ್ತಿ ದುಡಿಯುವ ಎತ್ತುಗಳಿಗಾಗಿ ಇಂತಹ ದೊಡ್ಡ ಮಟ್ಟದ ಸ್ಪರ್ಧೆ ಮತ್ತು ನಗದು ಬಹುಮಾನ ವ್ಯವಸ್ಥೆ ಮಾಡಿರುವುದು ರೈತರಿಗೆ ಉತ್ತೇಜನ ನೀಡುತ್ತದೆ’ ಎನ್ನುತ್ತಾರೆ ಅವರು.

ಕಲ್ಲು ಎಳೆಯುವ ಸ್ಪರ್ಧೆಯಷ್ಟೇ ಅಲ್ಲದೆ, ಕುಸ್ತಿ, ಭಾರದ ಗುಂಡುಕಲ್ಲು ಎತ್ತುವ ಸ್ಪರ್ಧೆ, ಉಸುಕಿನ ಚೀಲ ಎತ್ತುವ ಸ್ಪರ್ಧೆ, ಅಲಂಕೃತ ಎತ್ತುಗಳ ಮೆರವಣಿಗೆ, ನಾಟಕ, ವೀರಗಾಸೆ, ಡೊಳ್ಳು ಕುಣಿತ, ಕಂಸಾಳೆ, ಕೀಲು ಕುದುರೆ ಕುಣಿತ ಸೇರಿದಂತೆ ಹಲವು ಗ್ರಾಮೀಣ ಕ್ರೀಡೆಗಳು ಮತ್ತು ಕಲಾ ಪ್ರದರ್ಶನಗಳು ನಡೆಯುತ್ತವೆ. ಹೀಗಾಗಿ ಮುಂಗಾರು ಹಬ್ಬವು ಕೇವಲ ಮನರಂಜನೆಯ ಕಾರ್ಯಕ್ರಮವಲ್ಲ; ಗ್ರಾಮೀಣ ಸಂಸ್ಕೃತಿ, ರೈತ ಜೀವನ ಮತ್ತು ಸಮುದಾಯದ ಒಗ್ಗಟ್ಟಿನ ಸಂಭ್ರಮವಾಗಿದೆ.

ಟ್ರ್ಯಾಕ್ಟರ್‌ಗಳು ಹೊಲಗಳಲ್ಲಿ ಎತ್ತುಗಳ ಸ್ಥಾನವನ್ನು ಬಹುಪಾಲು ಆಕ್ರಮಿಸಿಕೊಂಡಿದ್ದರೂ, ರೈತನ ಮನಸ್ಸಿನಲ್ಲಿ ಎತ್ತುಗಳ ಬಾಂಧವ್ಯ ಇನ್ನೂ ಜೀವಂತವಾಗಿದೆ. ಆ ಬಾಂಧವ್ಯವನ್ನು, ರೈತರ ಶ್ರಮವನ್ನು ಮತ್ತು ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ವರ್ಷಕ್ಕೊಮ್ಮೆ ನೆನಪಿಸುವ ಹಬ್ಬವೇ ರಾಯಚೂರಿನ ಮುಂಗಾರು ಸಾಂಸ್ಕೃತಿಕ ಹಬ್ಬ. ❖

...ಒಡಲಧ್ವನಿಯ ಪಯಣ

10ನೇ ಪುಟದಿಂದ..

‘ನಮ್ಮ ಮನವಿಗೆ ಸ್ಪಂದಿಸಿದ ಸಾರಿಗೆ ಅಧಿಕಾರಿಗಳು ತುಂಬಾ ಸಹಾಯ ಮಾಡಿದರು. ಈಗ ನಮ್ಮೂರಿನಿಂದಲೇ ಬಸ್ ಸಿಗುವುದರಿಂದ ಸಮಯ, ಹಣ ಮತ್ತು ಶ್ರಮ–ಮೂರೂ ಉಳಿಯುತ್ತಿವೆ’ ಎಂದು ಭುವನೇಶ್ವರಿ ಹೇಳುತ್ತಾರೆ.

ಬಸ್ ವಿಜಯಪುರದತ್ತ ಸಾಗುತ್ತಿದ್ದಂತೆ ಮಹಿಳೆಯರ ಮಾತುಗಳೂ ಮುಂದುವರಿದವು. ಕೆಲವರು ಮುಂದಿನ ಸಂತೆಗೆ ಎಷ್ಟು ರೊಟ್ಟಿ ಮಾಡಬೇಕು ಎಂಬ ಲೆಕ್ಕ ಹಾಕುತ್ತಿದ್ದರು. ಹಲವರು ಕಳೆದ ವಾರದ ಮಾರಾಟದ ಬಗ್ಗೆ ಮಾತನಾಡುತ್ತಿದ್ದರು. ತಾಯಿಯ ಮಡಿಲಲ್ಲಿ ಮಗು ನಿದ್ರೆಗೆ ಜಾರಿತ್ತು. ಕೆಲವರು ತಂದಿದ್ದ ಸಜ್ಜೆ ರೊಟ್ಟಿ ಮತ್ತು ಶೇಂಗಾ ಚಟ್ನಿಯನ್ನು ಹಂಚಿಕೊಂಡು ತಿನ್ನುತ್ತಿದ್ದರು. ರಾತ್ರಿ ಪೂರ್ತಿ ಪ್ರಯಾಣದ ಆಯಾಸಕ್ಕಿಂತಲೂ ಮುಂದಿನ ದಿನದ ವ್ಯಾಪಾರದ ಉತ್ಸಾಹವೇ ಅವರ ಮುಖದಲ್ಲಿ ಹೆಚ್ಚಾಗಿ ಕಾಣಿಸುತ್ತಿತ್ತು.

‘ಪ್ರತಿ ಶನಿವಾರ ಬೆಂಗಳೂರಿಗೆ ಹೋಗಿ, ಭಾನುವಾರದ ಸಂತೆಯಲ್ಲಿ ಮಾರಾಟ ಮಾಡಿ, ರಾತ್ರಿ ಹೊರಟು ಸೋಮವಾರ ಬೆಳಿಗ್ಗೆ ಊರಿಗೆ ಮರಳುತ್ತೇವೆ. ವಾರಕ್ಕೆ ಒಬ್ಬೊಬ್ಬರು ಏಳು ಸಾವಿರ ರೂಪಾಯಿಗೂ ಹೆಚ್ಚು ಆದಾಯ ಗಳಿಸುತ್ತಿದ್ದೇವೆ’ ಎಂದು ಒಡಲಧ್ವನಿ ಸಂಘಟನೆಯ ಅಧ್ಯಕ್ಷೆ ಇಂದು ಹೊಸಮನಿ ಹೇಳುತ್ತಾರೆ.

ಒಂದು ಕಾಲದಲ್ಲಿ ₹20ಕ್ಕೆ ಮಾರುತ್ತಿದ್ದ ಶೇಂಗಾ ಹೋಳಿಗೆಯನ್ನು ಈಗ ₹30ಕ್ಕೆ ಮಾರುತ್ತಿದ್ದಾರೆ. ಬಿಸಿ ರೊಟ್ಟಿ ₹25, ಕಡಕ್ ರೊಟ್ಟಿ ಮತ್ತು ಸಜ್ಜೆ ರೊಟ್ಟಿ ₹20ಕ್ಕೆ ಮಾರಾಟವಾಗುತ್ತಿದೆ. ‘ನಮ್ಮ ಭಾಗದಲ್ಲಿ ₹70–80ಕ್ಕೆ ಸಿಗುವ ಕೆಲವು ಜವಾರಿ ತರಕಾರಿಗಳು ಬೆಂಗಳೂರಿನಲ್ಲಿ ₹150ರವರೆಗೂ ಮಾರಾಟವಾಗುತ್ತವೆ. ಅಲ್ಲಿನ ಜನರಿಗೆ ಇವು ತುಂಬಾ ಇಷ್ಟ’ ಎಂದು ಲಕ್ಷ್ಮೀ ದ್ರಾವಿಡ ವಿವರಿಸುತ್ತಾರೆ.



ಬಸ್‌ನಲ್ಲಿ ಒಡಲಧ್ವನಿ ಮಹಿಳೆಯರ ಸಂಭಾಷಣೆ

ಬೆಂಗಳೂರಿನಿಂದ ಮರಳಿದ ಬಳಿಕ ಅವರು ಮತ್ತೆ ಕೃಷಿ, ಕೋಳಿ ಸಾಕಾಣಿಕೆ, ಆಡು ಸಾಕಾಣಿಕೆ ಹಾಗೂ ಮನೆ ಕೆಲಸಗಳಲ್ಲಿ ತೊಡಗುತ್ತಾರೆ. ಗುರುವಾರ ಮತ್ತು ಶುಕ್ರವಾರ ಮತ್ತೆ ಆಹಾರ ಪದಾರ್ಥಗಳ ತಯಾರಿ ಆರಂಭವಾಗುತ್ತದೆ. ಶನಿವಾರ ಮತ್ತೊಂದು ಪಯಣ ಶುರುವಾಗುತ್ತದೆ.

ರಾಗಿಕಣ ಸಾವಯವ ಸಂತೆಯ ಸಹಕಾರವೂ ಇವರ ಯಶಸ್ಸಿನ ಭಾಗವಾಗಿದೆ. ‘ಅಲ್ಲಿನ ತಂಡ ನಮಗೆ ನಿರಂತರವಾಗಿ ಬೆಂಬಲ ನೀಡುತ್ತಿದೆ. ಮಾರುಕಟ್ಟೆ ಕೌಶಲ ಕುರಿತು ತರಬೇತಿಗಳನ್ನು ಆಯೋಜಿಸುತ್ತದೆ. ಕೆಫೆಗೆ ಬೇಕಾದ ಪಾತ್ರೆಗಳನ್ನೂ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ’ ಎಂದು ಭಾರತಿ ಹೊಸಮನಿ ಹೇಳುತ್ತಾರೆ. ‘ಸಂತೆಯಿಂದ ಬಂದ ಲಾಭದಲ್ಲಿ ಎಲ್ಲರೂ ಕೊಡುಗೆ ನೀಡಬೇಕು ಎಂಬ ನಿಯಮ ಇದ್ದರೂ ನಮ್ಮ ಒಕ್ಕೂಟಕ್ಕೆ ವಿಶೇಷ ಪ್ರೋತ್ಸಾಹ ನೀಡಲಾಗಿದೆ. ಅಲ್ಲಿನ ಮಾರಾಟಗಾರರೂ ನಮ್ಮನ್ನು ತಮ್ಮವರಂತೆ ನೋಡಿಕೊಳ್ಳುತ್ತಾರೆ’ ಎಂದು ಅವರು ಹೇಳುತ್ತಾರೆ.

ಮೂರು ವರ್ಷಗಳ ಈ ಪಯಣ ಮಹಿಳೆಯರಲ್ಲಿ ಹೊಸ ಆತ್ಮವಿಶ್ವಾಸವನ್ನೂ ಬೆಳೆಸಿದೆ. ‘ಮೊದಲು ಫೋನ್ ಪೇ ಬಳಸುವುದು ಗೊತ್ತಿರಲಿಲ್ಲ. ಗ್ರಾಹಕರು ಹಣ ಕಳುಹಿಸಲು ಇತರರ ಸಂಖ್ಯೆಯನ್ನು ಕೊಡಬೇಕಾಗುತ್ತಿತ್ತು. ಈಗ ನಾವು ಸ್ಮಾರ್ಟ್‌ಫೋನ್ ಖರೀದಿಸಿ, ಡಿಜಿಟಲ್ ವ್ಯವಹಾರ ಕಲಿತಿದ್ದೇವೆ. ವ್ಯಾಪಾರ ನಡೆಸುವುದು ಸುಲಭವಾಗಿದೆ’ ಎಂದು ಮಲ್ಲಮ್ಮ ಹಳ್ಳಿ ಹೇಳುತ್ತಾರೆ.

‘ಮೂರು ವರ್ಷಗಳಿಂದ ಬೆಂಗಳೂರಿಗೆ ಹೋಗಿ ಬರುತ್ತಿದ್ದೇವೆ. ಈಗ ನಮಗೆ ವ್ಯವಹಾರದ ಜ್ಞಾನ ಬಂದಿದೆ. ಜನರೊಂದಿಗೆ ಮಾತನಾಡುವ ಧೈರ್ಯ ಬಂದಿದೆ’ ಎಂದು ಸಂಗೀತಾ ಮಯೂರ ಹೇಳುತ್ತಾರೆ. ಕುಟುಂಬದ ಬೆಂಬಲವೂ ಇವರ ಜೊತೆಯಲ್ಲಿದೆ. ಗಂಡಂದಿರು ಮತ್ತು ಮನೆಯವರು ಗಂಟು–ಮೂಟೆಗಳನ್ನು ಹೊತ್ತು ಬಸ್ ನಿಲ್ದಾಣದವರೆಗೆ ಬಂದು ಬೀಳ್ಕೊಡುತ್ತಾರೆ. ಕೆಲವೊಮ್ಮೆ ವಿಶೇಷ ಸಂತೆಗಳಿಗೂ ಜೊತೆಯಾಗುತ್ತಾರೆ. ‘ನಮ್ಮನ್ನು ಬಸ್‌ಗೆ ಹತ್ತಿಸಿ ಕಳುಹಿಸುತ್ತಾರೆ. ಕೆಲವೊಮ್ಮೆ ಸಂತೆಗೂ ಬರುತ್ತಾರೆ. ಅವರ ಸಹಕಾರ ಇಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ’ ಎಂದು ಮಹಿಳೆಯರು ಹೇಳುತ್ತಾರೆ.

ಮೂರು ವರ್ಷಗಳ ಹಿಂದೆ ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಹುಡುಕುತ್ತಿದ್ದ ಈ ಮಹಿಳೆಯರು ಇಂದು ಬಬಲಾದದಿಂದ ಬೆಂಗಳೂರಿನವರೆಗೆ ತಮ್ಮದೇ ಗ್ರಾಹಕರ ಬಳಗವನ್ನು ಕಟ್ಟಿಕೊಂಡಿದ್ದಾರೆ. ಶನಿವಾರ ರಾತ್ರಿ ಆರಂಭವಾಗಿ ಸೋಮವಾರ ಬೆಳಿಗ್ಗೆ ಊರಿನಲ್ಲಿ ಮುಕ್ತಾಯವಾಗುವ ಅವರ 1,100 ಕಿಲೊಮೀಟರ್ ಪಯಣ ಕೇವಲ ವ್ಯಾಪಾರದ ಕಥೆಯಲ್ಲ. ಅದು ಗ್ರಾಮೀಣ ಮಹಿಳೆಯರ ಸ್ವಾವಲಂಬನೆ, ಆತ್ಮವಿಶ್ವಾಸ ಮತ್ತು ಸಂಘಟಿತ ಶಕ್ತಿಯ ಕಥೆಯಾಗಿದೆ.

ಕೃಷಿ, ಮನೆ ಕೆಲಸ ಮತ್ತು ಉದ್ಯಮಶೀಲತೆಯನ್ನು ಸಮತೋಲನಗೊಳಿಸುತ್ತಿರುವ ಈ ಮಹಿಳೆಯರು ಅವಕಾಶ ದೊರೆತರೆ ಗ್ರಾಮೀಣ ಬದುಕು ಹೇಗೆ ಹೊಸ ದಾರಿಗಳನ್ನು ಕಂಡುಕೊಳ್ಳಬಹುದು ಎಂಬುದನ್ನು ತೋರಿಸುತ್ತಿದ್ದಾರೆ. ಬಬಲಾದದ ಈ ಹಳ್ಳಿಗಿತ್ತಿಯರ ಪಯಣ, ಒಂದು ಹಳ್ಳಿಯಿಂದ ರಾಜಧಾನಿಯವರೆಗೆ ಸಾಗುವ ಬಸ್ ಪ್ರಯಾಣ ಮಾತ್ರವಲ್ಲ; ಅದು ಕನಸುಗಳನ್ನು ಮಾರುಕಟ್ಟೆಯವರೆಗೆ ಕೊಂಡೊಯ್ದ ಬದುಕಿನ ಪಯಣವಾಗಿದೆ. ❖

ಕಿಷ್ಕಿಂದ ಕಲಹ

ಹೊಸ ತಲೆಮಾರಿನ ರಂಗರೂಪ



ನಾಟಕದ ದೃಶ್ಯ

• ಅಮ್ಮಸಂದ್ರ ಸುರೇಶ್

ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಸಾತ್ವಿಕಿ ಫೌಂಡೇಶನ್ ಇತ್ತೀಚೆಗೆ ಪ್ರದರ್ಶಿಸಿದ ‘ಕಿಷ್ಕಿಂದ ಕಲಹ’ ಮೊದಲ ಪ್ರದರ್ಶನದಲ್ಲೇ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಸಾತ್ವಿಕಿ ಫೌಂಡೇಶನ್ ಆಯೋಜಿಸಿದ್ದ ನಲವತ್ತು ದಿನಗಳ ರಂಗ ತರಬೇತಿ ಶಿಬಿರದ ಸಮಾರೋಪದ ಅಂಗವಾಗಿ, ಶಿಬಿರದಲ್ಲಿ ತರಬೇತಿ ಪಡೆದ ಹೊಸ ಕಲಾವಿದರೇ ಈ ನಾಟಕವನ್ನು ರಂಗದ ಮೇಲೆ ಜೀವಂತಗೊಳಿಸಿದ್ದು ವಿಶೇಷ.

ವೆಂಕನಗೌಡ ಅಣೆರ್ ಅವರು ಕುವೆಂಪು ಅವರ ‘ರಾಮಾಯಣ ದರ್ಶನಂ’ ಹಾಗೂ ‘ವಾಲ್ಮೀಕಿ ರಾಮಾಯಣ’ದ ಕಿಷ್ಕಿಂದ ಕಾಂಡವನ್ನು ಆಧರಿಸಿ ನಾಟಕ ರಚಿಸಿದ್ದಾರೆ. ಕೇವಲ ಒಂದು ಗಂಟೆಯಲ್ಲಿ ಕಿಷ್ಕಿಂದೆಯ ರಾಜಕೀಯ, ಸಹೋದರರ ನಡುವಿನ ಸಂಘರ್ಷ, ಧರ್ಮ–ಅಧರ್ಮಗಳ ತಾತ್ವಿಕ ಪ್ರಶ್ನೆಗಳು ಹಾಗೂ ಶ್ರೀರಾಮನ ನಿರ್ಧಾರದ ಸುತ್ತಲಿನ ನೈತಿಕ ಚರ್ಚೆಯನ್ನು ಕಟ್ಟಿಕೊಡುವ ಪ್ರಯತ್ನ ನಾಟಕದಲ್ಲಿದೆ.

ಸೀತಾಪಹರಣದ ಬಳಿಕ ಶ್ರೀರಾಮ ಮತ್ತು ಲಕ್ಷ್ಮಣರು ಸೀತೆಯ ಅನ್ವೇಷಣೆಯಲ್ಲಿ ಕಿಷ್ಕಿಂದೆಗೆ ಬರುವ ಘಟನೆಯಿಂದ ಕಥೆ ಆರಂಭವಾಗುತ್ತದೆ. ಸುಗ್ರೀವನೊಂದಿಗೆ ಸ್ನೇಹ, ವಾಲಿ–ಸುಗ್ರೀವರ ವೈಮನಸ್ಸು, ಯುದ್ಧಗಳು ಹಾಗೂ ವಾಲಿವಧೆ ಕಥೆಯ ಪ್ರಮುಖ ಘಟ್ಟಗಳಾಗಿ ಮೂಡಿಬರುತ್ತವೆ. ವಿಶೇಷವಾಗಿ ವಾಲಿಯ ಮರಣಶಯ್ಯೆಯ ಸಂಭಾಷಣೆ ನಾಟಕದ ತಾತ್ವಿಕ ಕೇಂದ್ರಬಿಂದುವಾಗಿ ಗಮನ ಸೆಳೆಯುತ್ತದೆ. ವಾಲಿಯ ಪ್ರಶ್ನೆಗಳಿಗೆ ರಾಮನು ನೀಡುವ ಉತ್ತರಗಳು ಧರ್ಮದ ಸಂಕೀರ್ಣ ಸ್ವರೂಪವನ್ನು ಪ್ರೇಕ್ಷಕರ ಮುಂದಿಡುತ್ತವೆ.

ನಿರ್ದೇಶಕ ಅಂಕಿತ್ ರಾಜ್ ಅವರು ಪೌರಾಣಿಕ ಕಥಾವಸ್ತುವನ್ನು ಅತಿಯಾದ ಭವ್ಯತೆಯತ್ತ ಕೊಂಡೊಯ್ಯದೆ ಸರಳ ಮತ್ತು ನೇರ ರಂಗಭಾಷೆಯಲ್ಲಿ ನಿರೂಪಿಸಿದ್ದಾರೆ. ಹೊಸ ಕಲಾವಿದರನ್ನು ಸಮರ್ಥವಾಗಿ ಬಳಸಿಕೊಂಡಿರುವುದು ಅವರ ನಿರ್ದೇಶನದ ಪ್ರಮುಖ ಸಾಧನೆ. ಕೆಲವು ದೃಶ್ಯಗಳಲ್ಲಿ ಸಂಭಾಷಣೆಗಳು ಮತ್ತು ದೃಶ್ಯ ಬದಲಾವಣೆಗಳನ್ನು ಇನ್ನಷ್ಟು ಬಿಗಿಗೊಳಿಸಬಹುದಾಗಿದ್ದರೂ, ಒಟ್ಟಾರೆ ಪ್ರದರ್ಶನವು ಪ್ರೇಕ್ಷಕರ ಆಸಕ್ತಿಯನ್ನು ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಶ್ರೀರಾಮ ಮತ್ತು ಲಕ್ಷ್ಮಣರ ಪಾತ್ರಗಳಲ್ಲಿ ರಜನಿಗೌಡ ಹಾಗೂ ಚಂದನ ಅವರ ಅಭಿನಯ ವಿಶೇಷವಾಗಿ ಗಮನ ಸೆಳೆಯಿತು. ಈ ಎರಡೂ ಪಾತ್ರಗಳನ್ನು ಮಹಿಳಾ ಕಲಾವಿದರು ನಿರ್ವಹಿಸಿರುವುದು ನಾಟಕದ ವಿಶೇಷ ಆಕರ್ಷಣೆ. ಪಾತ್ರದ ಲಿಂಗದ ಬಗ್ಗೆ ಯೋಚಿಸುವುದನ್ನೇ ಮರೆಸುವಂತೆ ಅವರು ಅಭಿನಯಿಸಿದರು.

ವಾಲಿ ಮತ್ತು ಸುಗ್ರೀವರ ನಡುವಿನ ಭಾವನಾತ್ಮಕ ಸಂಘರ್ಷವನ್ನು ನಾಟಕ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಸಹೋದರತ್ವ, ಅಧಿಕಾರದ ಹಂಬಲ ಹಾಗೂ ಪರಸ್ಪರ ಅವಲಂಬನೆಯ ಸೂಕ್ಷ್ಮ ಅಂಶಗಳನ್ನು ದೃಶ್ಯಗಳಲ್ಲಿ ಮನೋಜ್ಞವಾಗಿ ಹೆಣೆದಿರುವುದು ಗಮನಾರ್ಹ. ಸುಗ್ರೀವನ ಶ್ರೀರಾಮನ ಮೇಲಿನ ವಿಶ್ವಾಸವೂ ಕಥಾನಕಕ್ಕೆ ಅಗತ್ಯವಾದ ಭಾವನಾತ್ಮಕ ಗಾಢತೆಯನ್ನು ನೀಡುತ್ತದೆ.

ತಾರಾ ಮತ್ತು ಶೂರ್ಪಣಖಿ ಪಾತ್ರಗಳಲ್ಲಿ ಹಿರಿಯ ರಂಗಕಲಾವಿದ ಕಾರ್ತಿಕ್ ಶರ್ಮಾ ಅವರ ಅಭಿನಯ ಪ್ರೇಕ್ಷಕರ ಗಮನ ಸೆಳೆಯಿತು. ಅನುಭವ ಮತ್ತು ದೇಹಭಾಷೆಯ ಸಮನ್ವಯದಿಂದ ಅವರು ಪಾತ್ರಗಳಿಗೆ ಜೀವ ತುಂಬಿದರು. ಅನುಭವಿ ಕಲಾವಿದರ ಉಪಸ್ಥಿತಿ ಯುವ ಕಲಾವಿದರಿಗೆ ಬೆಂಬಲವಾಗಿ ಪರಿಣಮಿಸಿತು.


ವಿಶ್ವನಾಥ್ ಚಂಗಚಹಳ್ಳಿ ಅವರ ಸಂಗೀತ ನಿರ್ದೇಶನ ನಾಟಕದ ಭಾವ ವೈವಿಧ್ಯವನ್ನು ಸಮರ್ಥವಾಗಿ ಬೆಂಬಲಿಸಿತು. ಸಿದ್ದೇಶ್ ಬದನವಾಳು, ದರ್ಶನ್ ಪಾಂಡ, ಮಲ್ಲೇಶ್ ವಿ. ಹಾಗೂ ನೀತು ನಾಗರಾಜ್ ಅವರ ಸಂಗೀತ ಸಾಂಗತ್ಯ ದೃಶ್ಯಗಳಿಗೆ ಅಗತ್ಯವಾದ ವಾತಾವರಣವನ್ನು ನಿರ್ಮಿಸಿತು. ಬೆಳಕು ಮತ್ತು ರಂಗವಿನ್ಯಾಸವೂ ಪೌರಾಣಿಕ ಹಿನ್ನೆಲೆಯನ್ನು ಪರಿಣಾಮಕಾರಿಯಾಗಿ ಮೂಡಿಸುವಲ್ಲಿ ನೆರವಾಯಿತು. ಯುದ್ಧದ ದೃಶ್ಯಗಳಲ್ಲಿ ಚಲನವಲನ ಮತ್ತು ಬೆಳಕಿನ ವಿನ್ಯಾಸ ವಿಶೇಷವಾಗಿ ಗಮನ ಸೆಳೆಯಿತು.

ಹೆಚ್ಚಿನ ಕಲಾವಿದರಿಗೆ ಇದು ಮೊದಲ ಸಾರ್ವಜನಿಕ ಪ್ರದರ್ಶನವಾಗಿದ್ದರೂ, ಅಭಿನಯದಲ್ಲಿ ಅವರು ಉತ್ತಮ ಮಟ್ಟವನ್ನು ತಲುಪಿದ್ದಾರೆ. ಕೆಲ ಮಿತಿಗಳು ಕಂಡುಬಂದರೂ ಅವು ಸಹಜವೆನಿಸುತ್ತವೆ.

ಒಟ್ಟಾರೆಯಾಗಿ ‘ಕಿಷ್ಕಿಂದ ಕಲಹ’ ಕೇವಲ ರಾಮಾಯಣದ ಒಂದು ಘಟನೆಯ ಪುನರ್‌ಕಥನವಲ್ಲ; ಧರ್ಮ, ನ್ಯಾಯ, ಅಧಿಕಾರ ಮತ್ತು ಸಹೋದರತ್ವದ ಪ್ರಶ್ನೆಗಳನ್ನು ಸಮಕಾಲೀನ ಸಂವೇದನೆಯೊಂದಿಗೆ ಪ್ರೇಕ್ಷಕರ ಮುಂದಿಡುವ ಪ್ರಯತ್ನವಾಗಿದೆ. ಹೊಸ ಕಲಾವಿದರ ಉತ್ಸಾಹ, ನಿರ್ದೇಶಕರ ಸಮರ್ಥ ನಿರ್ವಹಣೆ ಮತ್ತು ಕಥೆಯ ನೈತಿಕ ಸಂಕೀರ್ಣತೆಗಳ ಸಮತೋಲನದ ನಿರೂಪಣೆಯಿಂದ ಈ ನಾಟಕ ಮೈಸೂರಿನ ಹವ್ಯಾಸಿ ರಂಗಭೂಮಿಯಲ್ಲಿ ಗಮನಾರ್ಹ ಪ್ರಯೋಗವಾಗಿ ಗುರುತಿಸಿಕೊಳ್ಳುತ್ತದೆ. ಸಾತ್ವಿಕಿ ಫೌಂಡೇಶನ್‌ನ ತರಬೇತಿ ಕಾರ್ಯಕ್ರಮದ ಫಲಶ್ರುತಿಯಾಗಿ ಮೂಡಿಬಂದ ಈ ಪ್ರದರ್ಶನ, ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಪಕ್ವ ರಂಗಪ್ರಯೋಗಗಳ ನಿರೀಕ್ಷೆಯನ್ನು ಹುಟ್ಟಿಸುತ್ತದೆ. ❖

ಮೊದಲ ಓದು

ಕಾಳ ಮಾವನ ಹಳೆಯ ಕಟ್ಟೆ, ಹೊಸ ಚರ್ಚೆ




ಕಾಳ ಮಾವನ ಕಡೇ ದಿನಗಳು
ಲೇ: ಬಿ. ಚಂದ್ರೇಗೌಡ
ಪ್ರ: ಪ್ರಜ್ಞಾ ಬುಕ್ ಗ್ಯಾಲರಿ

‘ಲಂಕೇಶ್ ಪತ್ರಿಕೆ’ ನಂತರ ‘ಗೌರಿ ಲಂಕೇಶ್ ಪತ್ರಿಕೆ’ಯಲ್ಲಿ ಸುಮಾರು ಎರಡು ದಶಕಗಳು ಪ್ರಕಟವಾದ ‘ಬಯಲು ಸೀಮೆ ಕಟ್ಟೆ ಪುರಾಣ’ ಅಂಕಣಕ್ಕೆ ವಿಶಿಷ್ಟ ಓದುಗ ಬಳಗವಿತ್ತು. ಕಾಳ, ಜುಮ್ಮಿ, ಉಗ್ರಿ, ವಾಟಿಸ್ಸೆ ಮತ್ತು ಊರಿನ ಇತರ ಪಾತ್ರಗಳು ಚಿಕ್ಕಣ್ಣನ ಹೋಟೆಲ್‌ನಲ್ಲಿ ಸೇರಿ ಚಹಾ ಕುಡಿಯುತ್ತಾ ಲೋಕದ ವಿಷಯಗಳನ್ನು ಚರ್ಚಿಸುತ್ತಿದ್ದವು. ಆ ಮಾತುಕತೆಗಳನ್ನೇ ಲೇಖಕ ಬಿ. ಚಂದ್ರೇಗೌಡ ಅಂಕಣದಲ್ಲಿ ಜೀವಂತವಾಗಿ ಕಟ್ಟಿಕೊಟ್ಟಿದ್ದರು. ಕಾಳ ಮಾವ ಈ ಅಂಕಣದ ಕೇಂದ್ರ ಪಾತ್ರ. ಊರಿನ ಸುದ್ದಿಯಿಂದ ಹಿಡಿದು ಜಾಗತಿಕ ವಿದ್ಯಮಾನಗಳವರೆಗೆ ಅವನ ಚರ್ಚೆ ವಿಸ್ತರಿಸಿರುತ್ತಿತ್ತು. ವಿಡಂಬನೆ ಮತ್ತು ಹಾಸ್ಯದ ಮಿಶ್ರಣವಾಗಿದ್ದ ಈ ಅಂಕಣಕ್ಕೆ ಜನಪದ ಸೊಗಡಿನ ಭಾಷೆ ವಿಶೇಷ ಶಕ್ತಿ ನೀಡಿತ್ತು. ಪಾತ್ರಗಳು ಕಾಲ್ಪನಿಕವಾದರೂ ಚರ್ಚೆಯ ವಿಷಯಗಳು ಸಮಕಾಲೀನ ವಾಸ್ತವಗಳನ್ನೇ ಪ್ರತಿಬಿಂಬಿಸುತ್ತಿದ್ದವು. ಅಂಕಣ ನಿಂತಿದ್ದರೂ ಆ ಪಾತ್ರಗಳು ಲೇಖಕರ ಮನಸ್ಸಿನಲ್ಲಿ ಇನ್ನೂ ಜೀವಂತವಾಗಿವೆ. ಅವು ಇಂದು ಏನು ಮಾಡುತ್ತಿರಬಹುದು ಎಂಬ ಕುತೂಹಲವೇ ಈ ಕೃತಿಯ ಆಧಾರ.

ಕಾಳ ಮಾವನ ಆರೋಗ್ಯ ಸರಿಯಿಲ್ಲ ಎಂಬ ಸುದ್ದಿ ತಿಳಿದು ಜುಮ್ಮಿ ಅವನ ಮನೆಗೆ ಬರುತ್ತಾಳೆ. ಉಭಯ-ಕುಶಲೋಪರಿಯ ನಡುವೆ ಹಳೆಯ ಕಟ್ಟೆ ಪುರಾಣದ ನೆನಪುಗಳು ಮರುಕಳಿಸುತ್ತವೆ. ಜೊತೆಗೆ ಇಂದಿನ ಸಾಮಾಜಿಕ–ರಾಜಕೀಯ ಬೆಳವಣಿಗೆಗಳೂ ಚರ್ಚೆಯಾಗುತ್ತವೆ. ಮುಂಬೈಯಂತಹ ನಗರಗಳಿಂದ ಹಳ್ಳಿಗಳಿಗೆ ಏಡ್ಸ್ ಹರಡಿದ ಪರಿಣಾಮಗಳ ಬಗ್ಗೆ ಜುಮ್ಮಿ ಹೇಳುತ್ತಾಳೆ. ಸರ್ಕಾರದ ಜನಕಲ್ಯಾಣ ಯೋಜನೆಗಳು, ಉಚಿತ ಅಕ್ಕಿ, ಗೃಹಲಕ್ಷ್ಮಿ ಯೋಜನೆಗಳ ಬಗ್ಗೆ ಕಾಳ ಮಾವ ಮೆಚ್ಚುಗೆ ವ್ಯಕ್ತಪಡಿಸುತ್ತಾನೆ. ಇಂದಿನ ಸ್ಥಿತಿಗತಿಗಳನ್ನು ನೋಡಿ ಅವನು, ‘ಅಂತೂ ಬಡಬಗ್ಗರ ಸರಕಾರವೇ ಸಾಕ್ತ ಅದೆ ಅನ್ನು’ ಎಂದು ಹೇಳುತ್ತಾನೆ. ಸಂಭಾಷಣಾತ್ಮಕ ಕಥನ ಶೈಲಿ ಮತ್ತು ಜನಪದ ಸೊಗಡಿನ ಭಾಷೆ ಈ ಕೃತಿಗೆ ವಿಶೇಷ ಆಕರ್ಷಣೆ ನೀಡಿವೆ.

ಪುಟ: 120 ₹120

ನಂದಿಬೆಟ್ಟದ ಹಲವು ಮುಖಗಳ ಅನಾವರಣ



ನಂದಿಬೆಟ್ಟದ ಮೇಲುಗಡೆ
ಲೇ: ಡಿ.ಜಿ.ಮಲ್ಲಿಕಾರ್ಜುನ
ಪ್ರ: ನವಕರ್ನಾಟಕ
ಸಂ: 080–22161900

ಇಂದಿನ ಬಹುತೇಕರಿಗೆ ನಂದಿಬೆಟ್ಟ ವಾರಾಂತ್ಯದ ಪ್ರವಾಸ ತಾಣ; ನಗರಜೀವನದ ಜಂಜಾಟದಿಂದ ದೂರವಾಗಿ ಪ್ರಕೃತಿಯ ಮಡಿಲಲ್ಲಿ ಕೆಲ ಕ್ಷಣ ಕಳೆಯುವ ತಾಣ. ಬೆಟ್ಟ ಏರುವ ಸಂಭ್ರಮ, ತುದಿಯಿಂದ ಕಾಣುವ ನಿಸರ್ಗದ ವೈಭವ, ದೂರದಲ್ಲಿ ಹರಡಿಕೊಂಡಿರುವ ನಗರೀಕರಣದ ನೋಟ–ಹೀಗೆ ನಂದಿಬೆಟ್ಟ ಪ್ರತಿಯೊಬ್ಬರಿಗೂ ವಿಭಿನ್ನ ಅನುಭವಗಳನ್ನು ನೀಡುತ್ತದೆ.


ಆದರೆ ನಂದಿಬೆಟ್ಟದ ನಿಜವಾದ ಹಿನ್ನೆಲೆ ಏನು? ಅದರ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಪೌರಾಣಿಕ ಮಹತ್ವವೇನು? ಇಲ್ಲಿಗೆ ಭೇಟಿ ನೀಡಿದ ಮಹನೀಯರು ಯಾರು? ಅವರ ಬರಹಗಳಲ್ಲಿ, ನೆನಪುಗಳಲ್ಲಿ ನಂದಿಬೆಟ್ಟ ಹೇಗೆ ಮೂಡಿಬಂದಿದೆ? ಇಂತಹ ಪ್ರಶ್ನೆಗಳಿಗೆ ಉತ್ತರಿಸುತ್ತಲೇ ಈ ನೆಲದ ವೈಶಿಷ್ಟ್ಯ ಮತ್ತು ಸೊಬಗನ್ನು ಕಟ್ಟಿಕೊಡುವ ಕೃತಿಯೇ ‘ನಂದಿಬೆಟ್ಟದ ಮೇಲುಗಡೆ’.

ಪತ್ರಕರ್ತ, ಛಾಯಾಗ್ರಾಹಕ ಡಿ.ಜಿ. ಮಲ್ಲಿಕಾರ್ಜುನ ಅವರು 32 ಅಧ್ಯಾಯಗಳ ಮೂಲಕ ನಂದಿಬೆಟ್ಟದ ಬಹುಮುಖ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ‘ನಂದಿಬೆಟ್ಟವೇರಿ’ ಎಂಬ ಪೀಠಿಕೆಸ್ವರೂಪದ ಮೊದಲ ಲೇಖನದಲ್ಲಿಯೇ, ‘ನಂದಿಬೆಟ್ಟದ ಮೇಲೆ ನಿಂತು ನಂದಿ ಕೇಂದ್ರಿತ ಈ ಪ್ರಾಂತ್ಯದ ಇತಿಹಾಸ, ಪೌರಾಣಿಕತೆ, ಜಾನಪದ ನೆಲೆಗಳು ಹಾಗೂ ರಾಜಕೀಯ ನಡವಳಿಕೆಗಳ ಪರಿಣಾಮಗಳನ್ನು ದರ್ಶಿಸುವ ಯತ್ನ ಇದು’ ಎಂದು ಲೇಖಕರು ಕೃತಿಯ ಆಶಯವನ್ನು ಸ್ಪಷ್ಟಪಡಿಸುತ್ತಾರೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಇತಿಹಾಸ, ರಾಜಮನೆತನಗಳ ನಂಟು, ‘ಹೈದರ್ ಡ್ರಾಪ್’ನಿಂದ ಪ್ರಸಿದ್ಧವಾದ ಹೈದರ್ ಅಲಿ ಬೆಟ್ಟ, ವಿದೇಶಿ ಪ್ರವಾಸಿಗರ ದಾಖಲಾತಿಗಳು, ಮಹಾತ್ಮ ಗಾಂಧೀಜಿ ಬರೆದ ಪತ್ರಗಳು, ಬೆಟ್ಟದ ಹಕ್ಕಿ ಸಂಕುಲ, ಬಂಡೆ ರಚನೆಗಳು, ಚಿತ್ರರಂಗದ ಸಂಪರ್ಕ...ಹೀಗೆ ನಂದಿಬೆಟ್ಟದ ಹಲವು ಮುಖಗಳನ್ನು ಕೃತಿ ಅನಾವರಣಗೊಳಿಸುತ್ತದೆ. ಅಪರೂಪದ ಛಾಯಾಚಿತ್ರಗಳು ಮತ್ತು ಮಾಹಿತಿಗಳಿಂದ ಸಮೃದ್ಧವಾಗಿರುವ ಈ ಕೃತಿ, ನಂದಿಬೆಟ್ಟ ಕುರಿತ ಐತಿಹಾಸಿಕ ಕುತೂಹಲವನ್ನು ತಣಿಸುವುದರ ಜೊತೆಗೆ ಅದರ ಸಾಂಸ್ಕೃತಿಕ ವ್ಯಾಪ್ತಿಯನ್ನೂ ಪರಿಚಯಿಸುತ್ತದೆ.

ಪುಟ: 166 ₹195

ಹಲವರ ಬದುಕು ಕಟ್ಟಿಕೊಡುವ ಕಥೆಗಳು



ಮಿಡಿನಾಗರಗಳ ನಡುವೆ
ಲೇ: ನಟರಾಜ್ ತಲಘಟ್ಟಪುರ
ಪ್ರ: ವರ್ಷನಿಧಿ
ಸಂ: 9945860987

ಲೇಖಕರ ಮೊದಲ ಕಥಾಸಂಕಲನವಾದ ಈ ಕೃತಿಯಲ್ಲಿ ಒಟ್ಟು ಹತ್ತು ಕಥೆಗಳಿವೆ. ಮುನ್ನುಡಿಯಲ್ಲಿ ಈ ಸಂಕಲನದ ಕಥೆಗಳು ಹಲವು ಬದುಕಿನ ಅನುಭವಗಳನ್ನು, ತಣ್ಣನೆಯ ಕ್ರೌರ್ಯವನ್ನು, ಒಡಲಾಳದ ಹಸಿವನ್ನು, ಬದುಕಿನ ಸಾಂಗತ್ಯವನ್ನು ಹಾಗೂ ಅನಾಥ ಪ್ರಜ್ಞೆಯನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತವೆ ಎಂದು ಅಭಿಪ್ರಾಯ ವ್ಯಕ್ತವಾಗಿದೆ.

‘ಮಿಡಿನಾಗರಗಳ ನಡುವೆ’ ಕಥೆ ತನ್ನ ವಸ್ತುವಿನ ಮೂಲಕ ಗಮನ ಸೆಳೆಯುತ್ತದೆ. ದುರಂತ ಕಥೆಯಂತೆ ಕಾಣುವ ಇದರ ನಾಯಕ ಮಲ್ಲ, ದಿಕ್ಕು-ದೆಸೆಯಿಲ್ಲದ ಅನಾಥ ಮತ್ತು ಅಮಾಯಕನಾಗಿ ಚಿತ್ರಿತನಾಗಿದ್ದಾನೆ. ಅವನ ಮೇಲೆ ಹನುಮಂತ ಮತ್ತು ಅವನ ಗೆಳೆಯರು ನಡೆಸುವ ಚೇಷ್ಟೆಗಳು ಮಾನವನೊಳಗಿನ ಅಮಾನವೀಯ ಮುಖವನ್ನು ಅನಾವರಣಗೊಳಿಸುತ್ತವೆ. ಮಲ್ಲ ಶೋಷಿತರ ಪ್ರತಿನಿಧಿಯಾಗಿ ಕಾಣುತ್ತಾನೆ.

‘ಕತ್ತಲ ರಾಜ್ಯದ ಕೂಸು’ ಕಣ್ಣು ಕಾಣದ ಹುಡುಗಿಯೊಬ್ಬಳ ಬದುಕು ಕಟ್ಟಿಕೊಳ್ಳುವ ಹೋರಾಟದ ಸುತ್ತ ಸಾಗುತ್ತದೆ. ‘ಎದೆಭಾವ’ ವಿಭಿನ್ನವಾದ ಪ್ರೇಮಕಥೆಯಾಗಿ ಮೂಡಿಬಂದಿದೆ. ಧರ್ಮಗಳ ನಡುವಿನ ಸಂಘರ್ಷ ಮತ್ತು ಭಾಷೆ ಹೆಸರಿನ ಹೋರಾಟಗಳಿಂದ ಸಾಮಾನ್ಯ ಜನರು ಅನುಭವಿಸುವ ತೊಂದರೆಗಳನ್ನು ‘ಶರಣ್ಯ’ ಕಥೆ ಸ್ಪಷ್ಟವಾಗಿ ಚಿತ್ರಿಸುತ್ತದೆ.

ಕಣ್ಣುಕಾಣದ ಸರೋಜ, ವಿಕಾರ ದೇಹ ಹೊಂದಿರುವ ಕುಪ್ಪಿ, ದಿಕ್ಕುದೆಸೆಯಿಲ್ಲದ ಅಮಾಯಕ ಮಲ್ಲ, ಗೌಡರ ಮನೆಯ ಜೀತದಾಳು ನಿಂಗ ಇಂತಹ ಪಾತ್ರಗಳು ವಿಭಿನ್ನ ಬದುಕುಗಳನ್ನು ಎದುರಿಸುತ್ತಾ, ತಮ್ಮದೇ ರೀತಿಯಲ್ಲಿ ಕಷ್ಟಗಳನ್ನು ಮೆಟ್ಟಿನಿಲ್ಲುವ ಶಕ್ತಿ ಹೊಂದಿವೆ. ಒಟ್ಟಾರೆ, ಈ ಕಥಾಸಂಕಲನವು ಜನಸಾಮಾನ್ಯರ ದೈನಂದಿನ ಬದುಕು ಮತ್ತು ಬವಣೆಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಸರಳ ನಿರೂಪಣೆ ಮತ್ತು ಪಾತ್ರಗಳಿಗೆ ಹೊಂದುವ ಭಾಷಾ ಬಳಕೆ ಈ ಸಂಕಲನದ ಪ್ರಮುಖ ಆಕರ್ಷಣೆಯಾಗಿದೆ.

ಪುಟ: 88 ₹100

ರಸ್ತೆ ಅಲ್ಲ, ಒಂದು ಸಂಸ್ಕೃತಿ

ಜರ್ಮನಿಯ ಆಟೋಬಾನ್

ಜರ್ಮನಿಯ ಪ್ರಸಿದ್ಧ ಆಟೋಬಾನ್ ಹೆದ್ದಾರಿ ಜಾಲವು ವೇಗ, ಶಿಸ್ತು ಮತ್ತು ಸುರಕ್ಷತೆಗೆ ಹೆಸರುವಾಸಿ. ಈ ವಿಶಿಷ್ಟ ರಸ್ತೆ ವ್ಯವಸ್ಥೆಯಿಂದ ಭಾರತ ಹಾಗೂ ಕರ್ನಾಟಕ ಕಲಿಯಬಹುದಾದ ಪಾಠಗಳ ಚಿತ್ರಣ ಇಲ್ಲಿದೆ.

• ಪ್ರಹ್ಲಾದ ಪರ್ವತಿ

ಒಮ್ಮೆ ಊಹಿಸಿ ನೋಡಿ; ಬೆಂಗಳೂರಿನಿಂದ ಹುಬ್ಬಳ್ಳಿವರೆಗೆ ಕಾರಿನಲ್ಲಿ ಹೊರಟರೆ ಮಧ್ಯೆ ಬ್ರೇಕ್ ಹಾಕಬೇಕಾದ ಗುಂಡಿಗಳು ಇಲ್ಲ, ಅನಿರೀಕ್ಷಿತ ತಿರುವುಗಳಿಲ್ಲ, ಎದುರಿಗೆ ಬರುವ ವಾಹನಗಳ ಭಯವಿಲ್ಲ. ಪ್ರತಿಯೊಬ್ಬ ಚಾಲಕನೂ ನಿಯಮ ಪಾಲಿಸುತ್ತಾನೆ. ರಸ್ತೆ ನಿಮ್ಮ ಚಾಲನೆಯನ್ನು ಅಡ್ಡಿಪಡಿಸುವುದಿಲ್ಲ; ಬದಲಿಗೆ ನಿಮ್ಮ ಪ್ರಯಾಣಕ್ಕೆ ಸಂಗಾತಿಯಾಗುತ್ತದೆ. ಜರ್ಮನಿಯ ಪ್ರಸಿದ್ಧ 'ಆಟೋಬಾನ್' ಹೆದ್ದಾರಿ ಜಾಲದ ಅನುಭವ ಅಷ್ಟರ ಮಟ್ಟಿಗೆ ವಿಭಿನ್ನ.

ಜರ್ಮನಿಯ 'ರಸ್ತೆ ಸಾರಿಗೆಯ ಬೆನ್ನೆಲುಬು' ಎಂದೇ ಕರೆಯಲಾಗುವ ಆಟೋಬಾನ್ ಕೇವಲ ಹೆದ್ದಾರಿ ಅಲ್ಲ; ಅದು ಒಂದು ದೇಶದ ಶಿಸ್ತು, ತಂತ್ರಜ್ಞಾನ, ಯೋಜನಾ ಸಾಮರ್ಥ್ಯ ಮತ್ತು ನಾಗರಿಕ ಸಂಸ್ಕೃತಿಯ ಪ್ರತೀಕ. ವಿಶ್ವದ ಅತ್ಯಂತ ವೇಗದ ಹಾಗೂ ಸುರಕ್ಷಿತ ರಸ್ತೆ ವ್ಯವಸ್ಥೆಗಳಲ್ಲಿ ಒಂದಾದ ಈ ಜಾಲದಲ್ಲಿ ಸಂಚರಿಸುವ ಅವಕಾಶ ದೊರೆತಾಗ, ರಸ್ತೆ ಎಂದರೆ ಕೇವಲ ಡಾಂಬರು ಅಲ್ಲ, ಒಂದು ದೇಶದ ಮನಸ್ಥಿತಿಯ ಪ್ರತಿಬಿಂಬ ಎಂಬುದು ಸ್ಪಷ್ಟವಾಗುತ್ತದೆ.

ಈ ಬಾರಿ ಜರ್ಮನಿಯ ಬರ್ಲಿನ್‌ನಿಂದ ನೆದರ್ಲೆಂಡ್ಸ್‌ನ ಆ್ಯಮ್‌ಸ್ಟರ್‌ಡ್ಯಾಮ್ ವರೆಗೆ ಕಾರಿನಲ್ಲಿ ಪ್ರಯಾಣಿಸುವಾಗ ಆಟೋಬಾನ್‌ನ ವೇಗ, ನಿಖರತೆ ಮತ್ತು ಶಿಸ್ತು ನನ್ನನ್ನು ಚಕಿತಗೊಳಿಸಿತು. ಗಂಟೆಗೆ 130 ಕಿ.ಮೀ ವೇಗವನ್ನು ಸುರಕ್ಷಿತ ಚಾಲನೆಗಾಗಿ ಶಿಫಾರಸು ಮಾಡಲಾಗಿದ್ದರೂ, ಅನೇಕ ವಿಭಾಗಗಳಲ್ಲಿ ಕಡ್ಡಾಯ ವೇಗ ಮಿತಿ ಇರುವುದಿಲ್ಲ. ಆದರೂ ವಾಹನಗಳು ಅಬ್ಬರದಿಂದಲ್ಲ, ಅರಿವಿನಿಂದ ಚಲಿಸುತ್ತವೆ. 'ವೇಗ ನಮ್ಮ ಹಕ್ಕು' ಎಂಬ ಮನೋಭಾವ ಅಲ್ಲಿನವರಲ್ಲಿಲ್ಲ; 'ಇದು ನಮಗೆ ದೊರೆತ ಸವಲತ್ತು' ಎಂಬ ಜವಾಬ್ದಾರಿಯುತ ಮನಸ್ಥಿತಿ ಮಾತ್ರ ಕಾಣಿಸುತ್ತದೆ.

ಅದೇ ಕ್ಷಣದಲ್ಲಿ ಭಾರತದ ರಸ್ತೆಗಳು ನೆನಪಾಗುತ್ತವೆ. ನಮ್ಮಲ್ಲೂ ಉತ್ತಮ ರಸ್ತೆ ನಿರ್ಮಾಣವಾಗುತ್ತಿದೆ. ಎಕ್ಸ್‌ಪ್ರೆಸ್ ವೇಗಳು ಹೆಚ್ಚುತ್ತಿವೆ. ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ, ದೆಹಲಿ–ಮುಂಬೈ ಎಕ್ಸ್‌ಪ್ರೆಸ್‌ವೇ, ಸಮೃದ್ಧಿ ಮಹಾಮಾರ್ಗದಂತಹ ಯೋಜನೆಗಳು ಹೊಸ ಯುಗದ ಸೂಚನೆ ನೀಡುತ್ತಿವೆ. ಆದರೆ ರಸ್ತೆಗಿಂತ ಮೊದಲು ನಮ್ಮ ಚಾಲನಾ ಸಂಸ್ಕೃತಿ ಅಭಿವೃದ್ಧಿಯಾಗಬೇಕಿದೆ. ಜರ್ಮನಿಯಲ್ಲಿ ಲೇನ್ ಶಿಸ್ತು ಜೀವ ಉಳಿಸುತ್ತದೆ; ನಮ್ಮಲ್ಲಿ ಲೇನ್ ಅನೇಕ ಬಾರಿ ಕೇವಲ ಬಣ್ಣದ ಗೆರೆಗಳಾಗಿ ಉಳಿಯುತ್ತದೆ.

ಆಟೋಬಾನ್‌ನ ದೊಡ್ಡ ವೈಶಿಷ್ಟ್ಯ ಅದರ ವಿನ್ಯಾಸ. ಅಗಲವಾದ ಬಹುಲೇನ್ ರಸ್ತೆಗಳು, ಮಧ್ಯ ವಿಭಜಕ, ಕಡಿಮೆ ತಿರುವುಗಳು, ತುರ್ತು ಲೇನ್, ಪ್ರತಿ ಎರಡು ಕಿ.ಮೀಗೆ ತುರ್ತು ದೂರವಾಣಿ ಹಾಗೂ ವಿಶ್ರಾಂತಿ ಕೇಂದ್ರಗಳಂತಹ ಸೌಲಭ್ಯಗಳನ್ನು ಚಾಲಕರ ಅನುಕೂಲಕ್ಕಾಗಿ ರೂಪಿಸಲಾಗಿದೆ. ರಸ್ತೆ ಕೇವಲ ವಾಹನಗಳಿಗಲ್ಲ, ಪ್ರಯಾಣಿಕರ ಸುರಕ್ಷತೆ ಮತ್ತು ಆರಾಮವನ್ನೂ ಗಮನದಲ್ಲಿಟ್ಟುಕೊಂಡು ನಿರ್ಮಿಸಲಾಗಿದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.



ಲೇನ್ ಶಿಸ್ತು ಪಾಲನೆಗೆ ಉದಾಹರಣೆಯಂತಿದೆ ಈ ಚಿತ್ರ

ಕರ್ನಾಟಕದಲ್ಲಿಯೂ ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ ವೇಗವಾಗಿ ನಡೆಯುತ್ತಿದೆ. ಆದರೆ ಹೆದ್ದಾರಿ ಪಕ್ಕದ ಅಸ್ತವ್ಯಸ್ತ ಬೆಳವಣಿಗೆ, ಅತಿಕ್ರಮಣ, ಎಚ್ಚರಿಕೆ ಫಲಕಗಳ ಕೊರತೆ ಮತ್ತು ಪಾದಚಾರಿಗಳ ಸುರಕ್ಷತೆಯಂತಹ ಸಮಸ್ಯೆಗಳು ಇನ್ನೂ ಉಳಿದಿವೆ. ರಸ್ತೆ ನಿರ್ಮಾಣದಲ್ಲಿ ನಾವು ಸಾಕಷ್ಟು ಮುನ್ನಡೆ ಸಾಧಿಸಿದ್ದೇವೆ. ಆದರೆ ರಸ್ತೆ ಬಳಕೆಯ ಶಿಸ್ತು ಮತ್ತು ಸುರಕ್ಷತಾ ಸಂಸ್ಕೃತಿಯಲ್ಲಿ ಇನ್ನೂ ಬಹಳ ದೂರ ಸಾಗಬೇಕಿದೆ.

ಇದನ್ನು ನೋಡಿದಾಗ ಕರ್ನಾಟಕದ ಮಲೆನಾಡು ಪ್ರದೇಶಗಳು ನೆನಪಾಗುತ್ತವೆ. ರಸ್ತೆ ವಿಸ್ತರಣೆ ಹೆಸರಿನಲ್ಲಿ ಮರಗಳು ಬೀಳುತ್ತವೆ; ಕಾಡುಗಳ ಸಂಪರ್ಕ ಕಡಿದುಹೋಗುತ್ತದೆ; ಪ್ರಾಣಿಗಳು ರಸ್ತೆ ದಾಟುವಾಗ ಸಾವಿಗೀಡಾಗುತ್ತವೆ. ಅಭಿವೃದ್ಧಿ ಬೇಕು, ಆದರೆ ಪ್ರಕೃತಿಯ ಉಸಿರುಗಟ್ಟಿಸಿ ಅಲ್ಲ ಎಂಬ ಅರಿವು ನಮ್ಮ ಯೋಜನೆಗಳ ಕೇಂದ್ರಬಿಂದು ಆಗಬೇಕಿದೆ.

ಆಟೋಬಾನ್‌ನ ಯಶಸ್ಸಿನ ಮೂಲ ಕೇವಲ ತಂತ್ರಜ್ಞಾನದಲ್ಲಿಲ್ಲ; ಕಾನೂನು ಪಾಲನೆಯಲ್ಲಿದೆ. ಚಾಲನಾ ಪರವಾನಗಿ ಪಡೆಯುವುದು ಜರ್ಮನಿಯಲ್ಲಿ ಸುಲಭವಲ್ಲ. ಕಠಿಣ ತರಬೇತಿ, ಕಟ್ಟುನಿಟ್ಟಿನ ಪರೀಕ್ಷೆ, ನಿಯಮ ಉಲ್ಲಂಘನೆಗೆ ಭಾರೀ ದಂಡ ವಿಧಿಸಲಾಗುತ್ತದೆ. ಇವೆಲ್ಲ ಚಾಲಕರಲ್ಲಿ ಹೊಣೆಗಾರಿಕೆಯನ್ನು ಬೆಳೆಸುತ್ತವೆ. ಭಾರತದಲ್ಲೂ ಕಾನೂನುಗಳಿವೆ; ಆದರೆ ಅವುಗಳ ಅನುಷ್ಠಾನ ಮತ್ತು ಸಾರ್ವಜನಿಕ ಮನೋಭಾವ ಇನ್ನಷ್ಟು ಗಟ್ಟಿಯಾಗಬೇಕಿದೆ.

ಇತಿಹಾಸದ ದೃಷ್ಟಿಯಿಂದಲೂ ಆಟೋಬಾನ್ ಕುತೂಹಲಕರ. 20ನೇ ಶತಮಾನದ ಆರಂಭದಲ್ಲಿ ಶುರುವಾದ ಈ ಹೆದ್ದಾರಿ ಜಾಲವನ್ನು ನಂತರ ನಾಜಿ ಆಡಳಿತ ದೊಡ್ಡ ಮಟ್ಟದಲ್ಲಿ ವಿಸ್ತರಿಸಿತು. ಆದರೆ ಯುದ್ಧಾನಂತರ ಜರ್ಮನಿ ಅದನ್ನು ಪುನರ್‌ನಿರ್ಮಿಸಿ ಆಧುನಿಕ ಆರ್ಥಿಕತೆಯ ಧಮನಿಯನ್ನಾಗಿ ರೂಪಿಸಿತು. ಇಂದು ಅದು ಕೇವಲ ರಸ್ತೆ ಅಲ್ಲ; ಜರ್ಮನಿಯ ಕೈಗಾರಿಕೆ, ಲಾಜಿಸ್ಟಿಕ್ಸ್, ಪ್ರವಾಸೋದ್ಯಮ ಮತ್ತು ವಾಹನ ತಂತ್ರಜ್ಞಾನದ ಜೀವನಾಡಿ.

ವೋಕ್ಸ್‌ವ್ಯಾಗನ್, ಬಿಎಂಡಬ್ಲ್ಯು, ಮರ್ಸಿಡಿಸ್, ಪೋಶೆ, ಔಡಿ–ಈ ಜಾಗತಿಕ ಕಾರು ಬ್ರ್ಯಾಂಡ್‌ಗಳ ಪರೀಕ್ಷಾ ನೆಲವೂ ಆಟೋಬಾನ್‌ವೇ. ಕೆಲ ವಿಭಾಗಗಳಲ್ಲಿ ಕಾರುಗಳು ಗಂಟೆಗೆ 400 ಕಿ.ಮೀಗೂ ಹೆಚ್ಚು ವೇಗ ತಲುಪಿದ ದಾಖಲೆಗಳಿವೆ. ಆದರೆ ಅಷ್ಟು ವೇಗದ ನಡುವೆಯೂ ಅಪಘಾತ ಪ್ರಮಾಣ ಕಡಿಮೆ ಎನ್ನುವುದು ಜರ್ಮನ್ ಶಿಸ್ತು ಮತ್ತು ಎಂಜಿನಿಯರಿಂಗ್ ಸಾಮರ್ಥ್ಯದ ಸಾಕ್ಷಿ.

ಒಟ್ಟಿನಲ್ಲಿ ಆಟೋಬಾನ್ ನಮಗೆ ಹೇಳುವ ದೊಡ್ಡ ಪಾಠ ಏನೆಂದರೆ, ಉತ್ತಮ ರಸ್ತೆ ಎಂದರೆ ಕೇವಲ ವೇಗದ ದಾರಿ ಅಲ್ಲ; ಅದು ನಾಗರಿಕತೆಯ ದಾರಿ. ರಸ್ತೆ ಗುಣಮಟ್ಟ, ಕಾನೂನು, ಚಾಲನಾ ಸಂಸ್ಕೃತಿ, ಪರಿಸರ ಕಾಳಜಿ ಮತ್ತು ಸಾರ್ವಜನಿಕ ಹೊಣೆಗಾರಿಕೆ ಇವೆಲ್ಲ ಒಂದಾದಾಗ ಮಾತ್ರ ಸುರಕ್ಷಿತ ಸಂಚಾರ ವ್ಯವಸ್ಥೆ ರೂಪುಗೊಳ್ಳುತ್ತದೆ.

ಭಾರತ, ವಿಶೇಷವಾಗಿ ಕರ್ನಾಟಕ, ಈಗ ವೇಗವಾಗಿ ಹೆದ್ದಾರಿಗಳ ಯುಗಕ್ಕೆ ಕಾಲಿಡುತ್ತಿದೆ. ಆದರೆ ಜರ್ಮನಿಯ ಆಟೋಬಾನ್‌ನಿಂದ ನಾವು ಕಲಿಯಬೇಕಾದದ್ದು ವೇಗವಲ್ಲ; ಶಿಸ್ತು. ರಸ್ತೆ ನಿರ್ಮಾಣವಲ್ಲ; ರಸ್ತೆ ಸಂಸ್ಕೃತಿ. ಆಗ ಮಾತ್ರ ನಮ್ಮ ಹೆದ್ದಾರಿಗಳೂ ಅಭಿವೃದ್ಧಿಯ ನಿಜವಾದ ದಾರಿಗಳಾಗುತ್ತವೆ.


'ಆಟೋಬಾನ್' ಹೆದ್ದಾರಿ ಜಾಲದ ಕಲ್ಪನೆ 20ನೇ ಶತಮಾನದ ಆರಂಭದಲ್ಲಿಯೇ ಮೂಡಿಬಂದಿತ್ತು. ಆಟೋಬಾನ್ ಮಾದರಿಯ ಮೊದಲ ರಸ್ತೆ 1921ರಲ್ಲಿ ಬರ್ಲಿನ್ ಸಮೀಪ ರೇಸಿಂಗ್ ಟ್ರ್ಯಾಕ್ ರೂಪದಲ್ಲಿ ನಿರ್ಮಾಣಗೊಂಡಿತು. ಆದರೆ ಈ ವೇಗದ ರಸ್ತೆ ಜಾಲದ ನಿಜವಾದ ವಿಸ್ತರಣೆ 1930ರ ದಶಕದಲ್ಲಿ ಆರಂಭವಾಯಿತು.

1932ರಲ್ಲಿ ಕಲೋನ್ ಮತ್ತು ಬಾನ್ ನಗರಗಳನ್ನು ಸಂಪರ್ಕಿಸುವ ಮೊದಲ ಸಾರ್ವಜನಿಕ ಹೆದ್ದಾರಿ ಆರಂಭಗೊಂಡಿತು. ಬಳಿಕ ನಾಜಿ ಆಡಳಿತದ ಅವಧಿಯಲ್ಲಿ ಅಡಾಲ್ಫ್ ಹಿಟ್ಲರ್ ಆಟೋಬಾನ್ ಯೋಜನೆಯನ್ನು ದೊಡ್ಡಮಟ್ಟದಲ್ಲಿ ಉತ್ತೇಜಿಸಿದನು. ಸಾಮಾನ್ಯವಾಗಿ ಇದನ್ನು ಮಿಲಿಟರಿ ಉದ್ದೇಶಕ್ಕಾಗಿ ನಿರ್ಮಿಸಲಾಯಿತು ಎನ್ನುವ ಕಲ್ಪನೆ ಇದ್ದರೂ, ವಾಸ್ತವದಲ್ಲಿ ಇದು ನಿರುದ್ಯೋಗ ನಿವಾರಣೆ ಮತ್ತು ರಾಷ್ಟ್ರೀಯ ಅಭಿವೃದ್ಧಿಯ ಯೋಜನೆ ಎಂಬ ರೂಪದಲ್ಲಿ ಪ್ರಚಾರಗೊಂಡಿತು. ಸಾವಿರಾರು ಜನರಿಗೆ ಉದ್ಯೋಗ ಒದಗಿಸುವಲ್ಲಿ ಈ ಯೋಜನೆ ಪ್ರಮುಖ ಪಾತ್ರ ವಹಿಸಿತು.

ಎರಡನೇ ಮಹಾಯುದ್ಧದ ನಂತರ ಜರ್ಮನಿಯ ರಸ್ತೆ ಜಾಲ ಭಾರೀ ಹಾನಿಗೊಳಗಾದರೂ, ಬಳಿಕ ಅದನ್ನು ಪುನರ್‌ನಿರ್ಮಿಸಿ ಆಧುನಿಕಗೊಳಿಸಲಾಯಿತು. ಪಶ್ಚಿಮ ಜರ್ಮನಿ ಅತ್ಯಾಧುನಿಕ ಮತ್ತು ವಿಶಾಲ ಹೆದ್ದಾರಿ ವ್ಯವಸ್ಥೆಯನ್ನು ರೂಪಿಸಿದರೆ, ಪೂರ್ವ ಜರ್ಮನಿ (ಜಿಡಿಆರ್) ಸೀಮಿತ ಮಟ್ಟದ ರಸ್ತೆ ಜಾಲವನ್ನಷ್ಟೇ ಹೊಂದಿತ್ತು.

1990ರಲ್ಲಿ ಜರ್ಮನಿ ಪುನರ್ ಏಕೀಕರಣಗೊಂಡ ನಂತರ ಆಟೋಬಾನ್ ಜಾಲ ಮತ್ತಷ್ಟು ವಿಸ್ತಾರಗೊಂಡಿತು. ಯುರೋಪಿನ ವಿವಿಧ ರಾಷ್ಟ್ರಗಳನ್ನು ಸಂಪರ್ಕಿಸುವ ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನಾಡಿಯಾಗಿ ಅದು ರೂಪುಗೊಂಡಿತು. ಇಂದು ಆಟೋಬಾನ್ ಕೇವಲ ರಸ್ತೆ ವ್ಯವಸ್ಥೆಯಲ್ಲ; ಆಧುನಿಕ ಜರ್ಮನಿಯ ಅಭಿವೃದ್ಧಿಯ ಸಂಕೇತವಾಗಿದೆ.


ಕಣ್ಣು ಹಾಯಿಸಿದಷ್ಟು ದೂರ ಕಾಣುವ ರಸ್ತೆ...



ಮೆಟ್ಟಿಲುಬಾವಿಗಳ...

10ನೇ ಪುಟದಿಂದ...

ಮೆಟ್ಟಿಲುಬಾವಿಗಳಲ್ಲಿನ ನೀರಿನ ಆವಿಯಾಗುವಿಕೆ ಸುತ್ತಲಿನ ಉಷ್ಣತೆಯನ್ನು ಕಡಿಮೆ ಮಾಡಿ ತಂಪಾದ ವಾತಾವರಣವನ್ನು ಸೃಷ್ಟಿಸುತ್ತಿತ್ತು. ಅಸಂಖ್ಯಾತ ಪ್ರಯಾಣಿಕರು ತಮ್ಮ ಪಯಣವನ್ನು ಮುಂದುವರಿಸುವ ಮುನ್ನ ಈ ತಂಪಾದ ಓಯಸಿಸ್‌ಗಳಲ್ಲಿ ವಿಶ್ರಾಂತಿ ಪಡೆದುಕೊಳ್ಳುತ್ತಿದ್ದರು. ಮೆಟ್ಟಿಲುಬಾವಿಗಳು ಸಾಮಾನ್ಯವಾಗಿ ಶಿಲ್ಪಕಲೆಗಳಿಂದ ಅಲಂಕರಿಸಲ್ಪಟ್ಟಿರುತ್ತವೆ. ಆದರೆ ಅದು ಕಡ್ಡಾಯವಲ್ಲ. ಹೊಲಗಳಿಗೆ ನೀರುಣಿಸಲು ನಿರ್ಮಿಸಲಾದ ಕೆಲವು ಬಾವಿಗಳಲ್ಲಿ ನೀರನ್ನು ಮೇಲಕ್ಕೆತ್ತಲು ಯಾಂತ್ರಿಕ ವ್ಯವಸ್ಥೆಗಳಿರುತ್ತಿದ್ದವು. ಅಲ್ಲಿಂದ ಕಾಲುವೆಗಳ ಮೂಲಕ ಹೊಲಗಳಿಗೆ ನೀರನ್ನು ಹರಿಸಲಾಗುತ್ತಿತ್ತು. ಶಾಸನಗಳಲ್ಲಿ ಇಂತಹ ಬಾವಿಗಳನ್ನು 'ಕಪಿಲೆಯ ಬಾವಿ' ಎಂದು ಉಲ್ಲೇಖಿಸಲಾಗಿದೆ.

ಮೆಟ್ಟಿಲುಗಳ ಮೂಲಕ ನೀರಿನ ಮಟ್ಟಕ್ಕೆ ನಡೆದುಕೊಂಡು ಹೋಗಲು ಅನುವು ಮಾಡಿಕೊಡುವ ಬಾವಿಗಳನ್ನು 'ನಾದ ಬಾವಿ' ಅಥವಾ 'ನಡದ ಬಾವಿ' ಎಂದು ಕರೆಯಲಾಗುತ್ತದೆ. ನಾಲ್ಕೂ ಕಡೆಗಳಲ್ಲಿ ಮೆಟ್ಟಿಲುಗಳನ್ನು ಹೊಂದಿರುವ ಕಲ್ಯಾಣಿಗಳನ್ನು 'ಕೋನೇರಿ' ಎಂದು ಕರೆಯುತ್ತಾರೆ. ಪ್ರಾಚೀನ ಕಾಲದಲ್ಲಿ ನೀರನ್ನು ಪವಿತ್ರವೆಂದು ಪರಿಗಣಿಸಲಾಗುತ್ತಿತ್ತು. ಆದ್ದರಿಂದಲೇ ಮೆಟ್ಟಿಲುಬಾವಿಗಳಲ್ಲಿನ ನೀರನ್ನು ಶಾಸನಗಳಲ್ಲಿ ಹೆಚ್ಚಾಗಿ 'ಗಂಗಮ್ಮ' ಎಂದು ಉಲ್ಲೇಖಿಸಲಾಗಿದೆ.

ಚಾಲುಕ್ಯರು ಮತ್ತು ಅವರ ನಂತರದ ಕಾಲದ ಅಸಂಖ್ಯಾತ ದೇವಸ್ಥಾನಗಳನ್ನು ಹೊಂದಿರುವ ಐಹೊಳೆಯಲ್ಲಿ ಹಲವು ಮೆಟ್ಟಿಲುಬಾವಿಗಳಿವೆ. ಅವುಗಳಲ್ಲಿ ಹುಚ್ಚಿಮಲ್ಲಿ ಗುಡಿಯ ಸಮೀಪದ ಬಾವಿಯು ಅತ್ಯಂತ ಸುಂದರವಾಗಿದೆ. ಚಾಲುಕ್ಯರ ನಂತರ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರೂ ಮೆಟ್ಟಿಲುಬಾವಿಗಳನ್ನು ನಿರ್ಮಿಸಿದ್ದರು. ಇವುಗಳಲ್ಲಿ ಕೆಲವು ಯಾದಗಿರಿ ಜಿಲ್ಲೆಯ ಸಿರಿವಾಳದ ದೇವಸ್ಥಾನಗಳಲ್ಲಿ ಇಂದಿಗೂ ಉಳಿದುಕೊಂಡಿವೆ. ಶಿರವಾಳದ ಬಹುತೇಕ ಬಾವಿಗಳು ಸರಳವಾಗಿದ್ದರೂ, ನನ್ನಯ್ಯ–ನಾದಯ್ಯ ದೇವಸ್ಥಾನದ ಬಳಿಯಿರುವ ಒಂದು ಮೆಟ್ಟಿಲುಬಾವಿ ಮಹಾಕಾವ್ಯಗಳು ಮತ್ತು ಪಂಚತಂತ್ರದ ಶಿಲ್ಪಕೆತ್ತನೆಗಳಿಂದ ಅಲಂಕೃತಗೊಂಡಿದೆ.


ಬಂಡೆಯನ್ನೇ ಕೊರೆದು ಮೆಟ್ಟಿಲು ಮಾಡಿರುವುದು

ಮೆಟ್ಟಿಲುಬಾವಿಗಳು ಹೆಚ್ಚಾಗಿ ಶುಷ್ಕ ಪ್ರದೇಶಗಳಲ್ಲಿ ಕಂಡುಬಂದರೂ, ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿಯೂ ಅವು ಸಂಪೂರ್ಣವಾಗಿ ಅಪರೂಪವಲ್ಲ. ಅಂತಹ ಪ್ರದೇಶಗಳ ಬಾವಿಗಳು ಸಾಮಾನ್ಯವಾಗಿ ಕಡಿಮೆ ಆಳವನ್ನು ಹೊಂದಿರುತ್ತವೆ. ಶಿವಮೊಗ್ಗ ಜಿಲ್ಲೆಯ ಕೆಳದಿ ನಾಯಕರ ಕೋಟೆಯಾದ ಕವಲೇದುರ್ಗದಲ್ಲಿರುವ ಮೆಟ್ಟಿಲುಬಾವಿಯು ಇದಕ್ಕೆ ಉತ್ತಮ ಉದಾಹರಣೆ. ಕೆಲವೊಮ್ಮೆ ಸಾಮಾನ್ಯ ಬಾವಿಗಳಿಗೂ ಕೆಳಗಿಳಿಯಲು ಮೆಟ್ಟಿಲುಗಳನ್ನು ನಿರ್ಮಿಸಲಾಗುತ್ತಿತ್ತು. ಉಡುಪಿಯ ಶಿರೂರು ಮಠದ ಸಮೀಪದ ಬಾವಿಯು ಇದಕ್ಕೆ ಉತ್ತಮ ನಿದರ್ಶನವಾಗಿದೆ.

ಇಂದು ಅನೇಕ ಮೆಟ್ಟಿಲುಬಾವಿಗಳು ತಮ್ಮ ಮೂಲ ಉದ್ದೇಶವನ್ನು ಕಳೆದುಕೊಂಡಿದ್ದರೂ, ಅವುಗಳ ಸಾಂಸ್ಕೃತಿಕ ಮತ್ತು ಸೌಂದರ್ಯಾತ್ಮಕ ಮಹತ್ವ ಮಾತ್ರ ಉಳಿದುಕೊಂಡಿದೆ. ಅವುಗಳನ್ನು ಕೇವಲ ನೀರನ್ನು ಪಡೆಯುವ ರಚನೆಗಳೆಂದು ನೋಡುವುದು ಸಾಧ್ಯವಿಲ್ಲ. ಅವು ಭೂಮಿಯ ಆಳದಲ್ಲಿ ರೂಪುಗೊಂಡ ಪರ್ಯಾಯ ಪ್ರಪಂಚಗಳು; ಅಲ್ಲಿ ನೀರು ಮತ್ತು ಆಕಾಶ ಪರಸ್ಪರ ಪ್ರತಿಬಿಂಬಗಳಾಗಿ ಒಂದನ್ನೊಂದು ಸಂವಾದಿಸುತ್ತವೆ. ಡಚ್ ಕಲಾವಿದ ಜೆರೂನ್ ವಾನ್ ವೆಸ್ಟೆನ್ ಹೇಳುವಂತೆ, ಮೆಟ್ಟಿಲುಬಾವಿಯೊಳಗೆ ಪ್ರವೇಶಿಸಿದಾಗ, 'ಮನುಷ್ಯನು ಈ ಪ್ರಪಂಚದ ಸಮಯ ಮತ್ತು ಸ್ಥಳದ ಪ್ರಜ್ಞೆಯನ್ನು ಮರೆತು, ತಳದಲ್ಲಿರುವ ಅತ್ಯಂತ ನಿಶ್ಚಲವಾದ ನೀರಿನಲ್ಲಿ ಆಕಾಶವನ್ನು ಕಾಣುತ್ತಾನೆ'.

ಬಹುಶಃ ಅದಕ್ಕಾಗಿಯೇ ಮೆಟ್ಟಿಲುಬಾವಿಗಳು ಇಂದಿಗೂ ನಮ್ಮನ್ನು ಸೆಳೆಯುತ್ತವೆ. ಭೂಮಿಯೊಳಗೆ ಇಳಿಯುವ ಪ್ರತಿಯೊಂದು ಮೆಟ್ಟಿಲೂ ಕೇವಲ ನೀರಿನತ್ತವಲ್ಲ, ಮನುಷ್ಯ ಮತ್ತು ಪ್ರಕೃತಿಯ ಸಾವಿರಾರು ವರ್ಷಗಳ ಸಂಬಂಧದತ್ತಲೂ ನಮ್ಮನ್ನು ಕರೆದೊಯ್ಯುತ್ತದೆ.


ಅನುವಾದ: ಕೀರ್ತಿಕುಮಾರಿ ಎಂ.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಕಾಲ್ಚೆಂಡಿನಂತೆ ಕಂಡ ಆಮೆ!



ಗುಂಡ ಆಟವಾಡಲು ಮೈದಾನಕ್ಕೆ ತೆರಳಿದ್ದ. ಮನೆಯಿಂದ ಕಾಲ್ಚೆಂಡು ಜೊತೆಗೆ ಒಯ್ದಿದ್ದ. ಮೈದಾನದ ಒಂದು ಬದಿಯಲ್ಲಿ ನಿಂತು, ಕಾಲ್ಚೆಂಡನ್ನು ನೆಲದಲ್ಲಿ ಇಟ್ಟು ಒದ್ದ. ಅದು ಬಹುದೂರ ಹಾರಿ ಉರುಳಿಕೊಂಡು ಹೋಯಿತು. ಅದರತ್ತ ಸಾಗಿದ ಗುಂಡ ಗೋಲ್‌ಪೋಸ್ಟ್ ನೋಡಿ ಜೋರಾಗಿ ಮತ್ತೆ ಕಾಲ್ಚೆಂಡನ್ನು ಒದ್ದ. ಆದರೆ ಅದು ಕಾಲ್ಚೆಂಡಾಗಿರಲಿಲ್ಲ. ಬದಲಾಗಿ ಆಮೆಯೊಂದು ತನ್ನ ತಲೆ, ಕೈಕಾಲುಗಳನ್ನು ಮುದುಡಿ ಕುಳಿತಿತ್ತು. ಗುಂಡನಿಂದ ಒದೆಯಲ್ಪಟ್ಟ ಆಮೆ ಕಾಲ್ಚೆಂಡಿನಂತೆ ಹಾರಿತು.

ಡಶ್ಗ ಚಕ್ಕು
ಕೀಶ್ರುಶ್ಪ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗಣಿತದಲ್ಲಿ ಗರ್ದಿ ಗಮ್ಮತ್ತು

18X2=36 ಇಲ್ಲಿರುವ ಗುಣ್ಯಗುಣಕ ಗುಣಲಬ್ಧಗಳನ್ನು ಗಮನಿಸಿ. ಯಾವ ಅಂಕಿಗಳೂ ಪುನರಾವರ್ತನೆಯಾಗಿಲ್ಲ. ಹಾಗೆ

12X5=60

13X4=52

17X4=68

ನೀವು ಇಂಥ ಇನ್ನೆರಡು ಗುಣಾಕಾರ ಕಂಡುಹಿಡಿಯಬಲ್ಲಿರಾ?

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಾಟ

ಇಲ್ಲಿ ಕೊಟ್ಟಿರುವ 'ವರ' ಎಂಬ ಮೂರು ಪದಗಳಿಗೆ ಹಿಂದೆ ಒಂದು ಅಕ್ಷರ ಕೊನೆಗೆ ಎರಡು ಅಕ್ಷರ ಸೇರಿಸಿ ಒಂದು ಅರ್ಥಬದ್ಧ ಸಂಯುಕ್ತ ಪದ ರಚಿಸಿ.

___ವರವರವರ______

ಜಾಣಪದ ಆಟ

ಕೂಡಿಸಿ ಓದು–ಬಿಡಿಸಿ ಓದು

1	ಆಗಮನ	ಆಗಮನ
2	ಆಗರ	ಆಗರ
3	ಆಗ್ರಹ	ಆಗ್ರಹ
4	ಆರತಿ	ಆರತಿ
5	ಆಕರ	ಆಕರ
6	ಆಕಾರ	ಆಕಾರ
7	ಆದರ	ಆದರ
8	ಆಶ್ರಮ	ಆಶ್ರಮ
9	ಆವಾರ	ಆವಾರ
10	ಆಲಯ	ಆಲಯ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ರಂಪ	+	ಗತಿ	+	ಭೂ	=	
2	ಜನ	+	ಮನು	+	ದಿ	=	
3	ನೆಪ	+	ಕರಿ	+	ಲ್ವ	=	
4	ಪಾಕ	+	ದರ	+	ರ್ಶ	=	
5	ದಡಿ	+	ಮಾನು	+	ತು	=	

ಸಾಹಿತಿ–ಕ್ವಿಜ್

1	ನಡೆದಾಡುವ ವಿಶ್ವಕೋಶವೆಂದು ಯಾರನ್ನು ಕರೆಯುತ್ತಿದ್ದರು?	
2	ಸಮನ್ವಯ ಕವಿ ಎಂದು ಯಾರನ್ನು ಕರೆಯುತ್ತಿದ್ದರು?	
3	ಚುಟುಕು ಬ್ರಹ್ಮ ಎಂದು ಯಾರನ್ನು ಕರೆಯುತ್ತಿದ್ದರು?	
4	ವಿಕಟಕವಿ ಎಂದು ಯಾರಿಗೆ ಕರೆಯುತ್ತಾರೆ?	
5	ಕನ್ನಡದ ಆಸ್ತಿ ಎಂದು ಯಾರನ್ನು ಕರೆಯುತ್ತಿದ್ದರು?	

ಕೊಂಚತಂತ್ರ

ಡಾ.ಖಾದರರು ಹೇಳಿದ ಮೇಲೆ ಈಗ ಸಿರಿಧಾನ್ಯಗಳದ್ದೇ ಸುದ್ದಿ. ಹೌದು. ಸಿರಿ ಧಾನ್ಯಗಳೆಂದರೆ ನಿರ್ದಿಷ್ಟವಾಗಿ ಗುರುತಿಸುವಂತೆ ಇಲ್ಲಿ ಒಂದು ಸೂತ್ರ ಮಾಡಲಾಗಿದೆ. ಈ ಸೂತ್ರ ನೆನಪಿಟ್ಟರೆ ಸಾಕು. ಸೂತ್ರ: UNASK

U–ಊದಲು
N–ನವಣೆ
A–ಅರ್ಕ
S–ಸಾವಿ
K–ಕೊರಲೆ

ಶಾಲೆಗೆ ಬಂತು ಯೋಗ

ಯೋಗ ಬಂತಮ್ಮ ಸುಯೋಗ ಬಂತಮ್ಮ
ಯೋಗ ಬಂತಮ್ಮ ಶಾಲೆಗೆ ಸುಯೋಗ ಬಂತಮ್ಮ

ಮನಸಿನ ಮಲಿನತೆ ತೊಳೆಯುವ ಯೋಗ
ಮನೋದಾರ್ಢ್ಯ ಹೆಚ್ಚಿಸೊ ಯೋಗ
ತನು ಮನ ರಕ್ಷಣೆ ಮಾಡೊ ಯೋಗ
ಜನಮನ ಮನ್ನಣೆ ಪಡೆದ ಯೋಗ

ಭಕ್ತಿ-ಜ್ಞಾನ-ಜಪ-ತಪ ಯೋಗ
ಯುಕ್ತಿಯಿಂದ ಬದುಕುವ ಯೋಗ
ಶಕ್ತಿವರ್ಧಿಸಲು ಬೇಕು ಯೋಗ
ಮುಕ್ತಿ ಹೊಂದಿರಿ ರೋಗಗಳಿಂದ

ಋಷಿಗಳು ಮೆಚ್ಚಿದ ಈ ಯೋಗ
ಖುಷಿಯನು ಕೊಡುವುದು ಈ ಯೋಗ
ಶಾಂತಿಯ ನೀಡುವ ಈ ಯೋಗ
ರೀತಿನೀತಿಗಳ ಕಲಿಸೋ ಯೋಗ

ಪ್ರಾಣಶಕ್ತಿಗೆ ಈ ಯೋಗ
ತ್ರಾಣವ ನೀಡುವ ಈ ಯೋಗ
ಅನುದಿನ ಅನುಸರಿಸುವ ಯೋಗ
ಆನಂದ ನೆಮ್ಮದಿ ಕೊಡೊ ಯೋಗ

ಯಮ-ನಿಯಮಾದಿ ತಿಳಿಸುವ ಯೋಗ
ಕ್ರಮಬದ್ಧತೆಯ ಅರಿವಿನ ಯೋಗ

ಹುಡುಕಾಟ

ಇಲ್ಲಿ ಕೊಟ್ಟಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ದು ಒಬ್ಬ ಕ್ರಿಕೆಟ್ ಆಟಗಾರನ ಹೆಸರು ಹುಡುಕಿಕೊಡಿ.

1.ವಿಜಯೋತ್ಸವ
2.ಸರಾಗದಾರಿ
3.ವಿಕಟಕವಿ
4.ದಾನಕ್ಕೆ ಕೊಡು
5.ಸರೋಜ ಕೊಪ್ಪಿ

ಉತ್ತರ:________

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ: 1.ಸಂಕಲನ–ಸಂಚಲನ 2.ಸಮಾಚಾರ–ಸದಾಚಾರ 3.ಸರಕಾರ–ಸಹಚಾರ 4.ಹುಲಿಕಾಟ–ಹುಡುಕಾಟ 5.ಧನಪತಿ–ದಳಪತಿ 6.ಬಳೆಗಾರ–ಬಣಗಾರ 7.ಗುರುಗಳು–ಗುಣಗಳು 8.ಅಧಿಕಾರ–ಅಲಂಕಾರ 9.ಅವಮಾನ–ಅಭಿಮಾನ 10.ಅನುಮಾನ–ಅಪಮಾನ

ಜಾಣಪದ ಆಟ 2: 1.ತರಗತಿ 2.ತರಬೇತಿ 3.ತರಕಾರಿ 4.ತರತಮ 5.ತರವಾಡು

ಪದಸಂಕಲನ: 1.ಕೇಶವಗುಡಿ 2.ಜೋಗುಳಗಾನ 3.ತೂಗುಸೇತುವೆ 4.ಸಾಗರಜಲ 5.ಸಮಾಜಮುಖಿ

ಶಬ್ದಾಟ: ರುದ್ರಾಕ್ಷಿಮಾಲೆ

ವರ್ಡ್‌ಗೇಮ್: ಇಲ್ಲಿ ಅಕ್ಷರಗಳು 'H'ನಿಂದ 'O'ವರೆಗೆ ಇವೆ. ಅದನ್ನು ಎಚ್‌2ಒ ಎನ್ನಬಹುದು. H2O ಎಂದರೆ ನೀರು ಅಲ್ಲವೇ..


ಹುಡುಕಾಟ: ಕೃಷ್ಣಮೂರ್ತಿ ಪುರಾಣಿಕ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಮೇಘಾ ರಾಘವೇಂದ್ರ ವಡ್ಡರ
ನರಗುಂದ


ರುಕ್ಮಿಣಿ ಆನೆಸಿದ್ರಿ ಜಿ.
ಹಿರಿಯೂರು


ನಿಹಾರಿಕ ಸಿ.
ಶಿವಮೊಗ್ಗ


ನಂದಿತಾ ಎಸ್.ಎಂ.
ಬೆಂಗಳೂರು


ಸಂಸ್ಕೃತಿ ಎಂ.ಎಸ್.
ಮೈಸೂರು


ಧೃತವಾನ್ ಎ.ಎಸ್.
ತುಮಕೂರು

ನಾಕೌಟ್ ಹಂತಕ್ಕೆ ಆತಿಥೇಯ ಅಮೆರಿಕ

ಮಿಂಚು ಹರಿಸಿದ ಅಲೆಕ್ಸ್ ಫ್ರೀಮನ್ • ಆಸ್ಟ್ರೇಲಿಯಾ ತಂಡಕ್ಕೆ ನಿರಾಸೆ

ಲಾಸ್ ಏಂಜಲೀಸ್ (ಎಎಫ್‌ಪಿ): ಆತಿಥೇಯ ಅಮೆರಿಕ ತಂಡವು ಫಿಫಾ ವಿಶ್ವಕಪ್ ಟೂರ್ನಿಯ ನಾಕೌಟ್ ಹಂತಕ್ಕೆ ಲಗ್ಗೆಯಿಟ್ಟಿತು.

ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಅಮೆರಿಕ ತಂಡವು 2–0ಯಿಂದ ಆಸ್ಟ್ರೇಲಿಯಾ ವಿರುದ್ಧ ಜಯಿಸಿತು. ಎರಡು ದಿನಗಳ ಹಿಂದೆ ಮೆಕ್ಸಿಕೊ ತಂಡವು ನಾಕೌಟ್ ಹಂತ ಪ್ರವೇಶಿಸಿತ್ತು. ಅದರ ನಂತರ ಅಮೆರಿಕ ನಾಕೌಟ್ ಘಟ್ಟಕ್ಕೆ ಅರ್ಹತೆ ಗಳಿಸಿದೆ. ಉಭಯ ತಂಡಗಳೂ ಕೆನಡಾ ದೇಶದೊಂದಿಗೆ ಈ ಟೂರ್ನಿಯ ಜಂಟಿ ಅತಿಥ್ಯ ವಹಿಸಿವೆ.

ಸಿಯಾಟಲ್‌ನಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾದ ಕ್ಯಾಮರಾನ್ ಬರ್ಗೆಸ್ 11ನೇ ನಿಮಿಷದಲ್ಲಿ ಅವರು ಅಮೆರಿಕಕ್ಕೆ ಗೋಲು 'ಉಡುಗೊರೆ' ನೀಡಿದರು. ಇದರಿಂದಾಗಿ ಆತಿಥೇಯರಿಗೆ 1–0 ಮುನ್ನಡೆ ಲಭಿಸಿತು.

ಪ್ರಥಮಾರ್ಧದ ವಿರಾಮಕ್ಕೆ ಎರಡು ನಿಮಿಷಗಳ ಮುನ್ನ ಅಲೆಕ್ಸ್ ಫ್ರೀಮನ್ ಅವರು ಹೆಡರ್ ಮೂಲಕ ಗೋಲು ಗಳಿಸಿ ಅಮೆರಿಕದ ಗೆಲುವಿಗೆ ಮುದ್ರೆಒತ್ತಿದರು.


ಅಮೆರಿಕ	ಆಸ್ಟ್ರೇಲಿಯಾ
2	0

ಹೋದ ವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಅಮೆರಿಕ ತಂಡವು 4–1ರಿಂದ ಪರಗ್ವೆ ವಿರುದ್ಧ ಗೆದ್ದು ಶುಭಾರಂಭ ಮಾಡಿತ್ತು. ಈ ಗೆಲುವಿನೊಂದಿಗೆ ಅಮೆರಿಕ ತಂಡವು ಡಿ ಗುಂಪಿನಲ್ಲಿ ಮೊದಲ ಸ್ಥಾನಕ್ಕೇರಿತು.

'ಎದುರಾಳಿ ತಂಡವು ಉತ್ತಮವಾದ ಆಟಗಾರರನ್ನು ಹೊಂದಿದೆ. ಆದರೂ ನಮ್ಮ ತಂಡವು ಮೊದಲಾರ್ಧದಲ್ಲಿಯೇ ಹಿಡಿತ ಸಾಧಿಸುವಲ್ಲಿ ನಾವು ಯಶಸ್ವಿಯಾದೆವು. ಮುಂದಿನ ಹಂತದಲ್ಲಿ ಇನ್ನೂ ಕಠಿಣ ಸವಾಲುಗಳು ಎದುರಾಗುವುದು ಖಚಿತ. ಅದಕ್ಕಾಗಿ ನಾವು ಸಿದ್ಧರಾಗಿದ್ದೇವೆ' ಎಂದು ಅಮೆರಿಕ ತಂಡದ ಮುಖ್ಯ ಕೋಚ್ ಮಾರಿಸಿಯೊ ಪೊಷೆಟಿನೊ ಹೇಳಿದರು.

'ನಮ್ಮ ಆಟಗಾರರು ಬಹಳ ನಿಧಾನವಾಗಿ ಆಡಿದರು. ಪ್ರತಿಯೊಂದು ಹಂತದಲ್ಲಿಯೂ ಪ್ರತಿಸ್ಪರ್ಧೆಯೊಡ್ಡುವ ಪ್ರಯತ್ನ ಮಾಡಲಿಲ್ಲ. ಆದ್ದರಿಂದ ಗೆಲುವಿನ ಹಾದಿ ಕಷ್ಟವಾಯಿತು. ಎರಡು ಗೋಲುಗಳನ್ನು ಸುಲಭವಾಗಿ ಬಿಟ್ಟುಕೊಟ್ಟೆವು. ಪ್ರಥಮಾರ್ಧದಲ್ಲಿಯಂತೂ ಚುರುಕುತನ ತೋರಲಿಲ್ಲ' ಎಂದು ಆಸ್ಟ್ರೇಲಿಯಾದ ಕೋಚ್ ಟೋನಿ ಪಾಪೊವಿಚ್ ಹೇಳಿದರು.

ಅಭಿಮಾನಿಗಳ ಸಂತಸ: ಫಾಕ್ಸ್ ಬರ್ಗ್‌ನ ಜಿಲೆಟ್ ಕ್ರೀಡಾಂಗಣದಲ್ಲಿ ನಡೆದ ಸ್ಕಾಟ್ಲೆಂಡ್ ಮತ್ತು ಮೊರಾಕ್ಕೊ ಪಂದ್ಯ ನೋಡಲು ಬಂದಿದ್ದವರಲ್ಲಿ ಹಲವರು ಅಮೆರಿಕ ತಂಡದ ಅಟವನ್ನು ಟಿ.ವಿ.ಯಲ್ಲಿ ವೀಕ್ಷಿಸಿದರು. ಅಮೆರಿಕ ತಂಡದ ಪೋಷಾಕು ಧರಿಸಿದ್ದ ಹಲವರು ಬೆಂಬಲ ವ್ಯಕ್ತಪಡಿಸಿದರು.



ಅಮೆರಿಕದ ಅಲೆಕ್ಸ್ ಫ್ರೀಮನ್ (ಮಧ್ಯದಲ್ಲಿ) ತಮ್ಮ ತಂಡಕ್ಕೆ ಎರಡನೇ ಗೋಲು ಗಳಿಸಿಕೊಡಲು ಹೆಡರ್ ಮಾಡಿದ ಕ್ಷಣ. ಆಸ್ಟ್ರೇಲಿಯಾದ ಗೋಲ್‌ಕೀಪರ್ ಪ್ಯಾಟ್ರಿಕ್ ಬೀಚ್ (ಬಲ) ಅವರು ತಡೆಯಲು ಯತ್ನಿಸಿದರು ಎಎಫ್‌ಪಿ ಚಿತ್ರ

ಪಂದ್ಯಗಳು

ಟ್ಯುನೀಷಿಯಾ– ಜಪಾನ್	ಭಾನುವಾರ ಬೆಳಿಗ್ಗೆ 9.30
ಸ್ಪೇನ್– ಸೌದಿ ಅರೇಬಿಯಾ	ಭಾನುವಾರ ರಾತ್ರಿ 9.30
ಬೆಲ್ಜಿಯಂ– ಇರಾನ್	ಭಾನುವಾರ ರಾತ್ರಿ 12.30
ಉರುಗ್ವೆ– ಕೇಪ್ ವೆರ್ದೆ	ಸೋಮವಾರ ಬೆಳಗಿನ ಜಾವ 3.30
ನ್ಯೂಜಿಲೆಂಡ್– ಈಜಿಪ್ಟ್	ಸೋಮವಾರ ಬೆಳಿಗ್ಗೆ 6.30

ಲೈವ್: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜಿಇ5 ಆ್ಯಪ್

ಸೈಬರಿ ಮಿಂಚು: ಮೊರಾಕ್ಕೊಗೆ ಗೆಲುವು



ಬಾಸ್ಟನ್ (ಎಎಫ್‌ಪಿ): ಇಸ್ಮಾಯಿಲ್ ಸೈಬರಿ ಅವರು ಗಳಿಸಿದ ಗೋಲಿನ ನೆರವಿನಿಂದ ಮೊರಾಕ್ಕೊ ತಂಡವು ಫಿಫಾ ವಿಶ್ವಕಪ್‌ನ ಸಿ ಗುಂಪಿನ ಪಂದ್ಯದಲ್ಲಿ 1–0ಯಿಂದ ಸ್ಕಾಟ್ಲೆಂಡ್ ತಂಡವನ್ನು ಮಣಿಸಿತು.

ತನ್ನ ಮೊದಲ ಪಂದ್ಯವನ್ನು ಬಲಿಷ್ಠ ಬ್ರೆಜಿಲ್ ವಿರುದ್ಧ 1–1ರಿಂದ ಡ್ರಾ ಮಾಡಿಕೊಂಡಿದ್ದ ಮೊರಾಕ್ಕೊ ತಂಡವು ನಾಕೌಟ್ ಸನಿಹಕ್ಕೆ ಬಂದು ನಿಂತಿದೆ. ಇದೇ 25ರಂದು ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಹೈಟಿ ತಂಡವನ್ನು ಎದುರಿಸಲಿದೆ.

ಬ್ರೆಜಿಲ್ ವಿರುದ್ಧದ ಪಂದ್ಯದಲ್ಲೂ ಗೋಲು ದಾಖಲಿಸಿ ಡ್ರಾ ಸಾಧಿಸಲು ಸಹಾಯ ಮಾಡಿದ್ದ ಇಸ್ಮಾಯಿಲ್ ಅವರು ಶುಕ್ರವಾರವೂ ಮಿಂಚು ಹರಿಸಿ ದರು. ಪಂದ್ಯ ಆರಂಭವಾಗಿ ಕೇವಲ 71 ಸೆಕೆಂಡ್‌ಗಳಲ್ಲಿ ಗೋಲು ದಾಖಲಿಸಿದರು. ಇದು ಗೆಲುವಿಗೆ ನಿರ್ಣಾಯಕವಾಯಿತು.

ಸ್ಪೇನ್‌ನಲ್ಲಿ ಜನಿಸಿ, ಬೆಲ್ಜಿಯಂನಲ್ಲಿ ವಿದ್ಯಾಭ್ಯಾಸ, ಫುಟ್‌ಬಾಲ್ ತರಬೇತಿ ಪಡೆದಿರುವ ಇಸ್ಮಾಯಿಲ್ ಅವರು ಸದ್ಯ ಮೊರಾಕ್ಕೊ ಪರ ಆಡುತ್ತಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೊರಾಕ್ಕೊ ಐದನೇ ಸ್ಥಾನದಲ್ಲಿದ್ದರೆ, ಸ್ಕಾಟ್ಲೆಂಡ್ 40ನೇ ಕ್ರಮಾಂಕದಲ್ಲಿದೆ.

ಮೊರಾಕ್ಕೊ	ಸ್ಕಾಟ್ಲೆಂಡ್
1	0

ಬ್ರೆಜಿಲ್ ಜಯಭೇರಿ • ಟೂರ್ನಿಯಿಂದ ಹೈಟಿ ನಿರ್ಗಮನ

ಕುನ್ಹಾ, ವಿನೀಷಿಯಸ್ ಮಿಂಚು

ಫಿಲಡೆಲ್ಫಿಯಾ (ಎಎಫ್‌ಪಿ): ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡವು ಶುಕ್ರವಾರ ನಡೆದ ಪಂದ್ಯದಲ್ಲಿ ಹೈಟಿ ವಿರುದ್ಧ ಪಾರಮ್ಯ ಮೆರೆಯಿತು.

ಮೊದಲ ಪಂದ್ಯದಲ್ಲಿ 1–1ರಿಂದ ಮೊರಾಕ್ಕೊ ವಿರುದ್ಧ ಡ್ರಾ ಸಾಧಿಸಿದ್ದ ಬ್ರೆಜಿಲ್ ತಂಡವು ಈ ಪಂದ್ಯದಲ್ಲಿ 3–0ಯಿಂದ ಹೈಟಿಯನ್ನು ಮಣಿಸಿತು. ತಂಡದ ಮಥಾಯಿಸ್ ಕುನ್ಹಾ ಎರಡು ಗೋಲು ಹೊಡೆದರು. ವಿನೀಷಿಯಸ್ ಜೂನಿಯರ್ ಒಂದು ಗೋಲು ಹೊಡೆದರು. ಅವರು ಮೊದಲ ಪಂದ್ಯದಲ್ಲಿಯೂ ಗೋಲು ಗಳಿಸಿದ್ದರು.

'ತಂಡವು ಪರಿಪೂರ್ಣ ಪ್ರದರ್ಶನ ನೀಡಿದೆ' ಎಂದು ಬ್ರೆಜಿಲ್ ಕೋಚ್ ಕಾರ್ಲೊ ಎನ್ಸಿಲೊಟಿ ಹೇಳಿದರು.

ಈ ಗೆಲುವಿನೊಂದಿಗೆ ಬ್ರೆಜಿಲ್ ತಂಡವು ಸಿ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಇನ್ನೊಂದು ಪಂದ್ಯ ಬಾಕಿ ಇದ್ದು, ಅದರಲ್ಲಿ ಜಯಿಸಿದರೆ ತಂಡಕ್ಕೆ ನಾಕೌಟ್ ಹಾದಿ ಸುಗಮವಾಗಲಿದೆ. ಬುಧವಾರ ಮಿಯಾಮಿಯಲ್ಲಿ ನಡೆಯಲಿರುವ ಪಂದ್ಯದಲ್ಲಿ ಬ್ರೆಜಿಲ್ ತಂಡವು ಸ್ಕಾಟ್ಲೆಂಡ್ ಎದುರು ಕಣಕ್ಕಿಳಿಯಲಿದೆ.

'ಪಂದ್ಯದ ಮೊದಲಾರ್ಧದಲ್ಲಿ ಚೆನ್ನಾಗಿ ಆಡಿದರು. ದ್ವಿತೀಯಾರ್ಧದಲ್ಲಿ ಹೆಚ್ಚು ನಿಯಂತ್ರಣ ಸಾಧಿಸಿದ್ದೆವು. ಬಹಳಷ್ಟು ಅವಕಾಶಗಳು ಲಭಿಸಿದ್ದವು. ಅವುಗಳಲ್ಲಿ ಹೆಚ್ಚು ಗೋಲುಗಳನ್ನು ದಾಖಲಿಸಬಹುದಾಗಿತ್ತು' ಎಂದೂ ಕಾರ್ಲೊ ಅಭಿಪ್ರಾಯಪಟ್ಟರು.



ಬ್ರೆಜಿಲ್ ತಂಡದ ಮಥಾಯಿಸ್ ಕುನ್ಹಾ (ಮಧ್ಯ) ಸಂಭ್ರಮ ಎಎಫ್‌ಪಿ ಚಿತ್ರ

ಬ್ರೆಜಿಲ್	ಹೈಟಿ
3	0

ನೇಮರ್ ಚೇತರಿಕೆ: ಬ್ರೆಜಿಲ್ ತಂಡದ ತಾರಾವರ್ಚಸ್ಸಿನ ಆಟಗಾರ ನೇಮರ್ ಅವರು ಸ್ಕಾಟ್ಲೆಂಡ್ ಎದುರಿನ ಪಂದ್ಯಕ್ಕೆ ಮರಳುವ ಸಾಧ್ಯತೆ ಇದೆ. 34 ವರ್ಷದ ನೇಮರ್ ಅವರು ಅಕ್ಟೋಬರ್ 2023ರಿಂದ ಇಲ್ಲಿಯವರೆಗೂ ಆಡಿಲ್ಲ. ಮೀನಖಂಡದ ಗಾಯದಿಂದಾಗಿ ಅವರು ಸ್ಪರ್ಧಾಕಣದಿಂದ ದೂರವಿದ್ದರು.

'ನಾಳೆ ನೇಮರ್ ಅವರು ಒಬ್ಬರೇ ಅಭ್ಯಾಸ ಮಾಡುವರು. ಸೋಮವಾರ ತಂಡವನ್ನು ಸೇರಿಕೊಳ್ಳುವರು. ಮುಂದಿನ ಪಂದ್ಯಕ್ಕೆ ಅವರು ಸಿದ್ಧರಾಗಿರುವರು' ಎಂದು ಕಾರ್ಲೊ ಹೇಳಿದರು.


ಈ ಸೋಲಿನಿಂದಾಗಿ ಹೈಟಿ ತಂಡದ ನಾಕೌಟ್ ಪ್ರವೇಶದ ಅವಕಾಶ ಮುಗಿದಂತಾಗಿದೆ.

ಮಾಟಿಯಾಸ್ ವೇಗದ ಗೋಲು

ಸಾಂತಾ ಕ್ಲಾರಾ (ಅಮೆರಿಕ) (ಎಎಫ್‌ಪಿ): ಮಿಡ್ ಫೀಲ್ಡರ್ ಮಾಟಿಯಾಸ್ ಗಲಾರ್ಜಾ ಅವರು ಈ ಬಾರಿಯ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಅತ್ಯಂತ ವೇಗವಾಗಿ ಗೋಲು ಹೊಡೆದ ದಾಖಲೆ ಬರೆದರು. ಇದರಿಂದ ಪರಗ್ವೆ ತಂಡವು ಟೂರ್ನಿಯಲ್ಲಿ ನಾಕೌಟ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿತು.

ಪಂದ್ಯ ಆರಂಭವಾದ 64 ಸೆಕೆಂಡ್‌ಗಳಲ್ಲಿ ಕಾಲ್ಚಳಕ ತೋರಿದ ಮಾಟಿಯಾಸ್ ಅವರು ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. ದೂರದಿಂದಲೇ ಹೊಡೆದ ಚೆಂಡು ಟರ್ಕಿಯ ಕೀಪರ್ ಉಗುರ್ಕನ್ ಕಾಕೀರ್ ಅವರನ್ನು ದಾಟಿ ಗೋಲುಪೆಟ್ಟಿಗೆಯನ್ನು ಸೇರಿಕೊಂಡಿತು.

ಇದಕ್ಕೂ ಮೊದಲು ನಡೆದಿದ್ದ ಸ್ಕಾಟ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಮೊರಾಕ್ಕೊ ತಂಡದ ಇಸ್ಮಾಯಿಲ್ ಸೈಬರಿ ಅವರು 71 ಸೆಕೆಂಡ್‌ಗಳಲ್ಲಿ ಗೋಲು ಹೊಡೆದ್ದರು. ಆದರೆ, ಆ ದಾಖಲೆ ಕೆಲವೇ ಗಂಟೆಯಲ್ಲಿ ಪತನವಾಯಿತು.



ಮಾಟಿಯಾಸ್

ಪರಗ್ವೆ	ಟರ್ಕಿ
1	0

ಶುಕ್ರವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಪರಗ್ವೆ ತಂಡವು 1–0ಯಿಂದ ಟರ್ಕಿ ತಂಡವನ್ನು ಸೋಲಿಸಿತು. ಗುಂಪು ಹಂತದಲ್ಲಿ ಸತತ ಎರಡು ಪಂದ್ಯಗಳನ್ನು ಸೋತ ಟರ್ಕಿ ಟೂರ್ನಿಯಿಂದ ಹೊರಬಿದ್ದ ಎರಡನೇ ತಂಡ ಎನಿಸಿತು. ಇದಕ್ಕೂ ಮೊದಲು ಸಿ ಗುಂಪಿನಲ್ಲಿ ಹೈಟಿ ತಂಡವು ಹೊರಬಿದ್ದಿದೆ.

ಅಮೆರಿಕ ವಿರುದ್ಧ 4–1ರಿಂದ ಸೋಲು ಅನುಭವಿಸಿದ್ದ ಪರಗ್ವೆ ತಂಡಕ್ಕೆ ಇದೇ 26ರಂದು ನಡೆಯುವ ಆಸ್ಟ್ರೇಲಿಯಾ ಎದುರಿನ ಪಂದ್ಯ ನಿರ್ಣಾಯಕವಾಗಲಿದೆ. ಆತಿಥೇಯ ಅಮೆರಿಕ ತಂಡವು ಈಗಾಗಲೇ ಎರಡು ಪಂದ್ಯಗಳನ್ನು ಗೆದ್ದು, ನಾಕೌಟ್‌ಗೆ ಸ್ಥಾನ ಖಚಿತಪಡಿಸಿದೆ. ಉಳಿದ ಒಂದು ಸ್ಥಾನಕ್ಕಾಗಿ ಪರಗ್ವೆ ಮತ್ತು ಆಸ್ಟ್ರೇಲಿಯಾ ನಡುವೆ ಪೈಪೋಟಿ ಏರ್ಪಟ್ಟಿದೆ.

ಮಿಗುಯೆಲ್ ಕೆಂಪು ಕಾರ್ಡ್: ಪರಗ್ವೆಯ ಮಿಡ್‌ಫೀಲ್ಡರ್ ಮಿಗೆಲ್ ಅಲ್ಮಿರಾನ್ ಅವರು ಬಾಯಿ ಮುಚ್ಚಿಕೊಂಡಿದ್ದಕ್ಕಾಗಿ ಮೊದಲಾರ್ಧದ ಹೆಚ್ಚುವರಿ ಅವಧಿಯಲ್ಲಿ (45 + 3ನೇ) ಕೆಂಪು ಕಾರ್ಡ್ ಪಡೆದರು. ವಿಶ್ವಕಪ್ ಟೂರ್ನಿಯಲ್ಲಿ ಈ ಕಾರಣಕ್ಕೆ ಶಿಕ್ಷೆಗೆ ಗುರಿಯಾದ ಮೊದಲ ಆಟಗಾರ ಅವರಾಗಿದ್ದಾರೆ.

ಮಿಡ್‌ಫೀಲ್ಡ್ ಬಳಿ ಫೌಲ್ ಆದ ನಂತರ ಮಿಗೆಲ್ ಮತ್ತು ಎದುರಾಳಿ ತಂಡದ ಮೆರ್ಟ್ ಮುಲ್ಡರ್ ಅವರ ಮಧ್ಯೆ ಮಾತಿನ ಚಕಮಕಿ ನಡೆಯಿತು. ಈ ವೇಳೆ ಮಿಗೆಲ್ ತನ್ನ ಬಾಯಿ ಮುಚ್ಚಿಕೊಂಡು ಮುಲ್ಡರ್‌ಗೆ ಏನೋ ಹೇಳಿದರು. ಇದನ್ನು ಮುಲ್ಡರ್, ರೆಫರಿ ಇವಾನ್ ಬಾರ್ಟನ್ ಗಮನಕ್ಕೆ ತಂದು ಶಿಕ್ಷೆಗೆ ಮನವಿ ಮಾಡಿದರು. ವಿಡಿಯೊ ಪರಾಮರ್ಶೆಯ ಬಳಿಕ ಬಾರ್ಟನ್ ಅವರು ಈ ಬಾರಿಯ ವಿಶ್ವಕಪ್‌ನಲ್ಲಿ ಜಾರಿಗೆ ತರಲಾದ ಹೊಸ ನಿಯಮದಂತೆ ಮಿಗೆಲ್ ಅವರನ್ನು ಪಂದ್ಯದಿಂದ ಹೊರ ಕಳುಹಿಸಿದರು.

ನೇಷನ್ಸ್ ಕಪ್ ಹಾಕಿ: ಫೈನಲ್‌ಗೆ ಭಾರತ

ಆಕ್ಲೆಂಡ್ (ಪಿಟಿಐ): ಭಾರತ ವನಿತೆಯರ ಹಾಕಿ ತಂಡವು ಎಫ್‌ಐಎಚ್ ನೇಷನ್ಸ್ ಕಪ್‌ನಲ್ಲಿ ಸತತ ನಾಲ್ಕನೇ ಗೆಲುವು ದಾಖಲಿಸಿ ಫೈನಲ್‌ಗೆ ಲಗ್ಗೆ ಹಾಕಿತು.

ಭಾರತ ತಂಡವು ಶನಿವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ 6–0ಯಿಂದ ಚಿಲಿ ತಂಡವನ್ನು ನಿರಾಯಾಸವಾಗಿ ಮಣಿಸಿತು. ಸಲೀಮಾ ಟೆಟೆ ಬಳಗವು ಭಾನುವಾರ ನಡೆಯುವ ಫೈನಲ್‌ನಲ್ಲಿ ಆತಿಥೇಯ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಅಮೋಘ ಲಯದಲ್ಲಿರುವ ನವನೀತ್ ಕೌರ್ (6ನೇ ಮತ್ತು 13ನೇ) ಮತ್ತು ದೀಪಿಕಾ (14ನೇ ಮತ್ತು 18ನೇ) ಅವರು ಸೆಮಿಫೈನಲ್‌ನಲ್ಲಿ ತಲಾ ಎರಡು ಗೋಲು ದಾಖಲಿಸಿ ಮಿಂಚಿದರು. ನೇಹಾ (32ನೇ) ಮತ್ತು ರುತುಜಾ ಪೈಸಲ್ (39ನೇ) ತಲಾ ಒಂದು ಗೋಲು ತಂದಿತ್ತರು. ಆಲ್‌ರೌಂಡ್ ಪ್ರದರ್ಶನದೊಂದಿಗೆ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಸಲೀಮಾ ಪಂದ್ಯಶ್ರೇಷ್ಠ ಗೌರವಕ್ಕೆ ಭಾಜನರಾದರು.



ಮತ್ತೊಂದು ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ 4–1ರಿಂದ ಶೂಟ್‌ಅಫ್‌ನಲ್ಲಿ ಅಮೆರಿಕ ತಂಡವನ್ನು ಸೋಲಿಸಿತು. ನಿಗದಿತ ಅವಧಿಯ ಪಂದ್ಯವು 1–1ರಲ್ಲಿ ಟೈ ಆಗಿತ್ತು.

ಟಿ.ಟಿ: ಆರ್ಣವ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಉದಯೋನ್ಮುಖ ಆಟಗಾರ ಆರ್ಣವ್ ನವೀನ್ ಅವರು ಇಲ್ಲಿ ನಡೆಯುತ್ತಿರುವ 'ಎಲ್‌ಐಸಿ ಕಪ್' ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಪ್ರಶಸ್ತಿ ಎತ್ತಿ ಹಿಡಿದರು.

ಮೈಸೂರು ವಿ.ವಿ. ಜಿಮ್ನಾಷಿಯಂ ಸಭಾಂಗಣದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಆರ್ಣವ್ 11-7, 12-14, 11-9, 11-8ರಿಂದ ಅಥರ್ವ ನವರಂಗೆ ವಿರುದ್ಧ ಜಯ ಸಾಧಿಸಿದರು.



ಆರ್ಣವ್ ನವೀನ್

ಸೆಮಿಫೈನಲ್ ಪಂದ್ಯಗಳಲ್ಲಿ ಅಥರ್ವ 11-9, 11-4, 11-6ರಿಂದ ಶುಭಂ ತ್ರಿವೇದಿ ವಿರುದ್ಧ ಹಾಗೂ ಆರ್ಣವ್ 11-9, 11-7, 11-9ರಿಂದ ಗೌರವ್ ಗೌಡ ವಿರುದ್ಧ ಗೆಲುವು ಸಾಧಿಸಿದ್ದರು.

ತ್ರಿಕೋನ ಸರಣಿ: ಫೈನಲ್ ಇಂದು



ವೈಭವ್ ಸೂರ್ಯವಂಶಿ

ದಂಬುಲ್ಲಾ (ಪಿಟಿಐ): ಭಾರತ ಎ ಮತ್ತು ಶ್ರೀಲಂಕಾ ಎ ತಂಡಗಳು ಭಾನುವಾರ ನಡೆಯಲಿರುವ ತ್ರಿಕೋನ ಕ್ರಿಕೆಟ್ ಸರಣಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಇದೇ ಟೂರ್ನಿಯಲ್ಲಿ ಈಚೆಗೆ ನಡೆದ ಪಂದ್ಯದಲ್ಲಿ ಮುಖಾಮುಖಿಯಾಗಿದ್ದ ಸಂದರ್ಭದಲ್ಲಿ ಭಾರತ ತಂಡವು ಸೋತಿತ್ತು. ಆದರೆ ಆ ಪಂದ್ಯದ ಅಂತ್ಯದಲ್ಲಿ ಶ್ರೀಲಂಕಾ ಆಟಗಾರರು ಮತ್ತು ಭಾರತದ ವೈಭವ್ ಸೂರ್ಯವಂಶಿಯವರ ನಡುವಿನ ವಾಗ್ವಾದವು ಸುದ್ದಿಯಾಗಿತ್ತು.

ಈಚೆಗೆ ಐಪಿಎಲ್‌ನಲ್ಲಿ ಆರೆಂಜ್ ಕ್ಯಾಪ್ ಧರಿಸಿದ್ದ ವೈಭವ್ ಅವರು ಈ ಟೂರ್ನಿಯಲ್ಲಿ ಹೆಚ್ಚು ರನ್ ಗಳಿಸಿಲ್ಲ. ಆದ್ದರಿಂದ ಅವರ ಮೇಲೆ ಈಗ ನಿರೀಕ್ಷೆ ಹೆಚ್ಚಿದೆ. ತಿಲಕ್ ವರ್ಮಾ ನಾಯಕತ್ವದ ತಂಡವು ಎಲ್ಲ ವಿಭಾಗಗಳಲ್ಲಿಯೂ ಶಿಸ್ತುಬದ್ಧ ಆಟವಾಡುವ ಒತ್ತಡ ಇದೆ.

ಪಂದ್ಯ ಆರಂಭ: ಬೆಳಿಗ್ಗೆ 10, ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಕೊಹ್ಲಿ ಫಿಟ್‌ನೆಸ್ ಪರೀಕ್ಷೆ ನಾಳೆ



ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅವರ ಫಿಟ್‌ನೆಸ್ ಪರೀಕ್ಷೆಯು ಸೋಮವಾರ (ಜೂನ್ 22) ನಡೆಯಲಿದೆ.

ಬಲಗಾಲಿನ ಸ್ನಾಯುಸೆಳೆತಕ್ಕೆ ಅವರು ಚಿಕಿತ್ಸೆ ಪಡೆದಿದ್ದರು. ಇದೀಗ ಅವರು ಚೇತರಿಸಿಕೊಂಡಿದ್ದಾರೆ. ಆದ್ದರಿಂದ ಅವರ ಫಿಟ್‌ನೆಸ್ ಪರೀಕ್ಷೆಯನ್ನು ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ (ಸಿಒಇ) ಆಯೋಜಿಸಲಾಗಿದೆ. ಸದ್ಯ ಕೊಹ್ಲಿ ಅವರು ಲಂಡನ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ.

ಈಚೆಗೆ ಅಹಮದಾಬಾದಿನಲ್ಲಿ ನಡೆದಿದ್ದ ಐಪಿಎಲ್ ಫೈನಲ್ ಪಂದ್ಯದಲ್ಲಿ ಅವರು ಸ್ನಾಯುಸೆಳೆತದ ನೋವು ಅನುಭವಿಸಿದ್ದರು.

ಇಂಗ್ಲೆಂಡ್ ಪ್ರವಾಸಕ್ಕಿಲ್ಲ ಪಾಂಡ್ಯ: ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ತೊಡೆಯ ಸ್ನಾಯುವಿನ ಗಾಯದಿಂದ ಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಅದರಿಂದಾಗಿ ಅವರನ್ನು ಮುಂದಿನ ತಿಂಗಳು ನಡೆಯಲಿರುವ ಇಂಗ್ಲೆಂಡ್ ಎದುರಿನ ಸರಣಿಗೆ ಆಯ್ಕೆ ಮಾಡುತ್ತಿಲ್ಲ.

ಮಕಾವ್ ಓಪನ್: ಭಾರತದ ಸವಾಲು ಅಂತ್ಯ

ಮಕಾವು (ಪಿಟಿಐ): ಯುವ ಆಟಗಾರ್ತಿ ಅಶ್ಮಿತಾ ಚಾಲಿಹಾ ಅವರು ಮಕಾವ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಸೆಮಿಫೈನಲ್‌ನಲ್ಲಿ ನಿರ್ಗಮಿಸುವ ಮೂಲಕ ಭಾರತದ ಸವಾಲು ಅಂತ್ಯಗೊಂಡಿತು.



ವಿಶ್ವ ಕ್ರಮಾಂಕದಲ್ಲಿ 63ನೇ ಸ್ಥಾನದಲ್ಲಿರುವ ಅಶ್ಮಿತಾ ಶನಿವಾರ ನಡೆದ ಪಂದ್ಯದಲ್ಲಿ 17-21, 9-21ಯಿಂದ ದಕ್ಷಿಣ ಕೊರಿಯಾದ ಪಾರ್ಕ್ ಗಾ ಯೂನ್ ಅವರಿಗೆ ನೇರ ಗೇಮ್‌ಗಳಿಂದ ಶರಣಾದರು. ಯೂನ್ ಕೇವಲ 38 ನಿಮಿಷದಲ್ಲಿ ಗೆದ್ದು ಬೀಗಿದರು.